ಸಂವಾದ

ಏಪ್ರಿಲ್ ೨೦೦೫ ರೂ. ೨೦



ಅಂಬೇಡ್ಕರ್ ಎಂದರೆ...



ಸರ್ವೋದಯ ಕರ್ನಾಟಕ

ಭಾರತದ ದಿಕ್ಕು-ದೆಸೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೬

ಏಪ್ರಿಲ್ ೨೦೦೫

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : **samvaada@yahoo.co.in**

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...



❑ ಪತ್ರಗಳು ೩
❑ ವಿಶೇಷಾಂಕ ಪತ್ರಗಳು ೪
❑ ಅಂತರಂಗ ೫
❑ ಸಂಪಾದಕರೊಡನೆ ಸಂವಾದ :
ತಳ ಸಮುದಾಯದ ನರಳಾಟ ಮತ್ತು... ೬
○ ಸಿ. ಹರೀಶ್ ಕುಮಾರ್ ಗಂಗನಬೀಡು
❑ ಸರ್ವೋದಯ ಕರ್ನಾಟಕ :
ಭಾರತದ ದಿಕ್ಕು - ದೆಸೆ ೮
○ ದೇವನೂರ ಮಹಾದೇವ
❑ ಪರ್ಯಾಯ ರಾಜಕಾರಣ : ಏಕೆ ? ಹೇಗೆ ?
ಅಂಬೇಡ್ಕರ್, ಲೋಹಿಯಾ ಕನಸಿನ ಸಸಿ ೧೦
○ ಡಾ|| ನಟರಾಜ್ ಹುಳಿಯಾರ್



❑ ಅಂಬೇಡ್ಕರ್ ಎಂದರೆ... ೧೪
○ ಎಲಿನೊರ್ ಝೆಲಿಯಟ್
❑ ನಕ್ಸಲೀಯರು ಮತ್ತು ಸಂಘಪರಿವಾರದ ನಡುವೆ
ಜನಾಂಗೀಯ ಶ್ರೇಷ್ಠತೆಯ ಪ್ರಶ್ನೆ ೧೮
○ ಟಿ.ಎಸ್. ವಿವೇಕಾನಂದ
❑ ಬೆಟ್ಟ ಸರಿಸಿದ ಮೂರ್ಖ ಮುದುಕ ೨೨
○ ಶ್ರೀಶ ಉಡುಪ
❑ ಹಸಿವು ೨೬
○ ನರಸಿಂಹ
❑ ದಲಿತ್ ಡೈರಿ :
ರೂ. 300 ಬಿಲಿಯನ್‌ಗಳ ಕ್ಲಬ್ ೨೮
○ ಚಂದ್ರಭಾನ್ ಪ್ರಸಾದ್

❑ ಬಾಬಾ ದತ್ತರ ಗಿರಿ ಕಾರಣ :
ಮುಸ್ಲಿಮರು ಹಾಗೂ ದತ್ತ ಪಂಥ ೩೨
○ ಪ್ರೊ|| ರಹಮತ್ ತರೀಕೆರೆ
❑ ದಲಿತರು 'ಹಿಂದೂ'ಗಳೇ ? ೩೮
○ ಪಿ.ಎಂ.ಎನ್.ಮೂರ್ತಿ
❑ ಸಂಸ್ಕೃತಿ -ಒಂದು ಚಿಂತನೆ ೪೧
○ ಡಿ.ಎಂ. ನದಾಫ
❑ ಕವಿ-ಕಷ್ಟಜೀವಿ ಮತ್ತು ಬಂಡಾಯ (ಪ್ರತಿಕ್ರಿಯೆ) ೪೨
○ ಆರ್.ವಿ. ಭಂಡಾರಿ
❑ ಹೊಸ ಪುಸ್ತಕ ೪೩

ಕವನಗಳು : ❑ ಗುಡಿಸಿಲೊಳಗೊಂದು ಬೆಳ್ಳಿಚುಕ್ಕಿ - ೧೭ ❑ ಬಂಡಾಯ - ೨೫
❑ ಕಂಫರ್ಟ್ ಜೋನಿನ ನೈತಿಕ ವ್ಯಸನ - ೪೦

ಮುಖಪುಟ ಕಲೆ: ಜಾನ್ ದೇವರಾಜ್ ವಿನ್ಯಾಸ: ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪ್ರಜಾಸತ್ತೆಯ ಬದುಕು ದೊಡ್ಡದು

ಶ್ರೀ ಇಂದೂಧರ ಹೊನ್ನಾಪುರ ಅವರಿಗೆ ವಂದನೆಗಳು.

'ಹಿಂಸೆಯ ಬೆನ್ನು ಹತ್ತಿದ ಬಂಧುಗಳ' ನಿಮ್ಮ ಸಂಪಾದಕೀಯ ನನಗೆ ಹಿಡಿಸಿತು. ಕೋವಿ ಹಿಡಿದು ಹೊರಟವರನ್ನು ಬೆಂಬಲಿಸುವ ಬುದ್ಧಿಜೀವಿಗಳು, ಕೋವಿ ಹಿಡಿದವರು ಎಂಬುದನ್ನೇ ನೆಪ ಮಾಡಿಕೊಂಡು ಅವರನ್ನು ಸಾಯಿಸಲು ಹೊರಟ ಸರಕಾರ, ಇತ್ಯಾದಿಗಳು ನಮ್ಮೆಲ್ಲರ ಬದುಕಿನ ನೆಮ್ಮದಿ ಕೆಡಿಸಿದ್ದಾರೆ.

ಬಂದೂಕು ತಂದುಕೊಡಬಲ್ಲ ಸಮಾನತೆಗಿಂತ ಪ್ರಜಾಪ್ರಭುತ್ವ ತಂದುಕೊಡಬಲ್ಲ ಸಮಾನತೆಗೆ ಅರ್ಥವಿದೆ ಎಂಬ ನಿಮ್ಮ ಮಾತು ಸರಿಯಾಗಿದೆ.

ಕೋಮುವಾದವನ್ನು ವಿರೋಧಿಸುವ ಬುದ್ಧಿಜೀವಿಗಳು - ಚುನಾವಣೆ ಮುಗಿದ ಮೇಲೆ - ತಮ್ಮ ಮಾತಿನ ಅರ್ಥ ಕಾಂಗ್ರೆಸ್ಸನ್ನು ಬೆಂಬಲಿಸಿದ್ದಾಗಿರಲಿಲ್ಲ ಎಂಬ ಸಮಜಾಯಿಷಿ ಕೊಡಲು ಹೊರಟಿದ್ದಾರೆ. ಬುದ್ಧಿಜೀವಿಗಳ ಮಾತು ಎಂದರೆ ಅತಿ ಜಾಣತನದ ಮಾತು ಎಂದು ನಿಘಂಟಿನಲ್ಲಿ ಶಬ್ದಾರ್ಥದ ಮಾರ್ಪಾಟಿನ ಅವಶ್ಯಕತೆ ಇದೆಯೆ ? ನಿಜವಾದ ಪ್ರಜಾಪ್ರಭುತ್ವವನ್ನು ಬಿಂಬಿಸಬಲ್ಲ ರಾಜಕಾರಣಿಗಳಿಗೆ ನಮ್ಮ ಬೆಂಬಲ ಎಂದು ಬುದ್ಧಿಜೀವಿಗಳು ರಸ್ತೆಗಿಳಿದಿದ್ದರೆ, ನಮ್ಮಂಥ ದಡ್ಡರೂ ಅವರ ಜತೆ ಬೆರೆತು ತುಸು ಬುದ್ಧಿ ಬೆಳೆಸಿಕೊಳ್ಳಬಹುದಿತ್ತು.

ದೇವರಾಜ ಅರಸು ಅವರು ಬಂಗಾರಪ್ಪ, ಮೊಯಿಲಿ, ಖರ್ಗೆ, ಧರಂ ಸಿಂಗ್ ಮುಂತಾದವರನ್ನೆಲ್ಲ ಒಗ್ಗೂಡಿಸಿಕೊಂಡು ನಡೆಸಲೆಣಿಸಿದ ಯಾನಕ್ಕೆ ಒಂದು ಅರ್ಥವಿತ್ತು. ನನ್ನೂರು ಗೋಕರ್ಣದಂಥಲ್ಲಿ ವಿದ್ಯೆಯೇ ಇರದೆ ನರಳಿಕೊಂಡಿದ್ದ ಹಾಲಕ್ಕಿ ಒಕ್ಕಲಿಗರಿಗೆ ಶಿಕ್ಷಣದ ಬೆಳಕು ದಕ್ಕಿಕೊಳ್ಳಲು ಪ್ರಾರಂಭವಾದದ್ದು ನಿಜ ಅರ್ಥದಲ್ಲಿ ಆಗಲೇ. ಈಗ ಈ ಹಾಲಕ್ಕಿಗಳಿಗೆ ವಿದ್ಯೆಯ ಕಾರಣದಿಂದಾಗಿ ತಮ್ಮ ಕಾಲ ಮೇಲೆ ತಾವು ನಿಲ್ಲಬಲ್ಲ ಆತ್ಮದ ಬೆಳಕು ಹಾಗೂ ಸ್ಥೈರ್ಯ ನಿಜಕ್ಕೂ ಒದಗಿದೆ. ವಿದ್ಯೆಯೊಂದೇ ನಮ್ಮನ್ನು ಮೇಲೆತ್ತಬಲ್ಲದು. ಆತ್ಮದ ಬೆಳಕಿರದ ಜನಕ್ಕೆ ಆತ್ಮದ ಬೆಳಕು ಒದಗಿಸಿ, ಇನ್ನೂ ಮೀರದ ಹಾಗಾದರೂ ಜನಸಂಖ್ಯೆಯನ್ನು ನಿಯಂತ್ರಿಸಿ, ನಿಜವಾದ ಪ್ರಜಾಪ್ರಭುತ್ವಕ್ಕೆ ಕಾರಣರಾಗುವ ಮಂದಿ ಆಡಳಿತದ ಸೂತ್ರ ಹಿಡಿಯುವ ದಿನ ಯಾವಾಗಲೊ ? ಯಾವುದೂ ಅರ್ಥವಾಗುತ್ತಿಲ್ಲ. ಕೋವಿ ಹಿಡಿಯುವ ಸಂದರ್ಭ, ಶೋಷಿಸಿ ಹೊಟ್ಟೆ ತುಂಬಿಕೊಳ್ಳಬೇಕಾದ ಸಂದರ್ಭ, ಶಿಕ್ಷಣದಿಂದ ವಂಚಿತಗೊಳ್ಳುವ ಸಂದರ್ಭ ಒಂದು ರಾಷ್ಟ್ರಕ್ಕೆ ಬರಬಾರದು. ಮಹಾನ್ ಭಾರತದಲ್ಲಿ ಇದು ಸಾಧ್ಯವಾಗಲಿ ಅಲ್ಲವೆ?

ಮಹಾಬಲಮೂರ್ತಿ ಕೊಡ್ಲೆಕೆರೆ,
ಬೆಂಗಳೂರು

ಸಮ ಸಮಾಜ ನಿರ್ಮಾಣ

ಮಾನ್ಯರೇ,

ರೈತಸಂಘ ಮತ್ತು ದಲಿತ ಸಂಘರ್ಷ ಸಮಿತಿ ಸೇರಿ ಹುಟ್ಟು ಹಾಕುತ್ತಿರುವ 'ಪರ್ಯಾಯ ರಾಜಕಾರಣ' ಸಮ ಸಮಾಜದ ನಿರ್ಮಾಣದ ಗುರಿಯನ್ನು ಹೊಂದಬೇಕು ಹಾಗೂ ಶಕ್ತಿ ರಾಜಕಾರಣಕ್ಕಿಂತ ಮಾನಸಿಕವಾಗಿ ರಾಜಕಾರಣವನ್ನು ಬೆಳೆಸುವ ಪ್ರಯತ್ನ ಮಾಡಬೇಕು. ಇದು ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ವೈಜ್ಞಾನಿಕ ನೆಲೆಗಟ್ಟಿನ ಹೋರಾಟದ ಮುಖಾಂತರ ಪರ್ಯಾಯ ರಾಜಕಾರಣ ಬೆಳೆಯಲಿ ಎಂಬುದೇ ನನ್ನ ಹಾರೈಕೆ.

ನಿಮ್ಮ ಪ್ರಯತ್ನಕ್ಕೆ ಶುಭ ಹಾರೈಕೆ,

ಇಂತಿ,

ಕಾಗತಿ. ಪಿ. ನಾಗರಾಜಪ್ಪ
ಚಿಂತಾಮಣಿ

ಮತ್ತೆ ಬರುವೆಯಾ ಸುನಾಮಿ, ನಿನ್ನ ಅಧಿಪತ್ಯ ಸ್ಥಾಪಿಸಲು !

ಮಾನ್ಯರೇ,

ಯಾರು ಸರ್ವಶ್ರೇಷ್ಠನೆಂಬುದು ಅರಿತೆಯೇನು? ನೀನು ಸುನಾಮಿ, ನಾನು ದುರ್ನಾಮಿ. ನೀನು ಬಂದು ಹೋಗುವವನು. ನಾನು ಶತಶತಮಾನಗಳಿಂದ ಇರುವವನು, ಮುಂದೆಯೂ...

ಚಂದ್ರಭಾನ್ ಪ್ರಸಾದ್‌ರ ಈ ತೀಕ್ಷ್ಣ ಒಳಗಣ್ಣು ಸುನಾಮಿಯ ಮಿತಿಯನ್ನು ಮನೋಜ್ಞವಾಗಿ ಚಿತ್ರಿಸಿದೆ. Hats off to C.P. ಮನುಕುಲದ ಘೋರ ದುರಂತ ಎಂದೇ ಬಣ್ಣಿಸಲಾದ ಸುನಾಮಿ, ನಮ್ಮ ಅಸ್ಪೃಶ್ಯತೆಯ ಮುಂದೆ ಏನೂ ಅಲ್ಲ ಎಂಬುದನ್ನು ಅರಿತು ಓಡಿಹೋಯಿತೋ ಏನೋ ?

ಪದ್ಮನಾಭ, ಬೆಂಗಳೂರು

ಚಿಂತನೆ ಮತ್ತು ಚಳವಳಿಗಳನ್ನು ಇನ್ನಷ್ಟು ತೀವ್ರಗೊಳಿಸಬೇಕಾಗಿದೆ

ಶ್ರೀ ಇಂದೂಧರ ಹೊನ್ನಾಪುರ ಅವರಿಗೆ ನಮಸ್ಕಾರಗಳು

ಸರ್,

ಇವತ್ತು ಮಧ್ಯಾಹ್ನದಿಂದ ಜಾಗತೀಕರಣಕ್ಕೆ ಸಂಬಂಧಿಸಿದ ಕೆಲವು ಮೂಲಭೂತ ಪುಸ್ತಕಗಳನ್ನು ಓದಬೇಕೆಂದು ನಿರ್ಧರಿಸಿದ್ದೆನು. ಆದರೆ ಆರಂಭದಲ್ಲಿಯೇ ಕಳೆದ ಎಂಟು ದಿನಗಳಿಂದ ಓದಿಗಾಗಿ ಟೇಬಲ್‌ನಲ್ಲಿ ಕಾದಿರಿಸಲ್ಪಟ್ಟಿದ್ದ 'ಸಂವಾದ' ಮಾರ್ಚಿ ಸಂಚಿಕೆಯು ರೂಢಿಯಂತೆ ಕೈಗೆ ಬಂದಿತು. ಆ ನಂತರದಲ್ಲಿ ಕುಳಿತುಕೊಂಡಿದ್ದ ವಿಭಾಗದಲ್ಲಿಯೇ ರಾತ್ರಿಯಾದುದು ಗೊತ್ತಾಗಲಿಲ್ಲ.

ಈ ನಡುವೆ ರಾಮಲಿಂಗಪ್ಪ ಟಿ. ಬೇಗೂರು, ರಹಮತ್ ತರೀಕೆರೆ, ಮುಂತಾದವರ ದೀರ್ಘ ಲೇಖನಗಳು, ಡಾ|| ವಸು, ಬಿ.ಗಂಗಾಧರಮೂರ್ತಿ, ಸುಕನ್ಯಾ ಸಿರಿಮನೆ ಮುಂತಾದವರ ಲೇಖನಗಳು ಅನೇಕ ಒಳನೋಟಗಳೊಂದಿಗೆ ಮಂಡನೆಯಾಗಿವೆ. ನಕ್ಸಲೀಯ ಚಟುವಟಿಕೆಗಳನ್ನು ಕುರಿತು ಸೂಕ್ತವಾಗಿ ಪ್ರತಿಕ್ರಿಯಿಸಿದ ಸಂಪಾದಕೀಯ, 'ಪರ್ಯಾಯ ರಾಜಕಾರಣ'ಗಳಿಗೆ ಹಲವು ಲೇಖನಗಳ ಮೂಲಕ ದೊರೆತ ಕಿವಿಮಾತು, ಎಲ್ಲವೂ ಅರ್ಥಪೂರ್ಣವಾಗಿದ್ದು ಸಂಚಿಕೆ ಸಂಗ್ರಹಯೋಗ್ಯ ಎನ್ನಿಸಿದೆ.

ಇದೇ ನೆಲೆಯಲ್ಲಿ ಸಾಗಿಬಂದಿರುವ ಪತ್ರಿಕೆಯನ್ನು ಇನ್ನಷ್ಟು ವ್ಯಾಪಕಗೊಳಿಸಬೇಕಾಗಿರುವುದು ಸೈದ್ಧಾಂತಿಕ ಜವಾಬ್ದಾರಿಗಳಲ್ಲೊಂದಾಗಿ ಇಂತಹ ಪತ್ರಿಕೆಗಳ ಮೂಲಕ ಜನ ಚಿಂತನೆ ಮತ್ತು ಚಳವಳಿಗಳನ್ನು ಇನ್ನಷ್ಟು ತೀವ್ರಗೊಳಿಸಬೇಕಾಗಿದೆ. ಇಲ್ಲವಾದಲ್ಲಿ ನಾಳಿನ ದಿನಗಳು ನಮ್ಮದಾಗಿರುವುದಿಲ್ಲ.

ಇಂತು ತಮ್ಮ ವಿಶ್ವಾಸಿ,

ಕಾ.ವೆಂ. ಶ್ರೀನಿವಾಸಮೂರ್ತಿ, ಬೆಂಗಳೂರು

ಪತ್ರಾಗಾರ

ಆಧ್ಯಾತ್ಮಿಕ ಸುಳಿಹು

ಸ್ವಾಮಿ,

'ಧರ್ಮ'ದ ಪರಿಕಲ್ಪನೆಯನ್ನು ತಪ್ಪಾಗಿ ಗ್ರಹಿಸಿ ಮಾನವ ಜಗತ್ತು ತನ್ನ ನಾಶವನ್ನು ತನ್ನ ಮೈಮೇಲೆ ತಾನೇ ಎಳೆದು ಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಪದ್ಮಾಲಯಾ ನಾಗರಾಜ, ಶಿವಮೂರ್ತಿ ಶರಣರಂತಹ ಲೇಖನಗಳು ಆಧ್ಯಾತ್ಮಿಕ ಸುಳಿಹನ್ನು ನೀಡಿ ನಮ್ಮನ್ನು ಆಧ್ಯಾತ್ಮೀಕರಣದತ್ತ ಕೊಂಡೊಯ್ಯುತ್ತಿವೆ.

ಮುರಳೀಧರ,
ಬೆಂಗಳೂರು



ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ಸೂಚನೆ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. / ಡಿ.ಡಿ. ಮಾತ್ರ ಕಳುಹಿಸಬೇಕು.

ವರ್ಷದ ಶ್ರೇಷ್ಠ ವಿಶೇಷಾಂಕ 'ಸಂವಾದ'

ಪ್ರೀತಿಯ ಸರ್, ವಂದನೆಗಳು.

ನೀವು ಕಳುಹಿಸಿದ ವಿಶೇಷಾಂಕದ ಪ್ರತಿ ತಲುಪಿತು, ಧನ್ಯವಾದಗಳು. ಈ ವಿಶೇಷಾಂಕ ನನಗೆ ತುಂಬಾ ಇಷ್ಟವಾಯಿತು. ಇಂಥದ್ದೊಂದು ವಿಶೇಷಾಂಕವನ್ನು ನೋಡಿ ಬಹಳ ವರ್ಷಗಳಾಗಿತ್ತು, ಇದಕ್ಕೆ ಮೂರು ಮುಖ್ಯ ಕಾರಣಗಳಿವೆ. ೧. ಇಡೀ ವಿಶೇಷಾಂಕ ಕಾಗುಣಿತ ದೋಷಗಳಿಂದ ಮುಕ್ತವಾಗಿರುವುದು. ೨. ವಿಷಯ ಸಮೃದ್ಧಿ. ೩. ಇಡೀ ವಿಶೇಷಾಂಕ ಜನಪರ ಕಾಳಜಿಯ ಬರಹಗಳನ್ನು ಹೊಂದಿರುವುದು.

ಇವು ನನ್ನ ದೃಷ್ಟಿಯಲ್ಲಿ ಮಹತ್ವದ ಸಂಗತಿಗಳು. ಕಂಪ್ಯೂಟರ್‌ಗಳು ಪತ್ರಿಕೋದ್ಯಮವನ್ನು ಪ್ರವೇಶಿಸಿದಾಗ ಮೊಳೆ ಜೋಡಣೆಯ ಕಾಲದಲ್ಲಿ ಸಂಭವಿಸುತ್ತಿದ್ದ ಕಾಗುಣಿತ ದೋಷಗಳಿಂದ ಮುಕ್ತಿ ದೊರೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆಗಿರುವುದೇನೆಂದರೆ ಮೊದಲು ಪುಟದಲ್ಲಿ ಒಂದೋ ಎರಡೋ ಇರುತ್ತಿದ್ದ ದೋಷಗಳು ಈಗ ಸಂಚುರಿ ಹೊಡೆಯಲು ಆರಂಭಿಸಿವೆ. ಜೊತೆಗೆ ಅಲ್ಲಲ್ಲಿ ತೂರಿಕೊಳ್ಳುವ 'ಕಂಪ್ಯೂಟರ್ ಲಿಪಿ'ಯ ಕಾರಣದಿಂದಾಗಿ ಇಡೀ ವಾಕ್ಯವೇ ಅರ್ಥಹೀನವಾಗಿ ವಿಚಿತ್ರವಾಗಿ ಹಿಂಸಿಸುತ್ತವೆ. ಇನ್ನು ಪುಟ ವಿನ್ಯಾಸವಂತೂ ಅದ್ವಾನದ ಪರಮಾವಧಿಯಾಗಿರುತ್ತವೆ. ಕಲಾತ್ಮಕತೆಯ ಗಂಧವೇ ಇಲ್ಲದ ಮನಸ್ಸುಗಳು ವರ್ಣ ವೈಭವದ ಮಧ್ಯೆ ಸೃಜನಶೀಲತೆಯ ಹೆಸರನ್ನೇ ಮರೆತು ಕುಂತಿವೆ. ಪುಟವಿನ್ಯಾಸ ಎಂದರೆ ಬಣ್ಣ ಮೆತ್ತುವುದು ಎಂದು ಅವರು ಭಾವಿಸಿದಂತಿದೆ. ಈ ಹಿನ್ನೆಲೆಯಲ್ಲಿ 'ಸಂವಾದ' ಲೇಔಟ್ ಚೆನ್ನಾಗಿದೆ.

ಇನ್ನು 'ಸಂವಾದ'ದ ವಿಷಯ ಸಮೃದ್ಧಿ... ಈ ಬಾರಿಯ ವಿಶೇಷಾಂಕದಲ್ಲಿ ಎಷ್ಟೊಂದು ಓದಬಲ್ಲ ಲೇಖನಗಳು, ಕತೆಗಳು, ಕವನಗಳು ಇವೆಯೆಂದರೆ ನನ್ನ ಮಟ್ಟಿಗಂತೂ ಕನಿಷ್ಟ ಹಲವು ದಿನಗಳ ಓದಿಗೆ ಮೋಸವಿಲ್ಲ ಇದರೊಂದಿಗೇ ಮೆಚ್ಚಬಹುದಾದ ಮತ್ತೊಂದು ಅಂಶವೆಂದರೆ 'ವಿಷಯಗಳು'. ಆಯ್ಕೆ ತುಂಬಾ ಚೆನ್ನಾಗಿದೆ.

ಜನ ಮೆಚ್ಚುವುದನ್ನು ಕೊಡುತ್ತೇವೆ ಎನ್ನುವ ನೆಪದಲ್ಲಿ ಪಲಾಯನವಾದಕ್ಕಿಳಿದಿರುವ ಇಂದಿನ ನಮ್ಮ ಜನಪ್ರಿಯ ಪತ್ರಿಕೋದ್ಯಮ ಮಧ್ಯಮ, ಮೇಲ್ಮಧ್ಯಮ ವರ್ಗಗಳ ಹುಸಿ ಬೇಡಿಕೆ-ತೆವಲುಗಳನ್ನು ಪೂರೈಸುವುದರಲ್ಲಿಯೇ ಮಗ್ನವಾಗಿವೆ. ಇವರ ಪತ್ರಿಕೆಗಳನ್ನು ದುಡ್ಡುಕೊಟ್ಟು ಓದುವ ಸಂಬಳದಾರ ಇಲ್ಲವೇ ಸ್ಥಿತಿವಂತ ವರ್ಗಗಳ ಭ್ರಮೆಗಳನ್ನು ಪೋಷಿಸುವುದಕ್ಕೇ ಇಂದಿನ ನಮ್ಮ ಜನಪ್ರಿಯ ಪತ್ರಿಕೋದ್ಯಮ ಕಾಯಾ ವಾಚಾ ಮನಸಾ ಬದ್ಧವಾಗಿರುವುದರಿಂದ ನಿಜಕ್ಕೂ ಅಗತ್ಯವಿರುವ ವಿಷಯಗಳ, ಜನರ ತಂಟೆಗೆ ಹೋಗುವುದನ್ನೇ ಇವು ಮರೆತು ಕುಂತಿವೆ.

ಇತ್ತೀಚೆಗಂತೂ ಈ ಮಧ್ಯಮ-ಮೇಲ್ಮಧ್ಯಮ ವರ್ಗಗಳನ್ನು ಬಿಟ್ಟು ಇನ್ನೂ ಒಂದೊತ್ತಿನ ಕೂಳಿಗೆ ನಿತ್ಯ ಪರದಾಡುವ ಕೋಟಿಗಟ್ಟಲೆ ಜನ ಈ ದೇಶದಲ್ಲಿದ್ದಾರೆ ಎಂಬುದನ್ನು ನಮ್ಮ ಮಾಧ್ಯಮಗಳು ಮರೆಸುತ್ತಿವೆ. ಉದ್ದೇಶಪೂರ್ವಕವಾಗಿಯೇ ಬಡವರು, ಆದಿವಾಸಿಗಳು ಹಾಗೂ ಇನ್ನಿತರ ತಳಸಮುದಾಯಗಳನ್ನು ಒಂದೋ ನಿರ್ಲಕ್ಷಿಸಲಾಗುತ್ತಿದೆ, ಇಲ್ಲವೇ ಅವರ ಬದುಕಿನ ದಾರುಣತೆಯನ್ನು ಉಳ್ಳವರ ಮನ ತಣಿಸುವ ಫ್ಯಾಂಟಸಿಗಳಂತೆ ಪ್ರಸ್ತುತಪಡಿಸಲಾಗುತ್ತಿದೆ.

ಆದರೆ ಈ ಎಲ್ಲಾ ವಿಷಯಗಳಲ್ಲಿ ಸಂವಾದ ಗೆದ್ದಿದೆ. ಈ ವರ್ಷ ಹೊರಬಂದಿರುವ ಯಾವುದೇ ಜನಪ್ರಿಯ ಪತ್ರಿಕೆಯ ವರ್ಣರಂಜಿತ ವಾರ್ಷಿಕ ವಿಶೇಷಾಂಕಗಳಿಗಿಂತ ಕಪ್ಪು-ಬಿಳುಪಿನ 'ಸಂವಾದ' ಸುಂದರವಾಗಿದೆ..., ಒಳಗೆ ಮತ್ತು ಹೊರಗೆ.

ತಮ್ಮ ವಿಶ್ವಾಸಿ

ಟಿ.ಎಸ್. ವಿವೇಕಾನಂದ, ಬೆಂಗಳೂರು

ವಿಶೇಷಾಂಕ ಪತ್ರಗಳು

ಸತ್ವಯುತ ಲೇಖನಗಳು

ಸನ್ಮಾನ್ಯ ಇಂದೂಧರ ಅವರಿಗೆ ಗೌರವದ ವಂದನೆಗಳು.

ವಿಶೇಷ ಸಂಚಿಕೆ - ೨೦೦೫ ತಲುಪಿತು. ಇಡೀ ಸಂಚಿಕೆ ಸಂಗ್ರಹಯೋಗ್ಯ ಲೇಖನಗಳಿಂದ ಕೂಡಿದೆ. ಯಾವುದೇ ಲೇಖನ ಉಡಾಫೆಯಿಂದ ಕೂಡಿರದೆ ನೆಲಕ್ಕಂಟಿಕೊಂಡು ವಾಸ್ತವಾಂಶ ಬಿಡಿಸಿಟ್ಟಿರುವುದು ಈ ಸಂಚಿಕೆಯ ವೈಶಿಷ್ಟ್ಯ. ಆ ಲೇಖನ ಈ ಲೇಖನವೆನ್ನದೆ ಎಲ್ಲ ಲೇಖನಗಳೂ ನಿಜಕ್ಕೂ ಸತ್ವಯುತವಾಗಿದೆ. ನಿಮ್ಮ ಶ್ರಮ ಅಭಿನಂದನೀಯ.

ಲಲಿತಾ ಸಿದ್ಧಬಸವಯ್ಯ, ತುಮಕೂರು

ರಾಜಕೀಯವಲ್ಲದ 'ಪರ್ಯಾಯ'

ಪ್ರಿಯರಾದ ಶ್ರೀ ಇಂದೂಧರ ಅವರಿಗೆ

ನಮಸ್ಕಾರಗಳು. ವಾರ್ಷಿಕ ಸಂಚಿಕೆ ತಲುಪಿತು. ನೋಡಿ ಬಹಳ ಖುಷಿಯಾಯಿತು. ನಿಜಕ್ಕೂ ಸಂಗ್ರಹಯೋಗ್ಯ ಸಂಚಿಕೆಗಳು ಬರುತ್ತಿರುವುದು ಕನ್ನಡದ, ಕರ್ನಾಟಕದ ಜಾಯಮಾನ ಎಂದು ಹೇಳಬೇಕು. ರಾಜಕೀಯವಲ್ಲದ ಈ 'ಪರ್ಯಾಯವೇ' ನಿಮಗೆ ಹೆಚ್ಚು suit ಆದಂತೆ ಕಾಣುತ್ತಿದೆ. ನಿಮ್ಮ ಸಾಂಸ್ಕೃತಿಕ ಸಾಮರ್ಥ್ಯವನ್ನು ಇನ್ನೂ ಎತ್ತರಕ್ಕೇರಿಸುವಂತೆ 'ಸಂವಾದ'ಗಳು ಬರಲಿ. ಧನ್ಯವಾದಗಳು,

ನಿಮ್ಮ ನಂಬುಗೆಯ

ಮೂಡ್ನಾಕೂಡು ಚಿನ್ನಸ್ವಾಮಿ, ಗುಲ್ಬರ್ಗಾ

ಮೈಲಿಗಲ್ಲು

ಪ್ರಿಯ ಹೊನ್ನಾಪುರ,

ವಿಶೇಷಾಂಕ ತಲುಪಿದೆ. ಒಂದು ಮೈಲಿಗಲ್ಲು ಇದು. ಹೆಚ್ಚು ಕಡಿಮೆ ಎಲ್ಲ ಬರಹಗಳೂ ವಿಶಿಷ್ಟವಾಗೂ ಅಧ್ಯಯನ ಯೋಗ್ಯವಾಗಿರುವಂಥವು. ಪ್ರೊ|| ಶ್ರೀಧರ್‌ರ ಸಂಸ್ಕೃತಿಯ ಬಗೆಗಿನ ಲೇಖನವಂತೂ ಅತ್ಯಂತ ಶ್ರೇಷ್ಠ ಲೇಖನ. ಅದಕ್ಕೆ ಸಹವರ್ತಿಯಾಗಿ ಬಂಜಗೆರೆ ಹಾಗೂ ಮಲ್ಲೇಪುರಂ ಲೇಖನಗಳಿವೆ. ಅನಂತಮೂರ್ತಿಯವರ ಸಂದರ್ಶನವಂತೂ ನಾವೂ ಜೊತೆಗೆ ಕೂತು ಮಾತಾಡಿದಂತಿದೆ. ಇಲ್ಲಿ ಯಾವುದನ್ನೂ ಬಿಡುವಂತಿಲ್ಲ, ಯಾವ ಕವಿತೆಯನ್ನೂ ನಿರಾಕರಿಸುವಂತಿಲ್ಲ. ಹಾಜಿಮಾ ಕವಿತೆ ಹೊಸ ಶೈಲಿಯದ್ದು ಎನ್ನಿಸಿತು. ಕಾಯ್ಕಿಣಿ, ಚಂಪಾ, ಋಗ್ವೇದಿ, ವಿಸಾಜಿಯವರ ಉತ್ತರಗಳು ಸಮರ್ಪಕವಾದವು. ಬಿ.ವಿ.ವೀರಭದ್ರಪ್ಪನವರ ಲೇಖನವೂ ಅಷ್ಟೆ. ಇಂಥ ಸಂಚಿಕೆಯ ಸಫಲತೆಗೆ ನಿಮ್ಮ ಒಳದೃಷ್ಟಿ ಸಂಪಾದನೆಯ ಶ್ರದ್ಧೆ ಕಾರಣ. ನಿಮಗೆ ಧನ್ಯವಾದಗಳು.

'ಸಂವಾದ' ಮತ್ತಷ್ಟು ಅರ್ಥಪೂರ್ಣವಾಗಿ ಬೆಳೆಯಲಿ. ಯಾವತ್ತೂ ನನ್ನ ಶುಭ ಹಾರೈಕೆಗಳು.

ನಿಮ್ಮವನೇ

ಚಂದ್ರಶೇಖರ ತಾಳ್ಯ, ಚಿತ್ರದುರ್ಗ

ತೀವ್ರ ಕಳಕಳಿಯ ಸಂಚಿಕೆ

ಪ್ರಿಯ ಶ್ರೀ ಹೊನ್ನಾಪುರ ಅವರಿಗೆ ಪ್ರಣಾಮಗಳು.

'ಸಂವಾದ' ಬಂತು. ತುಂಬ ಬಿರುಸಾಗಿದೆ. ಲೇಖನಗಳಲ್ಲಿ ವ್ಯಕ್ತವಾದ ಲೇಖಕೀಯ ತತ್ವಗಳು ಆಕ್ರಮಣಶೀಲವಾಗಿವೆ. ಸೃಜನಶೀಲವಾದ ಸಾಹಿತ್ಯ ಭಾಗಗಳೂ ಸಮಕಾಲೀನ ಭಾವ ಜಗತ್ತಿನ ಖಂಡಿತ ಚಿತ್ತಸ್ಥಿತಿಯ ಸೃಷ್ಟಿ ಮಂಡನೆಗಳಾಗಿವೆ. ಸಾವಿನ ಮನೆಯಲ್ಲಿ ಹೇಗೆ ಎಲ್ಲರಲ್ಲೂ ಒಂದು ಸಂದರ್ಭೋಚಿತ 'ವಿಷಾಕತ್ತೆ' ಮಡುಗಟ್ಟಿರುತ್ತದೋ ಹಾಗೇ, ಒಂದು ಭಯಂಕರ ತ್ರಸ್ತ ಬಾಹ್ಯ ಜಗತ್ತಿನೆದುರು, ಆತ್ಮ ಸಂರಕ್ಷಣೆಯ ಪ್ರಚ್ಛನ್ನ ಅನುಸಂಧಾನಗಳನ್ನು ಸಂಭಾಳಿಸಿಕೊಂಡೂ, ಅದರ ಬಗೆಗೆ ತೀವ್ರ ಕಳಕಳಿಯ ಏಕತಾನಿಕ ವಿರೋಧತ್ವ ಈ ಸಂಚಿಕೆಯ ಸ್ಥಾಯೀ ಭಾವವಾಗಿದೆ.

-೦-೦-

'ಸಂಚಿಕೆ'ಯನ್ನು ಓದಿದ ನಂತರ ನನ್ನಲ್ಲಿ ಮಿಳಿತವಾದ ಒಂದೇ ಭಾವವೆಂದರೆ, ಅದು ಆಚಾರ್ಯ ಮಧ್ವರ ಒಂದು ಸಂದೇಶ. ಅವರು ಹೇಳುತ್ತಾರೆ ('ವಿಷ್ಣು ತತ್ವ ನಿರ್ಣಯ') 'ಜಗತ್ತಿನ ಯಾವ ತಾತ್ವಿಕತೆಗಳಿಗೂ ಸಾರವಿಲ್ಲ, ಅವು ಪ್ರವಾಹ ರೂಪೀ ಕಾಲದಲ್ಲಿ ಅನಾದಿಯಾಗಿ ಇವೆ. ಇರುತ್ತವೆ. ನಾವು 'ನಾಶ' ಮಾಡಲು ಸಾಧ್ಯವಿಲ್ಲ, ಅದಕ್ಕಾಗಿ ನಿಮ್ಮ ನಿಮ್ಮ 'ಜೀವ-ವರ್ಣ'ದ ಸ್ವರೂಪಕ್ಕನುಗುಣವಾಗಿ ಸಾಧನ-ದುಡಿಮೆಗೆ ಇಳಿಯಿರಿ. ಏಕೆಂದರೆ ಭಗವಂತನೊಬ್ಬನನ್ನು ಬಿಟ್ಟರೆ ಎಲ್ಲವೂ, ಎಲ್ಲರೂ ಅಸ್ವತಂತ್ರರು, ದೋಷಪೂರ್ಣರು.'

ಆನಂದ ಝುಂಜರವಾಡ, ಮುಧೋಳ

ಸಂಪಾದಕೀಯ



ಅಂತರಂಗ

ಉಡುಪಿಯ ನಾರ್‍ಝಿಗಳು

ಶಾಂತಿ - ಸೌಹಾರ್ದತೆಗೆ ಹೆಸರಾದ ಕರ್ನಾಟಕಕ್ಕೆ ಏನೋ ಆಗಿದೆ. ಒಂದಾದ ಮೇಲೊಂದರಂತೆ ಮಾನವ ಹಕ್ಕುಗಳ ಮೇಲಿನ ದೌರ್ಜನ್ಯ ಘಟನೆಗಳು ನಡೆಯುತ್ತಲೇ ಇವೆ. ಸಹಮಾನವರ ನೆಮ್ಮದಿ ಕೆಡಿಸುವ ನಿರಂತರ ಪಿತೂರಿ ಇಲ್ಲಿ ಆರಂಭವಾಗಿದೆ. ದೇವರು, ಧರ್ಮ, ಆಚಾರ-ವಿಚಾರ, ಕಡೆಗೆ ತಿನ್ನುವ ಆಹಾರದ ಮೇಲೂ ದಬ್ಬಾಳಿಕೆ ಹೆಚ್ಚುತ್ತಿದೆ. ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆಗಳು ಮಾಯವಾಗಿ ಸದಾ ಅನುಮಾನ, ಗುಮಾನಿಗಳು ವ್ಯಾಪಕವಾಗುತ್ತಿವೆ. ಭಯ-ತಲ್ಲಣ-ಆತಂಕಗಳಲ್ಲಿ ಜನ ಬದುಕು ದೂಡುವ ಸ್ಥಿತಿ ನಿರ್ಮಾಣವಾಗುತ್ತಿದೆ. ದೇವರು ಮತ್ತು ಧರ್ಮದ ಹೆಸರಿನಲ್ಲಿ ಸಂಘ ಪರಿವಾರ ಹಬ್ಬಿಸುತ್ತಿರುವ ಜನಾಂಗ ದ್ವೇಷ ಅತ್ಯಂತ ಅಮಾನವೀಯವಾದುದಾಗಿದೆ.

ಮೊನ್ನಿನ ಉಡುಪಿ ಘಟನೆಯನ್ನು ನೋಡಿದರೆ ಮಾನವಂತರ್‍ಯಾರೂ ಇಲ್ಲಿ ಬದುಕುವಂತಿಲ್ಲವೇನೋ ಅನಿಸುತ್ತಿದೆ. ದನಗಳ ವ್ಯಾಪಾರ ನಮ್ಮ ಸಹಜ ಚಟುವಟಿಕೆಗಳಲ್ಲಿ ಒಂದು. ಆದರೆ ಅದನ್ನು 'ಹಿಂದೂ'ಗಳು ಮಾಡಿದರೆ ಕೇವಲ ವ್ಯಾಪಾರ ಮುಸ್ಲಿಮರು ಮಾಡಿದರೆ ಗೋಹತ್ಯೆ! ಘೋರ ಅಪರಾಧ! ಅದಕ್ಕೆ ಮಾನಭಂಗ! ತಲೆದಂಡ! ಎಂಥ ವಿತಂಡ-ಆಷಾಡಭೂತಿ ನಡವಳಿಕೆ ಇದು!

ಸಂಘ ಪರಿವಾರದ 'ಹಿಂದೂ ಸಂಗಮ' ಕಾರ್ಯಕ್ರಮದ ಮರುದಿನವೇ ನಡೆದ ಈ ಬರ್ಬರ ಕೃತ್ಯ ಜರ್ಮನಿಯ ನಾರ್‍ಝಿ ದೌರ್ಜನ್ಯಕ್ಕಿಂತ ಕಡಿಮೆಯಾದುದೇನಲ್ಲ. ಜನಾಂಗ ದ್ವೇಷವನ್ನೇ ತನ್ನ ಬಂಡವಾಳ ಮಾಡಿಕೊಂಡು ಇಡೀ ಜಗತ್ತನ್ನೇ ಹಿಂಸೆ ಮತ್ತು ಅಶಾಂತಿಗೆ ದೂಡಿದ ಹಿಟ್ಲರ್‌ನ ಪುನರಾವತಾರ ಈ ಸಂಘ ಪರಿವಾರ. ಮುಸ್ಲಿಂ ಜನಾಂಗವನ್ನು ಹಿಂಸಿಸುವ ಒಂದೇ ಉದ್ದೇಶದಿಂದ ಈ ಕೃತ್ಯ ನಡೆದಿದ್ದು ಅದನ್ನು ತಡೆಯಲು ವಿಫಲವಾದ ನಾಗರಿಕ ಸರ್ಕಾರ ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ.

ಎಲ್ಲ ವೃತ್ತಿಗಳಂತೆ ದನದ ವ್ಯಾಪಾರವೂ ಒಂದು ವೃತ್ತಿ. ಇದು ನಿನ್ನೆ ಮೊನ್ನೆಯದಲ್ಲ. ಭಾರತೀಯ ಸಂಸ್ಕೃತಿಯೊಂದಿಗೆ ಬೆಸೆದುಕೊಂಡು ಬಂದಿರುವ ಒಂದು ನಡವಳಿಕೆ. ವೇದ ಉಪನಿಷತ್ತಿನ ಕಾಲದಿಂದಲೂ ಇಂಥ ಚಟುವಟಿಕೆಗಳು ನಡೆಯುತ್ತಿವೆ. ವ್ಯವಸಾಯ, ಹಾಲು, ಮಾಂಸ ಇತ್ಯಾದಿಗಳಿಗಾಗಿ ದನಗಳನ್ನು ಉಪಯೋಗಿಸುವುದು ನಮ್ಮ ಬದುಕಿನ ಅನಿವಾರ್ಯ. ಗೋಮಾಂಸ ತಿನ್ನುವುದು ಕೂಡ ಭಾರತೀಯ ಆಹಾರಪದ್ಧತಿಯ ಒಂದು ಭಾಗ. ಅದು ಪುರಾತನ ಕಾಲದಿಂದಲೂ ನಡೆದು ಬಂದದ್ದೇ. ಇಂದಿಗೂ ಭಾರತದ ದಲಿತರು-ಶೂದ್ರರು-ಮುಸ್ಲಿಮರು ಮತ್ತು ಕ್ರೈಸ್ತರು ದನಗಳ ಮಾಂಸವನ್ನು ಉಪಯೋಗಿಸುತ್ತಾರೆ. ಕುರಿ, ಕೋಳಿ, ಮೇಕೆಗಳ ಮಾಂಸದಂತೆ ದನದ ಮಾಂಸವೂ ಬಹುತೇಕ ಭಾರತೀಯರಿಗೆ ಪ್ರಿಯವಾದ ಆಹಾರ.

ಆದರೆ ಜನಾಂಗ ದ್ವೇಷವನ್ನು ಬಿತ್ತುತ್ತಿರುವ ಪುರೋಹಿತಶಾಹಿ-ಕೋಮುಶಕ್ತಿಗಳು ಆಹಾರದಲ್ಲಿ ಶ್ರೇಷ್ಠ-ಕನಿಷ್ಠ ಎಂದು ವಿಂಗಡಿಸಿ ಸಮಾಜದಲ್ಲಿ ಒಡಕು ಉಂಟುಮಾಡುತ್ತಿದೆ. ನಾಡಿನ ಬಹುಸಂಸ್ಕೃತಿಯನ್ನು ನಾಶಮಾಡಿ ಪುರೋಹಿತಶಾಹಿಯ ಏಕಮುಖ ಬದುಕನ್ನು ಬಹುಜನರ ಮೇಲೆ ಹೇರುವ ಪಿತೂರಿಯ ಭಾಗ ಇದಾಗಿದೆ. ಅದರ ಪ್ರಯತ್ನವಾಗಿಯೇ ಮುಸ್ಲಿಮರನ್ನು ಸಮಾಜದ ಮುಖ್ಯವಾಹಿನಿಯಿಂದ ಹೊರಗಿರಿಸಿ ಅವರ ಸಂಸ್ಕೃತಿ-ಬದುಕನ್ನು ನಾಶಪಡಿಸುವ ಹಾಗೂ ಧರ್ಮದ ಹೆಸರಿನಲ್ಲಿ ಬಹುಸಂಖ್ಯಾತರನ್ನು ಅವರ ವಿರುದ್ಧ ಎತ್ತಿಕಟ್ಟುವ ದೇಶದ್ರೋಹದ ಕೆಲಸವನ್ನು ಇವರು ಮಾಡುತ್ತಿದ್ದಾರೆ.

ಪುರೋಹಿತ, ಬ್ರಾಹ್ಮಣಶಾಹಿ ತನ್ನ ಶ್ರೇಷ್ಠತೆಯನ್ನು ಮೆರೆಯುವ ರಾಷ್ಟ್ರೀಯ ಪಿತೂರಿಯ ಭಾಗವಾಗಿಯೇ ಈ ಎಲ್ಲಾ ಕೆಲಸಗಳು ನಡೆಯುತ್ತಿವೆ. ಗುಜರಾತಿನ ಪ್ರಾಯೋಜಿತ ಮುಸ್ಲಿಂ ಹತ್ಯಾಕಾಂಡವಾಗಲಿ, ಹರಿಯಾಣದ ಝೂಜ್ಜರ್‌ನಲ್ಲಿ ನಡೆದ ದಲಿತರ ಮಾರಣ ಹೋಮವಾಗಲಿ, ಬಾಬರಿ ಮಸೀದಿ-ಬಾಬಾಬುಡನ್‌ಗಿರಿ ಗಳಾಗಲಿ, ತೀರಾ ಈಚಿನ ಉಡುಪಿಯ ಘಟನೆಯಾಗಲಿ, ಇಂಥ ಪಿತೂರಿಯ ಶಾಂಪಲ್ಲುಗಳಷ್ಟೆ. ಐದು ಸಾವಿರ ವರ್ಷಗಳ ಭಾರತೀಯ ಬದುಕಿನುದ್ದಕ್ಕೂ ಇದು ನಡೆದೇ ಇದೆ. ಮೌರ್ಯ ಸಾಮ್ರಾಜ್ಯದ ಕೊನೆಯ ದೊರೆಯಾದ ಬೃಹದ್ರಥನನ್ನು ಅವನ ಪುರೋಹಿತನೇ ಆದ ಪುಷ್ಯಮಿತ್ರ ಶುಂಗನು ಕೊಲ್ಲುವುದರೊಂದಿಗೆ ಆರಂಭವಾದ ಬ್ರಾಹ್ಮಣ ಪುರೋಹಿತಶಾಹಿಯ ಕ್ರೌರ್ಯ ಇನ್ನೂ ಮುಂದುವರೆದಿದೆ. ಅದು ಜೈನ - ಬೌದ್ಧರನ್ನು ನುಂಗಿ ನೊಣದಿದೆ. ಬಸವ-ಅಲ್ಲಮರನ್ನು ಅರಗಿಸಿಕೊಂಡಿದೆ. ಇಡೀ ಭಾರತೀಯ ಸಂಸ್ಕೃತಿಯನ್ನೇ ವಿನಾಶದತ್ತ ಕೊಂಡೊಯ್ಯುತ್ತಿದೆ.

ಸಂವಿಧಾನ-ಪ್ರಜಾಪ್ರಭುತ್ವ ವ್ಯಕ್ತಿಗಳ ನಡುವಿನ ಸಮಾನತೆಯನ್ನು ಸಾರಿದರೆ, ಹಿಂದೂ ಪುರೋಹಿತರು ಅದರ ತದ್ವಿರುದ್ಧವಾದ 'ಶ್ರೇಷ್ಠ' ಮತ್ತು 'ಕನಿಷ್ಠ' ತತ್ವವನ್ನು ಪ್ರತಿಪಾದಿಸುತ್ತಾರೆ. ಎಲ್ಲಿಯವರೆಗೆ ಈ ಪುರೋಹಿತಶಾಹಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೋ ಅಲ್ಲಿಯವರೆಗೆ ಜನರ ನೆಮ್ಮದಿಗೆ ಉಳಿಗಾಲವಿಲ್ಲ. ಪುರೋಹಿತಶಾಹಿಯ ಮೂಲೋತ್ಪಾಟನೆಯಾಗದೆ ನೆಮ್ಮದಿ ಹಾಗೂ ನಾಗರಿಕ ಬದುಕು ನಮ್ಮದಾಗುವುದಿಲ್ಲ.

ಉಡುಪಿಯ ಬರ್ಬರ ಬೆತ್ತಲೆ ದೌರ್ಜನ್ಯ ಮಾನವ ಹಕ್ಕುಗಳ ಮೇಲೆ ಮಾಡಿದ ಮಾರಣಾಂತಿಕ ಹಲ್ಲೆ. ದೇಶದ ಪ್ರತಿಯೊಬ್ಬ ಪ್ರಜ್ಞಾವಂತರನ್ನೂ ಕಂಗೆಡಿಸುವ ವಿದ್ಯಮಾನ. ಇಡೀ ದೇಶ ಇದಕ್ಕಾಗಿ ಪಶ್ಚಾತ್ತಾಪ ಪಡಬೇಕಾಗಿದೆ. ನಾಗರಿಕ ಸಮಾಜದ ಕಾನೂನು, ಶಾಂತಿ ಪಾಲನೆಗೆಂದೇ ಇರುವ ಪೊಲೀಸ್ ವ್ಯವಸ್ಥೆಯಾಗಲಿ, ಜಿಲ್ಲಾಡಳಿತವಾಗಲಿ ಇಂಥ ಘಟನೆಯ ನೇರ ಹೊಣೆಯನ್ನು ಹೊರಬೇಕಾಗುತ್ತದೆ. ಉಡುಪಿ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಈ ಘಟನೆಯ ನೈತಿಕ ಹೊಣೆ ಹೊತ್ತು ಸ್ವಯಂ ಶಿಕ್ಷೆಗೆ ಒಳಪಡಬೇಕಾಗಿದೆ. ಮಾನವ ಘನತೆಯನ್ನು ರಕ್ಷಿಸಲಾರದ ಅಸಹಾಯಕ ಪೊಲೀಸರಾಗಲಿ, ಜಿಲ್ಲಾಡಳಿತವಾಗಲಿ ನಮಗೇಕೆ ಬೇಕು? ಸಂವಿಧಾನ - ಪ್ರಜಾಪ್ರಭುತ್ವಗಳಿಗೆ ಬದ್ಧರಲ್ಲದ ಇಂಥ ಅಧಿಕಾರಿಗಳನ್ನು ದೇಶದ್ರೋಹಿಗಳೆಂದೇ ಪರಿಗಣಿಸಬೇಕು.

ವಿಪರ್ಯಾಸ ಒಂದರೊಂದಿಗೆ 'ಅಂತರಂಗ'ವನ್ನು ಮುಗಿಸುವೆ. ಜಾಗತಿಕ ಭಯೋತ್ಪಾದಕನಾದ ಅಮೆರಿಕಾ ಅಧ್ಯಕ್ಷ ಬುಷ್ ಸ್ಥಳೀಯ ಭಯೋತ್ಪಾದಕ ನರೇಂದ್ರ ಮೋದಿಗೆ 'ವೀಸಾ' ನಿರಾಕರಿಸಿ ನಗೆಪಾಟಲಿಗೆ ಈಡಾಗಿದ್ದಾನೆ. ಜಗತ್ತಿನಾದ್ಯಂತ ಜನರ ಮಾರಣ ಹೋಮ ಮಾಡುವ ಮೂಲಕ ಹಿರಿಯಣ್ಣನ ಪಟ್ಟಕ್ಕೆ ಪ್ರಯತ್ನಿಸುತ್ತಿರುವ ಅಮೆರಿಕಾದ ಅಧ್ಯಕ್ಷನೂ ಒಂದೇ, ಭಾರತದ ಅಲ್ಪಸಂಖ್ಯಾತರ ಬದುಕಿಗೆ ಕೊಳ್ಳಿ ಇಟ್ಟಿರುವ ನರೇಂದ್ರ ಮೋದಿಯೂ ಒಂದೇ. ಈ ಇಬ್ಬರಿಗೂ ಜಗತ್ತೇ ವೀಸಾ ನಿರಾಕರಿಸಬೇಕು. ಇಬ್ಬರೂ ಸಮಾನ ಅಪರಾಧಿಗಳು.

ಆದರೆ ಸ್ಥಳೀಯ ದುಷ್ಟನೊಬ್ಬನ ಮೇಲೆ ಜಾಗತಿಕ ದುಷ್ಟನೊಬ್ಬ ಸವಾರಿ ಮಾಡುತ್ತಿದ್ದಾನೆ! ಇದೂ ಒಂದು ರೀತಿಯ ದಬ್ಬಾಳಿಕೆ. ಯಾವುದೇ ದಬ್ಬಾಳಿಕೆಯನ್ನು 'ಸಂವಾದ' ವಿರೋಧಿಸುತ್ತದೆ!

❍ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ತಳ ಸಮುದಾಯದ ನರಳಾಟ ಮತ್ತು...

ಪ್ರೀತಿಯ ಸಂಪಾದಕರೇ,

ಮನುಷ್ಯ ವಿರೋಧಿ ಜಾತಿ ವ್ಯವಸ್ಥೆಯ ತಾರತಮ್ಯ ನೀತಿ, ಅದರೊಳಗೇ ವಿಸ್ತೃತವಾಗಿರುವ ಜಾತಿ ಅಸಹನೆಯ ಹಿಂಸಾಚರಣೆಯನ್ನು ತನ್ನೊಳಗೆ ಇಟ್ಟುಕೊಂಡ ಹಿಂದೂ ಧರ್ಮಕ್ಕೆ ಬಹುಸಂಖ್ಯಾತ ಕೆಳಜಾತಿಗಳಿಂದಲೇ ಪ್ರಬಲ ಪ್ರತಿರೋಧ ಎದುರಾಗುತ್ತಿರುವುದು ಮತ್ತು ಆ ಕಾರಣಕ್ಕೆ ಹಿಂದೂಧರ್ಮ ಕ್ಷಯಿಸುತ್ತಾ ಬಂದಿರುವುದು ಎಲ್ಲರಿಗೂ ಕಂಡು ಬರುವಂಥದ್ದು. ಆದರೆ ಈ ಸತ್ಯವನ್ನು ಜೀರ್ಣಿಸಿಕೊಳ್ಳಲಾರದ ಕೆಲ ಕೊಳಕು ಮನಸ್ಸಿನವರು ಅನ್ಯ ಧರ್ಮೀಯರು ಹಿಂದೂ ಜನಾಂಗವನ್ನು ಮತಾಂತರಗೊಳಿಸಿ ಅವರನ್ನು ಜಾತಿ ಕೆಡಿಸುತ್ತಿದ್ದಾರೆಂದು ಹಲುಬುತ್ತಿದ್ದಾರೆ. ಜಾತಿ ಕೆಡಿಸುತ್ತಿದ್ದಾರೆ ಎಂಬ ಮಾತನ್ನು ಗಮನಿಸಿದಾಗ ಇವರು ಜಾತಿವ್ಯವಸ್ಥೆಯ ಸಮರ್ಥಕರಾಗಿರುವುದು ನಿಚ್ಚಳವಾಗಿ ತಿಳಿಯುತ್ತದೆ.

ಜಾತಿ ಶ್ರೇಷ್ಠತೆಯ ಅಹಮಿಕೆಯನ್ನು, ಅದರ ಸುಖವನ್ನು ಅನುಭವಿಸುತ್ತಿರುವ ಜನ ಸಮಾಜದಲ್ಲಿ ಜಾತಿಯನ್ನು ಊರ್ಜಿತಗೊಳಿಸಲು ಇಂಥ ವಾದಗಳ ಪ್ರಬಲ ಪ್ರತಿಪಾದಕರಾಗಿರುವುದು ಹೊಸದೇನಲ್ಲ. ಆದರೆ ಇವರ ಮಾತುಗಳನ್ನು ನೋಡಿದಾಗ ಹಿಂದೂ ಧರ್ಮದ ನಿಷೇಧಾತ್ಮಕ, ಸಕಾರಾತ್ಮಕ ಧಾರ್ಮಿಕ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಪರಿಣಾಮದಡಿ ಕೆಳವರ್ಗದ ಸಮುದಾಯಗಳ ನರಳಾಟಗಳು ಈ ಶತಮಾನದಲ್ಲೂ ಕೊನೆಯಾಗಬಾರದೆಂಬ ಹೃದಯ ಹೀನತೆ ಇರುವುದು ಎದ್ದು ಕಾಣುತ್ತದೆ.



ಹಿಂದೂ ಧರ್ಮ ಮೂಲತಃ ಸಹನಾಶೀಲ. ಅದು ಸರ್ವರ ಸುಖವನ್ನು ಬಯಸುವಂತದ್ದು. ಆ ಕಾರಣಕ್ಕಾಗಿ ಅದೇ ಈ ರಾಷ್ಟ್ರ ಜೀವನದ ತಳಹದಿಯಾಗಬೇಕೆಂದು ತಮ್ಮ ಚತುರ ಹಾಗೂ ವಂಚನಾ ಸಾಮರ್ಥ್ಯದ ಮಾತುಗಳ ಮೂಲಕ ಹಿಂದುತ್ವವಾದಿಗಳು ತಮ್ಮ ತೆಕ್ಕೆಗೆ ಇಡೀ ಹಿಂದು ಸಮುದಾಯವನ್ನು ಎಳೆದುಕೊಳ್ಳ ಬೇಕೆಂಬ ತಂತ್ರ ಮಾಡುತ್ತಲೇ ಇದ್ದಾರೆ. ಹಿಂದುತ್ವದ ಅಬ್ಬರದ ಸ್ಲೋಗನ್ ಒಂದರಿಂದಲೇ ಅದರೊಳಗಿನ ಜಾತೀಯತೆ, ಅಸಮಾನತೆ, ಮೌಢ್ಯಗಳನ್ನು ಮರೆಮಾಚುತ್ತಾ ಕೆಳವರ್ಗಗಳನ್ನು ತಾವು ತೋಡಿರುವ ಖೆಡ್ಡಾಗಳಿಗೆ ಸುಲಭವಾಗಿ ಬೀಳಿಸುತ್ತಿದ್ದಾರೆ.

ಆದರೆ ಹಿಂದೂ ಧರ್ಮ ಎಷ್ಟರ ಮಟ್ಟಿಗೆ ಅಸಹನೆ, ಹಿಂಸೆಯಿಂದ ಕೂಡಿದೆ ಎಂಬುದನ್ನು ಮತ್ತೆ ಮತ್ತೆ ಇಂಥವರಿಗೆ ನೆನಪಿಸುತ್ತಿರ ಬೇಕಾಗುತ್ತಿರುತ್ತದೆ. ಶೂದ್ರ ವರ್ಗವನ್ನು ಜ್ಞಾನಕ್ಕೆ ಅನರ್ಹರೆಂದು ಹೇಳಿ ಅವರ ಮೇಲೆ ಗುಲಾಮಗಿರಿಯನ್ನು ಹೇರಿದ್ದು ಇದಕ್ಕಾಗಿ ಮನು ಎಂಬುವನು ಶೂದ್ರರನ್ನು ಧರ್ಮದ ಹೆಸರಿನಲ್ಲಿ ಬಂಧಿಸಿದ್ದು, ಈ ಕಾರಣದಿಂದಲೇ ಶೂದ್ರ ಸಮುದಾಯಕ್ಕೆ ಎಂದೆಂದಿಗೂ ವಿಕಾಸವಾಗದಂತಹ ದ್ರೋಹ ಆಗಿದ್ದು, ಇದರ ವಿರುದ್ಧ, ಬೌದ್ಧ ಜೈನ, ವೀರಶೈವ ಧರ್ಮಗಳು ಹೋರಾಡಿ ಸಮಾಜದಲ್ಲಿ ಶೋಷಣೆಗಳನ್ನು ಕಡಿಮೆಗೊಳಿಸಿದ್ದು ಮತ್ತು ಈ ಕಾರಣಕ್ಕೆ ಇವು ಹಿಂದುತ್ವದ ಕ್ರೋಧಕ್ಕೆ ಒಳಗಾಗಿದ್ದು ಇವನ್ನೆಲ್ಲಾ ನಮಗೆ ಇತಿಹಾಸ ತಿಳಿಸುತ್ತದೆ. ವರ್ತಮಾನದಲ್ಲೂ ಹಿಂದುತ್ವ ಸೃಷ್ಟಿಸಿರುವ ಕೋಮುವಾದ ಈ ಎಲ್ಲದರ ಮುಂದುವರಿಕೆಯೇ ಆಗಿದೆ. ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಲು ಯತ್ನಿಸಿದ ಎಲ್ಲಾ ಶಕ್ತಿಗಳನ್ನು ಮುಗಿಸುವುದು, ಮುಗಿಸಲು ತಂತ್ರಗಳನ್ನು ಹೆಣೆಯುವುದು ಹಿಂದುತ್ವದ ಪ್ರಮುಖ ಲಕ್ಷಣವಾಗಿದೆ.

ಮನುಷ್ಯ ತನ್ನ ವಿಚಾರ, ಆಲೋಚನೆ, ವೈಚಾರಿಕ ದೃಷ್ಟಿಕೋನಗಳನ್ನು ಕಾಲಕಾಲಕ್ಕೆ ಬದಲಾಯಿಸಿಕೊಳ್ಳುತ್ತಾ ಬೆಳೆಸುತ್ತಾ ತನ್ನನ್ನೂ ಆ ಮೂಲಕ ಸಮಾಜವನ್ನು ಪುನರ್‍ರಚಿಸುವ ಕ್ರಿಯೆಯ ಪ್ರಬುದ್ಧತೆಯೇ ಮತಾಂತರ. ಮತಾಂತರಗಳ ಮೂಲಕ ಭಾರತದಲ್ಲಿ ಇಂಥ ಪುನರ್‍ರಚನೆಗಳು ಅನೇಕ ಬಾರಿ ನಡೆದು ಸಮಾಜದಲ್ಲಿ ಪ್ರಬಲ ವೈಚಾರಿಕ ಪ್ರಜ್ಞೆಯ ಬುನಾದಿಯನ್ನು ಹಾಕಿವೆ. ಲೋಕಾಯತ, ಚಾರುವಾಕ, ಮೀಮಾಂಸೆಯ ದರ್ಶನಗಳು ಇದಕ್ಕೆ ಸಾಕ್ಷಿಯಾಗಿವೆ.

ಬ್ರಾಹ್ಮಣರ ಅಮೂರ್ತ ರೂಪದ ಊಹಾತ್ಮಕ ಚಿಂತನೆಯ ಸಾಮರ್ಥ್ಯ ಹಾಗೂ ಅವರ ಉಚ್ಚ ಜಾತಿಯ ಪರಿಶುದ್ಧತೆಯನ್ನು ರಕ್ಷಿಸಿಕೊಳ್ಳಲು ಕಾಪಾಡಿಕೊಂಡಿದ್ದ ಕಟ್ಟುನಿಟ್ಟಿನ ವಿಧಿಗಳ ವಿರುದ್ಧ ಮತ್ತು ಚಾತುರ್ವರ್ಣದ ರಕ್ಷಣೆಗಾಗಿ ದೇವರು ಮಾನವ ಜೀವಿಗಳ ಮತ್ತವರ ಸಾಮಾಜಿಕ ಜೀವನದ ನ್ಯಾಯ ಯುತ ಹಾಗೂ ನೈತಿಕ ನಿಯಂತ್ರಕನೆಂಬ ಪುರೋಹಿತಶಾಹಿಯ ವಿಚಾರಗಳ ವಿರುದ್ಧ ಬೌದ್ಧ, ಜೈನ ಧರ್ಮಗಳು ಹಾಗೂ ಲೋಕಾಯತ, ಚಾರುವಾಕ ದರ್ಶನಗಳು ಉಗ್ರವಾಗಿ ದಾಳಿ ನಡೆಸಿದ್ದವು. ಇದರಿಂದಾಗಿ ಚಾತುರ್ವರ್ಣದ ವ್ಯವಸ್ಥೆಯಲ್ಲಿ ನಿತ್ಯ ಶೋಷಣೆಗೆ, ಅಪಮಾನಕ್ಕೆ ಒಳಗಾಗುತ್ತಿದ್ದ ಜನ

ಜಾತಿ ಶ್ರೇಷ್ಠತೆಯ ಅಹಮಿಕೆಯನ್ನು, ಅದರ ಸುಖವನ್ನು ಅನುಭವಿಸುತ್ತಿರುವ ಜನ ಸಮಾಜದಲ್ಲಿ ಜಾತಿಯನ್ನು ಊರ್ಜಿತ ಗೊಳಿಸಲು ಇಂಥ ವಾದಗಳ ಪ್ರಬಲ ಪ್ರತಿಪಾದಕರಾಗಿರುವುದು ಹೊಸದೇನಲ್ಲ. ಆದರೆ ಇವರ ಮಾತುಗಳನ್ನು ನೋಡಿದಾಗ ಹಿಂದೂ ಧರ್ಮದ ನಿಷೇಧಾತ್ಮಕ, ಸಕಾರಾತ್ಮಕ ಧಾರ್ಮಿಕ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಪರಿಣಾಮದಡಿ ಕೆಳವರ್ಗದ ಸಮುದಾಯಗಳ ನರಳಾಟಗಳು ಈ ಶತಮಾನದಲ್ಲೂ ಕೊನೆಯಾಗಬಾರದೆಂಬ ಹೃದಯ ಹೀನತೆ ಇರುವುದು ಎದ್ದು ಕಾಣುತ್ತದೆ.

○ ಸಿ.ಹರೀಶ್‌ಕುಮಾರ್
ಗಂಗನಬೀಡು

ಸಮುದಾಯ ಈ ಧರ್ಮಗಳ ಅನುಯಾಯಿಗಳಾಗಿ ದರ್ಶನಗಳ ಪ್ರತಿಪಾದಕರಾಗಿ ಸಮಾಜಕ್ಕೆ ಹೊಸ ಚೈತನ್ಯದ ನಡಿಗೆಯನ್ನು ಕೊಟ್ಟರು.

ಬಸವಣ್ಣನ ಕಾಲದಲ್ಲೂ ಅನೇಕ ಕೆಳ ಜಾತಿಗಳು ತಮ್ಮ ಜಾತಿಯ ಕೀಳರಿಮೆಯನ್ನು ಮರೆತು ಅನುಭವದ ಮಂಟಪದಲ್ಲಿ ಪಾಲ್ಗೊಂಡು ಶೋಷಣಾಮುಕ್ತವಾದ ಜಾತ್ಯತೀತ ಸಮಾಜಕ್ಕೆ ಹೋರಾಡಿದ್ದು ಕಾಣಬಹುದು. ಇಂಥ ಯುಗ ಪ್ರವರ್ತಕರ ಕಾಲದವೆಲ್ಲಾ ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಹಾಗೂ ವೈಚಾರಿಕತೆಗಳು ಬೆಳೆದು ತನ್ಮೂಲಕ ಮಾನವೀಯ ಸಂಬಂಧಗಳನ್ನು ಬೆಸೆದು ಮನುಷ್ಯ ಶ್ರೇಷ್ಠತೆಯನ್ನು ಎತ್ತಿ ಹಿಡಿದಿವೆ. ಮನುಷ್ಯ ಮನುಷ್ಯನ ಮಧ್ಯೆ ಇದ್ದ ಅಂತರಗಳನ್ನು ಕಡಿಮೆ ಮಾಡಿ ಸಹಬಾಳ್ವೆಯ ಮೂಲಕ ಅನೇಕ ಸಾಧನೆಗಳನ್ನು ಮಾಡಿವೆ; ಹಿಂದುತ್ವದ ಕಗ್ಗತ್ತಲಿನಿಂದ ಈ ದೇಶವನ್ನು ಹೊರತಂದದ್ದು ಇಂಥ ಅನ್ಯ ಧರ್ಮಗಳು, ದರ್ಶನಗಳೇ ವಿನಃ ಹಿಂದೂ ಧರ್ಮವಾಗಲೀ, ಅದರ ತತ್ವಜ್ಞಾನವಾಗಲೀ ಅಲ್ಲ ಎಂಬುದು ಅನ್ಯಧರ್ಮದ ದ್ವೇಷಿಗಳು, ಮತಾಂತರದ ವಿರೋಧಿಗಳು ಅರಿಯಬೇಕಿದೆ.

ವೈದಿಕ ಸಂಸ್ಕೃತಿ ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ, ವಿಜ್ಞಾನ ಇತ್ಯಾದಿ ಪ್ರಗತಿಪರ ಚಿಂತನೆಗಳನ್ನು ಎಂದೂ ಸಾಮಾಜಿಕ ಮೌಲ್ಯವೆಂದು ತಿಳಿದಿಲ್ಲ. ವೈದಿಕಶಾಹಿ ಜಾತ್ಯತೀತ, ವೈಚಾರಿಕತೆಯ ಪ್ರಬಲ ಪ್ರತಿರೋಧದಿಂದ ನಶಿಸಿಹೋದದ್ದನ್ನು ಕಂಡು ತೀವ್ರ ಹತಾಶೆ, ಯಾತನೆಯನ್ನು ಅನುಭವಿಸಿದ ಸಂಘ ಪರಿವಾರ ಎನ್‌ಡಿಎ ಸರ್ಕಾರದ ಮೂಲಕ ಗತಿಸಿಹೋದ ವೈದಿಕ ಶಾಹಿಯ ವೈಭವವನ್ನು ತರಲು ಶಿಕ್ಷಣವನ್ನು ಕೇಸರೀಕರಣ ಮಾಡಿತು. ಈ ಮೂಲಕ ಧಾರ್ಮಿಕತೆಯ ಅಪ್ರಾಮಾಣಿಕತೆ, ಕಪಟತೆ, ಮೌಢ್ಯಗಳನ್ನು ಪಠ್ಯ ಕ್ರಮದಲ್ಲಿ ತಂದು ಸಂಶೋಧನಾ ಘಟಕಗಳಿಗಿದ್ದ ಘನತೆ, ವಿಶ್ವಾಸಾರ್ಹತೆಯನ್ನೇ ಹಾಳುಗೆಡವಿತು.

ಕೇಸರೀಕರಣವನ್ನೇ ಭಾರತೀಯತೆ, ಆಧ್ಯಾತ್ಮಿಕತೆ, ರಾಷ್ಟ್ರೀಯತೆ ಎಂದು ಅಬ್ಬರದ ಸುಳ್ಳುಗಳನ್ನು ಹೇಳುತ್ತಾ ಅದರ ಬುನಾದಿಯ ಮೇಲೆ ಭಾರತವನ್ನು ಪುನರ್ರಚಿಸುವ ಕ್ರಿಯೆಗೆ ವೈದಿಕಶಾಹಿ ಒತ್ತು ಕೊಡುತ್ತಲೇ ಇದೆ. ಇದಕ್ಕೆ ಅಬ್ರಾಹ್ಮಣ್ಯದ ಇತರ ಬಲಿಷ್ಠ ಜಾತಿಗಳೂ ಹೆಗಲು ಕೊಡುತ್ತಿವೆ. ಮತಾಂಧತೆ, ಕೋಮುವಾದಗಳು, ವಿಜೃಂಭಿಸುತ್ತಿರುವ ಇಂದಿನ ಸಂದರ್ಭವನ್ನು ಉಪಯೋಗಿಸಿಕೊಂಡು ಸನಾತನ ವೈದಿಕ ಧರ್ಮದತ್ತ ಇಡೀ ಸಮಾಜವನ್ನು ದೈತ್ಯ ಹಿನ್ನೆಗೆತಕ್ಕೆ ಸಿದ್ಧಗೊಳಿಸುವ ನಿರಂತರ ಪ್ರಯತ್ನದಲ್ಲಿ ವೈದಿಕಶಾಹಿ ತನ್ನ ಯಾಜಮಾನ್ಯತೆಯನ್ನು ಬಿಟ್ಟುಕೊಟ್ಟಿಲ್ಲ. ತಮ್ಮ ಹಿತಾಸಕ್ತಿ ಹಾಗೂ ರಾಜಕೀಯ ಉದ್ದೇಶಕ್ಕಾಗಿ ಸೃಷ್ಟಿಸಿದ ಹಾಗೂ ವಿರೂಪಗೊಳಿಸಿದ ಚಾರಿತ್ರಿಕ ಅಂಶಗಳ ಮೇಲೆ ಕೋಮುವಾದಿ ತತ್ವಗಳನ್ನು ಹರಡುತ್ತಿರುವ ಇದು ಬ್ರಾಹ್ಮಣತ್ವದ ತಿರುಳೇ ಭಾರತೀಯತೆ ಎಂಬ ಸುಳ್ಳುಗಳನ್ನು ಹೇಳುವ ಮೂಲಕ ಭಾರತದ ಬಹುಮುಖಿ ಐಕ್ಯತೆಗೆ ಧಕ್ಕೆ ತರುತ್ತಿದೆ.

ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ನಾವು ಹಿಂದುತ್ವವನ್ನು ವಿರೋಧಿಸಲೇಬೇಕಿದೆ. ಏಕೆಂದರೆ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಪ್ರಜಾಪ್ರಭುತ್ವದ ಆದರ್ಶಗುಣಗಳಾದರೆ, ಹಿಂದುತ್ವವಾದವು ಅದಕ್ಕೆ ಪೂರ್ಣ ವಿಮುಖವಾಗಿರುವ ದಾಸ್ಯ, ಅಸಮಾನತೆ, ವೈರತ್ವದ ನೆಲೆಗಟ್ಟಿನ ಮೇಲೆ ನಿಂತಿರುವಂಥದ್ದು.

ಇಂಥ ವೈರತ್ವದ ಪ್ರತೀಕವೇ ಬಾಬರಿ ಮಸೀದಿ ಧ್ವಂಸ, ಸಾಮರಸ್ಯ ಕೇಂದ್ರವಾದ ಬಾಬಾಬುಡನ್‌ಗಿರಿಯ ವಿವಾದ, ಹಾಗೂ ಕನಕ ಗೋಪುರದ ಧ್ವಂಸ. ಮೊದಲು ಬಾಬರಿಮಸೀದಿಯನ್ನು ಕೆಡವಿ ಬಹುಸಂಖ್ಯಾತ ಹಿಂದುಗಳ ಬೆಂಬಲ ಗಳಿಸಿಕೊಂಡ ವೈದಿಕಶಾಹಿ ತನ್ನ ಎರಡನೆಯ ಸರದಿಯಲ್ಲಿ ಬಾಬಾಬುಡನ್‌ಗಿರಿಯ ವಿಷಯವನ್ನೆತ್ತಿಕೊಂಡು ವಿವಾದವನ್ನಾಗಿ ಮಾಡಿ ಅದರಲ್ಲೂ ಕೊಂಚ ಮಟ್ಟಿನ ಯಶ ಕಂಡಿತು. (ಕೋಮು ಸೌಹಾರ್ದ ವೇದಿಕೆಯ ಧಣಿವರಿಯದ ಹೋರಾಟದ ಫಲವಾಗಿ ಪರಿಸ್ಥಿತಿ ಇದರ ವಿರುದ್ಧವಾಗಿದೆ) ಎರಡು ಬಾರಿ ತನ್ನ ಕುಕೃತ್ಯಗಳ ಮೂಲಕ ಸಮಾಜದಲ್ಲಿ ಸಲ್ಲದ ಕ್ಷೋಭೆಯೆಬ್ಬಿಸಿ ದಕ್ಕಿಸಿಕೊಂಡ ನಂತರ ಈಗ ಕನಕ ಗೋಪುರಕ್ಕೆ ಕೈಹಾಕಿ ತಿಣುಕುತ್ತಿದೆ.

ವರ್ಣಾಶ್ರಮದ ಮೇಲ್ತುದಿಯಲ್ಲಿರುವ ವೈದಿಕ ಶ್ರೇಷ್ಠತೆಯನ್ನು ಮತ್ತು ಆ ಶ್ರೇಷ್ಠತೆಯನ್ನು ಮತ್ತಷ್ಟು ಬಲಗೊಳಿಸುವ ಸಂಸ್ಕೃತದ ಅವಾಸ್ತವಿಕತೆಯನ್ನು, ಅದರ ಕೃತಕತೆಯನ್ನು ಹಾಗೂ ಜನರ ಆಶೋತ್ತರಗಳೊಂದಿಗೆ ಸಂಬಂಧ ಕಡಿದುಕೊಂಡ ಅದರ ಹೃದಯ ಹೀನತೆಯನ್ನು ಅರಿತು ಕನಕದಾಸರು ತಮ್ಮ ಕೃತಿಗಳಲ್ಲಿ ಜನಸಾಮಾನ್ಯನ ಆಡು ಭಾಷೆಯಾದ ಕನ್ನಡವನ್ನು ಅಳವಡಿಸಿಕೊಂಡಿದ್ದರು. ಇದರ ಮೂಲಕ ವೈದಿಕರಿಗೆ ಅವರ ದೇವ ಭಾಷೆಯಾದ ಸಂಸ್ಕೃತಕ್ಕೆ ಹಿನ್ನಡೆಯನ್ನು ತಂದಿದ್ದರು. ಇಂಥ ಆಡುಭಾಷೆಯ ಬಳಕೆಯ ವಿಕಸನದ ಪ್ರಕ್ರಿಯೆಯಲ್ಲಿ ರೂಪಿತಗೊಂಡ ಜನ ಸಮುದಾಯದ ಸಂಸ್ಕೃತಿಯನ್ನು, ಜೀವನ ಧರ್ಮವನ್ನು, ಆಲೋಚನಾ ಕ್ರಮಗಳನ್ನು ವೈದಿಕಶಾಹಿ ಯಾವತ್ತೂ ಸಹಿಸಿಲ್ಲ. ಇವುಗಳ ವಿರುದ್ಧ ಅದರದು ಭಂಜಕ ಪ್ರವೃತ್ತಿ. ಕನಕ ಗೋಪುರವನ್ನು ಕೆಡವಿದ್ದೂ ಕೂಡ ಈ ಪ್ರವೃತ್ತಿಯ ಮುಂದುವರಿಕೆಯೇ ಆಗಿದೆ. ಪ್ರಸ್ತುತ ಕಟ್ಟಲಾಗುತ್ತಿರುವ ಹೊಸ ಗೋಪುರದಲ್ಲಿ ಕನಕದಾಸರೊಟ್ಟಿಗೆ ದಿಕ್ಕು-ದೆಸೆಯಿಲ್ಲದ ವಿಪ್ರೋತ್ತಮರನ್ನು ಸೇರಿಸಿ ಕೊನೆಗೆ ಉಡುಪಿಯಲ್ಲಿ ಕನಕದಾಸರನ್ನೇ ಪರಕೀಯಗೊಳಿಸಿ ವಿಜಯದ ನಗೆ ಬೀರಬೇಕೆಂದಿದ್ದ ಇವರಿಗೆ ಮರ್ಮಾಘಾತವಾಗುವಂಥ ಪೆಟ್ಟನ್ನು ಕುರುಬ ಸಮಾಜದ ನೇತೃತ್ವದಲ್ಲಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳು ಕೊಟ್ಟಿವೆ.

ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ನಾವು ಹಿಂದುತ್ವವನ್ನು ವಿರೋಧಿಸಲೇಬೇಕಿದೆ. ಏಕೆಂದರೆ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಪ್ರಜಾಪ್ರಭುತ್ವದ ಆದರ್ಶಗುಣಗಳಾದರೆ, ಹಿಂದುತ್ವವಾದವು ಅದಕ್ಕೆ ಪೂರ್ಣ ವಿಮುಖವಾಗಿರುವ ದಾಸ್ಯ, ಅಸಮಾನತೆ, ವೈರತ್ವದ ನೆಲೆಗಟ್ಟಿನ ಮೇಲೆ ನಿಂತಿರುವಂಥದ್ದು.
ಇಂಥ ವೈರತ್ವದ ಪ್ರತೀಕವೇ ಬಾಬರಿ ಮಸೀದಿ ಧ್ವಂಸ, ಸಾಮರಸ್ಯ ಕೇಂದ್ರವಾದ ಬಾಬ ಬುಡನ್‌ಗಿರಿಯ ವಿವಾದ, ಹಾಗೂ ಕನಕ ಗೋಪುರದ ಧ್ವಂಸ.

ದಲಿತ-ಅಲ್ಪಸಂಖ್ಯಾತರ ವಿಷಯದಲ್ಲೂ ಇದರದು ತೀರದ ವೈರತ್ವ. ಗೋಹತ್ಯೆಯ ವಿಷಯವನ್ನೆತ್ತಿಕೊಂಡೇ ಇದು ಈ ಎರಡೂ ಸಮುದಾಯದ ವಿರುದ್ಧ ಜಂಗೀ ಕುಸ್ತಿಗೆ ಇಳಿಯುತ್ತದೆ: ಗೋವು ಪವಿತ್ರ, ಅದು ಕಾಮಧೇನು. ಆದ್ದರಿಂದ ಅದನ್ನು ಕೊಲ್ಲಬಾರದೆಂದು ಠೇಂಕಾರ ಹಾಕುತ್ತದೆ. ಆದರೆ ಈ ಪವಿತ್ರವಾದ ಗೋವುಗಳನ್ನೇ ತಿಂದು ಬ್ರಾಹ್ಮಣರು ಮೈ ಬೆಳೆಸಿಕೊಳ್ಳುತ್ತಿದ್ದ ಸತ್ಯವನ್ನು ಋಗ್ವೇದ ಹೇಳುತ್ತದೆ.

ಪಂಚಮ ವೇದದಲ್ಲಿ ಬ್ರಾಹ್ಮಣರು ಗೋ ಭಕ್ಷಕರೆಂದು ಹೇಳಿದೆ. ಅತಿಥಿ ಸತ್ಕಾರಕ್ಕೆ ಹೆಸರಾದ ಕ್ಷತ್ರಿಯ ರಾಜ ರಂತಿದೇವನ ಅಡುಗೆ ಮನೆಯಲ್ಲಿ ಎರಡು ಸಾವಿರ ಅಡುಗೆಯವರಿದ್ದರು. ಅಷ್ಟಾದರೂ ಸಾಲದಷ್ಟು ಬ್ರಾಹ್ಮಣರ ಸಂಖ್ಯೆ ಊಟಕ್ಕೆ ಬರುತ್ತಿತ್ತು. ಗೋಮಾಂಸ ಸಾಲದೇ ಬಂದಾಗ ಸೂಪನ್ನೇ ಹೆಚ್ಚಾಗಿ ಬಡಿಸಿಕೊಂಡು ತಿನ್ನುವಂತೆ ಅಡುಗೆಯವರು ಬ್ರಾಹ್ಮಣರಲ್ಲಿ ಬೇಡಿಕೊಳ್ಳುತ್ತಿದ್ದರು ಎಂದು ಶಾಂತಿಪರ್ವ, ವನಪರ್ವ ಮತ್ತು ದ್ರೋಣ ಪರ್ವಗಳಲ್ಲಿ ಚಿತ್ರಿತವಾಗಿದೆ.

ಬ್ರಾಹ್ಮಣರು ಅಪ್ಪಟ ಗೋವಧೆ, ಗೋಭಕ್ಷಕರಾಗಿದ್ದರೆಂಬುದನ್ನು ಇನ್ನೂ ಹಲವು ಶ್ಲೋಕಗಳಿಂದ ತಿಳಿಯಬಹುದಾಗಿದೆ.

ಬ್ರಾಹ್ಮಣ ಶ್ರಾದ್ಧದ ಸಮಯದಲ್ಲಿ ಕೊಟ್ಟ ಮಾಂಸವನ್ನು ತಿನ್ನದಿದ್ದರೆ ಅವನು ನರಕಕ್ಕೆ ಹೋಗುತ್ತಾನೆ. (ವಸಿಷ್ಠ ಧರ್ಮಶಾಸ್ತ್ರ ೧೧/೩೪)

ಇಂದ್ರ ಹಸು, ಕರು, ಕುದುರೆ ಮತ್ತು ಎಮ್ಮೆಯ ಮಾಂಸವನ್ನು ತಿನ್ನುತ್ತಿದ್ದ (ಋಗ್ವೇದ ೬/೧೭/೧)

ಯಜ್ಞವಲ್ಕ್ಯ ಎಂಬ ಋಷಿ ಹಸುವಿನ ಮಾಂಸ ಕುರಿತು ಹೀಗೆ ಹೇಳುತ್ತಾನೆ : ನಾನು ಹಸುವಿನ ಮಾಂಸವನ್ನು ತಿನ್ನುತ್ತೇನೆ. ಕಾರಣ ಅದು ಮೃದುವಾಗಿರುತ್ತದೆ ಮತ್ತು ರುಚಿಯಾಗಿರುತ್ತದೆ (ಶತಪಥ ಬ್ರಾಹ್ಮಣ ೩/೧/೨/೨೧)

ವಿವೇಕಾನಂದರೂ ಕೂಡ ತಮ್ಮ ಲೇಖನಗಳಲ್ಲಿ 'ಭಾರತದಲ್ಲಿ ಒಂದು ಕಾಲದಲ್ಲಿ ಗೋಮಾಂಸ ತಿನ್ನದೆ ಯಾವ ಬ್ರಾಹ್ಮಣನೂ ಬ್ರಾಹ್ಮಣನಾಗಿ ಉಳಿಯುತ್ತಿರಲಿಲ್ಲ ಎಂದು ಹೇಳಿದ್ದಾರೆ. (ವಿವೇಕಾನಂದ ಸಮಗ್ರ ಲೇಖನ, ಸಂಪುಟ-೩, ಪುಟ-೧೭೪)

ಹೀಗಿದ್ದರೂ ಕೂಡ ಹಿಂದೂ ಧರ್ಮದಲ್ಲಿ ಗೋವಿಗೆ ಪೂಜ್ಯ ಸ್ಥಾನವಿದೆ. ಅದರ ಹತ್ಯೆ ಮತ್ತು ಭಕ್ಷಣೆಯನ್ನು ನಿಷೇಧಿಸಬೇಕೆಂದು ಮತಿ ಇಲ್ಲದೆ ಕೂಗುತ್ತಿರುವುದು ಜನಾಂಗೀಯ ದ್ವೇಷಕ್ಕೆ ಒತ್ತು ಕೊಡುವುದಾಗಿದೆಯೇ ವಿನಃ ಮತ್ತೇನಲ್ಲ.

ಹರಿಯಾಣದಲ್ಲಿ ಗೋವಿನ ಚರ್ಮವನ್ನು ಸುಲಿವ ದಲಿತರನ್ನು ಸಾರ್ವಜನಿಕವಾಗಿ ದುಷ್ಕರ್ಮಿಗಳು ಕಲ್ಲು ಹೊಡೆದು ಸಾಯಿಸಿದಾಗ ವಿಎಚ್‌ಪಿಯ ಗಿರಿರಾಜ್ ಕಿಶೋರ್ ಎಂಬ ವ್ಯಕ್ತಿ ಹಿಂದೂ ಧರ್ಮದಲ್ಲಿ ಮನುಷ್ಯನಿಗಿಂತಲೂ ಗೋವಿಗೆ ಪೂಜ್ಯ ಸ್ಥಾನವಿದೆ ಎಂದು ಆ ಕೃತ್ಯವನ್ನು ಸಮರ್ಥಿಸಿಕೊಂಡಿದ್ದ. ಹಿಂದು ಒಂದು ಎಂದು ಹೇಳುವ ಪೇಜಾವರರು ಹರಿಯಾಣಕ್ಕೆ ಹೋಗಿ ಮೃತರ ಸಂಬಂಧಿಕರನ್ನು ಸಂತೈಸುವ ನಾಟಕ ಆಡಿದರೇ ವಿನಃ ವಿಎಚ್‌ಪಿಯ ವಿರುದ್ಧ ಒಂದು ಮಾತೂ ಆಡಲಿಲ್ಲ. ಬದಲಾಗಿ ಈ ಘಟನೆಯಿಂದ ಬೇಸತ್ತು ದಲಿತರು ಬೌದ್ಧ ಧರ್ಮಕ್ಕೆ ಮತಾಂತರ ಆಗುತ್ತಿರುವುದನ್ನು ಕಂಡು ಕಿಡಿಕಾರಿದ್ದರು.

ಇಂಥ ಅನೇಕ ಬಗೆಯ ಜನಾಂಗೀಯ ದ್ವೇಷದ ಹಿಂದೂವಾದಿ ವಿಕೃತಿ, ಹಾಗೂ ಪೈಶಾಚಿಕರಣ ತನ್ನ ಶಕ್ತಿಯನ್ನು

(೧೭ನೇ ಪುಟಕ್ಕೆ)

ಸಮಕಾಲೀನ

ನಮ್ಮ ನಡುವಿನ ಅಪರೂಪದ ಚೇತನ ದೇವನೂರ ಮಹಾದೇವ. ಗೆಳೆಯರು ಪ್ರೀತಿಯಿಂದ ಅವರನ್ನು 'ಧರೆಗೆ ದೊಡ್ಡವರು' ಎಂದು ಕರೆಯುವುದೂ ಉಂಟು. ನಾಡಿನ ಎಲ್ಲ ಪ್ರಗತಿಪರ ಚಳವಳಿಗಳ ಸಾಕ್ಷಿಪ್ರಜ್ಞೆಯಂತಿರುವ ಮಹಾದೇವ ಎಲ್ಲ ಬಗೆಯ ಅಧಿಕಾರ, ಆಮಿಷಗಳಿಂದ ಸದಾ ದೂರ ಇದ್ದವರು. ಈಗ 'ಸರ್ವೋದಯ ಕರ್ನಾಟಕ'ದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದು ಬಹಳಷ್ಟು ಜನರ ಅಚ್ಚರಿ ಹಾಗೂ ಕಾತರಕ್ಕೆ ಕಾರಣವಾಗಿದೆ. 'ಸಂತ' ಮಹಾದೇವ ಈಗ 'ರಾಜಕಾರಣಿ' ಮಹಾದೇವ ಆಗಿದ್ದಾರೆ. 'ಸರ್ವೋದಯ ಕರ್ನಾಟಕ ಪಕ್ಷದ ಆಶಯ, ಸಂವಿಧಾನ, ಬಾವುಟ ಬಿಡುಗಡೆ ಸಂದರ್ಭದಲ್ಲಿ ಅವರು ಆಡಿದ ಮಾತುಗಳು ಇಲ್ಲಿವೆ.

○ ದೇವನೂರ ಮಹಾದೇವ



ಸರ್ವೋದಯ ಕರ್ನಾಟಕ:

ಭಾರತದ ದಿಕ್ಕು-ದೆಸೆ

ಸಮಾಜವಾದದ ಕೊನೆಯ ಬೆಳಕಿನ ಕುಡಿ ಶ್ರೀ ಕಿಷನ್ ಪಟ್ನಾಯಕ್ ಕರ್ನಾಟಕಕ್ಕೆ ಬಂದಿದ್ದಾಗ, ದಲಿತ ಸಂಘರ್ಷ ಸಮಿತಿಯ ಒಂದು ಬಣ ಹಾಗೂ ರೈತಸಂಘದ ಒಂದು ಬಣ ಮೊದಲು ಜೊತೆಗೂಡಿ ತಾನು ಚಾಲನಾಶಕ್ತಿಯಾಗಿ ಮುಂದೆ ಎಲ್ಲರನ್ನೂ ಒಳಗೊಳ್ಳುತ್ತ ರಾಜಕೀಯ ಪಕ್ಷವೊಂದನ್ನು ರೂಪಿಸಲು ಪ್ರಯತ್ನಿಸುತ್ತಿರುವುದನ್ನು ಕೇಳಿದಾಕ್ಷಣ ಪುಳಕಿತರಾದರು. 'ಇದು ನಿಜವೆ? ಇದು ಸಂಭವವೆ ? ಇದು ಸಂಭವಿಸಿದರೆ ಇಡೀ ಭಾರತವೇ ತನ್ನ ದಿಕ್ಕು ದೆಸೆಗಾಗಿ ಕರ್ನಾಟಕದ ಕಡೆಗೆ ನೋಡುವಂತಾಗುತ್ತದೆ' ಎಂಬ ಉದ್ಗಾರ ಅವರ ಒಡಲಿಂದ ಬಂತು.

ಕಿಷನ್‌ರಿಗಾದ ಸಂತಸಕ್ಕೆ ಕಾರಣವಿತ್ತು. ಇದುವರೆಗೂ ಆಂಶಿಕ ಸಂಘಟನೆಗಳಾದ ದಲಿತ, ರೈತ ಸಂಘಟನೆಗಳು ಈ ಕೂಡುವ ಪ್ರಕ್ರಿಯೆಯಿಂದಾಗಿ ಅವಕ್ಕೆ ತಮ್ಮ ಟ್ರೇಡ್ ಯೂನಿಯನ್ ಸ್ವಭಾವದ ಮೀರುವಿಕೆ ಉಂಟಾಗಿ ಅವುಗಳಿಗೆ ತಾತ್ವಿಕತೆ ವಿಸ್ತರಿಸಿ ರೆಕ್ಕೆ ಮೂಡಲು ಕಾರಣವಾಯ್ತು. ಈ ವಿದ್ಯಮಾನ ಈ ಎರಡು ಬಣಗಳಿಗೆ ಮಾತ್ರ ಸೀಮಿತ ಎಂದು ನಾನು ಅಂದುಕೊಂಡಿಲ್ಲ. ಎಲ್ಲಾ ದಲಿತ, ರೈತ ಬಣಗಳೂ ಇನ್ನೂ ಕೂಡದಿದ್ದರೂ ಅವುಗಳಲ್ಲಿ ಕೂಡುವಿಕೆ ಆಸೆ ಇರುವುದನ್ನು ಕಂಡಿದ್ದೇನೆ. ಇದು ತುಂಬಾ ಬೆಲೆ ಉಳ್ಳದ್ದಾಗಿ ನನಗೆ ಕಾಣುತ್ತಿದೆ.

ಈ ಹಿನ್ನೆಲೆಯಲ್ಲಿ ಹಿಂದಿನ ಪ್ರಯತ್ನಗಳನ್ನು ನೆನಪಿಸಿಕೊಳ್ಳಬೇಕಾಗಿದೆ. ಎರಡು ದಶಕಗಳ ಹಿಂದೆ ಪಂಚಮ ಪತ್ರಿಕೆಯ ಸಂವಾದದಲ್ಲಿ ಹೆಚ್. ಗೋವಿಂದಯ್ಯ ಅವರು ರೈತಸಂಘ ಮತ್ತು ದಲಿತ ಸಂಘರ್ಷ ಸಮಿತಿಗಳನ್ನು ಮೊದಲ ಬಾರಿಗೆ ಮುಖಾಮುಖಿಯಾಗುವಂತೆ ಮಾಡಿದರು. ಆಗ ಕರಗದಿದ್ದರೂ ಈ ಪ್ರಯತ್ನ ದಲಿತ ರೈತ ಸಂಘಟನೆಗಳು ಸ್ವಲ್ಪವಾದರೂ ಹತ್ತತ್ತಿರವಾಗಲು ಕಾರಣವಾಯ್ತು. ತದನಂತರ ಪ್ರೊ॥ ಎಂ.ಡಿ. ನಂಜುಂಡಸ್ವಾಮಿ, ಪ್ರೊ॥ ಬಿ. ಕೃಷ್ಣಪ್ಪ, ಶ್ರೀ ಪಿ. ಲಂಕೇಶ್ ಒಟ್ಟುಗೂಡಿ ರಾಜಕೀಯ ಮಾಡುವ ಪ್ರಯತ್ನ ನಡೆಯಿತು. ಇದು ಕೈಗೂಡದಿದ್ದರೂ ನಾವು ಒಟ್ಟಿಗೆ ಸೇರಿ ರಾಜಕೀಯ ಮಾಡದಿದ್ದರೆ ನಮಗೆ ರಾಜಕಾರಣವನ್ನೇ ಮಾಡಲಾಗದು ಎಂಬ ತಿಳಿವು ನಮ್ಮೊಳಗೆ ಆಳವಾಗಿ ಇಳಿಯಲು ಕಾರಣವಾಯ್ತು. ಬಹುಶಃ ಈ ತಿಳಿವೇ ಕಾರಣವಾಗಿ ಒಂದಾಗುವ ಚರ್ಚೆಯಲ್ಲಿ ವರ್ಷಾನುಗಟ್ಟಲೆ ಕಳೆದುಹೋಗದೆ ಇಂದಾದರೂ ರೈತ ಸಂಘದ ಒಂದು ಬಣ ಹಾಗೂ ದಸಂಸದ ಒಂದು ಬಣಗಳಾದರೂ ಒಂದಾಗಿ ಕ್ರಿಯೆ ಆರಂಭಿಸಿವೆ. ಇತ್ತೀಚೆಗೆ ಇವುಗಳೊಡನೆ ಪ್ರಮುಖವಾಗಿ ಕರುನಾಡ ಸೇನೆಯೂ ಕೂಡಿ ಇವು ವೇಗವರ್ಧಕದಂತೆ ಪಾತ್ರವಹಿಸಿ ಈ ನಡಿಗೆಯಲ್ಲಿ ಎಲ್ಲಾ ದಲಿತ, ರೈತ ಮತ್ತಿತರ ಪ್ರಗತಿಪರ ಬಣಗಳನ್ನು ಕೂಡಿಸಿಕೊಂಡೂ, ಈ ನಾವೆಲ್ಲ ಒಟ್ಟಿಗೆ ಸೇರಿ ರಾಜಕಾರಣ ಮಾಡಿದರೂ ಈ ರಾಜಕಾರಣದ ಬೃಹತ್ ಹೊಟ್ಟೆಗೆ ಏನೇನೂ ಸಾಲದು ಎಂಬ ಅರಿವಿನೊಡನೆ ನಾವು ಹೆಜ್ಜೆ ಇಡಬೇಕಾಗಿದೆ.

ಮತ್ತೂ ಹಿಂದಕ್ಕೆ ಹೋಗುವೆ. ಎಪ್ಪತ್ತರ ದಶಕದಲ್ಲಿ ಗೋಪಾಲಗೌಡರ ವಿವೇಕದೊಡನೆ ಇದ್ದ ಸಮಾಜವಾದಿ ಪಕ್ಷದಿಂದ ವಿಧಾನಸಭೆಗೆ ಗೆದ್ದು ಹೋಗುತ್ತಿದ್ದವರು -ಬೆರಳೆಣಿಕೆಯ ಐದಾರು ಜನ ಮಾತ್ರ. ಆದರೆ ಪರಿಣಾಮದಲ್ಲಿ ರಾಜ್ಯದ ತುಂಬಾ ಸಮಾಜವಾದಿ ಕಂಪನವಿತ್ತು. ವಿಧಾನಸಭೆಯು ಸಮಾಜವಾದಿಗಳಿಂದಲೇ ತುಂಬಿ ತುಳುಕುತ್ತಿರುವಂತೆ ಭಾಸವಾಗುತ್ತಿತ್ತು. ಈಗ ಇದು ನಮಗೆ ಕನಸಾಗಿದೆ.

ಆ ಕಾಲಮಾನವಾದ ಮೇಲೆ ರಾಜಕಾರಣದ ಕುದುರೆಯು ಹಿಡಿತ ತಪ್ಪಿಸಿಕೊಂಡು, ಸವಾರನಾದ ರಾಜಕಾರಣಿಯನ್ನೂ ಲೆಕ್ಕಿಸದೆ ಅದು ಓಡಿದತ್ತ ಓಡಿತು. ಸವಾರನಾದ ರಾಜಕಾರಣಿಯು ಕುದುರೆ ಮೇಲೆ ಕುಳಿತ ಹೆಗ್ಗಳಿಕೆಯನ್ನು ಬಿಟ್ಟರೆ ಸುಮ್ಮನೆ ದಿಕ್ಕಿಲ್ಲದೆ ಕುಂತವನಾದನು. ಈ ದಿಕ್ಕು ದೆಸೆ ಇಲ್ಲದ ರಾಜಕಾರಣದ ಓಟದಲ್ಲಿ ಎಲ್ಲಾ ಪ್ರಗತಿಪರ ಸಂಘಟನೆಗಳೂ ನಾಡು ನುಡಿ ಕಳಕಳಿಯ ಪ್ರಜ್ಞಾವಂತರೂ ಹವ್ಯಾಸಿ ಕಲಾವಿದರಂತೆ, ಚುನಾವಣೆ ಬಂದಾಗ ಪ್ರತಿಕ್ರಿಯಿಸಿದ್ದು ಹಾಗೂ ಅಷ್ಟಿಷ್ಟು ಕೆಲಸ ಮಾಡಿದ್ದು ಬಿಟ್ಟರೆ ಮತ್ತೇನೂ ಮಾಡಲಾಗಲಿಲ್ಲ. ರಾಜಕೀಯ ಆಟದ ಮೈದಾನದಲ್ಲಿ ಒಳನುಗ್ಗಿ ಆಡಲು ಧೈರ್ಯವಿಲ್ಲದೆ, ಹೊರಹೋಗಲೂ ಮನಸ್ಸಿಲ್ಲದೆ ಆಡುವ ಆಟಗಾರರಿಗೆ ಚೆಂಡು ಎತ್ತಿಕೊಡುವ ಹುಡುಗರಂತೆ ನಮ್ಮ ಸ್ಥಿತಿಯಾಗಿತ್ತು. ರಾಜಕೀಯ ಕ್ಷೇತ್ರದಲ್ಲಿ ಸೋತರೂ, ಗೆದ್ದರೂ, ಠೇವಣಿ ಕಳೆದುಕೊಂಡರೂ ಅಖಾಡದಿಂದ ದೂರ ಸರಿಯದೆ ಅಲ್ಲೆ ಪ್ರಯತ್ನಪಡುವ ನಿರಂತರತೆಯೇ ರಾಜಕಾರಣದ ಒಂದನೆಯ ಪಾಠ ಎಂಬುದು ನಮಗೆ ತಿಳಿದಿರಲಿಲ್ಲ. ಇದು ಬಹಳ ನಿರ್ಧಾರಕವಾದುದು.

ರಾಜಕಾರಣದಲ್ಲಿ ತಾತ್ವಿಕತೆ ದಿವಾಳಿ ಎದ್ದಿರುವ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸಹಮನಸ್ಕ ಪಕ್ಷಗಳನ್ನೂ ಉಳಿಸಿಕೊಂಡು ನಾವೂ ಉಳಿಯ ಬೇಕೆಂಬ ಎಚ್ಚರ ಮಾತ್ರ ನಮ್ಮನ್ನು ಉಳಿಸಬಲ್ಲದು.

ಹಾಗೆ ರಾಜಕಾರಣದಲ್ಲಿ ತಾತ್ವಿಕತೆ ದಿವಾಳಿ ಎದ್ದಿರುವ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸಹಮನಸ್ಕ ಪಕ್ಷಗಳನ್ನೂ ಉಳಿಸಿಕೊಂಡು ನಾವೂ ಉಳಿಯಬೇಕೆಂಬ ಎಚ್ಚರ ಮಾತ್ರ ನಮ್ಮನ್ನು ಉಳಿಸಬಲ್ಲದು. ಉದಾಹರಣೆಗೆ ಆರ್‌ಪಿಐ ಕ್ಷೀಣಿಸುತ್ತಿದ್ದರೂ ಕಮ್ಯುನಿಸ್ಟ್ ಪಕ್ಷಗಳು ಸ್ಥಗಿತಗೊಂಡಿದ್ದರೂ ಅವೂ ಬೆಳೆದು ನಾವೂ ಬೆಳೆಯಬೇಕಾಗಿದೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ರಾಜಕೀಯವನ್ನು ಗಂಭೀರವಾಗಿ ಪರಿಗಣಿಸಿ ಸತತವಾಗಿ ಆ ದಿಕ್ಕಲ್ಲೆ ಕೆಲಸ ಮಾಡುತ್ತ

ಸ್ವಲ್ಪಮಟ್ಟಿಗೆ ಯಶಸ್ವಿಯೂ ಆದ ನಮ್ಮ ಸಹಮನಸ್ಕ ಪಕ್ಷ ಬಿಎಸ್‌ಪಿಯು ಗೆಲ್ಲುವ ಕಡೆ ನಮ್ಮಿಂದ ತೊಡಕಾಗದಂತೆ ಸೂಕ್ಷ್ಮವಾಗಿ ರಾಜಕೀಯ ನಿರ್ವಹಿಸುವುದೂ ಕೂಡ - ಇದು ಅವರಿಗೆ ನಾವು ಮಾಡುವ ಸಹಾಯ ಅಲ್ಲ, ಇದೂ ನಮ್ಮ ಅಗತ್ಯ- ಎಂದು ಭಾವಿಸುವ ವಿವೇಕವನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಹೋರಾಟಗಾರ ಹಿನ್ನೆಲೆಯ ಸಂಘಟನೆಗಳಿಗೆ ತಾನು ತನ್ನ ಸಿದ್ಧಾಂತ ಬಿಟ್ಟು ಬೇರೆಯದು ಕಣ್ಣಿಗೆ ಕಾಣುವುದಿಲ್ಲ. ಸಹೋದರರೇ ಆದ ನಾವು ದಾಯಾದಿ ಭಾವದಿಂದ ಛಿದ್ರರಾಗಿದ್ದೇವೆ. ಈ ನಮ್ಮ ಅಸಹಾಯಕ ಪರಿಸ್ಥಿತಿಯಲ್ಲಾದರೂ ಸಹೋದರರಾದ ನಾವು, ಸಹೋದರರಂತೆ ನಡೆದುಕೊಳ್ಳದಿದ್ದರೆ ನಮಗೆ ಉಳಿಗಾಲವೆಲ್ಲಿ ? ಈ ಸಂದರ್ಭದಲ್ಲೆ ಶಸ್ತ್ರ ಹಾಗೂ ಹಿಂಸೆಯನ್ನು ತಾತ್ವಿಕರಿಸುವುದನ್ನು ಕೈಬಿಟ್ಟು ನಮ್ಮೊಡನೆ ಒಂದಾಗಿ ಮುನ್ನಡೆಸಿ ಎಂದು ನಕ್ಸಲೈಟರಲ್ಲೂ ಪ್ರಾರ್ಥಿಸುತ್ತೇನೆ.

ಸರಿ, ಸರ್ವೋದಯ ಕರ್ನಾಟಕದ ತತ್ವ ಸಿದ್ಧಾಂತ ಏನು ಎಂಬ ಪ್ರಶ್ನೆಗೆ -ಈ ಬಗ್ಗೆ ಇದುವರೆಗೂ ತುಂಬಾ ಮಾತಾಡಿಬಿಟ್ಟಿದ್ದೇವೆ ಎಂದೇ ನನಗನ್ನಿಸುತ್ತಿದೆ. ಅಂಬೇಡ್ಕರ್ ಅವರು ಅಧ್ಯಕ್ಷರಾಗಿ, ಲೋಹಿಯಾ ಅವರು ಪ್ರಧಾನ ಕಾರ್ಯದರ್ಶಿಯಾಗಿ ಸಮಾಜವಾದಿ ಪಕ್ಷವನ್ನು ಪುನರ್ ರೂಪಿಸುವ ಪ್ರಯತ್ನ ಅಂಬೇಡ್ಕರ್‌ರ ನಿಧನದಿಂದಾಗಿ ಅಲ್ಲಿಗೆ ನಿಂತಿತು. ಈ ಸಸಿಯನ್ನು ನಾವೀಗ ಕರ್ನಾಟಕದಲ್ಲಿ ನೆಡುತ್ತಿದ್ದೇವೆ. ಹಾಗೇ ಅಂತರಂಗದಲ್ಲಿ ಸಮತ್ವ ಸಾಧಿಸಿ ಬಹಿರಂಗದ ಸಮತ್ವದೊಡನೆ ಸಮತೋಲನಗೊಳಿಸುವ ಬುದ್ಧ, ವಚನಕಾರರು, ಗಾಂಧಿ ನಮಗೆ ಬೆಳಕಾಗಿದ್ದಾರೆ. ಐಕ್ಯತೆಯು ಸಮಾನತೆಯನ್ನು ಆಧರಿಸಿ ಇರಬೇಕು. ಹಾಗೆ ಅಭಿವೃದ್ಧಿಯೂ ಸಮಾನತೆಯನ್ನೇ ಆಧರಿಸಿ ಇರಬೇಕು ಎಂಬುದನ್ನು ವಾಸ್ತವ ಮಾಡಲು ಇರುವ ಸಿಗುವ ಆದಿವಾಸಿ ಚಿಂತನೆಗಳಿಂದ ಹಿಡಿದು ಜಗತ್ತಿನ ಮೂಲೆ ಮೂಲೆಯಲ್ಲಿರುವ ಎಲ್ಲಾ ಚಿಂತನೆಗಳೂ ನಮ್ಮವೆ. ಒಂದು ಗೀಜಗ ಎಲ್ಲೆಲ್ಲಿಂದಲೋ ಹುಲ್ಲಿನದಳ ತಂದು ಗೂಡು ಕಟ್ಟುವ ರೀತಿಯ ಕಲಾವಿದ ನಾವಾಗಬೇಕಾಗಿದೆ. ಈ ಸಂದರ್ಭದಲ್ಲಿ, ಆಂದೋಲನಗಳ ಚಲನೆಯ ನಾಡಿ ಹಿಡಿದು ದಿಕ್ಕು ದೆಸೆ ತೋರಿಸುತ್ತಿದ್ದ ಗೆಳೆಯ ಡಿ.ಆರ್.ನಾಗರಾಜ್ ಇಲ್ಲದ ಕೊರತೆ ನನಗೆ ಎದ್ದು ಕಾಣುತ್ತಿದೆ. 'ಹಳ್ಳಿಯ ಒಳಗೆ ಅಂಬೇಡ್ಕರ್, ಹಳ್ಳಿಯ ಹೊರಗೆ ಗಾಂಧಿ' ಎಂಬ ಆತನ ರೂಪಕವನ್ನು ಕಾರ್ಯಕ್ರಮವಾಗಿ ಅನುವಾದಿಸಬೇಕಾಗಿದೆ. ಕಡಿದಾಳು ಶಾಮಣ್ಣ ಅವರ ದಾರ್ಶನಿಕತೆ ನಮ್ಮನ್ನು ಕೈ ಹಿಡಿದು ಕರೆದೊಯ್ಯಬಲ್ಲುದು.



ಅಂಬೇಡ್ಕರ್ ಅವರು ಅಧ್ಯಕ್ಷರಾಗಿ, ಲೋಹಿಯಾ ಅವರು ಪ್ರಧಾನ ಕಾರ್ಯದರ್ಶಿಯಾಗಿ ಸಮಾಜವಾದಿ ಪಕ್ಷವನ್ನು ಪುನರ್ ರೂಪಿಸುವ ಪ್ರಯತ್ನ ಅಂಬೇಡ್ಕರ್‌ರ ನಿಧನದಿಂದಾಗಿ ಅಲ್ಲಿಗೆ ನಿಂತಿತು. ಈ ಸಸಿಯನ್ನು ನಾವೀಗ ಕರ್ನಾಟಕದಲ್ಲಿ ನೆಡುತ್ತಿದ್ದೇವೆ. ಹಾಗೇ ಅಂತರಂಗದಲ್ಲಿ ಸಮತ್ವ ಸಾಧಿಸಿ ಬಹಿರಂಗದ ಸಮತ್ವದೊಡನೆ ಸಮತೋಲನಗೊಳಿಸುವ ಬುದ್ಧ ವಚನಕಾರರು, ಗಾಂಧಿ ನಮಗೆ ಬೆಳಕಾಗಿದ್ದಾರೆ.

ಇಲ್ಲಿ ಒಂದು ಮಾತು : ಗ್ರಾಮ ಪಂಚಾಯ್ತಿ ಸದಸ್ಯರಿಗೆ ತರಬೇತಿ ನೀಡುವಾಗ ರಾಜ್ಯ ಸಂಪನ್ಮೂಲ ಕೇಂದ್ರದ ಎಸ್. ತುಕಾರಾಂ ಗಮನಿಸಿದ್ದು ನನಗೆ ತುಂಬಾ ಮುಖ್ಯವಾಗಿ ಕಾಣುತ್ತಿದೆ. ಏನೆಂದರೆ ಗ್ರಾಮ ಪಂಚಾಯ್ತಿ ಸದಸ್ಯರಿಗೆ ಗಾಂಧಿ, ಅಂಬೇಡ್ಕರ್, ಅಣ್ಣಾ ಹಜಾರೆ ಇತ್ಯಾದಿ ಉದಾಹರಣೆಗಳನ್ನು ಕೊಟ್ಟರೆ ಆ ಸದಸ್ಯರಿಗೆ ಗೌರವ ಭಕ್ತಿ ಆ ಮಹಾತ್ಮರ ಬಗ್ಗೆ ಹೆಚ್ಚಿ ಕೈ ಮುಗಿದು ಸುಮ್ಮನಾಗುತ್ತಿದ್ದರಂತೆ. ಇಂಥದೆಲ್ಲ ತಮ್ಮಿಂದ ಆಗದು ಎಂಬ ಭಾವ ಉಂಟಾಗುತ್ತಿತ್ತಂತೆ. ಅದೇ ಯಾವುದೋ ಒಂದು ಗ್ರಾಮ ಪಂಚಾಯಿತಿಯಲ್ಲಿ ಯಾರೋ ಒಬ್ಬ ಅಧ್ಯಕ್ಷ ತನ್ನ ಊರನ್ನು ಪೂರ್ತ ಸೋಲಾರ್‌ಗ್ರಾಮ, ಸ್ವಚ್ಛಗ್ರಾಮ, ಪಾನ ನಿಷೇಧ ಗ್ರಾಮ, ದಲಿತರಿಗೂ ಇತರರಿಗೂ ಅಕ್ಕಪಕ್ಕ ನಿವೇಶನ ನೀಡಿಕೆ ಇತ್ಯಾದಿ ಮಾಡಿದ್ದನ್ನು ಉದಾಹರಣೆ ಕೊಟ್ಟರೆ ಇಂಥವನ್ನು ತಾವೂ ಮಾಡಬಹುದು ಅನ್ನಿಸುತ್ತಿತ್ತಂತೆ. ನಾವು ನಮ್ಮ ಜನರ ಹೃದಯದ ಒಳಗೆ ಅಡಗಿರುವ ಸಣ್ಣಪುಟ್ಟ ಬುದ್ಧ ಬಸವಣ್ಣ, ಗಾಂಧಿ, ಅಂಬೇಡ್ಕರ್ ಅವರನ್ನು ಹುಡುಕಿ ಹುಡುಕಿ ಉದ್ದೀಪನಗೊಳಿಸಬೇಕಾಗಿದೆ.

ಇನ್ನೂ ರೂಪ ಪಡೆಯಬೇಕಾಗಿರುವ ಒಂದು ಕಾರ್ಯಕ್ರಮ ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಕಾರ್ಯಕ್ರಮ ಇದು : 'ನನ್ನ ಊರಿಗೆ ನನ್ನ ಕೈಲಾದಷ್ಟು'. ಹಳ್ಳಿ ತೊರೆದು ಪರಸ್ಥಳಗಳಲ್ಲಿ ಉದ್ಯೋಗ ದಲ್ಲಿರುವ ಅನೇಕರಿಗೆ ತನ್ನ ಹುಟ್ಟಿದ ಊರಿಗೆ ನೆರವಾಗುವ ಬಯಕೆ ಇದ್ದೂ ಕೈಗೂಡದೆ ಇರುತ್ತದೆ. ಅದಕ್ಕೆ ಸರ್ವೋದಯ ಕರ್ನಾಟಕವು ಪ್ರತಿ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಹತ್ತೂ ಜನರ ಸಮಿತಿಯನ್ನು ನೇಮಿಸುತ್ತದೆ. ಆ ಸಮಿತಿಯು ತನ್ನ ವ್ಯಾಪ್ತಿಗೆ ಬರುವ ಪರಸ್ಥಳದಲ್ಲಿರುವ ತನ್ನ ಊರಿನವರ ವಿಳಾಸವನ್ನು ಸಿದ್ಧಪಡಿಸುತ್ತಿದೆ. ರಾಜ್ಯದಾದ್ಯಂತ ಸಿದ್ಧವಾಗುವ ಈ ಪಟ್ಟಿಯನ್ನು ಕ್ರೋಢೀಕರಿಸಿ ಇದಕ್ಕಾಗಿರುವ ತಾಲೂಕು, ಜಿಲ್ಲಾ, ನಗರ ಸಮಿತಿಗಳಿಗೆ ಕಳಿಸಲಾಗುತ್ತದೆ. ಈ ಸಮಿತಿಗಳು ತಮ್ಮ ನಗರದಲ್ಲಿರುವ ಉದ್ಯೋಗಿಗಳಿಂದ ವಾರ್ಷಿಕ ಒಂದು ಸಲ ಅವರವರ ಊರಿನ ಗ್ರಾಮ ಪಂಚಾಯ್ತಿ ಹೆಸರಿಗೆ ಚೆಕ್, ಡಿಡಿ ಪಡೆದು ಕಳಿಸುವ ವಾಹಕವಾಗಿ ಸರ್ವೋದಯ ಕರ್ನಾಟಕ ಕೆಲಸ ಮಾಡು ತ್ತದೆ. ಹೊರನಾಡು ಮತ್ತು ವಿದೇಶಿ ಕನ್ನಡ ಸಂಘಗಳನ್ನು ಈ ಸಾರ್ಥಕ್ಯದ ಕಾರ್ಯದಲ್ಲಿ ಕ್ರಿಯಾಶೀಲವಾಗಿಸುವ ಪ್ರಯತ್ನವೂ ಇದೆ.

ಹೀಗೆ ಬರುವ ನೆರವನ್ನು ಗ್ರಾಮ ಪಂಚಾಯಿತ್ತಿಗಳು ನೀರು, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಗ್ರಂಥಾಲಯದೊಡನೆ ಉದ್ಯೋಗ ಸಹಾಯ ಕೇಂದ್ರಕ್ಕಾಗಿ ಬಳಸಲು ವಿನಂತಿಸಲಾಗುತ್ತಿದೆ. ಇದೇ ರೀತಿ ವ್ಯವಸಾಯ ದಲ್ಲಿ ರಸಗೊಬ್ಬರ, ಕ್ರಿಮಿನಾಶಕ, ಹೈಬ್ರಿಡ್ ಬಿತ್ತನೆ ಬೀಜವನ್ನು ನಿರಾಕರಿಸಿಯೂ ನೀರನ್ನು ಮಿತವಾಗಿ ಬಳಸಿಯೂ ಉತ್ತಮ ಇಳುವರಿ ನೀಡುವ ಪಾಳೆಕಾರ್ ನೈಸರ್ಗಿಕ ಪದ್ಧತಿಯನ್ನು ವ್ಯಾಪಕಗೊಳಿಸಲು ಗ್ರಾಮ ಪಂಚಾಯಿತ್ತಿ ವ್ಯಾಪ್ತಿಯಲ್ಲಿ ಹತ್ತು ಜನರ ಸಮಿತಿ ರಚಿಸಿ ಹೊಸ ಆರಂಭವನ್ನು ಸರ್ವೋದಯ ಕರ್ನಾಟಕವು ಮಾಡುತ್ತದೆ. ಇದೇನಾದರೂ ಯಶಸ್ವಿಯಾದರೆ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು ಮಾರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಅನ್ನ ನೀರು ಕೊಡದೆ ಕೊಂದಂತಾಗುತ್ತದೆ.

ಹೀಗೆ ಎಲ್ಲಾ ಕ್ಷೇತ್ರದಲ್ಲೂ ಮಹಿಳೆ, ದಲಿತ, ರೈತ, ಹಿಂದುಳಿದ ಆದಿವಾಸಿ, ಎಲ್ಲಾ ಕ್ಷೇತ್ರಗಳಲ್ಲೂ ಸರ್ವೋದಯ ಕರ್ನಾಟಕವು ತಳಮಟ್ಟದ ಹತ್ತೂ ಜನರ ಸಮಿತಿಗಳ ಮೂಲಕ ತನ್ನ ತಳಪಾಯ ಕಟ್ಟುತ್ತ ರಚನಾತ್ಮಕ ಕೆಲಸದೊಡನೆ ಚುನಾವಣಾ ರಾಜಕೀಯವನ್ನು ಮಾಡುತ್ತದೆ. ರಾಜಕಾರಣ ವೆಂದರೆ ಪರಸ್ಪರ ಕೆಸರು ಎರೆಚಾಟ ಎಂದಾಗಿಬಿಟ್ಟಿರುವ ಈ ನಮ್ಮ ವರ್ತಮಾನದಲ್ಲಿ ಪ್ರೀತಿ ಸಹನೆಯಿಂದ ನಾಡುಕಟ್ಟುವ ಹೃದಯವಂತರನ್ನು ಹುಡುಕೀ ಹುಡುಕೀ ಅಂಥವರ ಕೈಗೆ ಅಧಿಕಾರ ಸಿಗುವಂತೆ ಮಾಡುವುದಕ್ಕಾಗಿ ಈ ಮೇಲಿನ ಕಾರ್ಯಕ್ರಮಗಳನ್ನು ಸರ್ವೋದಯ ಕರ್ನಾಟಕವು ವ್ಯಾಪಕಗೊಳಿಸುತ್ತದೆ.

ಹೀಗೆ ಮಾಡಬಹುದಾದ ಆಸೆ ನನ್ನನ್ನು ಅಧ್ಯಕ್ಷತೆಗೆ ತಂದಿತು. ನನ್ನ ಉದಾಹರಣೆ ಮೂಲಕವಾದರೂ ಅಂದರೆ ಅಯ್ಯೊ ಮಾದೇವನೇ ರಾಜಕಾರಣ ಮಾಡುವುದಾದರೆ ಇನ್ನು ನಮಗ್ಯಾವ ಲೆಕ್ಕ ಎಂದುಕೊಂಡು ಸಮತೋಲನದ ಸಮಾನತೆ, ಐಕ್ಯತೆ, ಅಭಿವೃದ್ಧಿಗೆ ಆಶಿಸುವರೆಲ್ಲರೂ ಸುಮ್ಮನಿರದೆ ರಾಜಕಾರಣಕ್ಕೆ ಇಳಿಯುವಂತಾದರೆ ನನ್ನ ಅಧ್ಯಕ್ಷತೆ ಯಶಸ್ವಿಯಾದಂತೆ. □



ಸಾಮಾನ್ಯವಾಗಿ ಹೋರಾಟಗಾರ ಹಿನ್ನೆಲೆಯ ಸಂಘಟನೆಗಳಿಗೆ ತಾನು ತನ್ನ ಸಿದ್ಧಾಂತ ಬಿಟ್ಟು ಬೇರೆಯದು ಕಣ್ಣಿಗೆ ಕಾಣುವುದಿಲ್ಲ. ಸಹೋದರರೇ ಆದ ನಾವು ದಾಯಾದಿ ಭಾವದಿಂದ ಛಿದ್ರರಾಗಿದ್ದೇವೆ. ಈ ನಮ್ಮ ಅಸಹಾಯಕ ಪರಿಸ್ಥಿತಿಯಲ್ಲಾದರೂ ಸಹೋದರರಾದ ನಾವು, ಸಹೋದರರಂತೆ ನಡೆದುಕೊಳ್ಳದಿದ್ದರೆ ನಮಗೆ ಉಳಿಗಾಲವೆಲ್ಲಿ? ಈ ಸಂದರ್ಭದಲ್ಲೆ ಶಸ್ತ್ರ ಹಾಗೂ ಹಿಂಸೆಯನ್ನು ತಾತ್ವಿಕರಿಸುವುದನ್ನು ಕೈಬಿಟ್ಟು ನಮ್ಮೊಡನೆ ಒಂದಾಗಿ ಮುನ್ನಡೆಸಿ ಎಂದು ನಕ್ಸಲೈಟರಲ್ಲೂ ಪ್ರಾರ್ಥಿಸುತ್ತೇನೆ.

ಕಳೆದ ಐವತ್ತು ವರ್ಷಗಳಿಂದ ನಾವು ನೋಡುತ್ತಲೇ ಇದ್ದೇವೆ.

ಆಳುವ ಪ್ರಭುಗಳು ತಮ್ಮ ಜನರ ದುಃಖ, ದುಮ್ಮಾನ ಹಾಗೂ ಕನಸುಗಳನ್ನು ನೋಡುವ ಕಣ್ಣು, ಹೃದಯಗಳನ್ನು ಕಳೆದುಕೊಂಡಿದ್ದಾರೆ.

ಇಂತಹ ಗಾಢ ನಿರಾಶೆಯ ಸನ್ನಿವೇಶದಲ್ಲಿ ಹೊಸ ತಲೆಮಾರುಗಳು, ಹಳೆಯ ತಲೆಮಾರಿನ ನ್ಯಾಯವಂತರ ಜೊತೆಗೂಡಿ ಸಮಸ್ಯೆಗಳನ್ನು ಅರಿಯುವ, ಬಗೆಹರಿಸುವ ಕರ್ತವ್ಯವನ್ನು ಕೈಗೆತ್ತಿಕೊಳ್ಳ ಬೇಕಾಗಿದೆ.

ನಾಡು ಕಟ್ಟುವ ಚಳವಳಿಗಳಲ್ಲಿ ತೊಡಗಿ, ಈ ನಾಡಿನ ಸಮಸ್ಯೆಗಳ ಒಳ ಹೊರಗುಗಳನ್ನು ಬಲ್ಲವರ ನಡುವಿನಿಂದ ಹಾಗೂ ವಿವಿಧ ಕ್ಷೇತ್ರಗಳ ಅನುಭವ ಪಡೆದು ಜನರ ಕೆಲಸ ಮಾಡುತ್ತಿರುವವರ ನಡುವಿನಿಂದ ನಾಯಕರು ಮೂಡಿಬರಲಿ ಎಂದು ನಾಡು ಕಾಯುತ್ತಿದೆ. ಇಂತಹ ಕಾಲಘಟ್ಟದಲ್ಲಿ ಪರ್ಯಾಯ ರಾಜಕಾರಣ ಕುರಿತ ಚರ್ಚೆ ಎದ್ದಿದೆ. ಈ ಅಗತ್ಯವೇ ಸರ್ವೋದಯ ಕರ್ನಾಟಕ ಪಕ್ಷದ ಹುಟ್ಟಿಗೆ ಕಾರಣವಾಗಿದೆ. ಹೀಗಾಗಿ ಇದು ಜನತೆಯ ಒಡಲಾಳದ ತುಡಿತಗಳೇ ರೂಪಿಸುವ ಪಕ್ಷವಾಗಬೇಕಾಗಿದೆ.

ಹೊಸ ರಾಜಕಾರಣ ಎಂದರೇನು ?

ಹೊಸ ರೀತಿಯ ರಾಜಕಾರಣದ ಚರ್ಚೆ ಭಾರತದಲ್ಲಿ ಆಗಾಗ್ಗೆ ಎದ್ದಿದೆ. ಗಾಂಧೀಜಿಯವರು ಬ್ರಿಟಿಷರ ವಿರುದ್ಧ ದನಿ ರೂಪಿಸಿ, ಸ್ವಾತಂತ್ರ್ಯ ಹೋರಾಟವು ಸಮಾಜದ ಕೊಳಕುಗಳನ್ನು ತೊಡೆಯುವ ಚಳವಳಿಯೂ ಆಗಬೇಕೆಂದಾಗ ಹೊಸ ರಾಜಕಾರಣದ ಮಾತಾಡಿದ್ದಾರೆ. ಲೋಹಿಯಾ ಅವರು ಸಮಾಜವಾದಿ ಆಂದೋಲನವನ್ನು ಹುಟ್ಟು ಹಾಕಿ 'ರಾಜಕಾರಣವು ದೀರ್ಘ ಕಾಲದ ಧರ್ಮ' ಎಂದು ಎಲ್ಲರಿಗೆ ಮನವರಿಕೆ ಮಾಡಿಕೊಡುತ್ತಾ, ಜಾತಿವಿನಾಶದ ಆಶಯ ಹೊತ್ತು ಜನರ ಸಮಸ್ಯೆಗಳನ್ನು ನೇರವಾಗಿ ಕೈಗೆತ್ತಿಕೊಂಡು ಕೆಲಸ ಮಾಡಲು ಆರಂಭಿಸಿದಾಗ ಈ ಬಗೆಯ ರಾಜಕಾರಣವನ್ನು ನೋಡಿದ್ದೇವೆ. ಬಾಬಾ ಸಾಹೇಬರು ದಲಿತರ ದಮನವನ್ನು ಕೊನೆಗಾಣಿಸಲು ಸಿದ್ಧಾಂತ ರೂಪಿಸುತ್ತಲೇ 'ಭಾರತೀಯ ರಿಪಬ್ಲಿಕನ್ ಪಕ್ಷ' ಆರಂಭಿಸಿದಾಗ ಈ ಪ್ರಯತ್ನ ಮಾಡಿದ್ದಾರೆ. ಆಗೆಲ್ಲ ಭಾರತದ ಜಡ ರಾಜಕಾರಣ ಹೊಸ ರೂಪ ಪಡೆಯಲೆತ್ನಿಸಿದೆ. ಈಗ ನಾಡಿನ ಎಲ್ಲ ಪ್ರಗತಿಪರ ಚಳವಳಿಗಳೂ ಒಂದಾಗಿ ಹೊಸದಿಕ್ಕಿನೆಡೆಗೆ ನೋಡತೊಡಗಿರುವಾಗ ಪರ್ಯಾಯ ರಾಜಕಾರಣಕ್ಕೆ ಹೊಸ ರೂಪ ಬರತೊಡಗಿದೆ.

೧೯೫೬ರ ಸುಮಾರಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ರಾಮಮನೋಹರ ಲೋಹಿಯಾ ಅವರ ನಡುವೆ ಒಂದು ಚಾರಿತ್ರಿಕ ಪತ್ರ ವ್ಯವಹಾರ ನಡೆಯಿತು. ಅಂಬೇಡ್ಕರ್ ಅವರು ಇಡೀ ಭಾರತೀಯರ ನಾಯಕರಾಗಬೇಕೆಂದು ಲೋಹಿಯಾ ಬಯಸಿದ್ದರು. ಲೋಹಿಯಾ ಅವರ ಸಮಾಜವಾದಿ ಚಿಂತನೆಗಳಲ್ಲಿ ಮಹಿಳೆಯರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ರೈತರನ್ನು ಕುರಿತು ವ್ಯಕ್ತವಾಗಿರುವ ಕಾಳಜಿ ಹಾಗೂ ಅಂಬೇಡ್ಕರ್ ಅವರ ದಲಿತ ವಿಮೋಚನೆಯ ಮಾರ್ಗಗಳೆರಡೂ ಬೆರೆಯುವ ಕಾಲ ಆಗ ಬಂದಿತ್ತು. ದುರದೃಷ್ಟವಶಾತ್ ಆ ಸರಿಸುಮಾರಿನಲ್ಲೇ ಅಂಬೇಡ್ಕರ್ ನಿಧನರಾದರು. ಹೀಗಾಗಿ ಆ ಪ್ರಯತ್ನ ಅಲ್ಲಿಗೇ ನಿಂತಿತು. ಆ ಪ್ರಯತ್ನದ ಸಸಿಯನ್ನು ಸರ್ವೋದಯ ಕರ್ನಾಟಕ ನೆಟ್ಟು ಬೆಳೆಸಲು ಮುಂದಾಗಿದೆ.

ಕಳೆದ ಒಂದು ವರ್ಷದಿಂದ ರೈತ ಹಾಗೂ ದಲಿತ ಚಳವಳಿಗಳು ಇತರೆ ಪ್ರಗತಿಪರರು ಮತ್ತು ಹೋರಾಟಗಾರರನ್ನೊಳಗೊಂಡಂತೆ ಪರ್ಯಾಯ ರಾಜಕಾರಣ ಚಿಂತನೆ ಆರಂಭಿಸಿದ್ದರು. ಇದರ ಮುಂದುವರಿಕೆಯಾಗಿ ಪರ್ಯಾಯ ರಾಜಕಾರಣದ ವೇದಿಕೆಯಾಗಿ 'ಸರ್ವೋದಯ ಕರ್ನಾಟಕ' ಪಕ್ಷ ಈಗ ಅಸ್ತಿತ್ವಕ್ಕೆ ಬಂದಿದೆ. 'ಪರ್ಯಾಯ ರಾಜಕಾರಣ'ದ ಬಗ್ಗೆ ವಿವಿಧ ಚಿಂತಕರ ಅಭಿಪ್ರಾಯ ಪಡೆದ 'ಸಂವಾದ' ಈಗ ಪರ್ಯಾಯ ರಾಜಕಾರಣ ಏಕೆ? ಹೇಗೆ? ಎಂಬುದರ ಬಗೆಗೆ ನಿರ್ದಿಷ್ಟ ಚರ್ಚೆಗೆ ಮುಂದಾಗಿದೆ. ಡಾ|| ನಟರಾಜ್ ಹುಳಿಯಾರ್ ಅವರು ಆರಂಭಿಸಿರುವ ಈ ಚರ್ಚೆಗೆ ಮುಕ್ತ ಪ್ರತಿಕ್ರಿಯೆಗಳನ್ನು 'ಸಂವಾದ' ಆಹ್ವಾನಿಸುತ್ತದೆ.

ಸಮಾನತೆ ಮತ್ತು ಏಕತೆಯತ್ತ...

ವಚನಕಾರರು ನಡೆದಾಡಿದ ಈ ನಾಡಿನಲ್ಲಿ ಸಮಾನತೆ ಮತ್ತು ಐಕ್ಯತೆ ದೊಡ್ಡ ಮೌಲ್ಯವಾಗಿ ಬೆಳೆಯುವ ಸಾಧ್ಯತೆ ಇನ್ನೂ ಜೀವಂತವಾಗಿದೆ. ಜಾಗತೀಕರಣವನ್ನು ಗ್ರಹಿಸುವ, ವಿರೋಧಿಸುವ, ಕೋಮು ಶಕ್ತಿಗಳನ್ನು ಎದುರಿಸುವ ದೊಡ್ಡ ಚಿಂತಕರ ಪಡೆಯೇ ಇಲ್ಲಿ ಬೆಳೆಯುತ್ತಿದೆ. ಸ್ತ್ರೀವಾದಿ ಚಿಂತನೆ, ಎಡಪಂಥೀಯ ಚಿಂತನೆ, ಅಂಬೇಡ್ಕರ್ ಚಿಂತನೆಗಳು ಅನೇಕ ರೀತಿಯ ಕೊಂಬೆಗಳಾಗಿ ಹರಡಿವೆ. ಹೀಗೆ ಒಂದು ದೃಷ್ಟಿಯಿಂದ ಈ ನಾಡಿನ ಪರಿಸ್ಥಿತಿ ಆಶಾದಾಯಕವಾಗಿಯೂ ಕಾಣುತ್ತಿದೆ. ಶಾಂತವೇರಿ ಗೋಪಾಲಗೌಡರ ಈ ನಾಡಿನಲ್ಲಿ ರೈತ ಚಳವಳಿ ರಾಜ್ಯದ ಮೂವತ್ತು ಸಾವಿರ ಹಳ್ಳಿಗಳಿಗೂ ಕೊನೆಯ ಪಕ್ಷ ಪರಿಚಯವಾಗಿಯಾದರೂ ಇದೆ. ಹಾಗೆಯೇ ದಲಿತ ಚಳವಳಿ ಅನೇಕ ರೂಪಗಳಲ್ಲಿ ಕರ್ನಾಟಕದ ಮೂಲೆ ಮೂಲೆಗಳನ್ನು ಪ್ರಭಾವಿಸಿದೆ. ದುಡಿಯುವ ವರ್ಗಗಳ ಅನೇಕ ಬಗೆಯ ಸಂಘಟನೆಗಳನ್ನು ನಮ್ಮ ಕಮ್ಯೂನಿಸ್ಟರು ರೂಪಿಸಿದ್ದಾರೆ. ಈ ಎಲ್ಲ ಚಳವಳಿಗಳು ಒಂದೆಡೆ ಸೇರುವ ಪ್ರಯತ್ನ ಇದೀಗ ಶುರುವಾಗಿದೆ. ಕೋಮು ಸೌಹಾರ್ದ ಚಳವಳಿ, ಭಾಷಾ ಚಳವಳಿ, ಪರಿಸರ ಚಳವಳಿ, ಹಿಂದುಳಿದ ವರ್ಗಗಳ ಚಳವಳಿ, ಮಹಿಳಾ ಚಳವಳಿ

ಅಂಬೇಡ್ಕರ್, ಲೋಹಿಯಾ ಕನಸಿನ ಸಸಿ...

ಹಾಗೂ ಅಲ್ಪಸಂಖ್ಯಾತ ಸಂಘಟನೆಗಳು ಇಲ್ಲಿ ಬಂದು ಸೇರುವ ಮೂಲಕ ಈ ಪ್ರಯತ್ನ ಇನ್ನಷ್ಟು ವ್ಯಾಪಕವಾಗುವತ್ತ ನಡೆಯುವಂತಾಗಲಿ.

ಇಂಥದೊಂದು ಹೊಸ ರಾಜಕಾರಣ ಕುರಿತಂತೆ ನಾಡಿನ ಚಿಂತಕರು, ಹೋರಾಟಗಾರರು ಹಾಗೂ ವಿವಿಧ ಜನವರ್ಗಗಳಿಂದ ಉತ್ತೇಜಕ ಪ್ರತಿಕ್ರಿಯೆಗಳು ಬರುತ್ತಿವೆ. ಈ ಕುರಿತು ನಾಡಿನ ಚಿಂತಕರ ಒಟ್ಟು ಚಿಂತನೆ ಹೀಗಿದೆ : 'ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಜೊತೆಗೂಡಿದ್ದಾದರೆ ಗಾಢವಾದ ಹೊಸದೊಂದು ರಾಜಕೀಯ ಶಕ್ತಿ ಹುಟ್ಟಿಕೊಂಡಂತಾಗುತ್ತದೆ. ಕೃಷಿಕ ವರ್ಗಕ್ಕೆ ಸೇರಿದ ಜಾತಿಗಳು ಮತ್ತು ಭೂಹೀನರೂ, ಕನಿಷ್ಠ ಭೂಮಿ ಪಡೆದವರೂ ಆದ ದಲಿತರ ನಡುವೆ ಈವರೆಗೆ ನಡೆಯುತ್ತಿದ್ದ ಹಿಂಸಾಚಾರಗಳು ನಿಂತಂತಾಗುತ್ತದೆ. ಹೊಸ ರಾಜಕೀಯ ಶಕ್ತಿಯೊಂದು ಇದರಿಂದ ಹುಟ್ಟುವಂತಾಗ ಬೇಕಾದರೆ ಬಡ ಮುಸ್ಲಿಮರೂ, ಬಡ ಕ್ರಿಶ್ಚಿಯನ್ನರೂ ಈ ಒಕ್ಕೂಟದಲ್ಲಿ ಕೂಡಿದಾಗ ಇದೊಂದು ಪರ್ಯಾಯ ಶಕ್ತಿಯಾಗಿ ಮಾರ್ಪಡುತ್ತದೆ; ಮತ್ತು ಸಮಗ್ರ ಭಾರತದ ರಾಜಕಾರಣದ ಒಂದಂಶವಾಗುತ್ತದೆ. ಎಲ್ಲ ಬಡವರು, ಭವಿಷ್ಯಕ್ಕೆ ಮುಖ ಮಾಡಿದ ಯುವಕರು, ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು, ಎಲ್ಲರೂ ಹೊಸದೊಂದು ಯುಗವನ್ನು ಬಯಸಿದಾಗ, ಪರ್ಯಾಯ

ರಾಜಕಾರಣ ಬಲವಾದ ಶಕ್ತಿಯಾಗುತ್ತದೆ. ಈ ಹೊಸಯುಗ ಪಾಶ್ಚಿಮಾತ್ಯ ಸಂಸ್ಕೃತಿಯ ದಾಹವನ್ನು ತೊರೆದಿರುತ್ತದೆ. ಜೀವಪಾಲವಾದ ನಿಸರ್ಗದ ಜೊತೆ ನೆಮ್ಮದಿಯ ನಂಟನ್ನು ಬಯಸುತ್ತದೆ.'

ಈ ಬಗೆಯ ಆಶಯ, ಬೆಂಬಲ, ಮಾರ್ಗದರ್ಶನಗಳ ಜೊತೆಗೇ ಮುಂದೆ ಇರಿಸಬೇಕಾದ ಹೆಜ್ಜೆಗಳ ಬಗ್ಗೆ ಎಚ್ಚರಗಳೂ ಕೂಡ ಕರ್ನಾಟಕದ ಎಲ್ಲ ಮೂಲೆಗಳಿಂದ ವ್ಯಕ್ತವಾಗಿವೆ. ಬಹುತೇಕ ಜನಪರ ಚಳವಳಿಗಳ ನಾಯಕರು, ಹಿರಿಯ ಗಾಂಧೀವಾದಿಗಳು, ನಾಡಿನ ಲೇಖಕರು, ಚಿಂತಕರು ಈ ಕುರಿತ ಸಂವಾದದಲ್ಲಿ ಗಂಭೀರವಾಗಿ ಪಾಲ್ಗೊಳ್ಳಲಾರಂಭಿಸಿದ್ದಾರೆ. ಇದು ಕರ್ನಾಟಕದ ರಾಜಕಾರಣದಲ್ಲಿ ಬುದ್ಧಿಜೀವಿಗಳು ಹಮ್ಮು ಬಿಮ್ಮುಗಳಿಲ್ಲದೆ ಕ್ರಿಯಾಶೀಲವಾಗಿ ತೊಡಗುತ್ತಿರುವುದರ ಸ್ಪಷ್ಟ ಸೂಚನೆಯಾಗಿದೆ. ಪಕ್ಷದ ನೀತಿ, ನಿಲುವುಗಳನ್ನು ಸರಿಯಾದ ಹಾದಿಯಲ್ಲಿ ಇಡಬಲ್ಲ ಶಕ್ತಿ ಈ ಪಡೆಗಿದೆ. ಈ ಕುರಿತು ಪ್ರೊ|| ನಂಜುಂಡಸ್ವಾಮಿಯವರು ತಮ್ಮ ಕೊನೆಯ ಸಂದರ್ಶನದಲ್ಲಿ ಆಶಾದಾಯಕವಾದ ಮಾತುಗಳ ನ್ನಾಡಿದ್ದರು: "ಎರಡು ಮೂರು ವರ್ಷ ಸತತವಾಗಿ ಕೆಲಸ ಮಾಡಿದರೆ, ನಾವು ಕರ್ನಾಟಕದ ಪ್ರಜಾಪ್ರಭುತ್ವಾನ ಗುಣಾತ್ಮಕವಾಗಿ ಬದಲಾವಣೆ ಮಾಡಬಹುದು. ಅಷ್ಟು ಪ್ರಭಾವ ಬೀರಬಲ್ಲಂತಹ ಬುದ್ಧಿಜೀವಿಗಳ ಒಂದು ದೊಡ್ಡ ಸಂಖ್ಯೆ ಕರ್ನಾಟಕದಲ್ಲಿದೆ. ಆದರೆ ಈ ಕೆಲಸಾನ ಅವರು ಕೈಗೆ ತಗೊಂಡಿಲ್ಲ. ಇವತ್ತಿಗೂ ಎಲ್ಲರೂ ಈ ಒಂದು ವೈಚಾರಿಕ ಸ್ಪಷ್ಟತೆಯಿಂದ ಕೈ ಜೋಡಿಸಿದರೆ, ಆರೋಗ್ಯಕರವಾದಂತಹ ಪರ್ಯಾಯ ವ್ಯವಸ್ಥೆಯನ್ನು ನಾವು ಕರ್ನಾಟಕಕ್ಕೆ ಕೊಡಬಹುದು. ಆ ವಿಶ್ವಾಸ ನನಗಿದೆ."

ಅಧಿಕಾರ ರಾಜಕಾರಣ

ತಮ್ಮ ಜೀವಮಾನದುದ್ದಕ್ಕೂ ಚಳವಳಿಗಳನ್ನು ನಡೆಸಿದ ಬಿ. ಕೃಷ್ಣಪ್ಪನವರಾಗಲೀ, ನಂಜುಂಡಸ್ವಾಮಿಯವರಾಗಲೀ ತಮ್ಮ ಕೊನೆಯ ಕೆಲ ವರ್ಷಗಳಲ್ಲಿ ಚಳವಳಿ ರಾಜಕಾರಣದಿಂದ ಅಧಿಕಾರ ರಾಜಕಾರಣದ ಕಡೆಗೆ ನಡೆಯುವ ಬಗ್ಗೆ ಗಂಭೀರವಾಗಿ ಆಲೋಚಿಸಿದ್ದರು. ಬಿ. ಕೃಷ್ಣಪ್ಪನವರು ಬಹುಜನ ಸಮಾಜ ಪಕ್ಷವನ್ನು ಮುನ್ನಡೆಸಿದರು. ಇದೀಗ ನಾವೆಲ್ಲ ವ್ಯಕ್ತಿಗತ ಅಹಂಕಾರಗಳನ್ನು ತೊಡೆದು, ಕರ್ನಾಟಕದಲ್ಲಿ ವ್ಯಾಪಕ ಮಟ್ಟ ದಲ್ಲಿ ಚಳವಳಿಗಳನ್ನು ಒಂದುಗೂಡಿಸಲು ಇದು ಸಕಾಲ. ಈ ಚಳವಳಿಗಳ ನಾಯ ಕರು, ಕಾರ್ಯಕರ್ತರು ಪಡೆದಿರುವ ಅಪಾರ ಸಾಮಾಜಿಕ ಅನುಭವ ಮತ್ತು ಸಮಸ್ಯೆಗಳಿಗೆ ಅವರು ಕಂಡುಕೊಂಡಿರುವ ಪರಿಹಾರಗಳು ಕಾರ್ಯರೂಪಕ್ಕೆ ಬರುವಂತೆ ಮಾಡಬೇಕಾದ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಎದುರಿಗಿದೆ. ಅದರ ಜೊತೆಗೇ ಸರ್ವೋದಯ ಕರ್ನಾಟಕದ ಪದಾಧಿಕಾರಿಗಳ ಪೈಕಿ ಶೇ ೫೦ ರಷ್ಟನ್ನು ಮಾತ್ರ ಚಳವಳಿ ಹಿನ್ನೆಲೆಯ ಸಂಘಟನೆಗಳಿಗೆ ಪ್ರಾತಿನಿಧ್ಯ ಕೊಟ್ಟು, ಇನ್ನುಳಿದ ಶೇ ೫೦ ರಷ್ಟನ್ನು ಎಲ್ಲಾ ಬಗೆಯ ಹಿನ್ನೆಲೆಯಿಂದ ಬಂದವರಿಗೆ ಕೊಡಬೇಕಾದದ್ದೂ ಕೂಡ ಅವಶ್ಯಕ. ಇದು ಸಾಧ್ಯವಾದಲ್ಲಿ ಚಳವಳಿಗಾರರ ಕಾಳಜಿ ಹಾಗೂ ಅದೇ ಬಗೆಯ ಕಾಳಜಿಯಲ್ಲಿ ಇನ್ನಿತರ ವಲಯಗಳಲ್ಲಿ ಕೆಲಸ ಮಾಡುತ್ತಿರುವವರ ಒಂದು ಆದರ್ಶ ವೇದಿಕೆ ನಿರ್ಮಾಣ ವಾಗುತ್ತದೆ. ಈ ಹಿನ್ನೆಲೆಯಲ್ಲಿ, ಎಲ್ಲಾ ವಲಯಗಳಲ್ಲಿ ಸಮಾಜದ ಬಗ್ಗೆ ಕಾಳಜಿ ಇರಿಸಿಕೊಂಡಿರುವವರನ್ನು ಪಕ್ಷವು ಒಳಗೊಳ್ಳಲಿದೆ.

ಪರ್ಯಾಯ ರಾಜಕಾರಣ ಏಕೆ? ಹೇಗೆ?

ಮಹಿಳಾ ನಾಯಕತ್ವ ಈ ಕಾಲದ ಅಗತ್ಯ

ಈಗಲಾದರೂ ಪಂಚಾಯಿತಿ ಚುನಾವಣೆಗಳಲ್ಲಿ ಮಹಿಳೆಯರು ತೋರುತ್ತಿರುವ ಮತ ಹಾಕುವ ಹಾಗೂ ಸ್ಪರ್ಧಿಸುವ ರಾಜಕೀಯ ಉತ್ಸಾಹವನ್ನು ಊರು ಕಟ್ಟುವ ಕೆಲಸದೆಡೆಗೆ ಕೊಂಡೊಯ್ಯಬೇಕಾಗಿದೆ. ಚುನಾವಣೆಯಲ್ಲಿ ಹೆಂಡ, ಹಣದ ಆಮಿಷಗಳನ್ನು ಎದುರಿಸಲು ಕೂಡ ಮಹಿಳಾ ನಾಯಕತ್ವವೇ ಮುಂಚೂಣಿಯಲ್ಲಿರಬೇಕಾಗುತ್ತದೆ. ಮಂಡ್ಯ ಜಿಲ್ಲೆಯ ಗೋಪಾಲಪುರ ಹೋಬಳಿಯ ಕೋಡಿಹಳ್ಳಿ ಗ್ರಾಮದಲ್ಲಿ ಮಹಿಳೆಯರೇ ಸದಸ್ಯರಾಗಿರುವ ಗ್ರಾಮ ಪಂಚಾಯಿತಿಯು ಸೌರಶಕ್ತಿಯನ್ನು ಬಳಸಿ ಇಡೀ ಗ್ರಾಮವನ್ನು ಸೋಲಾರ್ ಹಳ್ಳಿಯನ್ನಾಗಿ ಪರಿವರ್ತಿಸಿದೆ; ಕರ್ನಾಟಕಕ್ಕೇ ಮಾದರಿ ಗ್ರಾಮ ಪಂಚಾಯಿತಿಯೆಂದು ಹೆಸರು ಪಡೆದಿದೆ. ಈ ಪ್ರಯತ್ನ ಕರ್ನಾಟಕದ ಎಲ್ಲಾ ಪಂಚಾಯಿತಿಗಳಿಗೆ ಆರಿಸಿ ಬಂದಿರುವ ನಮ್ಮ ಮಹಿಳೆಯರಿಗೆ ಹಾಗೂ ಪುರುಷರಿಗೆ ಮಾದರಿಯಾಗಬೇಕು. ಸ್ತ್ರೀ ನಾಯಕತ್ವದ ಸಾಧ್ಯತೆಗಳೇನು ಎನ್ನುವುದನ್ನು ಖಾಸಗಿ ಕ್ಷೇತ್ರಗಳು ಈಗಾಗಲೇ ಕಂಡುಕೊಂಡಿವೆ. ಆದರೆ ನಮ್ಮ ಸರ್ಕಾರಿ ರಂಗವಾಗಲೀ, ರಾಜಕಾರಣವಾಗಲೀ ಸ್ತ್ರೀಗೆ ಸಂಪೂರ್ಣ ನಾಯಕತ್ವ ಕೊಡುವಲ್ಲಿ ಹಿಂದೆ ಮುಂದೆ ನೋಡುತ್ತಿವೆ. ಕರ್ನಾಟಕದ ಸ್ತ್ರೀವಾದಿ ಚಿಂತನೆ, ಮಹಿಳಾ ಚಳವಳಿಗಳು, ಸ್ತ್ರೀ ಶಕ್ತಿ ಗುಂಪುಗಳು – ಇವುಗಳನ್ನು ಒಗ್ಗೂಡಿಸಿದಾಗ ಹುಟ್ಟುವ ಹೊಸ ವಿವೇಕ, ಹೊಸ ರೀತಿಯಲ್ಲಿ ನಾಡನ್ನು ರೂಪಿಸುವ ಕನಸುಗಳಿಂದ ನಾವು ಕಲಿಯಬೇಕಾಗಿದೆ. ಜೊತೆಗೆ ನಮ್ಮ ಅನೇಕ ಜಗಳಗಳು ಹಾಗೂ ಕೋಮುಹಿಂಸೆಗಳ ಎದುರು ತಾಯ್ತನದಿಂದ ಹುಟ್ಟುವ ಪರಿಹಾರಕ್ಕಾಗಿ ಕೂಡ ನಾವು ಮಹಿಳಾ ನಾಯಕತ್ವದತ್ತ ನೋಡಲೇಬೇಕಾಗಿದೆ.

ಜಾಗತೀಕರಣದ ಎದುರು ಸ್ಥಳೀಕರಣ

ನಗರಗಳ ದೈತ್ಯ ಬೆಳವಣಿಗೆಯಿಂದ ಹಳ್ಳಿಗಳು ಅಂಚಿಗೆ ಒತ್ತರಿಸಲ್ಪಟ್ಟಿವೆ. ವ್ಯವಸಾಯದಿಂದ ಯಾವ ಫಲವೂ ಇಲ್ಲದೆ ಕೃಷಿಕರು ಕೂಲಿಕಾರರಾಗುತ್ತಿದ್ದಾರೆ. ನಮ್ಮಲ್ಲಿ ಲಭ್ಯವಿರುವಷ್ಟು ನೀರು, ಮಣ್ಣಿನ ಬಳಕೆ ಹೇಗಾಗಬೇಕು, ಮಳೆ ನೀರಿನ ಸಂಗ್ರಹ ಹೇಗಿರಬೇಕು ಎಂಬ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೆ ಕೂಡ ನಮ್ಮ ಹಳ್ಳಿಗರು ದಿಕ್ಕೆಟ್ಟಿದ್ದಾರೆ. ಆದ್ದರಿಂದ ಮಡಗಾಸ್ಕರ್ ಪದ್ಧತಿಯಂತೆ ಕಡಿಮೆ ನೀರಿನ ವೆಚ್ಚದಲ್ಲಿ ಮಣ್ಣು ಹಾಳಾಗದಂತೆ ಹೆಚ್ಚು ಉತ್ಪಾದನೆ ಮಾಡುವ ಯೋಜನೆಯನ್ನು ಎಲ್ಲೆಡೆ ಹಬ್ಬಿಸಬೇಕು. ಹಾಗೆಯೇ ಸುಭಾಷ್ ಪಾಳೇಗಾರ್ ಅವರಂಥವರು ತೋರಿಸಿಕೊಟ್ಟಿರುವ ನೈಸರ್ಗಿಕ ಕೃಷಿಯನ್ನು ಎಲ್ಲೆಡೆ ಜಾರಿಗೆ ತರಬೇಕು. ಕ್ರಿಮಿನಾಶಕಗಳು, ಹೈಬ್ರಿಡ್ ತಳಿಗಳ ಮೂಲಕ ನಮ್ಮ



ಕೃಷಿಯನ್ನು ನಾಶ ಮಾಡುತ್ತಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ಮೂಲಕವೇ ಉತ್ತರ ಕೊಡಬೇಕು. ಅದರ ಜೊತೆಗೆ ದೇಶೀ ತಳಿಗಳನ್ನು ಉಳಿಸುವುದು ಹಾಗೂ ನಮ್ಮ ಆಹಾರ ಸಂಸ್ಕೃತಿಯನ್ನು ರಕ್ಷಿಸುವುದು ಕೂಡ ಮುಖ್ಯವಾಗಿದೆ. ನಮ್ಮ ಸಂಸ್ಕೃತಿಗೆ ಬೇಕಾದ ಬೀಜಗಳನ್ನು ಕಂಡುಹಿಡಿಯುವಲ್ಲಿ ಸೋತಿರುವ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳಿಗೂ ಜೀವ ತುಂಬಬೇಕಾಗಿದೆ. ತೋಟಗಾರಿಕೆ ಬೆಳೆಗಳ ಹಾಗೂ ಹಣ್ಣು ಸಂಸ್ಕರಣಾ ಘಟಕಗಳ ಸೃಷ್ಟಿ ಹಾಗೂ ಕಬ್ಬು, ರೇಷ್ಮೆ, ಹತ್ತಿ ಮುಂತಾದ ವಾಣಿಜ್ಯ ಬೆಳೆಗಳ ಉತ್ತಮ ನಿರ್ವಹಣೆಯಿಂದ ಹೊಸ ಹೊಸ ಉದ್ಯೋಗಗಳನ್ನು ಸೃಷ್ಟಿಸಬಹುದು. ಆ ಮೂಲಕ 'ಮಾರಾಟಗಾರ-ದಲ್ಲಾಳಿ-ವಿಜ್ಞಾನಿ' –ಈ ವಿಷವರ್ತುಲದಲ್ಲಿ ಸಿಕ್ಕಿಕೊಂಡಿರುವ ಕೃಷಿ ಮತ್ತು ನಮ್ಮ ಹಳ್ಳಿಗಳನ್ನು ಪಾರು ಮಾಡಬೇಕಾಗಿದೆ. ಜೊತೆಗೆ, ನಮ್ಮ ಗ್ರಾಮಗಳು ಸ್ಥಳೀಯ ಸಂಪನ್ಮೂಲಗಳನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬ ಬಗೆಗೂ ಕೆಲಸ ಶುರು ಮಾಡಬೇಕಿದೆ.

ಪರ್ಯಾಯ ರಾಜಕಾರಣ ಏಕೆ? ಹೇಗೆ?

ನನ್ನ ಗ್ರಾಮಕ್ಕೆ ನನ್ನ ಕೈಲಾದಷ್ಟು...

ಬುಡಮಟ್ಟದ ಸರ್ವೋದಯ ರಾಜಕಾರಣ ಹಳ್ಳಿಗಳಿಂದ ಶುರುವಾಗಬೇಕು. ಗ್ರಾಮ ಪಂಚಾಯಿತಿಗಳನ್ನು ನಾವು ಸುಧಾರಣೆ ಮಾಡಿದರೆ, ಊರಿನ ಒಳಗೇ ಸಣ್ಣ ಘಟಕ ಯಂತ್ರಗಳ ಮೂಲಕ ಉದ್ಯೋಗ ಸೃಷ್ಟಿ ಮಾಡುವುದು ತೀರ ಕಷ್ಟವೇನಲ್ಲ. ನಮ್ಮ ಊರಿನ ಮೇಣದ ಬತ್ತಿಯನ್ನು ಪಕ್ಕದ ಊರಿನಲ್ಲಿ ತಯಾರಾಗುವ ಸೋಪಿಗೆ ಪ್ರತಿಯಾಗಿ ನಾವು ಮಾರುವುದಾದರೆ ಏಕಕಾಲಕ್ಕೆ ಜಾಗತೀಕರಣವನ್ನೂ ಎದುರಿಸಿದಂತಾಯಿತು; ದೇಶೀ ವ್ಯವಸ್ಥೆಯನ್ನೂ ಬಲಪಡಿಸಿದಂತಾಯಿತು. ನಮ್ಮೂರಿನ ದುಡಿಯುವ ಕೈಗಳಿಗೆ ಕೆಲಸವನ್ನೂ ಒದಗಿಸಿದಂತಾಯಿತು.

ನಮ್ಮ ಇಡೀ ರಾಜಕಾರಣದ ಗಮನ ಹೀಗೆ ಗ್ರಾಮದಿಂದ ಶುರುವಾಗದಿದ್ದರೆ ನಾವು ಏನನ್ನೂ ಮಾಡುವುದು ಸಾಧ್ಯವಿಲ್ಲ. ಪಂಚಾಯತ್ ವ್ಯವಸ್ಥೆಗೆ ಸ್ವಾಯತ್ತತೆ ನೀಡಿ, ಗ್ರಾಮ ಪಂಚಾಯತಿಯನ್ನು ಸರಿಪಡಿಸಿದರೆ ನಮ್ಮ ಸಮಾಜದ ಶೇ. ೭೦ ಭಾಗ ತಂತಾನೇ ಸರಿಯಾಗುತ್ತದೆ. ಊರೊಟ್ಟಿನ ಕೆಲಸ ಹಾಗೂ ಗ್ರಾಮ ಪಂಚಾಯಿತಿಯ ಕೆಲಸ ಎರಡೂ ಒಂದೇ ಆದರೆ ಭ್ರಷ್ಟಾಚಾರವೂ ಕಡಿಮೆಯಾಗುತ್ತದೆ. ಪಕ್ಷ ರಾಜಕಾರಣವನ್ನು ಮೀರಿ ಊರೊಟ್ಟಿನ ಕೆಲಸ ಮಾಡುವುದು ಹೇಗೆ ಎಂಬುದನ್ನೂ ನಾವು ಯೋಚಿಸಬೇಕಾಗಿದೆ. ಇದರ ಮೊದಲ ಹೆಜ್ಜೆಯಾಗಿ ಚುನಾವಣೆಯನ್ನು ವಿವಿಧ ಜನವರ್ಗಗಳ ನಡುವಣ ಯುದ್ಧಭೂಮಿಯನ್ನಾಗಿ ಮಾಡುವ ಅನಿಷ್ಟ ಪದ್ಧತಿಯನ್ನು ಮೊದಲು ಕೊನೆಗಾಣಿಸಬೇಕಾಗಿದೆ. ಚುನಾವಣೆಯ ಆಟ ಮುಗಿದ ತಕ್ಷಣ ಎಲ್ಲರೂ ಒಗ್ಗೂಡಿ, ಊರು ಕಟ್ಟುವುದು ಹೇಗೆ ? ಎಂಬ ದಿಕ್ಕಿನಲ್ಲಿ ನಡೆಯುವ ಆರೋಗ್ಯಕರ ಅಭ್ಯಾಸವನ್ನು ರೂಢಿಸಿಕೊಳ್ಳಬೇಕಾಗಿದೆ.

ನಮ್ಮ ಹಳ್ಳಿಗಾಡಿನ ಜನ ಮೂಲತಃ ಒಂದೇ...

ನಮ್ಮ ಹಳ್ಳಿಗಾಡಿನ ಜನತೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಂದೇ. ಆದರೆ ಬೇರೆ ಬೇರೆ ಅನ್ನುವಂತೆ ವರ್ತಿಸುತ್ತಿದ್ದಾರೆ; ಬೇರೆ ಬೇರೆ ಆಗಿದ್ದಾರೆ. ರಾಜಕೀಯ ನೆಪದಲ್ಲಿ ಅವರನ್ನು ಒಂದುಗೂಡಿಸಿ ಸಾಂಸ್ಕೃತಿಕವಾಗಿಯೂ, ರಾಜಕೀಯವಾಗಿಯೂ ಏಕತೆ ತರುವುದು ನಮ್ಮ ರಾಜಕಾರಣದ ಗುರಿಯಾಗಬೇಕು. ಪಂಚಾಯತ್‌ನ ಕೆಲಸ ಊರೊಟ್ಟಿನ ಕೆಲಸ ಎಂಬ ತಿಳಿವಳಿಕೆ ಬಂದ ತಕ್ಷಣ ನಮ್ಮ ರಸ್ತೆ, ಸ್ಕೂಲು, ಆಸ್ಪತ್ರೆ, ನೀರು ಎಲ್ಲವೂ ರಿಪೇರಿಯಾಗತೊಡಗುತ್ತವೆ. ಎಲ್ಲಾ ಜಾತಿಗಳೂ ಒಂದಾಗಿ ಕೆಲಸ ಮಾಡುವ ಮೂಲಕವೇ ಜಾತಿ ಜಗಳಗಳನ್ನು ಇಲ್ಲವಾಗಿಸುವ ಕೆಲಸ ಶುರುವಾಗಬೇಕಾಗಿದೆ. ಕಿಶನ್ ಪಟ್ನಾಯಕ್ ಅವರು ಒಮ್ಮೆ ಹೇಳಿದ ಹಾಗೆ, ರೈತ ಸಂಘ ಎತ್ತುವ ಪ್ರಶ್ನೆಯನ್ನು ದಲಿತ ಚಳವಳಿಯೂ, ದಲಿತ ಚಳವಳಿ ಎತ್ತುವ ಪ್ರಶ್ನೆಯನ್ನು ರೈತ ಚಳವಳಿಯೂ ಎತ್ತಬೇಕಾಗಿದೆ. ಜೊತೆಗೆ, ನಾವು ನಮ್ಮ ಮಹಿಳೆಯರ ಬಗೆಗೆ ತೋರುತ್ತಿರುವ ಭೀಕರ ಅನಾದರಗಳನ್ನು ಕುರಿತು ಎಲ್ಲೆಡೆ ಅರಿವು ಮೂಡಿಸಬೇಕಾಗಿದೆ. ಅಸ್ಪೃಶ್ಯತೆ ಇಲ್ಲದ ಹಳ್ಳಿಗಳನ್ನು ನಿರ್ಮಾಣ ಮಾಡುವುದು ನಮ್ಮ ಮುಖ್ಯ ಕರ್ತವ್ಯವಾಗಬೇಕಾಗಿದೆ. ಭೂಮಿಯ ಒಡೆತನದ ಪ್ರಶ್ನೆಯನ್ನು ಎಲ್ಲ ಖಾಸಗಿ ಆಸ್ತಿಯ ಪ್ರಶ್ನೆಯಂತೆಯೇ ಬಗೆಹರಿಸಿಕೊಳ್ಳಬೇಕಿದೆ. ಕರ್ನಾಟಕದಲ್ಲಿ ಭೂ ನಿಯಂತ್ರಣ ಕಾಯ್ದೆ ಬಂದ ಮೇಲೆ ಭೂಮಿಯನ್ನು ಕೊಂಡು ದಲಿತರಿಗೆ ಕೊಡುವ ಸರ್ಕಾರಿ ಯೋಜನೆಯೂ ಇದೆ. ಅದಕ್ಕೆ ಆಯವ್ಯಯ ಪಟ್ಟಿಯಲ್ಲಿ ಹಣವನ್ನೂ ತೆಗೆದಿರಿಸಲಾಗುತ್ತಿದೆ. ಆದರೆ ಯೋಜನೆ ಮಾತ್ರ ಜಾರಿಗೆ ಬರುತ್ತಿಲ್ಲ. ಹೀಗಾಗಿ ದಲಿತರಿಗೆ ಭೂಮಿ ಸಿಗುತ್ತಿಲ್ಲ. ಜೊತೆಗೆ ಎಲ್ಲ ಬಡವರನ್ನೂ ಖಾಸಗಿ ಸಾಲದಿಂದ ಬಿಡುಗಡೆಗೊಳಿಸಲು ಡಿ.ಐ.ಆರ್. ಯೋಜನೆಯನ್ನು ಜಾರಿಗೊಳಿಸಿ ಬ್ಯಾಂಕುಗಳು ಅಲ್ಪ ಬಡ್ಡಿಯಲ್ಲಿ ಸಾಲ ಕೊಡಲಾರಂಭಿಸಿದರೆ ನಮ್ಮ ಹಳ್ಳಿಗಳ ಲಕ್ಷಾಂತರ ಕುಟುಂಬಗಳು ಬಡ್ಡಿಯ ನೊಗದಿಂದ ಬಿಡುಗಡೆಗೊಳ್ಳುತ್ತವೆ. ಆ ಮೂಲಕ ಕರ್ನಾಟಕದ ಒಂದೂವರೆ ಕೋಟಿ ಅಸಂಘಟಿತ ಕೃಷಿ ಕಾರ್ಮಿಕರ ಸಮಸ್ಯೆಯನ್ನು ಒಂದು ಮಟ್ಟದವರೆಗಾದರೂ ಬಗೆಹರಿಸಬಹುದು. ಜೊತೆಗೆ, ಖಾಸಗಿ ರಂಗಗಳಲ್ಲಿ ಮೀಸಲಾತಿಯ ಪ್ರಶ್ನೆಯನ್ನು ದೊಡ್ಡ ಮಟ್ಟದಲ್ಲಿ ಕೈಗೆತ್ತಿಕೊಳ್ಳದಿದ್ದರೆ ನಮ್ಮ ಸಾಮಾಜಿಕ ನ್ಯಾಯದ ಕಲ್ಪನೆಯೇ ಬುಡಮೇಲಾಗಲಿದೆ.



ಸರ್ವೋದಯ ಕರ್ನಾಟಕದ ಬಾವುಟ ಬಿಡುಗಡೆ

ನಮ್ಮ ಹಳ್ಳಿಗಾಡಿನ ಜನತೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಂದೇ. ಆದರೆ ಬೇರೆ ಬೇರೆ ಅನ್ನುವಂತೆ ವರ್ತಿಸುತ್ತಿದ್ದಾರೆ; ಬೇರೆ ಬೇರೆ ಆಗಿದ್ದಾರೆ. ರಾಜಕೀಯ ನೆಪದಲ್ಲಿ ಅವರನ್ನು ಒಂದುಗೂಡಿಸಿ ಸಾಂಸ್ಕೃತಿಕ ವಾಗಿಯೂ, ರಾಜಕೀಯವಾಗಿಯೂ ಏಕತೆ ತರುವುದು ನಮ್ಮ ರಾಜಕಾರಣದ ಗುರಿಯಾಗಬೇಕು.

ಎಲ್ಲರಿಗೂ ಒಂದೇ ಬಗೆಯ ಶಿಕ್ಷಣ

ಲೋಹಿಯಾ ಅವರು ಹೇಳಿದಂತೆ '೫ ರಿಂದ ೧೦ ವರ್ಷದ ಮಕ್ಕಳು ಶಿಕ್ಷಣ ಪಡೆಯುತ್ತಿರುವ ಪ್ರಾಥಮಿಕ ಶಾಲೆಗಳು ಒಂದೇ ಮಾದರಿಯವಾದರೆ ದಲಿತ, ಕಮ್ಮಾರ, ಬ್ರಾಹ್ಮಣ, ರೈತ, ಪ್ರಧಾನಿ ಎಲ್ಲರ ಮಕ್ಕಳೂ ಒಂದೇ ಥರದ ಶಿಕ್ಷಣ ಪಡೆಯುತ್ತವೆ. ಇದು ಭಾರತಕ್ಕೆ ಅತಿ ಅವಶ್ಯವಿರುವ ಪ್ರಾಥಮಿಕ ಸುಧಾರಣೆ'. ಅಗತ್ಯವಿದ್ದರೆ ಎಲ್ಲ ಮಕ್ಕಳಿಗೂ ಒಂದನೇ ತರಗತಿಯಿಂದ ಇಂಗ್ಲಿಷನ್ನೂ ಕನ್ನಡದ ಜೊತೆಗೇ ಒಂದು ಭಾಷೆಯನ್ನಾಗಿ ಕಲಿಸೋಣ ; ಆದರೆ ಕರ್ನಾಟಕದಲ್ಲಿ ಬೋಧನೆಯ ಮಾಧ್ಯಮ ಮಾತ್ರ ಕನ್ನಡವೇ ಆಗಿರಬೇಕು ಎಂಬ ಶಿಕ್ಷಣ ನೀತಿ ಜಾರಿಯಾಗಬೇಕು. ನಮ್ಮ ಭಾಷಾ ಚಳವಳಿಗಳು ಸಂಘಟಿತವಾಗಿ ಈ ಕೆಲಸ ಶುರು ಮಾಡಬೇಕಾಗಿದೆ. ಸರ್ಕಾರಿ ಶಾಲೆಗಳನ್ನು ನಾವು ಹೊಸ ಕಾಲಕ್ಕೆ ಸಜ್ಜುಗೊಳಿಸದಿದ್ದರೆ, ನಮ್ಮ ಗ್ರಾಮಗಳ ಹುಡುಗ ಹುಡುಗಿಯರಿಗೆ ಮುಂದೆ ಭವಿಷ್ಯವೇ ಇಲ್ಲದಂತಾಗುವ ಭೀಕರ ಸ್ಥಿತಿಯನ್ನು ನಾವು ಮನಗಾಣಲೇಬೇಕು.

ಸಾಮಾಜಿಕ ನ್ಯಾಯದ ಜವಾಬ್ದಾರಿ

ಈ ಜಾಗತೀಕರಣದ ಕಾಲದಲ್ಲಿ ನಮ್ಮ ಸರ್ಕಾರಗಳು ಜನರಿಗೆ ಒದಗಿಸಬಹುದಾಗಿದ್ದ ಅಷ್ಟಿಷ್ಟು ನೌಕರಿಗಳನ್ನೂ ಖಾಸಗಿಯವರಿಗೆ ವಹಿಸಿಕೊಟ್ಟು ತಮ್ಮ ಸಣ್ಣ ಪುಟ್ಟ ಜವಾಬ್ದಾರಿಗಳಿಂದಲೂ ತಪ್ಪಿಸಿಕೊಳ್ಳುತ್ತಿವೆ. ಇನ್ನು ೧೦ ವರ್ಷಗಳಲ್ಲಿ ಬಡಗಿ, ಕಮ್ಮಾರ, ಚಮ್ಮಾರ, ನೇಕಾರ, ಅಗಸರ ಮಕ್ಕಳಿಗಾಗಲೀ, ದಲಿತ, ರೈತರ ಮಕ್ಕಳಿಗಾಗಲೀ ಯಾವುದೇ ನೌಕರಿಯೂ ಸಿಗದೆ ಭೀಕರ ಅಸಮಾನತೆಯ ಯುಗ ಆರಂಭವಾಗುತ್ತದೆ. ಶ್ರೀಮಂತರು ಮತ್ತು ಬಡವರ ಮಧ್ಯೆ ಇಷ್ಟೊಂದು ದೊಡ್ಡ ಕಂದರ ನಿರ್ಮಾಣವಾದರೆ, ಅಂಥ ಸಮಾಜ ನರಕಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ. ಉತ್ತಮ ಶಿಕ್ಷಣ, ಆಸ್ಪತ್ರೆ, ಜೀವರಕ್ಷಕ ಔಷಧಿಗಳು ಬಡವರಿಗೆ ಸಿಗುತ್ತಲೇ ಇಲ್ಲ. ನಾವು ಯಾವು ದಿಕ್ಕಿನಲ್ಲಿ ಚಲಿಸುತ್ತಿದ್ದೇವೆ ?

ಚುನಾವಣೆಗಳಿಗೆ ಚಿಕಿತ್ಸೆ ಬೇಕು

ನಮ್ಮ ಪ್ರತಿನಿಧಿಗಳನ್ನು ಆರಿಸುವ ಚುನಾವಣೆಗಳನ್ನು ಜನಪರ ಚಳವಳಿಗಳ ಭಾಗವಾಗಿ ಕಾಣದೆ ಅದೊಂದು ಯಾಂತ್ರಿಕ ಆಚರಣೆಯಂತೆ, ಅನಿವಾರ್ಯ ಪೀಡೆಯೆಂಬಂತೆ ಕಂಡು ನಮ್ಮೆಲ್ಲ ಚಳವಳಿಗಳೂ ತಪ್ಪು ಮಾಡಿವೆ. ನಮ್ಮ ರಾಜಕೀಯ ಪಕ್ಷಗಳು ಅಭ್ಯಾಸಬಲದಿಂದೆಂಬಂತೆ ಚುನಾವಣೆಯ ಜಾತ್ರೆಗೆ ಬರುವುದು, ಮುಗಿದ ನಂತರ ವಿಧಾನಸೌಧಕ್ಕೆ ತೆರಳುವುದು, ಮತ್ತೆ ಸರ್ಕಾರ ಬಿದ್ದ ನಂತರ

ಸರ್ವೋದಯ ಕರ್ನಾಟಕದ ಆಶಯ ಹಾಗೂ ಸಂವಿಧಾನ ಬಿಡುಗಡೆ

ಊರಿಗೆ ಮರಳಿ ಮತ ಕೇಳುವುದು.... ಇವನ್ನೆಲ್ಲಾ ನೋಡಿ ನೋಡಿ ಜನರಿಗೆ ವಿಷಾದ, ದುಃಖ, ದಿಗ್ಭ್ರಮೆ, ಸಿನಿಕತೆ ಹಾಗೂ ವಿಚಿತ್ರ ಅಸಹಾಯಕತೆ ಆವರಿಸತೊಡಗಿದೆ. ಆದ್ದರಿಂದಲೇ ಚುನಾವಣೆಯ ಸುಧಾರಣೆಯ ಪ್ರಶ್ನೆ ಬಹಳ ಮುಖ್ಯವಾದುದು. ನಮ್ಮ ರಾಜಕೀಯ ಪಕ್ಷಗಳು ಹಣ, ಹೆಂಡ, ಜಾತಿಗಳ ಮೂಲಕ ನಡೆಸುವ ಚಿಲ್ಲರೆ ವ್ಯಾಪಾರದಿಂದ ನಮ್ಮ ಜನರ ಅಮೂಲ್ಯ ಮತಕ್ಕೆ ಹಾಗೂ ಆತ್ಮಗೌರವಕ್ಕೆ ಭಯಂಕರ ಅವಮಾನ ಮಾಡುತ್ತಿವೆ. ನಮ್ಮ ಮತದಾರನೇ ಕೊನೆಯ ಪಕ್ಷ ಒಂದು ರೂಪಾಯಿಯನ್ನಾದರೂ ನೀಡಿ ತಾನೇ ಚುನಾವಣೆಯನ್ನು ನಿರ್ವಹಿಸುವ ರೀತಿ ಮಾಡಬೇಕಾಗಿದೆ. ಮೌನವಾಗಿರುವ, ನಿರ್ಲಿಪ್ತವಾಗಿರುವ ಜನಸಮುದಾಯದ ಶಕ್ತಿಯನ್ನು ಬಳಸಿಯೇ ಸರ್ವೋದಯ ರಾಜಕಾರಣ ಆರಂಭವಾಗಬೇಕಾಗಿದೆ. ಜನಸಮುದಾಯದ ಈ ಮೌನದ ಆಳದಲ್ಲಿರುವ, ತಮ್ಮನ್ನು ತಾವೇ ಆಳಿಕೊಳ್ಳುವ ತವಕವನ್ನೂ ನಾವು ಗಮನಿಸಬೇಕು. ಈ ಅಂಶವನ್ನು ಅಂಬೇಡ್ಕರ್ ಅವರು ಬಹಳ ಹಿಂದೆಯೇ ಗುರುತಿಸಿದ್ದರು : "ನಮ್ಮ ದೇಶದಲ್ಲಿ ರಾಜಕೀಯಾಧಿಕಾರವು ಕೆಲವೇ ಜನರ ಸ್ವತ್ತಾಗಿದ್ದು ಇನ್ನುಳಿದ ಬಹುಸಂಖ್ಯಾತರು ಪಶುಗಳಂತೆ ಜೀವಿಸುತ್ತಿದ್ದಾರೆ ಎಂಬ ಸಂಗತಿಯನ್ನು ಒತ್ತಿ ಹೇಳಬೇಕಾಗಿಲ್ಲ. ಅಧಿಕಾರವು ಕೆಲವೇ ಕೆಲವರ ಸ್ವತ್ತಾಗಿರುವ ಕಾರಣ ಬಹುಜನರಿಗೆ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವ ಅವಕಾಶವೂ ಇಲ್ಲದಂತಾಗಿದೆ. ಪದದಲಿತರಾದ ಈ ಬಹುಜನರು ತಮ್ಮನ್ನು ತಾವೇ ಆಳಿಕೊಳ್ಳುವ ಅವಕಾಶವನ್ನು ಅರಸುವ ತವಕದಲ್ಲಿದ್ದಾರೆ".

ಅನುಭವ ಮಂಟಪ

ಚುನಾವಣೆಯ ರಾಜಕಾರಣದಿಂದ ಹೊರಗೆ ಹಲವಾರು ವರ್ಷಗಳಿಂದ ತಮ್ಮ ಪಾಡಿಗೆ ತಾವು ಜನರ ಕೆಲಸ ಮಾಡುತ್ತಿರುವವರ ಕಡೆಗೂ ನಾವು ನೋಡಬೇಕಾಗಿದೆ. ನಮ್ಮ ಕೆರೆಗಳಿಗೆ ಜೀವ ತುಂಬಲು ಭಾರತದುದ್ದಕ್ಕೂ ಅಡ್ಡಾಡುತ್ತಿರುವ ರಾಜೇಂದ್ರಸಿಂಗ್, ಆದಿವಾಸಿಗಳ ಹಕ್ಕಿಗಾಗಿ ಹೋರಾಡುತ್ತಿರುವ ಮೇಧಾ ಪಾಟ್ಕರ್, ಸಹಕಾರ ಚಳವಳಿಯ ಮೂಲಕ ಗ್ರಾಮಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡಿರುವ ಅಣ್ಣಾ ಹಜಾರೆ, ಹಾಲಿನ ಉತ್ಪಾದನೆಯ ಹೊಸ ಮಾರ್ಗ ತೋರಿದ ಕುರಿಯನ್, ಆರೋಗ್ಯದ ಬಗೆಗೆ ಅರಿವು ಮೂಡಿಸುವ ಬಾಬಾ ಆಮ್ಟೆ, ಅನಕ್ಷರಸ್ಥ ರೈತರಲ್ಲಿ ತಮ್ಮ ಹಕ್ಕುಗಳ ಬಗ್ಗೆ ಎಚ್ಚರ ಮೂಡಿಸಿದ ಪ್ರೊ॥ ನಂಜುಂಡಸ್ವಾಮಿ, ದಲಿತರನ್ನು ಸಂಘಟಿಸಿದ ಪ್ರೊ॥ ಬಿ. ಕೃಷ್ಣಪ್ಪ –ಇಂಥ ನಿಜವಾದ ಜನನಾಯಕರ ಮಾದರಿಗಳನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಅಧಿಕಾರ ರಾಜಕಾರಣದ ಹೊರಗೆ ಸ್ವಾರ್ಥವಿಲ್ಲದೆ ಜನರ ಕೆಲಸ ಮಾಡುತ್ತಿರುವ ನಮ್ಮ ಸುತ್ತ ಮುತ್ತಲಿನ ನಾಯಕರ, ಜ್ಞಾನಿಗಳ ಅನುಭವವನ್ನು ಸರ್ವೋದಯ ಕರ್ನಾಟಕ ಒಳಗೊಳ್ಳಬೇಕಾಗಿದೆ. ನಮ್ಮಲ್ಲಿರುವ ಇಂಥ ನೂರಾರು ಅನುಭವಶಾಲಿಗಳ ಜ್ಞಾನವನ್ನು ನಾವು ವ್ಯರ್ಥಮಾಡದೆ ಬಳಸಿಕೊಳ್ಳಲು, ಪಕ್ಷದಲ್ಲಿ 'ಅನುಭವ ಮಂಟಪ' ಎಂಬ ವೇದಿಕೆಯನ್ನು ಸ್ಥಾಪಿಸಬೇಕು. ಕೃಷಿ, ನೀರಾವರಿ, ಶಿಕ್ಷಣ, ಆರೋಗ್ಯ, ದಲಿತ ಸಮಸ್ಯೆ, ಸಾಮಾಜಿಕ ನ್ಯಾಯ, ಮೀಸಲಾತಿ, ಮಹಿಳಾ ಸಮಸ್ಯೆ, ವಿಜ್ಞಾನ, ಪಂಚಾಯತ್ ವ್ಯವಸ್ಥೆ, ಪರಿಸರ, ಸಾಹಿತ್ಯ, ಕಲೆ, ಕೋಮು ಸಾಮರಸ್ಯ, ನಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಕಾಪಾಡುವುದು... ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡಿ ಅನುಭವವಿರುವ ತಜ್ಞರೇ ಪಕ್ಷದ ಕಾರ್ಯಕ್ರಮಗಳನ್ನು ರೂಪಿಸಬೇಕೆಂಬುದು ಅನುಭವ ಮಂಟಪದ ಆಶಯ.

ನಮ್ಮ ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳು, ನಿವೃತ್ತರಾಗಿರುವ ಆಡಳಿತತಜ್ಞರು, ಅನೇಕ ಪ್ರಯೋಗಗಳನ್ನು ಮಾಡುತ್ತಿರುವ ರೈತರು, ಸಣ್ಣ ಉದ್ಯಮಿಗಳು ಇವರನ್ನೆಲ್ಲಾ ನಮ್ಮ ರಾಜಕಾರಣ ಹಾಗೂ ಸರ್ಕಾರಗಳು ಲೆಕ್ಕಕ್ಕೆ ತೆಗೆದುಕೊಳ್ಳುತ್ತಲೇ ಇಲ್ಲ. ನಮ್ಮ ವಿಧಾನ ಪರಿಷತ್ತುಗಳಿಗೆ ಕನಿಷ್ಠ ಈ ವಲಯಗಳ ಜ್ಞಾನಿಗಳನ್ನೂ ಆಯ್ಕೆ ಮಾಡುತ್ತಿಲ್ಲ. ಹೀಗೆ ವಿವಿಧ ಕ್ಷೇತ್ರಗಳ ಅನುಭವಶಾಲಿಗಳನ್ನು ಆಧರಿಸಿದ ಅನುಭವ ಮಂಟಪವನ್ನು ಸರ್ವೋದಯ ಕರ್ನಾಟಕ ರೂಪಿಸುತ್ತದೆ. ಅಧಿಕಾರ ಹಿಡಿಯುವುದಷ್ಟೇ ಮುಖ್ಯವಲ್ಲ; ಅಧಿಕಾರದ ಹೊರಗೆ ಈ ಎಲ್ಲಾ ಅನುಭವಗಳನ್ನು ಒಗ್ಗೂಡಿಸಿ ಮಾಡಬೇಕಾದ ಸಮಾಜವನ್ನು ಕಟ್ಟುವ ಕೆಲಸವೂ ಬಹುಮುಖ್ಯವಾದುದು. ಜೊತೆಗೆ ನಮ್ಮ ಲಕ್ಷಾಂತರ ಜನ ನಿವೃತ್ತ ಪ್ರಜೆಗಳಿಗೆ ಬಂದಿರುವ 'ತಾವು ವ್ಯರ್ಥ' ಎಂಬ ಭಾವನೆಯನ್ನು ಹೋಗಲಾಡಿಸಬೇಕಾಗಿದೆ. ಅವರಲ್ಲಿರುವ ಆಡಳಿತ ಜ್ಞಾನ, ಸಮಾಜ ನಿರ್ವಹಣೆಯ ಜ್ಞಾನ ಮರುಬಳಕೆಯಾಗಬೇಕಾಗಿದೆ. ಸಮಾನತೆಗಾಗಿ ಹಸಿದಿರುವ, ನಿಜಕ್ಕೂ ಜಾತ್ಯತೀತರಾದ ತರುಣ, ತರುಣಿಯರಿಗೆ ಕುವೆಂಪು ಅವರ 'ಗುಡಿ, ಮಸೀದಿ, ಚರ್ಚುಗಳ ಬಿಟ್ಟು ಬನ್ನಿ' ಸಂದೇಶವನ್ನು ಮನದಟ್ಟು ಮಾಡಿ ಅವರ ಶಕ್ತಿಯನ್ನು ಸರಿದಾರಿಯಲ್ಲಿ ಹರಿಸಬೇಕಾಗಿದೆ. ಹಾಗೆಯೇ ನಮ್ಮ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ನಗರಗಳ ಸುಮಾರು ಒಂದು ಕೋಟಿ ವಿದ್ಯಾವಂತ ಅಸಂಘಟಿತ ಕಾರ್ಮಿಕರ ಜೀವನ ಹಾಗೂ ಭವಿಷ್ಯದ ಭದ್ರತೆಗೆ ಹಾಗೂ ಅವರ ವಿಮಾ ಯೋಜನೆಗಳಿಗೆ ಕಾರ್ಯಕ್ರಮ ರೂಪಿಸಬೇಕಾಗಿದೆ.

ನಮ್ಮ ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳು, ನಿವೃತ್ತರಾಗಿರುವ ಆಡಳಿತತಜ್ಞರು, ಅನೇಕ ಪ್ರಯೋಗಗಳನ್ನು ಮಾಡುತ್ತಿರುವ ರೈತರು, ಸಣ್ಣ ಉದ್ಯಮಿಗಳು ಇವರನ್ನೆಲ್ಲಾ ನಮ್ಮ ರಾಜಕಾರಣ ಹಾಗೂ ಸರ್ಕಾರಗಳು ಲೆಕ್ಕಕ್ಕೆ ತೆಗೆದುಕೊಳ್ಳುತ್ತಲೇ ಇಲ್ಲ. ವಿವಿಧ ಕ್ಷೇತ್ರಗಳ ಅನುಭವಶಾಲಿಗಳನ್ನು ಆಧರಿಸಿದ ಅನುಭವ ಮಂಟಪವನ್ನು ಸರ್ವೋದಯ ಕರ್ನಾಟಕ ರೂಪಿಸುತ್ತದೆ.

ಸರ್ವರಿಗೆ ಸಮಪಾಲು... ಸರ್ವರಿಗೆ ಸಮಬಾಳು

'ಶಕ್ತಿಶಾಲಿಗಳಿಗೆ ಎಷ್ಟು ಅವಕಾಶಗಳಿವೆಯೋ ಅಷ್ಟೇ ಅವಕಾಶ ದುರ್ಬಲರಿಗೂ ಇದ್ದಾಗ ಮಾತ್ರ ಅದು ಪ್ರಜಾಪ್ರಭುತ್ವವಾಗುತ್ತದೆ' ಎಂದ ಗಾಂಧೀಜಿಯವರ ಮಾತನ್ನು ಈಗಿನ ಸನ್ನಿವೇಶದಲ್ಲಿ ಮತ್ತೆ ನೆನಪಿಸಿಕೊಳ್ಳಬೇಕು. ಗ್ರಾಮಗಳ ಹಕ್ಕನ್ನು ನಗರಗಳ ಬೆಳವಣಿಗೆ ಕಸಿದುಕೊಳ್ಳುತ್ತಿದೆ. ಗ್ರಾಮದ ಬಡಮಕ್ಕಳು ಹಾಗೂ ನಗರದ ಬಡಮಕ್ಕಳಿಬ್ಬರೂ ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಆಹಾರ ಉತ್ಪಾದನೆಯ ಭೂಮಿಯನ್ನು ಕೈಗಾರಿಕೆಗಳು ವಶಮಾಡಿಕೊಳ್ಳುತ್ತಿವೆ. ನಮ್ಮ ರೈತರ ಬಿತ್ತನೆಯ ಬೀಜದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ನಮ್ಮ ಹಳ್ಳಿಗಳಲ್ಲಿ ಕುಡಿಯುವ ನೀರೇ ಇರದೆ ಖಾಯಿಲೆಗಳು ಹೆಚ್ಚಾಗುತ್ತಿವೆ. ಗ್ರಾಮೀಣ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಗರ್ಭಕೋಶದ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಗ್ರಾಮೀಣ ಜನಕ್ಕೆ ಇನ್ನೂ ಮತದಾನದ ಹಕ್ಕು ಇದೆ ಎಂಬ ಕಾರಣಕ್ಕೆ ನಮ್ಮ ಹಳ್ಳಿಗಳ ಬಗ್ಗೆ ಅಷ್ಟಿಷ್ಟು ಗಮನವನ್ನು ಆಳುವವರು ಕೊಡುತ್ತಿದ್ದಾರೆ, ಅಷ್ಟೆ.

ಹೀಗಾಗಿ, ಸುಮ್ಮನೆ ಮೂಕವಾಗಿ ಎಲ್ಲವನ್ನೂ ನೋಡುತ್ತಿರುವ, ಒಟ್ಟು ಜನಸಂಖ್ಯೆಯಲ್ಲಿ ಮುಕ್ಕಾಲು ಭಾಗದಷ್ಟಿರುವ ಜನ ಸಮುದಾಯವನ್ನು ತಲುಪುವುದು ಹಾಗೂ ತೊಡಗಿಸುವುದು ನಿರ್ಮಾಣ ರಾಜಕಾರಣದ ಮುಖ್ಯ ಗುರಿಯಾಗಬೇಕಾಗಿದೆ. 'ರಾಜಕಾರಣವೆಂದರೆ, ಐದು ವರ್ಷಕ್ಕೊಮ್ಮೆ ತಲೆಗೆ ಐನೂರು ರೂಪಾಯಿ ಚೆಲ್ಲಿ ಅಧಿಕಾರ ಹಿಡಿಯುವ ಆಟ ಅಲ್ಲ; ಅದು ಊರು ಕಟ್ಟುವ ಪವಿತ್ರ ಕರ್ತವ್ಯ' ಎಂಬ ತಿಳಿವಳಿಕೆ ಬೆಳೆಸಬೇಕಾಗಿದೆ. ಈಗಿನ ರಾಜಕೀಯ ಪಕ್ಷಗಳಿಗೆ ರಾಜಕಾರಣವನ್ನು ಮೀರಿ ಒಂದು ಸಮಾಜ ಕಟ್ಟುವ ಶಕ್ತಿಯೇ ಇಲ್ಲ. ಆದರೆ ಒಂದು ರಾಷ್ಟ್ರ ಕಟ್ಟಲು ರಾಜಕಾರಣವನ್ನು ಮೀರಿ ನೋಡಲೇಬೇಕು. ರಾಜಕಾರಣ ಎನ್ನುವುದು ಜಾತಿಪದ್ಧತಿ, ವರದಕ್ಷಿಣೆಯ ಪಿಡುಗು, ಅಸ್ಪೃಶ್ಯತೆ, ಗಂಡು–ಹೆಣ್ಣುಗಳ ನಡುವೆ ಭೇದ, ಅಸಮಾನತೆ, ಜನಸಂಖ್ಯಾ ನಿಯಂತ್ರಣ, ಶಿಕ್ಷಣ ಇತ್ಯಾದಿಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಸಾಧನ ಎಂಬುದನ್ನು ನಮ್ಮ ಪಕ್ಷಗಳು ಹೆಚ್ಚುಕಡಿಮೆ ಮರೆತೇಬಿಟ್ಟಿವೆ.

ಆದ್ದರಿಂದ ಎಲ್ಲರನ್ನೂ ತಲುಪುವ, ಒಳಗೊಳ್ಳುವ ಸರ್ವರ ಉದಯವಾಗುವ ನಿರ್ಮಾಣ ರಾಜಕಾರಣವನ್ನು ನಾವಿಂದು ಆರಂಭಿಸಲೇಬೇಕಾಗಿದೆ. ಬುದ್ಧ, ಬಸವ, ಗಾಂಧೀಜಿಯವರ ಸ್ಫೂರ್ತಿಯಲ್ಲಿ ಅಂಬೇಡ್ಕರ್ ಹಾಗೂ ಲೋಹಿಯಾ ಮಾರ್ಗದ ಜೊತೆಗೆ ಸಮಾನತೆ, ಐಕ್ಯತೆಗಾಗಿ ತುಡಿಯುವ ಎಲ್ಲಾ ಚಿಂತನಾ ಪರಂಪರೆಗಳನ್ನು ಬೆಸೆದು ಸರ್ವೋದಯ ಸಾಧಿಸಲು ಸರಳ ಮನಸ್ಸಿನಿಂದ ಸಿದ್ಧರಾಗಬೇಕಾಗಿದೆ. □

ವ್ಯಕ್ತಿತ್ವ

'ನಿಮ್ಮ ಮೇಲೆ ನಂಬಿಕೆ ಇರಲಿ. ನ್ಯಾಯ ನಮ್ಮ ಕಡೆಗೆ ಇರುವಾಗ, ನಾವು ಯುದ್ಧದಲ್ಲಿ ಸೋಲುವುದು ಸಾಧ್ಯವೇ ಇಲ್ಲ. ಇದರಲ್ಲಿ ಲೌಕಿಕವಾದ ಅಥವಾ ಸಾಮಾಜಿಕವಾದ ಯಾವ ಸ್ವಾರ್ಥವೂ ಇಲ್ಲ. ಏಕೆಂದರೆ, ನಾವು ಅಧಿಕಾರ ಅಥವಾ ಐಶ್ವರ್ಯಕ್ಕಾಗಿ ಹೋರಾಡುತ್ತಿಲ್ಲ. ಈ ಯುದ್ಧ ಸ್ವಾತಂತ್ರ್ಯಕ್ಕಾಗಿ; ಈ ಯುದ್ಧ ಮನುಷ್ಯನ ವ್ಯಕ್ತಿತ್ವದ ಘನತೆಯ ಹಕ್ಕಿಗಾಗಿ.' ಈ ಹೊತ್ತಿನ ದಲಿತರು ಲೌಕಿಕ ಸುಖ ಮತ್ತು ರಾಜಕೀಯ ಅಧಿಕಾರದಿಂದ ವಂಚಿತರಾಗಿ ಉಳಿಯಲು ಇಚ್ಛಿಸುವುದಿಲ್ಲ. ಆದರೆ, ಅಂಬೇಡ್ಕರ್‌ರ ಈ ಮಾತುಗಳು ದಲಿತರು ಸ್ವಾಭಿಮಾನ ಮತ್ತು ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತದೆ.

ಮೂಲ :
ಎಲಿನೊರ್ ಝೆಲಿಯಟ್
ಅನು : ಬಿ.ಯು.ಸುಮಾ

ಅಂಬೇಡ್ಕರ್ ಎಂದರೆ...

ಘಟನೆ ೧ : ಇಸವಿ : ೧೯೯೪, ಸ್ಥಳ - ತಮಿಳುನಾಡಿನ ಚೆಂಗೈ ಜಿಲ್ಲೆಯ ಕಾರ್ನ್ನ ಎಂಬ ಹಳ್ಳಿ. ಒಂದು ಕಾಲಕ್ಕೆ ದಲಿತರದಾಗಿದ್ದ ಆದರೆ, ಯಾವಾಗಲೋ ಮೇಲುಜಾತಿಯ ವ್ಯಕ್ತಿಯೊಬ್ಬನಿಗೆ ವರ್ಗಾಯಿಸಲಾಗಿದ್ದ ಭೂಮಿಯ ಮೇಲೆ, ದಲಿತರು ಅಂಬೇಡ್ಕರ್‌ರ ಪ್ರತಿಮೆಯನ್ನು ಸ್ಥಾಪಿಸಿದರು. ಅದು, ಆ ಭೂಮಿಯ ಮೇಲೆ ದಲಿತರು ಅಧಿಕೃತವಾಗಿ ಹಕ್ಕನ್ನು ಸಾಧಿಸುವ ಸಂಕೇತವಾಗಿತ್ತು. ಆದರೆ, ಅದೇ ರಾತ್ರಿ ಪ್ರತಿಮೆ ನೆಲಕ್ಕುರುಳಿತ್ತು. ಐದು ದಿನಗಳ ನಂತರ, ರೊಚ್ಚಿಗೆದ್ದ ಸಾವಿರಾರು ದಲಿತರು ಈ ಕೃತ್ಯವನ್ನು ಪ್ರತಿಭಟಿಸಿದರಾದರೂ, ಪೊಲೀಸರಿಂದ ಹೊಡೆತಗಳು ಬಿದ್ದು, ಹಲವು ಜನ ಬಂಧನಕ್ಕೊಳಗಾದರು. ಕೊನೆಗೆ ಈ ಘಟನೆ ಯಾವ ಮಟ್ಟಕ್ಕೆ ಹೋಯಿತೆಂದರೆ, ಬಿಹಾರಿನ ಜನತಾದಳ ಪಕ್ಷದ ನೇತಾರ, ರಾಮ್ ವಿಲಾಸ್ ಪಾಸ್ವಾನ್ ಮತ್ತು ಅಂಬೇಡ್ಕರ್ ರ ಮೊಮ್ಮಗ, ಪ್ರಕಾಶ್ ಅಂಬೇಡ್ಕರ್ ಈ ಹಳ್ಳಿಗೆ ಬಂದು ಡಿಸೆಂಬರ್ ೬ ರಂದು (ಅಂಬೇಡ್ಕರ್‌ರ ಪುಣ್ಯತಿಥಿ) ಪ್ರತಿಮೆಯನ್ನು ಪುನರ್ ಸ್ಥಾಪಿಸುವ ವಾಗ್ದಾನ ನೀಡಿದ ನಂತರ, ರೊಚ್ಚಿಗೆದ್ದಿದ್ದ ದಲಿತ ಸಮೂಹ ತಣ್ಣಗಾಯಿತು.

ಘಟನೆ ೨ : ಇಸವಿ : ೧೯೯೩, ಸ್ಥಳ - ಕರ್ನಾಟಕದ ರಾಜಧಾನಿ ಬೆಂಗಳೂರು. ಹಲವು ಕಾಲೇಜ್ ವಿದ್ಯಾರ್ಥಿ ಗಳು ಡಾ॥ಅಂಬೇಡ್ಕರರ ಪ್ರತಿಮೆಯ ಮೇಲೆ ಬೀರ್ ಸುರಿದು, ಕನ್ನಡಕವನ್ನು ಕಿತ್ತೆಸೆದಿದ್ದರು. ಈ ವಿದ್ಯಾರ್ಥಿಗಳ ಗುಂಪಿನಲ್ಲಿ, ರಾಜ್ಯದ ಮಂತ್ರಿಯೊಬ್ಬರ ಮಗನೂ ಸೇರಿದ್ದ. ಪ್ರತಿಭಟನೆ ಯಾವ ಹಂತಕ್ಕೆ ಮುಟ್ಟಿತೆಂದರೆ, ಮಗ ಮಾಡಿದ ಈ ಕೃತ್ಯಕ್ಕೆ ಆ ಮಂತ್ರಿ ರಾಜೀನಾಮೆ ನೀಡ ಬೇಕಾಯಿತು. ಕೊನೆಗೆ ಸ್ವತಃ ಮುಖ್ಯಮಂತ್ರಿಯೇ ಬಂದು ಶುಚಿಮಾಡಿದ ಪ್ರತಿಮೆಗೆ ಮಾಲಾರ್ಪಣೆ ಮಾಡಿದ್ದಲ್ಲದೆ, ದಲಿತರಿಗೆ ಉಚಿತ ನಿವೇಶನಗಳನ್ನು ನೀಡಲಾಗುವುದೆಂದು ಪ್ರಕಟಿಸಬೇಕಾಯಿತು. ಇಡೀ ಘಟನೆಯ ದೊಡ್ಡ ವ್ಯಂಗ್ಯ ಏನೆಂದರೆ, ರಾಜೀನಾಮೆ ನೀಡಿದ ರಾಜ್ಯದ ಮಂತ್ರಿ ಬುಡಕಟ್ಟು ಸಮುದಾಯದವರಾಗಿದ್ದರು. ಹಾಗೂ ಈ ಕೃತ್ಯವನ್ನು ಎಸಗಿದ ಹುಡುಗರು ದಲಿತರೊಬ್ಬರು ಸ್ಥಾಪಿಸಿದ 'ಅಂಬೇಡ್ಕರ್ ಮೆಡಿಕಲ್ ಕಾಲೇಜ್'ನ ವಿದ್ಯಾರ್ಥಿಗಳಾಗಿದ್ದರು. ಈ ವಿದ್ಯಾರ್ಥಿಗಳನ್ನು ೩ ವರ್ಷಗಳ ಕಾಲ ಕಾಲೇಜಿನಿಂದ ಅಮಾನತುಗೊಳಿಸಲಾಯಿತು.

ಘಟನೆ ೩ : ಇಸವಿ : ೧೯೯೭, ಸ್ಥಳ - ಮುಂಬಯಿಯ ರಮಾಬಾಯಿ ನಗರ. ಇಲ್ಲಿನ ಸ್ಲಂನಲ್ಲಿ ನಿಲ್ಲಿಸಲಾಗಿದ್ದ ಅಂಬೇಡ್ಕರ್ ಪ್ರತಿಮೆಗೆ ಯಾರೋ ಚಪ್ಪಲಿಯ ಹಾರವನ್ನು ಹಾಕಿದರು. ಬೆಳಗಾಗುವಷ್ಟರಲ್ಲಿ ಸಾವಿರಾರು ದಲಿತರು ಇದನ್ನು ಪ್ರತಿಭಟಿಸಲಾರಂಭಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಿದ್ದರೂ, ಪೊಲೀಸರು ಗುಂಪಿನತ್ತ ಗುಂಡು ಹಾರಿಸಿದರು ಎಂದು ಹೇಳಲಾಗಿದೆ. ಇದು ೧೧ ಜನರ ಸಾವಿಗೆ ಕಾರಣವಾಯಿತು. ಈ ಘಟನೆಗೆ ಎರಡು ರೀತಿಯ ಪ್ರತಿಕ್ರಿಯೆ ಬಂದಿತು -ಪೊಲೀಸರು ನಡೆಸಿದ ದಾಳಿಯನ್ನು ಅಧ್ಯಯನ ಮಾಡಿ, ಶೀಘ್ರವಾಗಿ ವರದಿ ನೀಡಲು ನಗರಾಡಳಿತ ಮಂಡಳಿ ಒಂದು ಸಮಿತಿಯನ್ನು ರಚಿಸಿತು. ಹಾಗೂ, ಸಾವಿರಾರು ದಲಿತರು ಇಡೀ ನಗರದ ಜೀವನವನ್ನು ಸ್ತಬ್ಧಗೊಳಿಸಿದರು. ನಗರದ ಹೊರಗಿನ ರೈಲುಗಳನ್ನು ಕೂಡ ನಿಲ್ಲಿಸಲಾಯಿತೆಂದು ಕೇಳಿದೆ.

ಈ ಘಟನೆಗಳನ್ನು ಯಾಕೆ ನೆನಪಿಸಿಕೊಳ್ಳುತ್ತಿದ್ದೇನೆ ಎಂದರೆ, ಘಟನೆಯ ನಂತರದ ಪರಿಣಾಮಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, 'ಅಂಬೇಡ್ಕರ್' ಎಂದರೆ ಏನು ಅಥವಾ ಏನೆಲ್ಲಾ ಎಂಬುದು ಅರ್ಥವಾಗುತ್ತದೆ. ಆದ್ದರಿಂದ, ನಾನು ಈ ಪ್ರತಿಮೆಯನ್ನು ನೋಡುತ್ತಿದ್ದೇನೆ... ಅಡಿಯಿಂದ ಮುಡಿಯವರೆಗೆ; ಮುಡಿಯಿಂದ ಅಡಿಯವರೆಗೆ.

-೧-೦-

ಅಂಬೇಡ್ಕರ್‌ರ ಬದುಕಿನ ಜೊತೆಗೇ ತಳುಕು ಹಾಕಿಕೊಂಡಿರುವ ಮಹಾರಾಷ್ಟ್ರ, ಅವರ ಅನೇಕ ಪ್ರತಿಮೆಗಳನ್ನು ಕಂಡಿದೆ. ಈ ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ದಲಿತರ ಪ್ರದರ್ಶನ, ಮೆರವಣಿಗೆಗಳು ನಡೆದಿವೆ. ಆದರೆ, ಅಂಬೇಡ್ಕರ್‌ರ ವ್ಯಕ್ತಿತ್ವದ ಅಗಾಧ ಶಕ್ತಿ ಏನು ಎಂಬುದನ್ನು ಎರಡು ಮುಖ್ಯವಾದ ಘಟನೆಗಳು ತಿಳಿಸುತ್ತವೆ. ಬೌದ್ಧರಾಗಿ ಮತಾಂತರ ಹೊಂದಿರುವ ಅನೇಕ ದಲಿತರು ಅಂಬೇಡ್ಕರ್‌ರ ನೆನಪಿಗೆ ಆದ ಅನ್ಯಾಯವನ್ನು ಪ್ರತಿಭಟಿಸಲು ಎರಡು ಬಾರಿ ಬೃಹತ್ ಸಂಖ್ಯೆಯಲ್ಲಿ ಬೀದಿಗಿಳಿದಿದ್ದಾರೆ.

ಮೊದಲನೆಯದಾಗಿ, ಔರಂಗಾಬಾದ್‌ನ ಮರಾಠವಾಡ ವಿಶ್ವವಿದ್ಯಾಲಯವನ್ನು ಡಾ॥ ಅಂಬೇಡ್ಕರ್ ವಿಶ್ವವಿದ್ಯಾಲಯವೆಂದು ಪುನರ್ ನಾಮಕರಣ ಮಾಡಲು ಒತ್ತಾಯಿಸಿ ನಡೆದ 'ಲಾಂಗ್ ಮಾರ್ಚ್'. ದಲಿತರ ಈ ಒತ್ತಾಯದ ಹಿಂದೆ ಒಂದು ತರ್ಕವಂತು ಇತ್ತು. ಏಕೆಂದರೆ, ಆಗ ಹೈದರಾಬಾದಿನ ನಿಜಾಮರ ರಾಜ್ಯವಾಗಿದ್ದ

ಮರಾಠವಾಡದಲ್ಲಿ ಮೊದಲ ಇಂಗ್ಲಿಷ್ ಮತ್ತು ಮರಾಠಿ ಕಾಲೇಜನ್ನು (೧೯೫೮) ಸ್ಥಾಪಿಸಿದ್ದು ಡಾ॥ ಅಂಬೇಡ್ಕರ್. ಹಲವು ವರ್ಷದ ನಂತರ, ಮರಾಠವಾಡ ವಿಶ್ವವಿದ್ಯಾಲಯ ಸ್ಥಾಪಿತವಾದಾಗ, ಅಂಬೇಡ್ಕರ್‌ರ ಮಿಲಿಂದ ಕಾಲೇಜಿನ ಮುಕ್ಕಾಲು ಪಾಲು ಕಚೇರಿ ನೌಕರರು ಮತ್ತು ರಿಜಿಸ್ಟಾರ್ ನೇರವಾಗಿ ವಿಶ್ವವಿದ್ಯಾಲಯಕ್ಕೆ ವರ್ಗವಾದರು. ಈ ಕಾರಣಕ್ಕಾಗಿ, ಮರಾಠವಾಡ ವಿಶ್ವವಿದ್ಯಾಲಯವನ್ನು ಅಂಬೇಡ್ಕರ್ ವಿಶ್ವವಿದ್ಯಾಲಯ ಎಂದು ಪುನರ್ ನಾಮಕರಣ ಮಾಡಲು ದಲಿತರು ಪ್ರಬಲವಾದ ಪ್ರಚಾರವನ್ನು ಆರಂಭಿಸಿದರು. ಮೊದಲು ಕಾಂಗ್ರೆಸ್ ಸರ್ಕಾರ ಇದಕ್ಕೆ ಒಪ್ಪಿಗೆಯನ್ನೇನೂ ಕೊಟ್ಟಿತು. ಆದರೆ, ಇದರ ವಿರುದ್ಧ ಔರಂಗಬಾದ್ ಮತ್ತು ಮರಾಠವಾಡದ ಸುತ್ತಮುತ್ತ ತೀವ್ರವಾದ ಗಲಭೆ ಪ್ರಾರಂಭವಾದಾಗ (೧೯೭೮), ಸರ್ಕಾರ ತನ್ನ ನಿರ್ಧಾರವನ್ನು ಹಿಂತೆಗೆದುಕೊಂಡಿತು. ಇಲ್ಲಿ ಇನ್ನೊಂದು ಸಂಗತಿಯನ್ನು ಹೇಳಬೇಕು. ಮರಾಠವಾಡ, ಸರ್ಕಾರದಿಂದ ನಿರ್ಲಕ್ಷಕ್ಕೆ ಒಳಗಾಗಿದ್ದ ಪ್ರದೇಶ. ಇಲ್ಲಿ ಕಾಲೇಜನ್ನು ತೆರೆಯುವ ಮೂಲಕ, ಈ ಪ್ರದೇಶಕ್ಕೆ ಒಂದು ಪ್ರಾಮುಖ್ಯತೆ ದೊರಕಿತಲ್ಲದೆ, ಎಲ್ಲಾ ಜಾತಿಯ ಬಡ ವಿದ್ಯಾರ್ಥಿಗಳಿಗೆ ಈ ಸಂಸ್ಥೆ ಅಕ್ಷರಶಃ ಒಂದು ವರವಾಗಿ ಪರಿಣಮಿಸಿತು. ಕಾಲಾನಂತರ, ಹಲವಾರು ಕಾಲೇಜುಗಳು ಸ್ಥಾಪಿತವಾದಾಗ, ಔರಂಗಬಾದಿನ ಮೇಲುಜಾತಿಯವರು, ಮಿಲಿಂದ್ ಶಿಕ್ಷಣ ಸಂಸ್ಥೆಯ ಬಗ್ಗೆ ಕೃತಜ್ಞರಾಗಿದ್ದನ್ನು ಮರೆತುಬಿಟ್ಟರು. ೧೯೭೮ರ ಈ ಗಲಭೆ ಮಹಾರಾಷ್ಟ್ರದ ಇತಿಹಾಸದಲ್ಲೇ ಅತ್ಯಂತ ಸೂಕ್ಷ್ಮವಾಗಿತ್ತು.

'ನಾಮಾಂತರ್' ಪ್ರಚಾರ ಹಲವಾರು ವರ್ಷಗಳ ತನಕ ಮುಂದುವರೆಯಿತು. ಇದನ್ನು ಸಮರ್ಥಿಸಲು ಸಾವಿರಾರು ದಲಿತರೊಂದಿಗೆ ನಾಗಪುರದಿಂದ ಆಗಮಿಸಿದ ಜೋಗೇಂದ್ರ ಕಾವ್ಡೆ 'ಲಾಂಗ್ ಮಾರ್ಚ್'ನ ನೇತೃತ್ವ ವಹಿಸಿದರು. ೧೯೯೪ರಲ್ಲಿ ವಿಶ್ವವಿದ್ಯಾಲಯ, ಡಾ॥ ಬಾಬಾ ಸಾಹೇಬ್ ಮರಾಠವಾಡ ವಿಶ್ವವಿದ್ಯಾಲಯ ಎಂದು ಪುನರ್ ನಾಮಕರಣಗೊಂಡಿತು. ಈ ಲಾಂಗ್ ಮಾರ್ಚ್‌ನಲ್ಲಿ ಎಲ್ಲಾ ವರ್ಗದ ದಲಿತರು ಒಗ್ಗಟ್ಟಿನಿಂದ ಭಾಗವಹಿಸಿದರು. ಕಾಲೇಜೊಂದರಲ್ಲಿ ಅಧ್ಯಾಪಕರಾಗಿರುವ, ಜ್ಯೋತಿ ಲಾಂಜೆವರ್, ದಲಿತ ಸಮುದಾಯದ 'ಪ್ರತಿಯೊಬ್ಬ ಮಹಿಳೆ' – ಬಡವಿ, ಅನಕ್ಷರಸ್ಥೆ, ತನ್ನ ಮಕ್ಕಳಿಗಾಗಿ ಆತಂಕಿತೆ, ಕುಡುಕ ಗಂಡನ ಬಗ್ಗೆ ಕೋಪಿತೆ, ಒಂದು ದಿನದ ದುಡಿಮೆ ತಪ್ಪಿದರೆ, ಉಪವಾಸ ಬೀಳುವ ಈಕೆ 'ಲಾಂಗ್ ಮಾರ್ಚ್'ಗೆ ಬಂದ ಬಗ್ಗೆ ಬರೆಯುತ್ತಾರೆ. ಈ ಕವನದ ಕೊನೆಯ ಭಾಗ,

ನೋಡಿದ್ದೇನೆ, ನಾನು ನಿನ್ನನ್ನು
ಲಾಂಗ್ ಮಾರ್ಚ್‌ನ ಮುಂಭಾಗದಲ್ಲಿ
ನಿನ್ನ ಸೀರೆಯ ಅಂಚನ್ನು ಬಿಗಿದು ಸೊಂಟಕ್ಕೆ ಸಿಗಿಸಿ,
ಕೂಗುತ್ತಿದ್ದ ಗಟ್ಟಿಯಾಗಿ, 'ಹೆಸರನ್ನು ಬದಲಾಯಿಸಿ' ಎಂದು
ಮೇಲಕ್ಕೆತ್ತಿದ್ದ ನಿನ್ನ ಕೈಗಳ ಮೇಲೆ ಪೊಲೀಸರ ಲಾಠಿ ಏಟು
ತಲೆಬಾಗಿಸದೆ ಜೈಲಿಗೆ ಹೋಗುವಾಗ,
ಅದೆಂಥ ಹೆಮ್ಮೆ ಇತ್ತು ನಿನ್ನ ಮುಖದಲ್ಲಿ

೧೯೮೭ರಲ್ಲಿ ನಡೆದ ಮತ್ತೊಂದು ಘಟನೆ, ಬಡ ಹಾಗೂ ಅನಕ್ಷರಸ್ಥ ದಲಿತರ ಬದುಕಿಗೆ ಹಾಗೆ ನೇರವಾಗಿ ಸಂಬಂಧಿಸಿದ್ದಾಗಿರಲಿಲ್ಲ, ಅಂಬೇಡ್ಕರ್‌ರ ಅಪ್ರಕಟಿತ ಲೇಖನ 'Riddles of Hinduism' ೧೯೮೭ರಲ್ಲಿ ಪ್ರಕಟವಾಯಿತು. ಬ್ರಾಹ್ಮಣೀಯ ಹಿಂದೂತ್ವದ ಕೆಲವು 'ಒಗಟು'



ಗಳ ವಿಮರ್ಶೆಯನ್ನು ಈ ಕೃತಿ ಒಳಗೊಂಡಿತ್ತು. ಸೀತೆಯನ್ನು ರಾಮ ನಡೆಸಿಕೊಂಡ ರೀತಿಯಲ್ಲಿ ಅನ್ಯಾಯ ಮತ್ತು ರಾಧೆಯೊಂದಿಗೆ ಕೃಷ್ಣನ ಸಂಬಂಧದಲ್ಲಿ ಅಸಭ್ಯತೆ ಇದೆ ಎಂದು ಅಂಬೇಡ್ಕರ್ ಈ ಕೃತಿಯಲ್ಲಿ ಹೇಳುತ್ತಾರೆ. ಈ ಕಾರಣದಿಂದ, ಬಾಂಬೆಯ ಶಿವಸೇನೆ ರೋಷದಿಂದ ಸ್ಫೋಟಗೊಂಡಿತು; ಹಾಗೂ ಕೃತಿಯನ್ನು ಬಹಿಷ್ಕರಿಸಲಾಯಿತು. ಆದರೆ, ಬಾಂಬೆಯ ಬೀದಿಗಳಲ್ಲಿ ಉಕ್ಕಿ ಹರಿದ ದಲಿತರ ಮೆರವಣಿಗೆಯಿಂದ, ಕೃತಿಯ ಮೇಲಿನ ಬಹಿಷ್ಕಾರವನ್ನು ರದ್ದುಪಡಿಸಲಾಯಿತು. ಭಾರತದ ಗ್ರಾಮೀಣ ಪ್ರದೇಶದಲ್ಲಿ ದಲಿತರ ಮೇಲೆ ನಡೆಯುವ ದೌರ್ಜನ್ಯದ ವಿರುದ್ಧ ಪ್ರತಿಭಟನೆಗಳು ನಡೆಯುತ್ತಲೇ ಇದ್ದರೂ, ಅಂಬೇಡ್ಕರ್‌ರನ್ನು ಅವಮಾನಿಸಿದ ಈ ಎರಡು ಘಟನೆಗಳು ಸೆಳೆದಷ್ಟು ಜನಸಂದಣಿಯನ್ನು ಬೇರಾವ ಘಟನೆಗಳೂ ಸೆಳೆದಿಲ್ಲ.

ಮೇಲಿನ ಎಲ್ಲಾ ಘಟನೆಗಳೂ ದಲಿತರ ಸಿಟ್ಟು ಮತ್ತು ರೋಷವನ್ನು ಬಿಂಬಿಸಿದರೆ, ಅಚ್ಚರಿ ಎನಿಸುವ ಅವರ ತಾಳ್ಮೆ ಮತ್ತು ಶಿಸ್ತನ್ನು ಬಿಂಬಿಸುವಂಥ ಇನ್ನೊಂದು ಸಂಗತಿಯನ್ನು ಹೇಳುತ್ತೇನೆ. ಡಿಸೆಂಬರ್ ೬ ರಂದು ಅಂಬೇಡ್ಕರ್ ಅವರ ಪುಣ್ಯತಿಥಿ. ಈ ಮಹಾನಾಯಕನಿಗೆ ಗೌರವ ಸಲ್ಲಿಸಲು ಭಾರತದ ಎಲ್ಲಾ ಕಡೆಯಿಂದ ದಲಿತರು, ಅವರ ಅಂತ್ಯಕ್ರಿಯೆ ನಡೆದ ದಾದರ್‌ನ ಶಿವಾಜಿ ಪಾರ್ಕ್‌ನಲ್ಲಿರುವ ಚೈತ್ಯ ಭೂಮಿಗೆ ಬರುತ್ತಾರೆ. ಆಗಂತೂ ದಾದರ್‌ನಲ್ಲಿ ಅಗಾಧವಾದ ಜನಸಂದಣಿ ಇರುತ್ತದೆ. ಕೊನೆಗೆ ರೈಲುಗಳ ಟಾಪಿನ ಮೇಲೆ ಕುಳಿತು ಪ್ರಯಾಣ ಮಾಡಿದರೂ ಸರಿ, ಅಂತೂ ಆ ದಿನ ಅವರು ಇಲ್ಲಿಗೆ ಬಂದೇ ತೀರಬೇಕು. ನಂತರ, ಕಣ್ಣು ಹಾಯಿಸಿದಷ್ಟೂ ದೂರ ಸಾಗುವ ಸಾಲಿನಲ್ಲಿ ಎಲ್ಲಾ ವರ್ಗದ ದಲಿತರು, ತಮ್ಮ ಸರದಿ ಬರುವವರೆಗೆ ತಾಳ್ಮೆಯಿಂದ, ಸಹನೆಯಿಂದ ಕಾಯುತ್ತಾರೆ. ಇದೇ ರೀತಿ, ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ದಿನವಾದ ಅಕ್ಟೋಬರ್ ೧೪ ಮತ್ತು ೧೫ ರಂದು ನಾಗಪುರಕ್ಕೆ ಹೋಗುತ್ತಾರೆ. ಈ ಅದ್ಭುತವನ್ನು ನೋಡುವ

ಮಹಾರಾಷ್ಟ್ರದ ಹಳ್ಳಿ ಹಳ್ಳಿಗಳ ಗೋಡೆಗಳ ಮೇಲೆ ಅಂಬೇಡ್ಕರ್ ಚಿತ್ರವಿರುತ್ತದೆ. ಇವರೆಲ್ಲರಿಗೂ ಅಂಬೇಡ್ಕರ್ ಅಂತಿಮ ಸ್ವಾತಂತ್ರ್ಯದ ಸಂಕೇತ. ಅಂಬೇಡ್ಕರ್‌ರ ಮತಾಂತರದ ಪ್ರಭಾವ, ಬೇರೆಲ್ಲ ಪ್ರದೇಶಗಳಿಗಿಂತ ಮಹಾರಾಷ್ಟ್ರವನ್ನು ತೀವ್ರವಾಗಿ ಪ್ರಭಾವಿಸಿದೆ.

ಯಾರಿಗಾದರೂ ಅಂಬೇಡ್ಕರ್‌ರ ವರ್ಚಸ್ಸಿಗಿರುವ ಶಕ್ತಿ ಅರಿವಿಗೆ ಬಂದು, ಬೆರಗಿನಿಂದ ಹುಬ್ಬೇರಿಬಿಡುತ್ತದೆ; ಮತ್ತು ಯೋಚಿಸುವಂತಾಗುತ್ತದೆ. ಹೌದು, ಈ ಶಕ್ತಿ ಇವರನ್ನು ಯಾವ ದಿಕ್ಕಿಗೆ ಕೊಂಡೊಯ್ಯಬಲ್ಲದು ಎಂದು. ಸಂದರ್ಭ, ಸಾಮಾಜಿಕ ಅಥವಾ ಧಾರ್ಮಿಕ ಏನೇ ಆಗಿರಬಹುದು – ಅವು ಕಿರಿಯರಿಗೆ ಸಾಹಸಿಗಳಾಗುವ ಅವಕಾಶವನ್ನು ನೀಡುತ್ತವೆ; ಗ್ರಾಮಗಳನ್ನು ನಗರಕ್ಕೆ ತರುತ್ತವೆ. ಅಂಬೇಡ್ಕರ್ ಮತ್ತು ಬೌದ್ಧಧರ್ಮಕ್ಕೆ ಸಂಬಂಧಿಸಿದ ಪುಸ್ತಕ, ಕರಪತ್ರ, ಛಾಯಾಚಿತ್ರ ಮತ್ತು ಕ್ಯಾಸೆಟ್‌ಗಳನ್ನು ಪ್ರತಿಯೊಂದು ಮನೆಗೆ ತರುತ್ತವೆ. ಇಂಥ ಸಂದರ್ಭಗಳು, ದಲಿತರ ಬದುಕಿನ ಕೇಂದ್ರ ಅಂಬೇಡ್ಕರ್ ಎಂಬುದನ್ನು ಒತ್ತಿ ಹೇಳುತ್ತವೆ, ಈ ಸಮುದಾಯದ ಚೈತನ್ಯವನ್ನು ಮನಗಾಣಿಸುತ್ತವೆ.

ಹಾಗಾದರೆ, ಈ ಹೊತ್ತು 'ಅಂಬೇಡ್ಕರ್' ಎಂದರೇನು? ನಿರ್ವಿವಾದವಾಗಿ, ಮಹಾರಾಷ್ಟ್ರದಲ್ಲಿ ಅವರು ದಲಿತರ ಏಕಮಾತ್ರ ನಾಯಕ. ಆದರೆ, ಮಹಾರಾಷ್ಟ್ರ ಅವರ ಮೂಲಸ್ಥಾನ, ಅವರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳ ತೌರೂರು. ಅದು, ಅವರ Republican Party ಯು ಮೂರ್ತ ರೂಪ ಪಡೆದ ಸ್ಥಳ. ಮಹಾರಾಷ್ಟ್ರದ ಎಲ್ಲರಿಗೂ ಅಂಬೇಡ್ಕರ್ ಗೊತ್ತು. ಮಕ್ಕಳಿಗೆ ಶಾಲೆಗಳಲ್ಲಿ ಇತರ ರಾಷ್ಟ್ರೀಯ ನಾಯಕರ ಜೊತೆಯಲ್ಲಿ ಅಂಬೇಡ್ಕರ್‌ರ ಪರಿಚಯವಾಗುತ್ತದೆ. ಮಹಾರಾಷ್ಟ್ರದ ಹಳ್ಳಿ ಹಳ್ಳಿಗಳ ಗೋಡೆಗಳ ಮೇಲೆ ಅಂಬೇಡ್ಕರ್ ಚಿತ್ರವಿರುತ್ತದೆ. ಇವರೆಲ್ಲರಿಗೂ ಅಂಬೇಡ್ಕರ್ ಅಂತಿಮ ಸ್ವಾತಂತ್ರ್ಯದ ಸಂಕೇತ. ಅಂಬೇಡ್ಕರ್‌ರ ಮತಾಂತರದ ಪ್ರಭಾವ, ಬೇರೆಲ್ಲ ಪ್ರದೇಶಗಳಿಗಿಂತ ಮಹಾರಾಷ್ಟ್ರವನ್ನು ತೀವ್ರವಾಗಿ ಪ್ರಭಾವಿಸಿದೆ. ಮಹಾರಾಷ್ಟ್ರದ ದಲಿತೇತರರೂ ಕೂಡ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅವಕಾಶಗಳ ಬಾಗಿಲು ದಲಿತರಿಗೆ ತೆರೆದದ್ದೆ ಅಂಬೇಡ್ಕರ್‌ರಿಂದ ಎಂಬುದನ್ನು ಅರಿತಿದ್ದಾರೆ.

ಮಹಾರಾಷ್ಟ್ರದಲ್ಲಿ ಅಂಬೇಡ್ಕರ್ ಚಳವಳಿಯ ಭಾಗವಾಗಿರುವವರನ್ನು ಭೇಟಿ ಮಾಡಿದರೆ, ಈ ವ್ಯಕ್ತಿಯ ಬಗ್ಗೆ ಎಲ್ಲಾ ವರ್ಗದ ದಲಿತರಿಗಿರುವ ಅತ್ಯುನ್ನತ ಗೌರವ, ಅಪಾರವಾದ ಕೃತಜ್ಞಾಭಾವ, ತಮ್ಮ ಹೆಗಲ ಮೇಲಿರುವ ಅಂಬೇಡ್ಕರ್‌ರ ತೀರಿಸಲಾರದ ಋಣದ ಭಾವ ಅಸಾಧಾರಣವಾದುದು. ಸ್ವತಃ ಅಂಬೇಡ್ಕರ್ ಈ ರೀತಿಯ ವ್ಯಕ್ತಿ ಆರಾಧನೆಯನ್ನು ವಿರೋಧಿಸಿದವರು. ಯಾರೂ ಅವರಿಗೆ ದೇವಸ್ಥಾನಗಳನ್ನು ಕಟ್ಟಿಲ್ಲ, ಯಾರೂ ಅವರಿಗೆ ಹರಕೆಗಳನ್ನು ಕಟ್ಟುವುದಿಲ್ಲ. ಆದರೂ ಅಂಬೇಡ್ಕರ್, ಅವರ ಮನಸುಗಳಲ್ಲಿರುವ ಏಕಮಾತ್ರ ವ್ಯಕ್ತಿ; ತಮ್ಮ ಬದುಕಿನ ಎಲ್ಲಾ ಒಳಿತುಗಳನ್ನು ಸಾಧ್ಯವಾಗಿಸಿದ ಒಂದು ಶಕ್ತಿ.

ವಿಲಾಸ್ ಬಿ ದೇವಾಕಿ ಅವರ 'ಜೈ ಭೀಮ್ ಮ್ಹಾಂಜೆ ಕ್ಯಾ' (ಜೈ ಭೀಮ್ ಎಂದರೇನು?) ಕವಿತೆಯನ್ನು ಸ್ವಲ್ಪ ನೋಡೋಣ.

ಜೈ ಭೀಮ್ ಎಂದರೇನು ?

ಜೈ ಭೀಮ್ ಎಂದರೆ ಬೆಳಕು
ಜೈ ಭೀಮ್ ಎಂದರೆ ಪ್ರೀತಿ
ಜೈ ಭೀಮ್ ಎಂದರೆ ಚಾತುರ್ವರ್ಣಕ್ಕೆ ಪೆಟ್ಟು
ಜೈ ಭೀಮ್ ಎಂದರೆ ಕತ್ತಲಿನಿಂದ ಬೆಳಕಿನೆಡೆಗಿನ ಪಯಣ
ಜೈ ಭೀಮ್ ಎಂದರೆ ಕೋಟ್ಯಾಂತರ ಕಣ್ಣುಗಳಲ್ಲಿನ ನೀರು
ಜೈ ಭೀಮ್ ಎಂದರೆ ಮುಖ್ಯ ರಸ್ತೆಗೆ ಕೊಂಡೊಯ್ಯುವ ಹಿಲಾಲು
ಜೈ ಭೀಮ್ ಎಂದರೆ ದಲಿತ ಬೌದ್ಧರ ಅನನ್ಯತೆ

ಜೈ ಭೀಮ್ ಎಂದರೆ ಜ್ಞಾನದ ಗಣಿ

ಜೈ ಭೀಮ್ ಎಂದರೆ ವೈದಿಕ ಧರ್ಮದ ಮೂಳೆಗಳನ್ನು ಮುರಿಯುವ ಪದ

ಜೈ ಭೀಮ್ ಎಂದರೆ ವಿಶ್ವಾಸಘಾತಕರ ಎದೆಯಲ್ಲಿನ ನಡುಕ

ಜೈ ಭೀಮ್ ಎಂದರೆ ಕೀಳು ಎನ್ನುವ ಜನರ ತಂದೆ ತಾಯಿ

ಜೈ ಭೀಮ್ ಎಂದರೆ ಧರ್ಮದ ಹೆಸರಿನಲ್ಲಿ ರಾಷ್ಟ್ರವನ್ನು ವಂಚಿಸುವವರ ಅಂತ್ಯ

ಜೈ ಭೀಮ್ ಎಂದರೆ ಮೇಲು ಎಂದು ಭಾವಿಸುವವರ ಕಿವಿಗಡಚಿಕ್ಕುವ ಸದ್ದು

ಜೈ ಭೀಮ್ ಎಂದರೆ ಅಸ್ಪೃಶ್ಯತೆಗೆ ಅಂಟಿದ ಕಳಂಕದ ಕೊನೆ

ಜೈ ಭೀಮ್ ಎಂದರೆ ಸಮಾಜದ ಹಾನಿಕಾರಕರ ಕೊರಳಿನ ಕುಣಿಕೆ

ಜೈ ಭೀಮ್ ಎಂದರೆ ಸಮಾನತೆಯ ನನಸಾದ ಕನಸು

ಜೈ ಭೀಮ್ ಎಂದರೆ ಪ್ರಗತಿಯ ಹಾದಿಯೆಡೆಗಿನ ಹೆಜ್ಜೆ

ಈ ರೊಮ್ಯಾಂಟಿಕ್ ಕವಿತೆಯನ್ನು ಗಂಭೀರವಾಗಿ ಪರಿಶೀಲಿಸಿದರೆ, ಯಾವ ಯಾವ ಕ್ಷೇತ್ರದಲ್ಲಿ ಅಂಬೇಡ್ಕರ್ ಪ್ರೇರಕ ಶಕ್ತಿಯಾಗಿದ್ದಾರೆ ಎನ್ನುವುದು ತಿಳಿಯುತ್ತದೆ. ಈ ಕವಿತೆಯಲ್ಲಿ ಅಂಬೇಡ್ಕರ್‌ರ ಸಾಮಾಜಿಕ ಹೋರಾಟದ ಸಾಧನೆ ಮತ್ತು ಇದರಿಂದ ಅಸ್ಪೃಶ್ಯರ ಬದುಕಿನಲ್ಲಾದ ಇತ್ಯಾತ್ಮಕ ಪರಿಣಾಮಗಳನ್ನು ಕವಿ ಅದ್ಭುತವಾಗಿ ಸಮತೋಲನಕ್ಕೆ ಒಳಪಡಿಸುತ್ತಾರೆ. ದಲಿತ ಎಂದರೆ ಹೆಮ್ಮೆ ಮತ್ತು ಸ್ವಾಭಿಮಾನ ಉಳ್ಳ ವ್ಯಕ್ತಿ. ಸಾಮಾಜಿಕ ಚಳವಳಿಗಳ ಮುಖ್ಯ ಆಶಯ ಘನತೆಯನ್ನು ಸಾಧಿಸುವುದು. ಬಹುಮುಖಿ ವ್ಯಕ್ತಿತ್ವದ ಅಂಬೇಡ್ಕರ್ ಹೆಮ್ಮೆ, ಸ್ವಾಭಿಮಾನ ಮತ್ತು ಘನತೆಯ ಸಂಕೇತ.

ಒಂದು ಕ್ಷಣಕ್ಕೆ ನನಗನಿಸಿತು. ದಲಿತರ ನಡುವಿನ ಅಂಬೇಡ್ಕರ್‌ರ ಸ್ಥಾನವನ್ನು ಒಬ್ಬ ಗುರುವಿಗೆ ಮಾತ್ರ ಹೋಲಿಸಬಹುದು ಎಂದು..

ಆದರೆ, ಇದೆಲ್ಲಕ್ಕಿಂತ ಮುಖ್ಯವಾಗಿ ಅಂಬೇಡ್ಕರ್ ಎಂದರೆ, ಸಾಧನೆಯ ಸಂಕೇತ ಕೂಡ ಹೌದು. ಏಕೆಂದರೆ, ಬಾಂಬೆಯಿಂದ ಕೊಲಂಬಿಯಾ ವಿಶ್ವವಿದ್ಯಾಲಯ, ಅಲ್ಲಿಂದ ಲಂಡನ್ ವಿಶ್ವವಿದ್ಯಾಲಯ ಮತ್ತು ಕೋರ್ಟ್‌ನ ಇನ್ ತನಕ ಅಂಬೇಡ್ಕರ್ ಹಠ ಮಾಡಿ ಗಳಿಸಿಕೊಂಡ ಶಿಕ್ಷಣವನ್ನು ಇಲ್ಲಿಯ ತನಕ ಅದನ್ನು ಸಮಗಟ್ಟುವುದಕ್ಕೆ ಯಾರಿಗೂ ಸಾಧ್ಯವಾಗಿಲ್ಲ.

ಅಂಬೇಡ್ಕರ್ ಎಂದರೆ, ರಾಷ್ಟ್ರ ನಿರ್ಮಾಣದ ಕರ್ತೃ. ಏಕೆಂದರೆ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸರ್ಕಾರ ಆಡಳಿತಗಾರರೊಂದಿಗೆ ಅಂಬೇಡ್ಕರ್ ಗಿದ್ದ ಅಪಾಯಿಂಟ್‌ಮೆಂಟ್‌ಗಳನ್ನು ನೋಡಿದರೆ, ಇಂದಿಗೂ ಬೇರಾವ ಅಸ್ಪೃಶ್ಯ ಆ ಮಟ್ಟಕ್ಕೆ ಏರಿಲ್ಲ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಬಿಎಸ್‌ಪಿಯ ಮಾಯಾವತಿ, ತ್ವರಿತ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ೧೧,೦೦೦ ಹಳ್ಳಿಗಳನ್ನು ಅಂಬೇಡ್ಕರ್ ಗ್ರಾಮ ಎಂದು ಘೋಷಿಸಿದರು. (The Hindu Magazine 15 March 1998). ಅಷ್ಟೇ ಅಲ್ಲದೆ, ರಾಜ್ಯಾದ್ಯಂತ ಸಾವಿರಾರು ಅಂಬೇಡ್ಕರ್ ಪ್ರತಿಮೆಗಳನ್ನು ಕೂಡ ಸ್ಥಾಪಿಸಿದರು. ಇದನ್ನು ನಾನು ಯಾಕೆ ಹೇಳುತ್ತಿದ್ದೇನೆ ಎಂದರೆ, ಅಂಬೇಡ್ಕರ್ ಬಗ್ಗೆ ದಲಿತರಿಗಿರುವ ಅಭಿಮಾನದ ಅಗಾಧತೆ ಎಂಥದ್ದು ಎಂಬುದನ್ನು ಸೂಚಿಸಲು.

ಅಂಬೇಡ್ಕರ್‌ರ ಪ್ರತಿಮೆಯನ್ನು ವಿಶ್ಲೇಷಿಸುವ ಪ್ರಯತ್ನ ನಮ್ಮನ್ನು ಅನೇಕ ದಿಕ್ಕುಗಳತ್ತ ಕೊಂಡೊಯ್ಯುತ್ತದೆ. ಮೊದಲನೆಯದಾಗಿ ಅಂಬೇಡ್ಕರ್ ಒಬ್ಬ ಸುಶಿಕ್ಷಿತ ವ್ಯಕ್ತಿ. ಕನ್ನಡಕ ಧರಿಸಿಕೊಂಡು, ಜೇಬಿನಲ್ಲಿ ಪೆನ್ ಅನ್ನು ಸಿಗಿಸಿ, ಅಚ್ಚುಕಟ್ಟಾದ ಸೂಟ್‌ನಲ್ಲಿ ನಮಗೆ ಅವರು ಕಾಣುತ್ತಾರೆ. ಜೊತೆಗೆ ಅವರು ಭಾರತದ ಸಂವಿಧಾನವನ್ನೂ ಕೈಯಲ್ಲಿ ಹಿಡಿದುಕೊಂಡಿದ್ದಾರೆ - ಇಲ್ಲಿ ಅಂಬೇಡ್ಕರ್ ರಾಷ್ಟ್ರೀಯ ಬದುಕಿಗೆ ಮಹೋನ್ನತ ಕಾಣಿಕೆ ಸಲ್ಲಿಸಿದ ವ್ಯಕ್ತಿ. ಒಂದು ಕೈಯನ್ನು ಚಾಚಿ ತೋರ್ಬೆರಳನ್ನು ಮುಂದೆ ಮಾಡಿರುವ ಅಂಬೇಡ್ಕರ್ ದಲಿತರ ಹಕ್ಕು ಮತ್ತು ಶಿಕ್ಷಣದ ಪ್ರಾಮುಖ್ಯತೆಯ ಪ್ರತಿಪಾದಕ ಮಹಾರ್ ಜನಾಂಗಕ್ಕೆ ಸೇರಿದ ಈ ವ್ಯಕ್ತಿ ಭಾರತದಲ್ಲಿ ಬೌದ್ಧ ಹಿಂದೂ, ಕ್ರೈಸ್ತ -ಎಲ್ಲಾ ಧರ್ಮದ ದಲಿತರ ನಾಯಕ.

ಅಂಬೇಡ್ಕರ್ ಎಂದರೆ 'ಸಂರಕ್ಷಣೆ' ಎಂಬ ಇನ್ನೂ ಒಂದು ಅರ್ಥ ಸಾಧ್ಯತೆ ಇದೆ. ಅಂಬೇಡ್ಕರ್‌ಗೆ ಅಪಾರವಾದ ನಂಬಿಕೆ ಇದ್ದ ಪ್ರಜಾಪ್ರಭುತ್ವ ಎಂದ ಈ ವ್ಯವಸ್ಥೆ ತಮ್ಮ ಹಕ್ಕುಗಳನ್ನು ರಕ್ಷಿಸುತ್ತದೆ ಎಂಬ ನಂಬಿಕೆ. ಆರಂಭದಲ್ಲಿ ನಾನು ಹೇಳಿದ, ತಮಿಳುನಾಡಿನ ಘಟನೆಯ ಬಗ್ಗೆ ಮುದ್ರಿತವಾದ ಕರಪತ್ರದಲ್ಲಿ ಫಾ ಜೋಸೆಫ್, ಅಂಬೇಡ್ಕರ್‌ರ ಈ ಮಾತುಗಳಿಗೆ ವಿಶೇಷ ಒತ್ತನ್ನು ನೀಡಿದ್ದಾರೆ -

'ನಿಮ್ಮ ಮೇಲೆ ನಂಬಿಕೆ ಇರಲಿ. ನ್ಯಾಯ ನಮ್ಮ ಕಡೆಗೆ ಇರುವಾಗ, ನಾವು ಯುದ್ಧದಲ್ಲಿ ಸೋಲುವುದು ಸಾಧ್ಯವೇ ಇಲ್ಲ. ಇದು ಎಲ್ಲಾ ರೀತಿಯಿಂದಲೂ ಒಂದು ಆಧ್ಯಾತ್ಮಿಕ ಯುದ್ಧ. ಇದರಲ್ಲಿ ಲೌಕಿಕವಾದ ಅಥವಾ ಸಾಮಾಜಿಕವಾದ ಯಾವ ಸ್ವಾರ್ಥವೂ ಇಲ್ಲ. ಏಕೆಂದರೆ, ನಾವು ಅಧಿಕಾರ ಅಥವಾ ಐಶ್ವರ್ಯಕ್ಕಾಗಿ ಹೋರಾಡುತ್ತಿಲ್ಲ. ಈ ಯುದ್ಧ ಸ್ವಾತಂತ್ರ್ಯಕ್ಕಾಗಿ; ಈ ಯುದ್ಧ ಮನುಷ್ಯನ ವ್ಯಕ್ತಿತ್ವದ ಘನತೆಯ ಹಕ್ಕಿಗಾಗಿ.'

ಈ ಹೊತ್ತಿನ ದಲಿತರು ಲೌಕಿಕ ಸುಖ ಮತ್ತು ರಾಜಕೀಯ ಅಧಿಕಾರದಿಂದ ವಂಚಿತರಾಗಿ ಉಳಿಯಲು ಇಚ್ಛಿಸುವುದಿಲ್ಲ. ಆದರೆ, ಅಂಬೇಡ್ಕರ್‌ರ ಈ ಮಾತುಗಳು ದಲಿತರು ಸ್ವಾಭಿಮಾನ ಮತ್ತು ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತದೆ. 'ಅಂಬೇಡ್ಕರ್ ನಿಮಗೆ ಏನನ್ನು ಸಂಕೇತಿಸುತ್ತಾರೆ?' ಎಂದು ಬಾಂಬೆ ಮತ್ತು ಪೂನಾದಲ್ಲಿನ ಬೌದ್ಧರನ್ನು ಕೇಳಿದೆ. ಎಲ್ಲಾ ಉತ್ತರಗಳು ವೈಯಕ್ತಿಕ ಪರಿಭಾಷೆಯಲ್ಲಿದ್ದವು; ಪ್ರೇರಣೆ, ಧೈರ್ಯ, ಐಡೆಂಟಿಟಿ ಇತ್ಯಾದಿ. ಆದರೆ, ಆಶ್ಚರ್ಯಚಕಿತವಾದ ಇನ್ನೊಂದು ಉತ್ತರ ಬಂತು - ಶಾಂತಿ ಎಂದು.

ಮಹಾರಾಷ್ಟ್ರದ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಸಂಗತಿಗಳ ಮೂಲಕ, ಅಂಬೇಡ್ಕರ್ ಬಗ್ಗೆ ನಾವು ಇನ್ನೂ ಹಲವು ವಿಷಯಗಳನ್ನು ತಿಳಿದುಕೊಳ್ಳಬಹುದು. ಧನಂಜಯ ಕೀರ್ ಬರೆದಿರುವ ಅಂಬೇಡ್ಕರ್‌ರ ಜೀವನಚರಿತ್ರೆ ೧೯೬೨ನೇ ಇಸವಿಯಿಂದ ಪದೇ ಪದೇ ಪುನರ್‌ಮುದ್ರಣಕ್ಕೆ ಒಳಗಾಗುತ್ತಿದೆ. ಇದರ ಪ್ರಕಾಶಕ (ಪಾಪ್ಯುಲರ್ ಪ್ರಕಾಶನ) ರಾಮ್‌ದಾಸ್ ಭಟ್ಕಳ್, 'ಅಂಬೇಡ್ಕರ್ ಬಗೆಗಿನ ಆರಾಧನ ಮನೋಭಾವದಿಂದ ಬಹುಶಃ ಎಲ್ಲರೂ ಇದನ್ನು ಕೊಳ್ಳುತ್ತಿರಬಹುದು' ಎಂದುಕೊಂಡಿದ್ದರಂತೆ. ಆದರೆ, ಅವರಿಗೇ ಆಶ್ಚರ್ಯವಾಗುವಂತೆ, ಪುಸ್ತಕ ಕೊಂಡ ಪ್ರತಿಯೊಬ್ಬರೂ ಅದನ್ನು ಬೈಬಲ್ಲಿನಂತೆ ಓದುತ್ತಿದ್ದುದಲ್ಲದೆ, ಅದನ್ನು ಇತರರಿಗೂ ನೀಡುತ್ತಿದ್ದರು.

'ಅಂಬೇಡ್ಕರ್ ನಿಮಗೆ ಏನನ್ನು ಸಂಕೇತಿಸುತ್ತಾರೆ?' ಎಂದು ಬಾಂಬೆ ಮತ್ತು ಪೂನಾದಲ್ಲಿನ ಬೌದ್ಧರನ್ನು ಕೇಳಿದೆ. ಎಲ್ಲಾ ಉತ್ತರಗಳು ವೈಯಕ್ತಿಕ ಪರಿಭಾಷೆಯಲ್ಲಿದ್ದವು; ಪ್ರೇರಣೆ, ಧೈರ್ಯ, ಐಡೆಂಟಿಟಿ ಇತ್ಯಾದಿ. ಆದರೆ, ಆಶ್ಚರ್ಯಚಕಿತವಾದ ಇನ್ನೊಂದು ಉತ್ತರ ಬಂತು - ಶಾಂತಿ ಎಂದು.

ಮಹಾರಾಷ್ಟ್ರದ ಗಡಿ ಚಿರೋಲಿ ಜಿಲ್ಲೆಯ ಕಾಡಿನಲ್ಲಿ ಒಂದು ಕುಷ್ಠರೋಗದ ಚಿಕಿತ್ಸಾಲಯವಿದೆ. ಖ್ಯಾತ ಗಾಂಧಿವಾದಿ ಬಾಬಾ ಆಮ್ಟೆಯ ಮಗ ಪ್ರಕಾಶ್ ಆಮ್ಟೆ ಇಲ್ಲಿನ ಬುಡಕಟ್ಟು ಜನರಿಗೆ ಈ ರೋಗಕ್ಕೆ ಚಿಕಿತ್ಸೆ ನೀಡುತ್ತಾ ಅಲ್ಲಿಯೇ ನೆಲೆಸಿದ್ದಾರೆ. ಇವರ ಕಛೇರಿಯಲ್ಲಿ ದೇವರ ಫೋಟೋ ಆಗಲಿ, ಗಾಂಧೀಜಿಯ ಫೋಟೋ ಆಗಲಿ ಇರಲಿಲ್ಲ. ಕೇವಲ ಅವರ ಅಪ್ಪ, ಅಮ್ಮ ಮತ್ತು ಡಾ|| ಅಂಬೇಡ್ಕರ್‌ರ ಫೋಟೋ ಮಾತ್ರ ಇತ್ತು. ಈ ಬ್ರಾಹ್ಮಣ ವೈದ್ಯನಿಗೆ ಅಂಬೇಡ್ಕರ್ ಏನನ್ನು ಸಂಕೇತಿಸುತ್ತಿರಬಹುದು ಎಂಬ ಕುತೂಹಲ ಉಂಟಾಯಿತು. ಬಹುಶಃ ಏಕಾಂಗಿಯಾಗಿ ಹೋರಾಡಿದ ಅವರ ಛಲ, ಅನೇಕ ವಿರೋಧಗಳ ನಡುವೆ ಕೂಡ ಅವರು ಮಾಡಿದ ಸಾಧನೆ -ಇವು ಪ್ರಕಾಶ್ ಆಮ್ಟೆಗೆ ಮುಖ್ಯವಾಗಿರಬಹುದೇ ? ಏನೇ ಇರಲಿ, ಅಂಬೇಡ್ಕರ್ ಬದುಕು ಮತ್ತು ಕೃತಿಗಳಿಗೆ ಇದ್ದ ಬಹುಮುಖಿ ಅರ್ಥವನ್ನು ಇದು ಸಂಕೇತಿಸುತ್ತಿತ್ತು. ಪೂನಾದಲ್ಲಿರುವ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಸ್ಮಾರಕ ಮ್ಯೂಸಿಯಂ ಬೃಹತ್ ಸ್ತೂಪದ ರೀತಿಯ ಕಟ್ಟಡ. ಡಾ|| ಎಸ್.ಬಿ. ಮಜುಂದಾರ್ ಎಂಬ ಬ್ರಾಹ್ಮಣ ಇದರ ಸ್ಥಾಪಕ - ಹೀಗೆ ಕೆಲವು ದಲಿತೇತರರಿಗೆ ಕೂಡ ಅಂಬೇಡ್ಕರ್ ಎಷ್ಟೋ ಮೌಲ್ಯಗಳ ಸಂಕೇತವಾಗುತ್ತಾರೆ.

ಅರುಣ್‌ಶೌರಿ ಎಂಬ ಪತ್ರಕರ್ತನ 'Worshipping False Gods' ಅಂಬೇಡ್ಕರ್ ವ್ಯಕ್ತಿತ್ವಕ್ಕೆ ಗಾಢವಾದ ಕಪ್ಪು ವರ್ಣವನ್ನು ಲೇಪಿಸಿ ರಚಿಸಿದ ಕೃತಿ. ಅಂಬೇಡ್ಕರ್‌ರ ಹೋರಾಟ, ಅವರ ಬದುಕಿನ ಗುರಿ, ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳುವ ಯಾವ ಪ್ರಯತ್ನವನ್ನೂ ಈ ಕೃತಿ ಮಾಡುವುದಿಲ್ಲ. ಬದಲಿಗೆ ಅವರನ್ನು ಬ್ರಿಟಿಷರ 'ಉಪಕರಣ' ಎಂದು ಚಿತ್ರಿಸಲಾಗಿದೆ. ಕೃತಿಯ ಶೀರ್ಷಿಕೆಯ ಉದ್ದೇಶದಲ್ಲಿ ಕೂಡ ಕುಹಕವಿದೆ. ದಲಿತರು ಇದನ್ನು ಕೂಡ ಉಗ್ರವಾಗಿ ಪ್ರತಿಭಟಿಸಿದರು. ಇತಿಹಾಸಜ್ಞನಲ್ಲದ ಶೌರಿಯ ಈ ಕೃತಿಯನ್ನು ಬಹುಶಃ ಯಾರೂ ಗಂಭೀರವಾಗಿ ಪರಿಗಣಿಸಿರಲಾರರು ಎಂದುಕೊಂಡಿದ್ದೆ. ಆದರೆ ಈ ಕೃತಿಯನ್ನು ಓದಿದ ಮೇಲೆ ಅಂಬೇಡ್ಕರ್ ಮತ್ತು ದಲಿತರ ಬಗ್ಗೆ ಹಗುರವಾದ ಭಾವ ಕೆಲವು ಮೇಲುವರ್ಗದ ಜನರಲ್ಲಿ ಮೂಡಿದೆ.

ಹೀಗೆ.... ಅಂಬೇಡ್ಕರ್ ಎಂದರೆ ಅನೇಕ ಅರ್ಥಗಳಿವೆ. ಅದನ್ನು ಈ ದಲಿತರು ತಮ್ಮ ರಕ್ತಕ್ಕೆ ಅಂಟಿಸಿಕೊಂಡಿದ್ದಾರೆ. ಹೇಗೆ ಎಂದರೆ, ವೃತ್ತಿಯಲ್ಲಿ ವೈದ್ಯ ಆದ ಆಂಧ್ರದ ಒಬ್ಬ ಹೆಣ್ಣುಮಗಳು, ಆಕೆಯ ಮಗು ಮತ್ತು ಆಸ್ಪತ್ರೆಯನ್ನು ಗಂಡನ ಕೈಗಿಟ್ಟು ಏಳು ವರ್ಷಗಳ ಕಾಲ ಅಂಬೇಡ್ಕರ್ ಬಗ್ಗೆ ಸಿನೆಮಾ ಮಾಡಲು ಸಂಶೋಧನೆಗೆ ತೊಡಗಿದಳು. ಡಾ|| ಪದ್ಮಾವತಿಯ ಈ ಸಿನೆಮಾಕ್ಕೆ ಅನೇಕ ಮಿತಿಗಳಿದ್ದರೂ, ಅಂಬೇಡ್ಕರ್ ಬಗೆಗಿನ ದಲಿತರ ಉತ್ಕಟ ಧನ್ಯತಾ ಭಾವ ಇಂಥದ್ದು. □

(೭ನೇ ಪುಟದಿಂದ)

ವೃದ್ಧಿಸಿಕೊಳ್ಳಲು ಹಿಂದುತ್ವದ ವಿಧಿ, ಲಾಂಛನ, ಸಮವಸ್ತ್ರ ಮಂತ್ರ, ರಥಯಾತ್ರೆ, ಶಿಲಾನ್ಯಾಸ ಮುಂತಾದ ಆಚರಣೆಗಳನ್ನು ವೈಭವಯುತವಾಗಿ ಮಾಡುತ್ತಿದೆ. ಈ ಎಲ್ಲವೂ ಮತಾಂಧ, ಕೋಮುವಾದಿಗಳ ಅಧಿಕಾರದ ಮೆಟ್ಟಿಲಾಗುತ್ತಿರುವುದನ್ನು ಸಮಾಜ ನಿಧಾನವಾಗಿ ಮನಗಾಣುತ್ತಿದ್ದರೂ ಭಿನ್ನ, ಭಿನ್ನ ಬದುಕಿನ ರೀತಿ, ಭಿನ್ನ ಭಿನ್ನ ಅನನ್ಯತೆಯಿರುವ ಬಹು ಧಾರ್ಮಿಕ ವ್ಯವಸ್ಥೆಯ ಭಾರತೀಯತೆಯನ್ನು ಒಪ್ಪಿಕೊಳ್ಳಲು ಹಿಂಸೆ ಪಡುತ್ತಿದೆ. ಕಳೆದ ೧೦-೧೫ ವರ್ಷಗಳಲ್ಲಿ ಕೋಮುವಾದ, ಮತಾಂಧತೆಗಳು ಅದಕ್ಕೆ ಉಣಬಡಿಸಿದ ಅಫೀಮಿನ ಪರಿಣಾಮವಿದು.

ಆದರೆ ಭವಿಷ್ಯದ ದಿನಗಳಲ್ಲಿ ಈ ಸ್ಥಿತಿ ಇರಬಾರದು. ಯಾಕೆಂದರೆ ಬಂಡವಾಳಶಾಹಿಯ ಪದ್ಧತಿಯನ್ನು ವಿಶ್ವದ ಮೂರನೇ ಜಗತ್ತಿನ ಮೇಲೆ ಹೇರಿ ತನ್ನ ಉದ್ದೇಶಿತ ಆರ್ಥಿಕ ವ್ಯವಸ್ಥೆ ಮತ್ತು ಅದಕ್ಕೆ ಪೂರಕವಾದ ಜೀವನವನ್ನು

ಸಂಪಾದಕರೊಡನೆ ಸಂವಾದ

ಶತಮಾನಗಳಷ್ಟು ಪ್ರಾಚೀನವಾದ ಜ್ಞಾನ ಭಂಡಾರವನ್ನು ಬಡರಾಷ್ಟ್ರಗಳ ಜನ ಸಮುದಾಯದಿಂದ ಕಸಿದುಕೊಳ್ಳುವ ಹುನ್ನಾರವಿರುವ ಜಾಗತೀಕರಣ (ಅಮೇರಿಕೀಕರಣ) ವಿರುದ್ಧ ಹೋರಾಡಲು ಸಮಾಜ ತನ್ನ ರಟ್ಟೆಗಳಲ್ಲಿ ಶಕ್ತಿ ಸಂಚಯನ ಮಾಡಿಕೊಳ್ಳಲೇಬೇಕಾಗುತ್ತದೆ.

ಒತ್ತಾಯಿಸುತ್ತಿರುವ ಮತ್ತು ಬೌದ್ಧಿಕ ಆಸ್ತಿಯ ಹಕ್ಕನ್ನು ತನ್ನ ಅಧೀನದಲ್ಲೇ ಇಟ್ಟುಕೊಂಡು ಶತಮಾನಗಳಷ್ಟು ಪ್ರಾಚೀನ ವಾದ ಜ್ಞಾನ ಭಂಡಾರವನ್ನು ಬಡರಾಷ್ಟ್ರಗಳ ಜನ ಸಮುದಾಯದಿಂದ ಕಸಿದುಕೊಳ್ಳುವ ಹುನ್ನಾರವಿರುವ ಜಾಗತೀಕರಣ (ಅಮೇರಿಕೀಕರಣ) ವಿರುದ್ಧ ಹೋರಾಡಲು ಸಮಾಜ ತನ್ನ ರಟ್ಟೆಗಳಲ್ಲಿ ಶಕ್ತಿ ಸಂಚಯನ ಮಾಡಿಕೊಳ್ಳಲೇಬೇಕಾಗುತ್ತದೆ. ಆಗ ಸಮರ ಸನ್ನದ್ಧ ಸ್ಥಿತಿಯಲ್ಲಿರುವ ಇದಕ್ಕೆ ಕೋಮುವಾದ, ಮತಾಂಧತೆಗಳು ಅಡೆ-ತಡೆಯೊಡ್ಡಿದರೆ ಅದನ್ನು ಕುಟ್ಟಿ ಪುಡಿ ಪುಡಿ ಮಾಡುವ ನಿರ್ದಾಕ್ಷಿಣ್ಯ ಕ್ರಮವನ್ನು ಇದು ಅನುಸರಿಸಿಯೇ ತೀರುತ್ತದೆ. ಈ ಸತ್ಯವನ್ನು ಜನತೆಯ ಉತ್ಪಾದನೆಯ ಸುಖವನ್ನು ಕಣ್ಮುಚ್ಚಿ ಅನುಭವಿಸುತ್ತಾ ಜನರನ್ನು ಜನಾಂಗೀಯ ಸಂಘರ್ಷಕ್ಕೆ ಪ್ರೇರೇಪಿಸುತ್ತಿರುವ ವೈದಿಕಶಾಹಿ ಮತ್ತು ಇದರ ಹಿಂಬಾಲಕರಾಗುತ್ತಿರುವ ಶೂದ್ರ ಮಠಾಧೀಶರುಗಳು ತಿಳಿಯಬೇಕಿದೆ. ಯಾಕೆಂದರೆ ಧರ್ಮ ಮತ್ತು ಪ್ರಭುತ್ವಗಳು ಒಂದಾಗಿ ಸೇರಿ ತಮ್ಮ ಶೋಧನೆಯನ್ನು ಹೆಚ್ಚಿಸುವ ಠಕ್ಕೂರಿಯನ್ನು ಕಂಡೂ ಕುಪಿತಗೊಳ್ಳಲಾರದಷ್ಟು ಈ ಸಮಾಜ ನಪುಂಸಕವಾಗಿಲ್ಲ. □

ಗುಡಿಸಿಲೊಳಗೊಂದು ಬೆಳ್ಳಿ ಚುಕ್ಕಿ



ಮೋಟು ಗೋಡೆಯ ಮಗ್ಗುಲಲ್ಲೊಂದು ಬೀಡಾಡಿ
ಗುಡಿಸಲು ಗಕ್ಕನೆ ಗದರಿಸುವ
ಹುಲ್ಲು ಜೋಪಡಿಯೊಳಗೆ
ಕನಸು ಕಾಣುತ್ತಿದ್ದ
ಕಾಣುವ ಕಂಗಳಲ್ಲಿ
ಬೆಳ್ಳಿ ಚುಕ್ಕಿ ಹರಸುತ್ತಿದ್ದ

ದಾರಿ ಸವೆಸಿ ಸೇತುವೆ ದಾಟಿ
ಹಾದಿ ಹಿಡಿದು ಬಂದರು
ಕೋಲು ಹಿಡಿದು ಬಂದಾ ಗಾಂಧಿ

ಮೂಗಿಗಂಟಿದ ಚಷ್ಮ
ಹೆಗಲಿಗೊಂದು ಖಾದಿಚೀಲ
ಒಡಲಲ್ಲಿ ಹಸಿದ ಎಲುಬು
ಎರಡು ಚಕ್ರದ ಮೇಲೇರಿ
ಪುಡಿ ಪತ್ರಿಕೆಯ ಹಂಚುತ್ತಿದ್ದ
ಹರಿಜನ ಕೇರಿಯೊಳಗೊಬ್ಬ ಸಂತ

ತಡವಾಗಿ ಬಂದರು ಬಾಬಾ ಸಾಹೇಬ
ಸೂಟು ಬೂಟು ಧಾರಿಯಾಗಿ
ಹಂಚುತ್ತಿದ್ದ ಪತ್ರಿಕೆಯನು ಓದಿ
ತಿಳಿ ಹೇಳುತ್ತಿದ್ದ

ಹುಲ್ಲು ಜೋಪಡಿಯೊಳಗೆ
ಬೀಡಿ ಮೋಟ ಹಿಡಿದು
ಬೆಂಕಿಗೆ ಮೈಯೊಡ್ಡಿದ್ದ
ಕ್ಯಾಕ್ಯಾಕರಿಸುತ್ತಾ
ನಡುಗುತ್ತಿದ್ದ ಹಿರಿಯಜ್ಜ

ಗಾಂಧಿ ನಡೆದು ಬಂದರು
ಜೋಪಡಿಯೊಳಗೆ
ಹಿರಿಯಜ್ಜನ ತಲೆ ಸವರಿ
ಕೆಮ್ಮದಿರು ಅಜ್ಜ
ಹೆದರದಿರು ನಿನ್ನ ಕುಲಕ್ಕೆ

ತೆಗೆದಿಕೋ ಈ ಖಾದಿ ವಸ್ತ್ರ
ಪಡೆದುಕೋ ಈ
ಇಂಕು ಪೆನ್ನು
ಗಾಂಧಿ ಹೊರಡುವರು
ಕೊಟ್ಟ ಇಂಕು ಪೆನ್ನು
ಅಜ್ಜನ ಕಿವಿ ಸಂದಿ ಸೇರಿತ್ತು

ತೊಟ್ಟಿಲಲ್ಲಿ ಮಲಗಿರುವ
ಪುಟ್ಟ ಕಂದ ಅಜ್ಜ ಸಿಕ್ಕಿಸಿದ್ದ
ಪೆನ್ನ ನೋಡುತ್ತಿತ್ತು
ಕೊಡು ಎನ್ನಲು ಮಾತಿಲ್ಲ
ಬೇಡ ಎನ್ನಲು ಮಾತಿಲ್ಲ
ಸುಮ್ಮನೆ ನೋಡುತ್ತಿತ್ತು
ಅಕ್ಕಳಿಸಿ ನಗುತ್ತಿತ್ತು
ಕಂಗಳಲ್ಲಿ ಕನಸ ಕಾಣುತ್ತಿತ್ತು
ಗುಡಿಸಿಲೊಳಗೊಂದು ಬೆಳ್ಳಿ ಚುಕ್ಕಿ

○ ಬ್ಯಾಡರಹಳ್ಳಿ ಶಿವರಾಜ

ಇಲ್ಲಿಗೆ ಒಂದು ಆವರ್ತ ಕೊನೆಗೊಂಡಂತಾಗಿದೆ. ಪಶ್ಚಿಮ ಘಟ್ಟಗಳಲ್ಲಿ ಬಂದೂಕದ ನೆರಳು ಕಾಣಿಸಿಕೊಂಡು, ಇದರ ಪಾಸನೆ ಹಿಡಿದ ಪೊಲೀಸರಿಂದ ಹಾಜಿಮಾ-ಪಾರ್ವತಿಯರ ಕೊಲೆಯಾಗಿ, ಅದಕ್ಕೆ ಅವರ ಗುಂಪಿನವರು ಪ್ರತಿಕ್ರಿಯಿಸದೆ ಮೌನವಾಗುಳಿದಿದ್ದು ಮೊನ್ನೆ ಸಾಕೇತ್ ರಾಜನ್ ಮತ್ತು ಶಿವಲಿಂಗರನ್ನು ಹತ್ಯೆ ಮಾಡಿದ್ದು ನಕ್ಸಲರ ಮುಖಂಡ ಗಂಗಾಧರ ಇದನ್ನು ನಾವೇ ಮಾಡಿದ್ದು ಎಂದು ಹೇಳಿಕೊಂಡಿರುವುದು ವಿಚಿತ್ರ ತಳಮಳಕ್ಕೆ ಕಾರಣವಾಗಿದೆ. ಇದು ಇನ್ನೊಂದು ಆವರ್ತದ ಆರಂಭದಂತಿದೆ.

ಈ ಒಂದು ಆವರ್ತದ ಕೊನೆ ಮತ್ತು ಮತ್ತೊಂದು ಆವರ್ತದ ನಡುವೆ ಅನೇಕ ವಿದ್ಯಮಾನಗಳು ಜರುಗಿವೆ. ಪೊಲೀಸರು,

ನಕ್ಸಲೀಯರು ಮತ್ತು ಸಂಘ ಪರಿವಾರದ ನಡುವೆ

ಜನಾಂಗೀಯ ಶ್ರೇಷ್ಠತೆಯ ಪ್ರಶ್ನೆ

ಪ್ರಸ್ತುತ

ನಕ್ಸಲರ ವಿರುದ್ಧವಾಗಿ ಎರಡು ಶಕ್ತಿಗಳು ಕ್ರಿಯಾಶೀಲವಾಗಿವೆ. ೧. ಪ್ರಭುತ್ವ ಮತ್ತು ಪೊಲೀಸ್. ೨. ಸಂಘ ಪರಿವಾರ. ಇವರ ನೆಲೆಗಳನ್ನು ಅರ್ಥಮಾಡಿಕೊಳ್ಳದ ಹೊರತು ಯಾರೂ ನಕ್ಸಲರನ್ನು ಸಮರ್ಥಿಸುವುದಾಗಲೀ, ವಿರೋಧಿಸುವುದಾಗಲೀ ಸರಿಯಲ್ಲ. ಏಕೆಂದರೆ ಈ ಅರ್ಥದ ಪದರಗಳಲ್ಲೇ ನಕ್ಸಲಿಸಮ್ಮಿನ ಜನ್ಮ ರಹಸ್ಯಗಳು ಹಾಗೂ ಸಾವಿನ ಸಂಕೇತಗಳು ಅಡಗಿವೆ. ವೆಂಕಟಮ್ಮನ ಹಳ್ಳಿಯ ಪೊಲೀಸರ ಹತ್ಯೆ ನಕ್ಸಲರಿಂದ ಆದದ್ದೋ ಅಲ್ಲವೋ ಎಂಬ ಜಿಜ್ಞಾಸೆಯಲ್ಲಿದ್ದಾಗಲೇ ನಕ್ಸಲರ ಮುಖಂಡ ಗಂಗಾಧರ ಇದನ್ನು ನಾವೇ ಮಾಡಿದ್ದು ಎಂದು ಹೇಳಿಕೊಂಡಿರುವುದು ವಿಚಿತ್ರ ತಳಮಳಕ್ಕೆ ಕಾರಣವಾಗಿದೆ. ಇದು ಇನ್ನೊಂದು ಆವರ್ತದ ಆರಂಭದಂತಿದೆ.

○ ಟಿ.ಎಸ್. ವಿವೇಕಾನಂದ

ಇದಕ್ಕೆ ಪ್ರತಿಕ್ರಿಯೆಯಾಗಿ ವೆಂಕಟಮ್ಮನ ಹಳ್ಳಿಯಲ್ಲಿ ಮೀಸಲು ಪೊಲೀಸರು ಕೊಲೆಯಾಗಿದ್ದು, ಇದರ ಮುಂದುವರಿಕೆಯಾಗಿ ಪೊಲೀಸರು ಸಾರ್ವಜನಿಕ ಶಿಕಾರಿಗಿಳಿದು... ಈಗ ಪಾವಗಡದ ಬೆಟ್ಟಗಳಲ್ಲಿ ಜಾಲಾಟದ ಆರಂಭದೊಂದಿಗೆ ಈ ಆವರ್ತದ ಮೊದಲ ಸುತ್ತು ಮುಗಿದಂತಾಗುತ್ತದೆ. ಸ್ಪಷ್ಟವಾಗಿ ಈ ಆವರ್ತ ಕರ್ನಾಟಕದ ಮಟ್ಟಿಗೆ ಮೊದಲನೆಯದಾದರೂ ಭಾರತದ ನಕ್ಸಲ್‌ಬರಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ಮೊದಲನೆಯದೇನಲ್ಲ. ಹಾಗೇ ಇದು ಕೊನೆಯದೂ ಅಲ್ಲ. ನಮ್ಮ ಪ್ರಭುತ್ವಗಳು ಎಷ್ಟೇ ಶಕ್ತಿಶಾಲಿ ಎಂದು ಹೇಳಿಕೊಂಡರೂ, ತೋರಿಸಿಕೊಂಡರೂ ಅವು ಈವರೆಗೂ ಇಂಥಾ ಎಲ್ಲಾ ಸಂಘಟನೆಗಳನ್ನು ಮಟ್ಟಹಾಕಿದ ಉದಾಹರಣೆಗಳು ತುಂಬಾ ವಿರಳ.

ಈ ಆವರ್ತದಲ್ಲಿ ತೃತೀಯ ಶಕ್ತಿಯಾಗಿ ಕಾಣಿಸಿಕೊಂಡಿರುವ ನಕ್ಸಲರ ವಿರುದ್ಧವಾಗಿ ಎರಡು ಶಕ್ತಿಗಳು ಕ್ರಿಯಾಶೀಲವಾಗಿವೆ. ಒಂದು : ಪ್ರಭುತ್ವ ಮತ್ತು ಪೊಲೀಸ್. ಎರಡು : ಸಂಘ ಪರಿವಾರ. ಇವರ ನೆಲೆಗಳನ್ನು ಅರ್ಥ ಮಾಡಿ

ಕೊಳ್ಳದ ಹೊರತು ಯಾರೂ ನಕ್ಸಲರನ್ನು ಸಮರ್ಥಿಸುವುದಾಗಲೀ, ವಿರೋಧಿಸುವುದಾಗಲೀ ಸರಿಯಲ್ಲ. ಏಕೆಂದರೆ ಈ ಅರ್ಥದ ಪದರಗಳಲ್ಲೇ ನಕ್ಸಲಿಸಮ್ಮಿನ ಜನ್ಮ ರಹಸ್ಯಗಳು ಹಾಗೂ ಸಾವಿನ ಸಂಕೇತಗಳು ಅಡಗಿವೆ.

ಮೊನ್ನೆಯಿಂದ 'ಎರಡನೇ ಆವರ್ತ' ಮೊಳಕೆಯೊಡೆದಿದೆ. ವೆಂಕಟಮ್ಮನ ಹಳ್ಳಿಯ ಪೊಲೀಸರ ಹತ್ಯೆ ನಕ್ಸಲರಿಂದ ಆದದ್ದೋ ಅಲ್ಲವೋ ಎಂಬ ಜಿಜ್ಞಾಸೆಯಲ್ಲಿದ್ದಾಗಲೇ ಬುದ್ಧಿಜೀವಿಗಳು, ನಕ್ಸಲರು ತಮಗೆ ತೋಚಿದಂತೆ ಅಟ್ಟಹಾಸದ ಮಾತುಗಳನ್ನು ಆಡಿದ್ದಾರೆ. ಪೊಲೀಸರು ತಮ್ಮ ಪರಾಕ್ರಮವನ್ನು ಸ್ವಲ್ಪ ಹೆಚ್ಚೇ ಹೊಗಳಿಕೊಂಡಿದ್ದಾರೆ. ಇದು ಒಂದೆಡೆ ವೀರಪ್ಪನ್ ಹತ್ಯೆಯ 'ಯಶಸ್ಸಿನ ನಶೆ' ಹಾಗೂ ಸರ್ಕಾರದ 'ನಿಷ್ಕ್ರಿಯ ಬೆಂಬಲ' ಇವರ ಉತ್ಸಾಹಕ್ಕೆ ಕಾರಣವಾಗಿರಬಹುದು. ಇದೆಲ್ಲದಕ್ಕಿಂತ ಮುಖ್ಯವಾಗಿ ಅವರ ಹತ್ಯೆಗಳಲ್ಲಿದ್ದ ಅನೈತಿಕತೆ, ಕಾನೂನು ಬಾಹಿರತೆಗಳ ಕಾರಣದಿಂದ ಅವರಲ್ಲಿ ಹುಟ್ಟಿದ್ದ ನೈತಿಕತೆಯ ಪ್ರಶ್ನೆಯನ್ನು ಮುಚ್ಚಿಹಾಕಲು ಅವರು ಹತಾಷರಾಗಿ ಬಳಸಿದ ಮಾರ್ಗವಾಗಿ ಇದು ಕಾಣುತ್ತದೆ. ಇರಲಿ, ಒಂದು ರಾಜ್ಯದ ಕಾನೂನು - ಸುವ್ಯವಸ್ಥೆಯ ಹೊಣೆ ಹೊತ್ತ ಪೊಲೀಸರ ಈ ನಡವಳಿಕೆಯನ್ನು ಇಲ್ಲಿ ತುರ್ತು ವಿಮರ್ಶೆಗೆ ಒಳಪಡಿಸುವುದು ಬೇಡ.

ಏಕೆಂದರೆ ಈ ಪೊಲೀಸರೇನು ಅಭಿವೃದ್ಧಿಗೆ ಅಡ್ಡಿಮಾಡಿದವರಲ್ಲ, ಒಂದು ಚುನಾಯಿತ ಸರ್ಕಾರ, ಒಂದು ಸಂಪುಟ, ಒಬ್ಬ ಮುಖ್ಯಮಂತ್ರಿ ಈ ಬಂದೂಕ ಹಿಡಿಯಲು ಕಾರಣವಾದ ಜನರ ಸಂಕಟಗಳನ್ನು ನಿವಾರಿಸಲೇಬೇಕು ಎಂದು ಪಣ ತೊಟ್ಟು ಹೊರಟಿದ್ದರೆ ಪೊಲೀಸರೇನು ಅಡ್ಡ ಬರುತ್ತಿರಲಿಲ್ಲ. ಸರ್ಕಾರ ಉದ್ದೇಶಕ್ಕೆ ಬದ್ಧವಾಗಿದ್ದರೆ ಪೊಲೀಸ ರನ್ನೂ ಇದಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದಿತ್ತು.

ಅಲ್ಲದೆ, '೧೯೯೧ರ ಜನಗಣತಿಯ ಪ್ರಕಾರ ಭಾರತದ ಶೇಕಡಾ ೭೪.೩ ಜನರು ಹಳ್ಳಿಗಳಲ್ಲಿದ್ದು ತಮ್ಮ ಹೊಲದ ಕೃಷಿ ಕೂಲಿಯ ಮೇಲೆ ಜೀವನ ಮಾಡುತ್ತಾರೆ. ಆಥ್ರೋಪಾಲಜಿಕಲ್ ಸರ್ವೇ ಆಫ್ ಇಂಡಿಯಾದ ಅಧ್ಯಯನದ ಪ್ರಕಾರ ಭಾರತದಲ್ಲಿ ಒಟ್ಟು

೪೬೩೫ ಬೇರೆ ಬೇರೆ ಸಮುದಾಯಗಳಿವೆ. ಈ ಒಂದೊಂದು ಸಮುದಾಯವನ್ನೂ ಆ ಸಮುದಾಯಗಳ ಹೆಚ್ಚಿನ ಜನರು ಅವಲಂಬಿಸಿರುವ 'ಆಧಾರಗಳ' ಬುನಾದಿಯ ಮೇಲೆ ಆಯಾ ಸಮುದಾಯಗಳನ್ನು ಇವರು ಗುರುತಿಸುತ್ತಾರೆ. ಅದರ ಪ್ರಕಾರ ಶೇಕಡಾ ೫.೧ ಸಮುದಾಯಗಳು ಇನ್ನೂ ಗೆಡ್ಡೆ ಗೆಣಸು, ಬೇಟೆಗಾರಿಕೆಯ ಮೇಲೆ ಅವಲಂಬಿಸಿದೆ. ಶೇಕಡಾ ೨.೪ ಸಮುದಾಯಗಳು ಪಕ್ಷಿ ಹಿಡಿಯುವುದು, ಶೇ ೮.೩ ಮೀನುಗಾರರು, ಶೇ ೩.೭ ವಲಸೆ ಕೃಷಿಕರು, ಶೇ ೪.೭ ಬೆಟ್ಟಗಳ ಮೇಲೆ ಸಮತಲ ಕೃಷಿ ಮಾಡುವವರು, ಶೇ ೫೪ ಪಕ್ಕಾ ಭೂಮಿ ಇರುವ ರೈತರು, ಶೇ ೪.೩ ಹಣ್ಣು ಬೆಳೆಗಾರರು, ಶೇ ೨೧.೫ ಸಾಕು ಪ್ರಾಣಿಗಳ ಮೇಲೆ ಅವಲಂಬಿತರಾದವರು, ಶೇ ೦.೮ ಕುರಿಗಾಹಿಗಳು, ಶೇ ೩.೫ ಚಾಪೆ ಮತ್ತು ಬುಟ್ಟಿ ನೇಯುವವರು ಹಾಗೂ ಶೇ ೩.೯ ಬಡಿಗಿ ವೃತ್ತಿಯವರು ಇದ್ದಾರೆ' ಎಂಬ ಸಾಮಾಜಿಕ ಕಹಿ ವಾಸ್ತವಗಳ ಬಗ್ಗೆ ಈ ಪೊಲೀಸರಿಗೆ ಮಾಹಿತಿ ಇರುವುದಿಲ್ಲ. ಇವರ ಬಳಿ ಇರುವುದು ಕೇವಲ ಕ್ರಿಮಿನಲ್‌ಗಳ ಅಂಕಿ ಅಂಶಗಳು ಮಾತ್ರ. ಈ ಕ್ರಿಮಿನಲ್‌ಗಳು ಏಕೆ ಹುಟ್ಟಿಕೊಳ್ಳುತ್ತಾರೆ ಎಂಬುದನ್ನು ಅಧ್ಯಯನ ಮಾಡುವುದಾಗಲೀ, ಅರ್ಥಮಾಡಿಕೊಳ್ಳುವುದಾಗಲೀ ತಮ್ಮ ಜವಾಬ್ದಾರಿ ಎಂದು ಈ ಪೊಲೀಸರು ಎಂದೂ ಭಾವಿಸಿಲ್ಲ. ಹೀಗೆನ್ನುವುದಕ್ಕಿಂತ ನಮ್ಮ ಸರ್ಕಾರಗಳು ಇಂಥಾ ಜವಾಬ್ದಾರಿ, ಅವಕಾಶ, ಅಧಿಕಾರಗಳನ್ನು ಅವರಿಗೆ ನೀಡಿಲ್ಲ ಎನ್ನುವುದೇ ಸರಿ.

ಈ ೪೬೩೫ ಸಮುದಾಯಗಳಲ್ಲಿ ೪೨೮೫ ಸಮುದಾಯಗಳ ಅನೇಕರು ಪ್ರತಿದಿನದ ಆಹಾರ ಬೇಯಿಸಿಕೊಳ್ಳಲು ಸೌದೆ-ಪುಳ್ಳೆಗಳನ್ನೇ ಆಶ್ರಯಿಸಿದ್ದಾರೆ. ೧೫೧೪ ಸಮುದಾಯಗಳು ಸಗಣಿಯನ್ನು ಬೆರಣಿ ಮಾಡಿ ಸೌದೆಗೆ ಪರ್ಯಾಯವಾಗಿ ಬಳಸುತ್ತಿದ್ದಾರೆ. ಇದಾವುದೂ ಇಲ್ಲದ ಕನಿಷ್ಠ ಶೇ ೧೪.೨೩ ಜನಸಂಖ್ಯೆ ಇಂದಿಗೂ ಆಧರಿಸಿರುವುದು ಸಮುದಾಯ ಭೂಮಿಯಿಂದ ಸಿಗಬಹುದಾದ ಜೈವಿಕ ವಸ್ತುಗಳ ಮೇಲೆ. ಈ ಮಾದರಿ ಜನಗಳು ಇಂದು ಹೆಚ್ಚಾಗಿ ನೆಲೆಸಿರುವುದು ಕಾಡುಗಳು ಇಲ್ಲವೇ ಗ್ರಾಮಾಂತರ ಕರ್ನಾಟಕದಲ್ಲಿ. ಈ ಮಾಹಿತಿಯಂತೂ ಪಶ್ಚಿಮಘಟ್ಟಗಳಲ್ಲಿ ವಾಸಿಸುವ ಇಂಥದ್ದೇ ಜನರ ವಿರುದ್ಧ ಕಾರ್ಯನಿರತರಾಗಿರುವ ಪೊಲೀಸರಲ್ಲಿ ಇರುವುದು ಅಸಾಧ್ಯ. ಅವರಿಗೆ ಅದು ಬೇಕಾಗಿಯೂ ಇಲ್ಲ.

ಆದರೆ ಇಲ್ಲಿ 'ಮಾಹಿತಿ ತರುವ, ಬಂದೂಕ ಚಲಾಯಿಸುವ, ಹೆಣಗಳನ್ನು ಕಾಯುವ-ಹೊರುವ' ಕೆಲಸಗಳನ್ನು ಮಾಡುವುದು ಇದೇ ವರ್ಗದಿಂದ ಬಂದ ಜನರಾದರೂ ಒಮ್ಮೆ ಈ ಸಮವಸ್ತ್ರ ಧಾರಣೆಯೊಂದಿಗೆ ಇವರೂ ಪ್ರಭುತ್ವದ ಪರವಾಗಿ ಯೋಚಿಸತೊಡಗುತ್ತಾರೆ..., ಇದು ನಮ್ಮ ಪ್ರಭುತ್ವಗಳ ಸಾಮರ್ಥ್ಯ ಹಾಗೇ ಜನಸಾಮಾನ್ಯರ ಗುಲಾಮಿಕೆಯ ದೌರ್ಬಲ್ಯವಾಗಿದೆ. ಸಂವಿಧಾನ ರಕ್ಷಣೆ, ಕಾನೂನು ಪಾಲನೆಯಂಥಾ ಹುಸಿ ಹುಮ್ಮಸ್ಸಿನ ಮೂಲಕ ಆ ವರ್ಗದ ಪೇದೆಗಳಿಗೆ ಇದೆಲ್ಲಾ ಅರ್ಥವಾಗದಂತೆ ಮಾಡಿರುವುದೇ ನಮ್ಮ ಒಟ್ಟು ಆಡಳಿತ ವ್ಯವಸ್ಥೆ.

ಈ ವಿವರಗಳನ್ನು ನಮ್ಮ ಪ್ರಭುತ್ವ, ಪೊಲೀಸು ಇಬ್ಬರಲ್ಲಿ ಯಾರನ್ನಾದರೂ ಸರಿ, ವೈಯಕ್ತಿಕವಾಗಿ ಪ್ರಶ್ನಿಸಿದಾಗ ನಿಜವಾಗಿಯೂ ಅವರು ಈ ವರ್ಗಗಳ ಜನರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತಾರೆ. ಆದರೆ ಇಲ್ಲಿ ಪೊಲೀಸರದು ಸಂಬಳದ-ಕೂಲಿಯ ಪ್ರಶ್ನೆಯಾದ್ದರಿಂದ ಸಮವಸ್ತ್ರ ಬಂದೂಕ ಕೈಗೆ ಸಿಗುತ್ತಿದ್ದಂತೆ ಇದೇ ಜನರ ವಿರುದ್ಧವಾಗಿ ಗುಂಡು ಹಾರಿಸುತ್ತಾರೆ. ಅವರಿಗೆ ಗೊತ್ತು...! ನಮಗೆ ಈ ವ್ಯವಸ್ಥೆ ಸಂಬಳ-ಕೂಲಿ ಕೊಡುವುದೇ ನಾವು ಆ ವ್ಯವಸ್ಥೆಯ ಹುಳುಕುಗಳನ್ನು ಮುಚ್ಚಿಹಾಕಲಿಕ್ಕೆ ಎಂದು!! ಇದು ನಮ್ಮ ಪ್ರಭುತ್ವಕ್ಕೂ ಗೊತ್ತು. ನಾವು ಪೊಲೀಸರಿಗೆ ಸಂಬಳಕೊಟ್ಟು ಇಟ್ಟುಕೊಂಡಿರುವುದು ನಮ್ಮೆಲ್ಲಾ ತಾಯ್ಗಂಡತನಗಳನ್ನು ಮುಚ್ಚಿಡಲು ಹಾಗೂ ಅಂಥವುಗಳನ್ನು ಹೊರತೆಗೆಯುವ ಜನರ ಬಾಯಿಮುಚ್ಚಿಸಲು ಎಂದು !! ಹೀಗಿದ್ದಾಗ ಈ ಎರಡೂ ಗುಂಪುಗಳ ನಡವಳಿಕೆಗಳು ಒಂದಕ್ಕೊಂದು ಪೂರಕವಾಗಿದ್ದು, ಅವಕ್ಕೆ ಕನಿಷ್ಠ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವ ಉದ್ದೇಶವಿರುತ್ತದೆ.

ಆದರೆ ಈ ನಕ್ಸಲರ ವಿರುದ್ಧ ಕೂಗಾಡುತ್ತಿರುವ ಸಂಘಪರಿವಾರಕ್ಕೆ ?! ಗೊತ್ತಿಲ್ಲ, ಆರಂಭದಿಂದಲೂ ಈ ಸಂಘ ಪರಿವಾರಗಳು ನಕ್ಸಲರ ವಿರುದ್ಧ ಕೂಗಾಡುತ್ತಲೇ ಇದ್ದಾರೆ. ಊರೊಳಗಿದ್ದೂ ನಕ್ಸಲರಿಗಿಂತ ಅಚ್ಚುಕಟ್ಟಾಗಿ ತಮ್ಮ ವಿರುದ್ಧ ಎದ್ದ ಧ್ವನಿಗಳನ್ನು ಮಟ್ಟಹಾಕಲು ಭಯೋತ್ಪಾದಕ ತಂತ್ರಗಳನ್ನು ಬಳಸುತ್ತಿದ್ದಾರೆ. ವ್ಯಕ್ತಿಗತ ದಾಳಿ, ಸಾಮೂಹಿಕ ದಾಳಿ, ಸುದ್ದಿ ದಾಳಿ, ಅಪಪ್ರಚಾರದ ದಾಳಿಗಳನ್ನು ಮಾಡುತ್ತಾ..., ಈ ಮೇಲೆ ಶೇಕಡಾವಾರು ಲೆಕ್ಕದಲ್ಲಿ ಮಂಡಿಸಲಾದ ಜನರ ಪರವಾಗಿ ಮಾತನಾಡುವ, ಇವರ ಪರವಾಗಿ ಹೋರಾಡುವ ಯಾವುದೇ ಸಂಘಟನೆಗಳನ್ನು, ಶಕ್ತಿಗಳನ್ನು ಅವರು ಪ್ರಬಲವಾಗಿ ವಿರೋಧಿಸುತ್ತಾರೆ. ಸರ್ವರ ಸಮಾನತೆಯನ್ನು ಬಯಸುವ ಅಂಬೇಡ್ಕರ್, ಹಿಂದುವಾಗಿದ್ದುಕೊಂಡು ಮುಸ್ಲಿಮರ ಪರ ವಾದಿಸಿದ ಗಾಂಧಿ, ಗಳಿಕೆಯ ಸಮಾನ ಹಂಚಿಕೆಯನ್ನು ಪ್ರತಿಪಾದಿಸುವ ಕಮ್ಯುನಿಸಂ, ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುವ ಸಮಾಜವಾದಿಗಳು ಎಲ್ಲರೂ ಇವರ ಶತ್ರುಗಳು. ಈ ಎಲ್ಲರನ್ನೂ ಅವರು ವಿರೋಧಿಸುತ್ತಾರೆ.

ಲಾಲೂ ಪ್ರಸಾದ್ ಯಾದವ್ ಇವರ ಶತ್ರು ಏಕೆಂದರೆ ಆತ ಬಿಹಾರವನ್ನು ಅಭಿವೃದ್ಧಿ ಮಾಡಿಲ್ಲ ಎನ್ನುವ ಕಾರಣದಿಂದ ಅಲ್ಲ! ಬದಲಾಗಿ ಆತ ಸಂಘಪರಿವಾರದ ವಿರೋಧಿ ಎಂಬ ಕಾರಣದಿಂದ. ಈತ ಅಡ್ವಾಣಿಯ ರಥಯಾತ್ರೆಯನ್ನು ತಡೆದು ನಿಲ್ಲಿಸಿದ 'ಶೂದ್ರ ಪುರುಷ' ಎಂಬ ಕಾರಣದಿಂದ!! ಜೊತೆಗೆ ಅಲ್ಲಿನ ಪ್ರಭುತ್ವದಲ್ಲಿ ಇವರು ಆಶಿಸುವ ಜಾತಿಗಳ ಕೈಗೆ ಅಧಿಕಾರ ಬಂದಿಲ್ಲ ಎಂಬ ಕಾರಣದಿಂದ !!! ಇವರು ಒಂದು ಕಾಲದ ಮಹಾನ್ ಸಮಾಜವಾದಿ ಜಾರ್ಜ್ ಫರ್ನಾಂಡೀಸರನ್ನು ಏಕೆ ಮೆಚ್ಚುತ್ತಾರೆ ಎಂದರೆ ಆತ ಸಮಾಜವಾದಿ ಎಂದಾಗಲೀ, ದಕ್ಷ ಆಡಳಿತಗಾರನೆಂದಾಗಲೀ, ಸರಳ-ಪ್ರಾಮಾಣಿಕ ರಾಜಕಾರಣಿ ಎಂದಾಗಲೀ ಅಲ್ಲ?! ಬದಲಾಗಿ ಅವರು ಈಗ ಸಮಾಜವಾದಿಯಲ್ಲ ಎಂಬ ಕಾರಣದಿಂದ !!! ಆತ ಗುಜರಾತಿನ ನರಮೇಧವನ್ನು ಸಮರ್ಥಿಸುವ ಮೂಲಕ, 'ಭಾರತ ಪ್ರಕಾಶಿಸುತ್ತಿದೆ' ಎಂಬ ಹುಸಿ ಭ್ರಮೆಯನ್ನು ದೇಶದ ಮುಂದೆ ಮಂಡಿಸಲು ಸಹಾಯಕನಾಗುವ ಮೂಲಕ ಅದನ್ನು ಸಾಬೀತು ಪಡಿಸಿದ್ದಾರೆ. ಇದು ಈ ಸಂಘಪರಿವಾರಗಳಿಗೆ ಮುಖ್ಯ.

ನಕ್ಸಲರು ಬಂದೂಕ ಹಿಡಿದಿರುವುದು ತಮ್ಮ ಬೆಂಬಲಿಗರ ವಿರುದ್ಧ ಎಂದು ಈ ಸಂಘಪರಿವಾರಕ್ಕೆ ಸ್ಪಷ್ಟವಾಗಿ ಗೊತ್ತಿದೆ. ಇವರು ವ್ಯಾಪಾರಿಗಳು, ಭೂಮಾಲೀಕರು, ಅದರಲ್ಲೂ ಉಚ್ಚ ಜಾತಿಯವರ ಬೆಂಬಲಗಳ ಮೂಲಕವೇ ಈವರೆಗೂ ಸಾಗಿ ಬಂದಿರುವ ಜನ. ಈ ನಾಡಿನ ಆದಿವಾಸಿಗಳು ಈ ದೇಶದ ಮೂಲ ನಿವಾಸಿಗಳು. ಅವರಿಗೆ ಅವರದೇ ಆದ ಜೀವನ ಕ್ರಮವಿದೆ. ಅವರದೇ ಆದ ಸಂಸ್ಕೃತಿ ಇದೆ. ಅವರದೇ ಆದ ಕಟ್ಟುಪಾಡುಗಳಿವೆ. ಇವು ಈ ನೆಲೆ ಮಣ್ಣಿನಿಂದ ಹುಟ್ಟಿದವು. ಇವು ಉಳಿದಿರುವವರೆಗೂ ಈ ಸಂಘಪರಿವಾರದ ಜನಾಂಗೀಯ ಶ್ರೇಷ್ಠತೆಯನ್ನು ಪ್ರಶ್ನಿಸುತ್ತಲೇ ಇರುತ್ತವೆ.

ಈಗ ನಕ್ಸಲರು ಬಂದೂಕ ಹಿಡಿದಿರುವುದು ಸಹ ತಮ್ಮ ಬೆಂಬಲಿಗರ ವಿರುದ್ಧ ಎಂದು ಈ ಸಂಘಪರಿವಾರಕ್ಕೆ ಸ್ಪಷ್ಟವಾಗಿ ಗೊತ್ತಿದೆ. ಇವರು ವ್ಯಾಪಾರಿಗಳು, ಭೂಮಾಲೀಕರು, ಅದರಲ್ಲೂ ಉಚ್ಚ ಜಾತಿಯವರ ಬೆಂಬಲಗಳ ಮೂಲಕವೇ ಈವರೆಗೂ ಸಾಗಿ ಬಂದಿರುವ ಜನ. ಈ ನಾಡಿನ ಆದಿವಾಸಿಗಳು ಈ ದೇಶದ ಮೂಲ ನಿವಾಸಿಗಳು. ಅವರಿಗೆ ಅವರದೇ ಆದ ಜೀವನ ಕ್ರಮವಿದೆ. ಅವರದೇ ಆದ ಸಂಸ್ಕೃತಿ ಇದೆ. ಅವರದೇ ಆದ ಕಟ್ಟುಪಾಡುಗಳಿವೆ. ಇವು ಈ ನೆಲೆ ಮಣ್ಣಿನಿಂದ ಹುಟ್ಟಿದವು. ಇವು ಉಳಿದಿರುವವರೆಗೂ ಈ ಸಂಘಪರಿವಾರ ಜನಾಂಗೀಯ ಶ್ರೇಷ್ಠತೆಯನ್ನು ಅವು ಪ್ರಶ್ನಿಸುತ್ತಲೇ ಇರುತ್ತವೆ. ಯಾರೇ ಬಂದು ನೋಡಿದರೂ 'ಸ್ವಂತ' - 'ಅನ್ಯ'ಗಳ ಭಿನ್ನತೆ ಎದ್ದು ಕಾಣುತ್ತದೆ. ಈ 'ಅನ್ಯ' ವಾದದ್ದು 'ಸ್ವಂತ'ವನ್ನು ನಾಶಪಡಿಸುವವರೆಗೆ ಅದು 'ಸ್ವಂತ'ವಾಗಲು ಸಾಧ್ಯವಿಲ್ಲ! ಈ ಸತ್ಯ ಅವರಿಗೆ ಗೊತ್ತಿದೆ. ಆದರೆ 'ಸ್ವಂತ' ಅಷ್ಟು ಸುಲಭವಾಗಿ ಕೊನೆಗಾಣುವುದಿಲ್ಲ.

ಆದ್ದರಿಂದಲೇ ಬಿಜೆಪಿ ಎಂದೂ ಬಡವರ, ದಲಿತರ ಹಸಿದವರ ಪರವಾಗಿ ಮಾತನಾಡುವುದಿಲ್ಲ? ಈ ಸಂಘಪರಿವಾರ ನಕ್ಸಲಿಸಂ ಅನ್ನು ವಿರೋಧಿಸುವುದೇಕೆಂದರೆ ಅದು ಹಿಂಸೆಯನ್ನು ಪ್ರತಿಪಾದಿಸುತ್ತದೆ ಎಂದಲ್ಲ! ಇವರು ಪ್ರತಿಪಾದಿಸುವ ಜನಾಂಗೀಯ ಶ್ರೇಷ್ಠತೆಯ ವಾದವೇ ಮೂಲತಃ ಪರಮ ಹಿಂಸೆ. ಸಹ ಜನಾಂಗಗಳನ್ನು ವರ್ಣಾಶ್ರಮದ ಹೆಸರಿನಲ್ಲಿ ವಿಂಗಡಿಸಿದ್ದೇ ಭಾರತದ ಇಂದಿನ ಎಲ್ಲಾ ತಾರತಮ್ಯ-ಹಿಂಸೆಗಳ ಮೂಲ. ರಾಜಕೀಯ ಇಚ್ಛಾಶಕ್ತಿ ಸಹ ದ್ವಿತೀಯ ಕ್ರಮದಲ್ಲಿ ಬರುತ್ತದೆ. ಏಕೆಂದರೆ ಆ ಇಚ್ಛಾಶಕ್ತಿಯನ್ನು ಸಹ ಈವರೆಗೂ ನಿಯಂತ್ರಿಸುತ್ತಾ ಬಂದಿದ್ದು ಅವರೇ !! ಹಾಗೇ ನಾಗರಿಕ ಮನಸ್ಸುಗಳನ್ನು.

ಇವೆಲ್ಲವನ್ನೂ ನಖಶಿಖಾಂತ ಅನ್ವೇಷಿಸುವುದು ದೊಡ್ಡ ಸರ್ಕಸ್ ಆಗುತ್ತದೆ. ಹಾಗಾಗಿ ಇತ್ತೀಚಿನ ಕೆಲವು ಪ್ರಮುಖ ವಿದ್ಯಾಮಾನಗಳ ಮೂಲಕ ಇವನ್ನು ಚರ್ಚಿಸಬಹುದು. ಇವು ಬಹಳಷ್ಟನ್ನು ಸಂಕೇತಿಸುತ್ತವೆ.

ಈ ಸಂಕೇತಗಳು ಹೇಗೆ ಪ್ರಕಟಗೊಳ್ಳುತ್ತವೆ ಎಂದರೆ..., ನಮ್ಮೆಲ್ಲರ ಪ್ರೀತಿಯ ಎಂ.ಎಸ್. ಸತ್ಯು 'ವಿನಾಕಾರಣ' ಡಾ॥ ರಾಜ್‌ರ ಮೇಲೆ ಹರಿಹಾಯುತ್ತಾರೆ. ಇದಕ್ಕೆ ಇಡೀ ಸಿನಿಮಾ ಉದ್ಯಮದ ಅಧೋಗತಿಯನ್ನು ಕಾರಣ ನೀಡುತ್ತಾರೆ. ಕೊಸರಿಗೆ ಉಪೇಂದ್ರನನ್ನೂ ಸೇರಿಸಿಕೊಳ್ಳುತ್ತಾರೆ. ಇವೆಲ್ಲಾ ಅವರ ಪ್ರಾಮಾಣಿಕ ಅನಿಸಿಕೆಗಳೇ ಇರಬಹುದು. ಆದರೆ ಕರ್ನಾಟಕದ ಸಿನಿಮಾ ಇತಿಹಾಸವನ್ನು

ನೋಡಿದಾಗ ಆ ಮಾತುಗಳಿಗೊಂದು ವಿಚಿತ್ರ ಪ್ರಭಾವಳಿ ಸೃಷ್ಟಿಯಾಗುತ್ತದೆ. ಈ ಪ್ರಭಾವಳಿಗಳ ಪ್ರಖರತೆಯನ್ನು ಸತ್ಯು ಪ್ರತಿನಿಧಿಸುವ ಕಲೆಯ ಕ್ಷೇತ್ರದಿಂದಲೇ ಆರಂಭಿಸುವುದಾದರೆ ನೀವು ಈ ರಾಷ್ಟ್ರದ ಘನತೆಯನ್ನು ಆಸ್ಕರ್ ಮಟ್ಟಕ್ಕೆ ಕೊಂಡೊಯ್ದ ಆಶುತೋಷ್ ಗೌರೀಕರ್‌ರ 'ಲಗಾನ್' ಚಿತ್ರದಲ್ಲಿ ಕಾಣಬಹುದು. ಇದೇ ನಿರ್ದೇಶಕ ಇತ್ತೀಚಿನ ಮಹಾನ್ ಚಿತ್ರವಾದ 'ಸ್ವದೇಶ್' ನಲ್ಲಿ ಸಹ. ಎರಡೂ ಚಿತ್ರಗಳ ಯಶಸ್ವೀ ನಾಯಕರು ಮುಸ್ಲಿಮರು.

ಥೂ.... ಕಲೆಯಲ್ಲಿ ಜಾತಿ-ಧರ್ಮ ಎಲ್ಲಿಂದ ಬರುತ್ತದೆ ? ಕಲೆ, ಕಲೆ ಮಾತ್ರ. ಅದು ಧರ್ಮ ಕರ್ಮ ಜಾತಿಗಳಿಂದ ಅತೀತವಾದದ್ದು. ಅದು ಕೇವಲ ಮಾನವೀಯವಾದದ್ದು. ಮಾನವ ಜನಾಂಗದ ಒಟ್ಟು ಒಳಿತನ್ನು ಕೋರುವಂಥದ್ದು, ಆದರ್ಶಗಳ ಕನಸುಗಳನ್ನು ಬಿತ್ತುವಂಥದ್ದು. 'ಉದಾತ್ತವಾದ' ಕಲೆಯ ವಿಷಯದಲ್ಲಿ ಇಂಥಾ ಮಾತುಗಳನ್ನಾಡಿದರೆ ಮೇಲಿನ ಪ್ರತಿಕ್ರಿಯೆಗಳು ಥಟ್ಟನೆ ಹೊರಬರುತ್ತವೆ. ಆದರೂ...., ಲಗಾನ್ ಮತ್ತು ಸ್ವದೇಶ್ ಹೇಳುವುದೇನು ?

ಇವು ಉದ್ದೇಶ ಪೂರ್ವಕವಲ್ಲದೇ ಇರಬಹುದು !! ಆದರೆ ಅವು ಮಾಡುವ ಪರಿಣಾಮಗಳೇನು ? ಅಥವಾ ದೃಷ್ಟಿಕೋನಗಳು ಎಲ್ಲಿಂದ ಹುಟ್ಟಿ ಬರುತ್ತವೆ. ಈ ಚಿತ್ರಗಳ ವಿಮರ್ಶೆಯಾಗಲೀ, ಟೀಕೆಯಾಗಲೀ ಇಲ್ಲಿ ಮುಖ್ಯವಲ್ಲ. ಚಿತ್ರವೊಂದು ತನ್ನ ಕಲಾತ್ಮಕ ಚೌಕಟ್ಟಿನಲ್ಲಿ ಕೊಡುವ ಅಥವಾ ಕೊಡಬಯಸುವ ಸಂದೇಶ ಏನು ? ಆ ಸಂದೇಶವೇ ಏಕೆ ? ಎಂಬುದಷ್ಟೇ ಈ ಚರ್ಚೆಯ ಮುಖ್ಯವಸ್ತು.

ಈ ಚಿತ್ರಗಳೇ ಏಕೆ ಎಂದರೆ ?! ಮೊದಲನೆಯದಾಗಿ ಇವೆರಡೂ ಒಬ್ಬನೇ ನಿರ್ದೇಶಕನವು. ಈ ಎರಡೂ ಚಿತ್ರಗಳ ನಾಯಕರು ಸಂಘ ಪರಿವಾರ ಯಾರನ್ನು ತನ್ನ ಪ್ರಥಮ ಶತ್ರು ಎಂದು ಭಾವಿಸಿದೆಯೋ ಅಂಥಾ ಮುಸ್ಲಿಮರು. ಇದರಲ್ಲಿ ಒಂದು ಚಿತ್ರ ಆಸ್ಕರ್ ಪ್ರಶಸ್ತಿಗೆ ಸ್ಪರ್ಧಿಸಿ ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದು. ಈ ದೇಶದ ಮನೆಮಂದಿಯೆಲ್ಲಾ ಸಾವಧಾನದಿಂದ ೩ ಗಂಟೆ ೪೨ ನಿಮಿಷ ಕುಳಿತು ನೋಡಿ, ಅದಕ್ಕೆ ಆಸ್ಕರ್ ಸಿಗಲಿ ಎಂದು ತಮ್ಮ ಮನೆ ದೈವಗಳಿಗೆ ಹರಕೆ ಹೊತ್ತಿದ್ದರು. ಇನ್ನು 'ಸ್ವದೇಶ್' ಸ್ವದೇಶದ ಪರಿಕಲ್ಪನೆಯನ್ನು ಮತ್ತೊಮ್ಮೆ 'ಪ್ರತಿಭೆ', 'ಬದ್ಧತೆ', 'ದೇಶಪ್ರೇಮದ' ಹೆಸರಿನಲ್ಲಿ ನಮ್ಮ ಮುಂದೆ ಪ್ರಸ್ತುತಪಡಿಸಲು ಯತ್ನಿಸಿದ್ದು. ಮಾಧ್ಯಮಗಳಲ್ಲಿ ತೀವ್ರ ಪ್ರಚಾರ ಪಡೆದು, ಜನರ ಗಮನ ಸೆಳೆದಿದ್ದು. ದೇಶಪ್ರೇಮದ, ಹಳ್ಳಿಗಳ ಉದ್ಧಾರಕ್ಕೆ ಯುವ ಜನತೆಯನ್ನು ಪ್ರೇರೇಪಿಸುವಂಥದ್ದು. ಇದು ಹಿನ್ನೆಲೆಯಲ್ಲಿರಲಿ.

ನೀವು ಅಶುತೋಷ್ ಗೌರೀಕರ್‌ರ ಮಹತ್ವದ ಚಿತ್ರಗಳಾದ ಲಗಾನ್ ಮತ್ತು ಸ್ವದೇಶ್ ಚಿತ್ರಗಳನ್ನು ನೋಡಿದ್ದರೆ ಈ ನಮ್ಮ ಚರ್ಚೆ ಸ್ವದೇಶ್ ಚಿತ್ರದ ನಾಯಕ ಮೋಹನ್ ಭಾರ್ಗವನ ಗ್ರಾಮೀಣಾಭಿವೃದ್ಧಿ ಕಲ್ಪನೆಯಷ್ಟೇ ಸಲೀಸಾಗಿರುತ್ತದೆ. ಇಲ್ಲದಿದ್ದರೂ ಆತಂಕವೇನಿಲ್ಲ, ನೀವು ಡಾ॥ ರಾಜ್‌ರ ಬಂಗಾರದ ಮನುಷ್ಯ ಸಿನೆಮಾ ನೋಡಿದ್ದರೂ ಸಾಕು. ಅದರ 'ಶಾರುಖ್ ಖಾನ್ ವಿಸ್ತರಣೆ' ಈ ಸ್ವದೇಶ್. ಬಹುಶಃ ೫೦-೬೦ರ ದಶಕದಲ್ಲಿ ಮಂಡಿಸಬಹುದಾಗಿದ್ದ ಮೇಲ್ನೋಟದ ಹಳ್ಳಿಗಳ ಅಭಿವೃದ್ಧಿಯ ಹುಮ್ಮಸ್ಸನ್ನು ಹುಟ್ಟಿಸುವ 'ಉಪ್ಪರಿಗೆ ದೃಷ್ಟಿಕೋನ'ದ ಸೆಲ್ಯುಲಾಯ್ಡ್ ರೂಪ.

ಈ ಜಗತ್ತಿನ ಪ್ರತಿಯೊಂದು ಜೀವಿಯೂ ಗ್ರಹಿಸುವುದು ತನ್ನ ನೆಲೆಯಿಂದ. ಸಾಮಾನ್ಯವಾಗಿ ಈ ಜಗತ್ತು ಕೆಳಗೆ

ನಿರ್ದೇಶಕ ಅಶುತೋಷ್ ಗೌರೀಕರ್‌ರ ಸ್ವದೇಶ್ ಚಿತ್ರದಲ್ಲಿ ಒಬ್ಬ ಬ್ರಾಹ್ಮಣನೇ ಬಂದು ಅಸ್ಪೃಶ್ಯತೆಯನ್ನು ವಿರೋಧಿಸಿ ಮಾತನಾಡುವುದು, ಅವರನ್ನೂ ಮುಖ್ಯವಾಹಿನಿ ಎಂದು ಇದೇ ಸ್ಪೃಶ್ಯರು ಹೇಳುವಂಥ ಜೀವನಧಾರೆಗೆ ಆಹ್ವಾನಿಸುವುದು... ಎಲ್ಲವೂ ಅಮೋಘಾದ್ಭುತವಾಗಿ ಕಾಣುತ್ತವೆ. ಆದರೆ ಇಡಿಯಾಗಿ ಭಾರತದ ವರ್ಣಾಶ್ರಮ ಧರ್ಮದ ಇತಿಹಾಸವನ್ನು ನೋಡಿದರೆ ಈ ಚಿತ್ರದ ಆದರ್ಶ ಸಹ ಅದರ ವಿಸ್ತರಣೆಯಾಗಿ ಕಾಣುತ್ತದೆ. ನಿಜವಾದ ಸತ್ಯು, ನಿಜವಾದ ಗೌರೀಕರ್ ಬಿಚ್ಚಿಕೊಳ್ಳುವುದು ಇಲ್ಲೇ !! ಇದನ್ನೇನು ಅವರು ಪ್ರಜ್ಞಾಪೂರ್ವಕವಾಗಿ ಮಾಡುತ್ತಿಲ್ಲ ಎಂದರೂ....!? ಇದೇ ಮೋಹನ ಭಾರ್ಗವನ ಜಾಗದಲ್ಲಿ ಒಬ್ಬ ಆದಿವಾಸಿ, ಒಬ್ಬ ದಲಿತ, ಒಬ್ಬ ಅಗಸ, ಒಬ್ಬ ಹಜಾಮ, ಒಬ್ಬ ಮೇದ, ಒಬ್ಬ ಲಂಬಾಣಿ... ಇವರೇ ಏಕೆ ಅದೇ ಚಿತ್ರದ ನಿಜ ನಾಯಕ ಶಾರುಖ್ ಖಾನನಂಥಾ ಒಬ್ಬ ಮುಸ್ಲಿಂ, ಒಬ್ಬ ಕ್ರಿಶ್ಚಿಯನ್‌ನನ್ನು ಏಕೆ ಈ ಮನಸ್ಸುಗಳು ಕಲ್ಪಿಸಿಕೊಳ್ಳುವುದಿಲ್ಲ ?

ನಿಂತು ಮೇಲಕ್ಕೆ ನೋಡುತ್ತದೆ. ಆದರೆ ಕೆಲವರಿಗೆ ಮಾತ್ರ ಮೇಲಿನಿಂದ ಕೆಳಕ್ಕೆ ನೋಡುವ ಅವಕಾಶ ಸಿಕ್ಕಿದೆ. ಎತ್ತರದ ಕಟ್ಟಡದ ಮೇಲೆ ನಿಂತು ಮಾರುತಿ ಕಾರನ್ನು ನೋಡಿ, ಅದು ಬೆಂಝ್ ಕಾರಿನಷ್ಟು ಉದ್ದಕ್ಕೆ ಕಾಣುತ್ತದೆ. ಬೆಂಝ್ ಏರ್ ಬಸ್ಸಿನಷ್ಟು ದೊಡ್ಡದಾಗಿ. ಹಾಗೇ ಒಂದು ಗುಡಿಸಲುಗಳ ಸಮೂಹವನ್ನು ನೋಡಿ..., ಎಷ್ಟು ಕಲಾತ್ಮಕವಾಗಿ ಕಾಣುತ್ತವೆಂದರೆ, ಇದರಿಂದಲೇ ಅನೇಕ 'ಉಪ್ಪರಿಗೆ ಕಲಾವಿದರು' ಸ್ಫೂರ್ತಿವಂತರಾಗಿ ಅನೇಕ ಅಭಿಜಾತ ಕಲಾಕೃತಿಗಳನ್ನು ರಚಿಸಿ ಧನ್ಯರಾಗಿದ್ದಾರೆ. ವಿಮಾನದಲ್ಲಿ ಕುಳಿತು ರಾಗಿ, ಭತ್ತ ಜೋಳದ ಹೊಲಗಳನ್ನು ಕಂಡು ವಿಶ್ವದ ವಿಸ್ಮಯಗಳಲ್ಲಿ ಒಂದನ್ನು ಕಂಡಷ್ಟು ಮೂಕ ವಿಸ್ಮಿತರಾಗಿದ್ದಾರೆ.

ಮೋಹನ್ ಭಾರ್ಗವ ಅಮೆರಿಕೆಯ ಮಹೋನ್ನತ ಅಂತರಿಕ್ಷ ವಿಜ್ಞಾನ ಸಂಸ್ಥೆಯಾದ ನಾಸಾದಲ್ಲಿ ಒಬ್ಬ ವಿಜ್ಞಾನಿ. ಇವನು ಅಮೆರಿಕನ್ನರಿಗಿಂತ ಹೆಚ್ಚು ಬ್ರಿಲಿಯಂಟ್. ಇವನಿಗೆ ಹಿಂದಿಲ್ಲ ಮುಂದಿಲ್ಲ. ಮೀನ್ಸ್... ಇವನೊಬ್ಬ ಅನಾಥ. ಬಹುಶಃ ವಾರಾನ್ನ ತಿಂದು ಓದಿದ್ದರೂ ಇರಬಹುದು. ಇವನು ಅಷ್ಟು ಕಷ್ಟಪಟ್ಟು ಓದಿ, ತನ್ನ ಪ್ರತಿಭೆಯ ಮೂಲಕವೇ ನಾಸಾ ತಲುಪಿದವನು. ಇವನಿಗೆ ಸ್ವದೇಶದಲ್ಲಿ ಇರುವ ಏಕೈಕ ಸಂಬಂಧವೆಂದರೆ ಇವನನ್ನು ಸಾಕಿದ ಒಬ್ಬ ತಾಯಿ. ನಿಜಾರ್ಥದಲ್ಲಿ ಈಕೆ ಒಬ್ಬ ಆಯ. ಆಕೆಯೊಂದಿಗೆ ಇವನ ಸಂಬಂಧ-ನೆನಪುಗಳು ಅತ್ಯಂತ ಗಾಢವಾದವು. ಈಕೆಯನ್ನು ನೋಡುವುದು ಒಂದು ಹಂಬಲವಾಗಿ, ಕೊನೆಗೆ ಗೀಳಾಗಿ ಅವನು ತಾನು ಒಪ್ಪಿಕೊಂಡಿದ್ದ ಯೋಜನೆಯ ಪ್ರಕಾರ ಅತ್ತ ಉಪಗ್ರಹವನ್ನು ಆಕಾಶಕ್ಕೆ ಹಾರಿಸಿ ಇತ್ತ ಭಾರತಕ್ಕೆ ವಿಮಾನ ಏರುತ್ತಾನೆ. ಈತ ನಗರಕ್ಕೆ ಬಂದಾಗ ಆ ಅಮ್ಮ ಗುಜರಾತಿನ ಯಾವುದೋ ಒಂದು ಹಳ್ಳಿಯಲ್ಲಿರುವುದಾಗಿ ತಿಳಿಯುತ್ತದೆ. ಇದನ್ನು ಈತನಿಗೆ ಹೇಳಿದವಳು ಇವನ ಭವಿಷ್ಯದ ಪ್ರೇಯಸಿ.

ಈತ ಆಧುನಿಕ ಸೌಲಭ್ಯಗಳಿಂದ ಇಡಿಕಿರಿದಿದ್ದ ಒಂದು ಕಾರವಾನನ್ನು ಬಾಡಿಗೆ ಪಡೆದು ಆ ಹಳ್ಳಿಗೆ ಬರುತ್ತಾನೆ. ಯಥಾರೀತಿ ಅಲ್ಲಿನ ಅನಕ್ಷರತೆ, ಅಸ್ಪೃಶ್ಯತೆ, ಮೂಲಭೂತ ಸೌಕರ್ಯಗಳ ಕೊರತೆ, ಬಡತನ ಇದಕ್ಕೆಲ್ಲಾ ಕಾರಣವಾದ ಅಜ್ಞಾನ ಇವನನ್ನು ಕಾಡುತ್ತವೆ. ಈತ ತನ್ನ ದೇಶಕ್ಕಾಗಿ ಮರುಗಲು ಆರಂಭಿಸುತ್ತಾನೆ. ಮೊದಲು ಮಕ್ಕಳನ್ನು ಶಾಲೆಗೆ ಕರೆತರುವ ಪ್ರಯತ್ನ ನಡೆಯುತ್ತದೆ. ಕೇರಿ ಕೇರಿ-ಮನೆಮನೆಗೆ ಹೋಗಿ ಮಕ್ಕಳನ್ನು ಕಳಿಸುವಂತೆ ಕೇಳುತ್ತಾನೆ. ಅನೇಕರು ಅನೇಕ ಕಾರಣ ಹೇಳುತ್ತಾರೆ. ಆದರೆ ಕೆಲವರು ತಮ್ಮ ಅಸ್ಪೃಶ್ಯತೆಯ ಕಾರಣ ನಮ್ಮ ಮಕ್ಕಳನ್ನು ಶಾಲೆಗೆ ಕಳಿಸಲಾಗದು ಎಂದು ಹೇಳುತ್ತಾರೆ. ಕೊನೆಗೂ ಅವರೆಲ್ಲಾ ಶಾಲೆಗೆ ಬರುವಂತೆ ಮಾಡುತ್ತಾನೆ. ಈ ನಡುವೆ ಹಳ್ಳಿಯ ಮುಖಂಡರು ಇವನ ಕಾರ್ಯಕ್ಕೆ ಕ್ರಿಯಾಲೋಪ ಎತ್ತುತ್ತಾರೆ. ಅಸ್ಪೃಶ್ಯರನ್ನು ಸ್ಪೃಶ್ಯರ ನಡುವೆ ಕೂಡಿಸಿ ಅಕ್ಷರ ಕಲಿಸುವುದನ್ನು ವಿರೋಧಿಸುತ್ತಾರೆ. ಈ ನಡುವೆ ಊರಿನ ಮುಖಂಡರು ಇವನನ್ನು ಒಂದು ಪ್ರಶ್ನೆ ಕೇಳುತ್ತಾರೆ. ನೀನು ಯಾವ ಜಾತಿಯವನು ?

ಭಾರತದ ಹಳ್ಳಿಗಳ ಜಾತಿ ರಾಜಕೀಯದ ಲವಲೇಶದ ಅರಿವಿಲ್ಲದಿದ್ದರೂ ಇಲ್ಲಿನವರೆಗೂ ಸಿನೆಮಾ ಓಕೆ. ಹೆಸರಿನ ಮೂಲಕ ಜಾತಿಯನ್ನು ಗುರುತಿಸಲಾಗದ ಜನಕ್ಕೆ ಅದರಲ್ಲೂ ಆ ಪಾತ್ರ ಮಾಡಿರುವ ವ್ಯಕ್ತಿ ಶಾರುಖ್ ಖಾನ್ ಆದ್ದರಿಂದ ಈ ದೇಶದ ಜನಸಾಮಾನ್ಯ ಎಲ್ಲೂ ತಪ್ಪು ಭಾವಿಸುವ ಸಂದರ್ಭ ಬಂದಿರುವುದಿಲ್ಲ. ಆದರೆ ಈ ಭಾರ್ಗವ ಉತ್ತರಿಸುತ್ತಾನೆ. ನಾನು ಬ್ರಾಹ್ಮಣ !!. ಈ ಭಾರ್ಗವ ಅವರ ಅಜ್ಞಾನ, ಅಸ್ಪೃಶ್ಯತೆಯ ಆಚರಣೆಯ ಬಗ್ಗೆ ಕಿಡಿಗಾರುತ್ತಾನೆ. ಭಾಷಣ ಮಾಡುತ್ತಾನೆ. ಅಂತೂ ಊರವರಿಗೆ ಜ್ಞಾನೋದಯವಾಗುವಂತೆ ಮಾಡುತ್ತಾನೆ.

ನಿಜಕ್ಕೂ ಇದೊಂದು ಆದರ್ಶ. ಒಬ್ಬ ಬ್ರಾಹ್ಮಣನೇ ಬಂದು ಅಸ್ಪೃಶ್ಯತೆಯನ್ನು ವಿರೋಧಿಸಿ ಮಾತನಾಡುವುದು, ಅವರನ್ನೂ ಮುಖ್ಯವಾಹಿನಿ ಎಂದು ಇದೇ ಸ್ಪೃಶ್ಯರು ಹೇಳುವಂಥ ಜೀವನಧಾರೆಗೆ ಆಹ್ವಾನಿಸುವುದು... ಎಲ್ಲವೂ ಅಮೋಘಾದ್ಭುತವಾಗಿ ಕಾಣುತ್ತವೆ. ಆದರೆ ಇಡಿಯಾಗಿ ಭಾರತದ ವರ್ಣಾಶ್ರಮ ಧರ್ಮದ ಇತಿಹಾಸವನ್ನು ನೋಡಿದರೆ ಈ ಚಿತ್ರದ ಆದರ್ಶ ಸಹ ಅದರ ವಿಸ್ತರಣೆಯಾಗಿ ಕಾಣುತ್ತದೆ. ನಿಜವಾದ ಸತ್ಯು, ನಿಜವಾದ ಗೌರೀಕರ್ ಬಿಚ್ಚಿಕೊಳ್ಳುವುದು ಇಲ್ಲೇ !! ಇದನ್ನೇನು ಅವರು ಪ್ರಜ್ಞಾಪೂರ್ವಕವಾಗಿ ಮಾಡುತ್ತಿಲ್ಲ ಎಂದರೂ....!? ಇದೇ ಮೋಹನ ಭಾರ್ಗವನ ಜಾಗದಲ್ಲಿ ಒಬ್ಬ ಆದಿವಾಸಿ, ಒಬ್ಬ ದಲಿತ, ಒಬ್ಬ ಅಗಸ, ಒಬ್ಬ ಹಜಾಮ, ಒಬ್ಬ ಮೇದ, ಒಬ್ಬ ಲಂಬಾಣಿ... ಇವರೇ ಏಕೆ ಅದೇ ಚಿತ್ರದ ನಿಜ ನಾಯಕ ಶಾರುಖ್ ಖಾನನಂಥಾ ಒಬ್ಬ ಮುಸ್ಲಿಂ, ಒಬ್ಬ ಕ್ರಿಶ್ಚಿಯನ್‌ನನ್ನು ಏಕೆ ಈ ಮನಸ್ಸುಗಳು ಕಲ್ಪಿಸಿಕೊಳ್ಳುವುದಿಲ್ಲ? ಆ ಭಾರ್ಗವ ಮಾಡಿದ ಕೆಲಸವನ್ನು, ತೋರಿದ ದೇಶಪ್ರೇಮವನ್ನು ಒಬ್ಬ ದಲಿತ ಯಾ ಮುಸ್ಲಿಮರಲ್ಲಿ ಕಾಣಲು ಇವರಿಗೆ ಏಕೆ ಸಾಧ್ಯವಾಗುವುದಿಲ್ಲ ? ಆ ಚಿತ್ರದ ನಾಯಕ ಸ್ವತಃ ಒಬ್ಬ ಮುಸ್ಲಿಂ ಆಗಿದ್ದಾಗ ಸಹ !!

ಇರಲಿ..., ಯಾರನ್ನೋ ದೂಷಿಸುವುದಾಗಲೀ, ಕಟಕಟೆಯಲ್ಲಿ ನಿಲ್ಲಿಸುವುದಾಗಲೀ ಇಲ್ಲಿನ ಉದ್ದೇಶವಲ್ಲ, ಬದಲಾಗಿ ಹೇಗೆ 'ಉಪ್ಪರಿಗೆ ದೃಷ್ಟಿಕೋನ'ವೊಂದು ತನ್ನ ಗ್ರಹಿಕೆಯ ಮಿತಿಯಲ್ಲಿಯೇ ಇಡೀ ಜನ ಮಾನಸದ ಹೃದಯಗಳಲ್ಲಿ ತಪ್ಪುಗಳನ್ನು ತುಂಬುತ್ತದೆ ಎಂಬುದನ್ನು ಕಂಡುಕೊಳ್ಳಲು ಅಥವಾ... ಲಗಾನ್ ಚಿತ್ರದಲ್ಲಿ 'ಕಚರಾ' ನನ್ನು ಸಿಕ್ಸರ್‌ನಿಂದ ವಂಚಿಸುತ್ತದೆ ಎಂದು ಹೇಳಲು.

ಸಿನೆಮಾದ ಕತೆ ಸರಳವಾಗಿದೆ. ಮಂಡನೆ ಮನೋಹರವಾಗಿದೆ. ಸ್ಕ್ರೀನ್ ಪ್ಲೇ, ಕ್ಯಾಮೆರಾ, ಸಂಗೀತ, ನಿರ್ದೇಶನ ಎಲ್ಲಾ ಚೆನ್ನಾಗಿದೆ. ಅದಕ್ಕಾಗಿಯೇ ಈ ಚಿತ್ರ ಆಸ್ಕರ್ ಮಟ್ಟಕ್ಕೆ ಹೋಗಿದ್ದು. ಅನಕ್ಷರಸ್ಥರ ಗುಂಪೊಂದು ತಮ್ಮ ಉಳಿವಿನ ದಾರಿಯನ್ನು ಉಳಿಸಿಕೊಳ್ಳುವ ಸಲುವಾಗಿ ಒಂದು ಸಾಮ್ರಾಜ್ಯಶಾಹಿ ಮನಸ್ಥಿತಿಯ ವಿರುದ್ಧ ಹೋರಾಡುವ ಪಣ ತೊಟ್ಟು ಅದನ್ನು ಗೆಲ್ಲುವುದನ್ನು ಸಾಂಕೇತಿಕವಾಗಿ ಇದು ಹೇಳುತ್ತದೆ. ಈ ಚಿತ್ರಕ್ಕೆ ಆಸ್ಕರ್‌ನಲ್ಲಿ ಎದುರಾಗಿದ್ದು ಇಡೀ ಮನುಕುಲದ ಇಂದಿನ ದುರಂತವನ್ನು ಲಗಾನ್‌ಗಿಂತಲೂ ಸರಳವಾದ ಘಟನೆಯೊಂದರ ಮೂಲಕ ನಿರೂಪಿಸುತ್ತಾ ಸಾಗುವ ಚಿತ್ರ 'ನೋ ಮ್ಯಾನ್ಸ್ ಲ್ಯಾಂಡ್'. ಲಗಾನ್ ಈ ಚಿತ್ರದ ಮುಂದೆ ಸೋಲಲು ಅನೇಕ ಕಾರಣಗಳಿದ್ದವು. ಕಚರನಿಗೆ ಗೆಲುವಿನ ಅವಕಾಶವನ್ನು ನಿರಾಕರಿಸಿದ್ದು ಸಹ ಇದರಲ್ಲಿ ಒಂದು.

ಆದರೆ ಈ ಚಿತ್ರಕ್ಕೆ ಆಸ್ಕರ್ ನಿರೀಕ್ಷಿಸಿದ್ದ ಜನ ಗಮನಿಸದೇ ಹೋದ ಮುಖ್ಯವಾದ ಸಂಗತಿ ಸಹ ಇದೇ. ನನಗನ್ನಿಸಿದಂತೆ ಈ ಸಂಗತಿಯನ್ನು ಆಸ್ಕರ್ ಜ್ಯೂರಿಗಳು ಖಂಡಿತ ಗಮನಿಸಿರುತ್ತಾರೆ. ಇಲ್ಲದಿದ್ದರೆ ಅವರು ನೋಮ್ಯಾನ್ಸ್ ಲ್ಯಾಂಡಿನ ಮಹತ್ವವನ್ನೂ ಸಹ ಗುರುತಿಸಲಾಗುತ್ತಿರಲಿಲ್ಲ. ಒಂದು ಪಕ್ಷ ಲಗಾನ್ ಈ ಸಂಗತಿಯಲ್ಲಿ ಒಂದಿಷ್ಟು ಉದಾತ್ತವಾಗಿದ್ದರೆ...! ಇಂದಿನ ಜಾಗತಿಕ ಸಂದರ್ಭದಲ್ಲಿ ಅದು ನೋಮ್ಯಾನ್ಸ್ ಲ್ಯಾಂಡಿನ ಉದ್ದೇಶದಷ್ಟೇ ಉದಾತ್ತವಾಗುತ್ತಿತ್ತು. ಭಾರತದ ಸಂದರ್ಭದಲ್ಲಂತೂ ಬಹುದೊಡ್ಡ ಸಂದೇಶವನ್ನು ನೀಡುತ್ತಿತ್ತು.

ತೆರಿಗೆ ನೆಪವಾಗಿ ಆರಂಭವಾಗುವ ಈ ವಿವಾದ ಬ್ರಿಟಿಷ್ ಕಮ್ಯಾಂಡೊನೊಬ್ಬನ ಹಠಮಾರಿ ನಡವಳಿಕೆಯ ಮೂಲಕ ಒಂದು ಮೂರ್ತರೂಪ ಪಡೆಯುತ್ತದೆ. ಭುವನ್ ಎಂಬ ಸ್ಥಳೀಯ ಯುವಕ ಒಂದೆರಡು ಸಾರಿ ಈ ಕಮ್ಯಾಂಡರನಿಗೆ ಕಿರಿಕಿರಿಯಾಗುವಂತೆ ಮಾಡಿರುತ್ತಾನೆ. ಇವನನ್ನೇ ಗುರಿಯಾಗಿಟ್ಟುಕೊಂಡು ಕ್ರಿಕೆಟ್‌ನಲ್ಲಿ ನಮ್ಮನ್ನು ಸೋಲಿಸಿದರೆ ನೀವು ಸದ್ಯಕ್ಕೆ ರಿಯಾಯಿತಿ ಕೇಳಲು ಬಂದಿರುವ ತೆರಿಗೆಯಲ್ಲಿ ಒಂದಲ್ಲ, ಎರಡಲ್ಲ ಮೂರು ವರ್ಷ ರಿಯಾಯಿತಿ ಕೊಡುವುದಾಗಿ ಆ ಸಿಡುಕು ಮೂತಿಯ ಕಮ್ಯಾಂಡರ್ ಷರತ್ತು ಹಾಕುತ್ತಾನೆ. ಮೀನಮೇಷ ಎಣಿಸಿ ಅಂತೂ ಭುವನ್ ಅವನ ಪಂಥಾಹ್ವಾನವನ್ನು ಅಂಗೀಕರಿಸುತ್ತಾನೆ. ಊರವರ ಸಹಕಾರದ ನಡುವೆಯೂ ಭುವನನ ತಂಡಕಟ್ಟುವ ಪ್ರಯತ್ನ ಸಾಗುತ್ತಿರುತ್ತದೆ. ಈ ನಡುವೆ ಆ ಕಮ್ಯಾಂಡರನ ತಂಗಿಯೇ ಇವರಿಗೆ ಸಹಾಯ ಮಾಡಲು ಬರುತ್ತಾಳೆ.

ಭುವನ ಒಬ್ಬೊಬ್ಬರದೇ ಮನಒಲಿಸಿ, ಪ್ರಚೋದಿಸಿ ತಂಡ ನಿರ್ಮಾಣದಲ್ಲಿ ತೊಡಗಿದ್ದಾಗ ಈ ಕೆಂಪು ಹುಡುಗಿಯ ಆಗಮನದಿಂದ ಊರವರಿಗೆ ಹೊಸ ಹುಮ್ಮಸ್ಸು ಬಂದು, ತಂಡ ನಿರ್ಮಾಣ ಕಾರ್ಯ ಅಂತಿಮ ಹಂತಕ್ಕೆ ಬಂದಿರುತ್ತದೆ. ಈಗ ಪ್ರಾಕ್ಟೀಸ್ ನಡೆದಿರುತ್ತದೆ. ಒಬ್ಬ ಬ್ಯಾಟ್ ಮಾಡುತ್ತಾನೆ. ಚೆಂಡು ದೂರದ ಮೂಲೆಯಲ್ಲಿ ಕುಳಿತಿದ್ದ ಒಬ್ಬನ ಮುಂದೆ ಬೀಳುತ್ತದೆ. ಭುವನ ಚೆಂಡನ್ನು ಎಸೆಯುವಂತೆ ಹೇಳುತ್ತಾನೆ. ಅವನು ಹಿಂಜರಿಯುತ್ತಾನೆ. ಕೊನೆಗೆ ಎಸೆಯುತ್ತಾನೆ. ಆಗ ಭುವನ್ ಚಕಿತನಾಗಿ 'ಕಚರಾ ಬಾ ಇಲ್ಲಿ, ಇನ್ನೊಮ್ಮೆ ಚೆಂಡು ಎಸಿ' ಎನ್ನುತ್ತಾನೆ. ಕಚರಾ ಗಾಬರಿಯಾಗುತ್ತಾನೆ. ಆಗ ಭುವನನೇ ಅವನನ್ನು ಕರೆತಂದು ಫೀಲ್ಡಿನ ಮಧ್ಯೆ ನಿಲ್ಲಿಸಿ 'ಇವನದು ಸ್ಪಿನ್ ಬೌಲಿಂಗ್, ನೋಡಿ ಹೇಗೆ ಬಾಲು ಸುತ್ತಿ ತಿರುಗಿ ಪುಟಿಯುತ್ತದೆ!!' ಎಂದು ಎಲ್ಲರಿಗೂ ಹೇಳುತ್ತಾನೆ.

ಆದರೆ ಊರವರು ಈ ಕಚರನ ಸೇರ್ಪಡೆಯನ್ನು ವಿರೋಧಿಸುತ್ತಾರೆ. ಕಾರಣ ಅವನು ಅಸ್ಪೃಶ್ಯ ಎಂದು. ಆಗ ಭುವನ ಉದಾತ್ತ-ಧೀರೋದ್ಧಾತವಾದ ಒಂದು ಭಾಷಣ ಮಾಡುತ್ತಾನೆ. ಊರ ಜನ ಭುವನನ ಮಾನವೀಯ ಮಾತುಗಳನ್ನು ಒಪ್ಪುತ್ತಾರೆ. ಕಚರಾ ತಂಡಕ್ಕೆ ಸ್ಪಿನ್ ಬೌಲರ್ ಆಗಿ ಸೇರ್ಪಡೆಯಾಗುತ್ತಾನೆ. ಈತ ಒಬ್ಬ ಹೆಳವ, ಇವನ ಬಲಗೈ ಪೋಲಿಯೋ ಪೀಡಿತವಾದಂತೆ, ದುರ್ಬಲವಾಗಿ ಮುರುಟಿಕೊಂಡಿರುತ್ತದೆ.

ಇಂದಿನ ಸ್ಪಿನ್ ಬೌಲರ್‌ಗಳ ಬಗೆಗಿನ ಪ್ರಚಾರವನ್ನು ಕಂಡ ಯಾರಾದರೂ ಒಂದು ಕ್ಷಣ ರೋಮಾಂಚನ ಗೊಳ್ಳುವ ಸಂದರ್ಭ ಇದು. ಸ್ಪಿನ್ ಬೌಲಿಂಗ್ ಎಂದರೆ ಅತಿ ಶ್ರೇಷ್ಠ..., ಪರಮ ಶ್ರೇಷ್ಠ..., ಅದೂ ಇದೂ... ಲೊಟ್ಟೆ ಲೊಸ್ಗ... ಎಂದೆಲ್ಲಾ ನಮ್ಮ ಮಾಧ್ಯಮಗಳು ಚಕ್ಕೆ ಕಟ್ಟುತ್ತಿರುವ ಹೊತ್ತಿನಲ್ಲಿ ಒಬ್ಬ ಹೆಳವನನ್ನು ಸ್ಪಿನ್ ಬೌಲರ್ ಎಂದು ಹೇಳುವ ಮೂಲಕ ಸ್ಪಿನ್ ಬೌಲಿಂಗಿನ ಚಕ್ಕೆಗಳನ್ನೆಲ್ಲಾ ಕಿತ್ತು ಬಿಸಾಕಿ, ಅದನ್ನು ಲೇವಡಿ ಮಾಡಿ ಸ್ಪಿನ್ ಬೌಲ್ ಮಾಡುವವರು ಹೆಳವರು ಎಂಬ ಅರ್ಥ ಬರುವಂಥ ಇಂಥಾ ದೃಶ್ಯವೊಂದನ್ನು ಕಟ್ಟಿಕೊಡುವುದು ನಿರ್ದೇಶಕನ ಮೆಚ್ಯೂರಿಟಿಯನ್ನು ಹೇಳುತ್ತದೆ ಎಂದು ಭಾವಿಸುವ ಸಂದರ್ಭ ಅದು. ಒಂದು ಸರಳ ಮಾದರಿಯ ಮೂಲಕ ಒಂದು ಬಹುದೊಡ್ಡ ಭ್ರಮೆಯನ್ನು ಒಡೆದು ಬಿಸಾಕುವಂತಹ ಎದೆಗಾರಿಕೆ ಅದು.

ಅಂತಿಮವಾಗಿ ತಂಡ ಸಿದ್ಧವಾಗುತ್ತದೆ. ಮೂರು ದಿನಗಳ ಮ್ಯಾಚ್ ನಿರ್ಧಾರವಾಗುತ್ತದೆ. ಮೊದಲ ಒಂದೂವರೆ ದಿನ ಬ್ರಿಟಿಶ್ ತಂಡ ಬ್ಯಾಟ್ ಮಾಡುತ್ತದೆ. ಅಷ್ಟರಲ್ಲಿ ಗೌರವಾರ್ಹ ಮೊತ್ತವನ್ನು ಪೇರಿಸುತ್ತದೆ. ನಂತರದ ಬ್ಯಾಟಿಂಗ್ ಭುವನನ ತಂಡದ್ದು. ಹಾಗೂ ಹೀಗೂ ಈ ತಂಡ ಅಂತಿಮ ಹಂತಕ್ಕೆ ಬರುತ್ತದೆ. ಎಲ್ಲಾ ಆಟಗಾರರೂ ಪೆವಿಲಿಯನ್‌ಗೆ ಮರಳಿದ್ದಾರೆ. ನಾಯಕ ಭುವನ್ ಮಾತ್ರ ನಿನ್ನೆಯಿಂದಲೂ ಫೀಲ್ಡಿನಲ್ಲೇ ಉಳಿದಿದ್ದಾನೆ. ಕೊನೆಯ ಆಟಗಾರನಾಗಿ ಕಚರಾ ಬರುತ್ತಾನೆ. ಈಗ ಕೇವಲ ೧೧ ಬಾಲ್‌ಗಳಿವೆ, ೧೨ ರನ್ ಬೇಕು.

ಕೊನೆಗೆ ಒಂದೇ ಒಂದು ಬಾಲು ಉಳಿಯುತ್ತದೆ, ಬೇಕಿರುವುದು ೬ ರನ್. ನಾಯಕ ಆತಂಕದಿಂದ ಕಚರಾನ ಸಮೀಪಕ್ಕೆ ಬಂದು.... 'ಕಚರಾ ಇದು ಕೊನೆಯ ಬಾಲು, ನಮಗೆ ೬ರನ್ ಬೇಕು. ಈ ಬಾರಿ ನೀನು ಬಾಲು ಗಡಿಯಾಚೆಗೆ ಹೋಗುವಂತೆ ಒಡೆಯಲೇಬೇಕು. ಇಲ್ಲದಿದ್ದರೆ ಊರವರೆಲ್ಲಾ ಮೂರು ಪಟ್ಟು ತೆರಿಗೆ ಕೊಡಬೇಕಾಗುತ್ತದೆ. ಮೊದಲೇ ಬರಗಾಲ, ನಾವು ಎಲ್ಲಿಂದ ತರುವುದು. ಇದರ ಜೊತೆಗೆ ಸೋಲಿನ ಅಪಮಾನವನ್ನೂ ಹೊರಬೇಕಾಗುತ್ತದೆ... ಏನಾದರೂ ಮಾಡು ಕಚರಾ.... ಏನಾದರೂ ಮಾಡು...' ಎಂದೆಲ್ಲಾ ಹೇಳುತ್ತಾನೆ.

ಕೊನೆಯ ಬಾಲು ಬರುತ್ತದೆ. ಕಚರಾ ಬ್ಯಾಟ್ ಬೀಸುತ್ತಾನೆ. ಬ್ಯಾಟು ಗಾಳಿಯಲ್ಲಿ ತೇಲಿ ಹಿಂತಿರುಗುತ್ತದೆ. ಬಾಲು ಎತ್ತ ಹೋಯಿತು? ಎಂದು ಇವರು ಗೊಂದಲದಲ್ಲಿದ್ದಾಗಲೇ ಎದುರಾಳಿಗಳು ವಿಜಯೋತ್ಸವ ಆಚರಿಸಲು ಆರಂಭಿಸುತ್ತಾರೆ. ನಾಯಕ ವಿಷಣ್ಣನಾಗುತ್ತಾನೆ. ಜನ ಗರಬಡಿದಂತಾಗುತ್ತಾರೆ. ಆದರೆ ಅಷ್ಟರಲ್ಲಿ ಒಂದು ಚಮತ್ಕಾರ ನಡೆಯುತ್ತದೆ. ಅಂಪೈರ್ 'ನೋಬಾಲ್' ಕೊಡುತ್ತಾನೆ. ಕ್ಯಾಮರಾ ಮತ್ತೆ ತಿರುಗಿದಾಗ ನಾಯಕ ಬ್ಯಾಟಿಂಗ್‌ನಲ್ಲಿರುತ್ತಾನೆ. ಬಾಲು ಬರುತ್ತದೆ. ನಾಯಕ ಘಟ್ಟಿಸುತ್ತಾನೆ. ಬಾಲು ದಿಗಂತದಲ್ಲಿ ಹಾರುತ್ತಿರುತ್ತದೆ. ಎದುರಾಳಿ ತಂಡದ ನಾಯಕ ಬಾಲನ್ನು ಕ್ಯಾಚ್ ಮಾಡುತ್ತಾನೆ. ಪರಿಸ್ಥಿತಿ ಗೊಂದಲದಲ್ಲಿದ್ದಾಗ ಅಂಪೈರ್ ತನ್ನ ನೋಟದಲ್ಲಿಯೇ ಅವನು ಬೌಂಡರಿಯ ಆಚೆ ಇರುವುದನ್ನು ಸೂಚಿಸುತ್ತಾನೆ. ಭುವನನ ತಂಡ ಗೆದ್ದಿರುತ್ತದೆ.

ನಿರ್ದೇಶನ, ಕ್ಲೈಮ್ಯಾಕ್ಸ್ ಎಲ್ಲಾ ಸುಂದರವಾಗಿದೆ. 'ಕತೆಯಲ್ಲಿ' ಯಾವ ಸಮಸ್ಯೆಯೂ ಇಲ್ಲ. ಆದರೆ 'ಕಲೆಯ' ಒಂದು ಸಮಸ್ಯೆ ಹಾಗೇ ಉಳಿಯುತ್ತದೆ. ಕಚರಾನೇ ಸಿಕ್ಸರ್ ಹೊಡೆದಿದ್ದರೆ ಏನಾಗುತ್ತಿತ್ತು? ಅಲ್ಲಿಗೆ ನೋ ಬಾಲಿನ ನೆಪದಲ್ಲಿ ನಾಯಕನೇ ಏಕೆ ಬರಬೇಕಿತ್ತು? ನೋಬಾಲ್ ಕೊಟ್ಟ ಮೇಲೂ ಅದೇ ಬ್ಯಾಟ್ಸ್‌ಮನ್ ಮತ್ತೆ ಹೊಡೆಯಬಹುದಿತ್ತಲ್ಲವೇ? ಈ ಗೆಲುವಿನ ಅವಕಾಶವನ್ನು ಕಚರಾನಿಗೇಕೆ ಕೊಡಲಿಲ್ಲ? ಅವನು ಅಸ್ಪೃಶ್ಯನೆಂದೇ? ಅಥವಾ... 'ನೋಡಿ..., ಇವರಿಗೆ ತಂಡದಲ್ಲಿ ಸ್ಥಳ ಕೊಟ್ಟೆವು, ಊರಿಗಾಗಿ ಸೇವೆ ಸಲ್ಲಿಸಲು ಅವಕಾಶ ಕೊಟ್ಟೆವು. ಜಾತೀಯತೆಯನ್ನೆಲ್ಲಾ ಮರೆತು, ಸ್ಪೃಶ್ಯ-ಅಸ್ಪೃಶ್ಯಗಳನ್ನೆಲ್ಲಾ ಬದಿಗಿಟ್ಟು ಆಟದಲ್ಲಿ ಒಂದಾಗಿ ದುಡಿದೆವು. ಆದರೆ ನಿಜವಾದ ಪ್ರತಿಭೆ ತೋರುವಂಥ ಅವಕಾಶ ಸಿಕ್ಕಿದಾಗ ಅವರು ಅಸಮರ್ಥರಾದರು. ಅವರಿಗೆ ಅಂಥಾ ಇಚ್ಛಾಶಕ್ತಿ-ಸಾಮರ್ಥ್ಯಗಳಿಲ್ಲ' ಎಂದು ಈ ಜಗತ್ತಿಗೆ ಸಾರ್ವತ್ರಿಕ ಸಂದೇಶ ಕೊಡಲೆಂದೇ?

ಈ 'ಉಪ್ಪರಿಗೆ ದೃಷ್ಟಿಕೋನ'ಕ್ಕೆ ಅನಿಸಿದ, ಗ್ರಹಿಸಿದ, ಹೇಳಿದ ಕತೆಗಳೆಲ್ಲಾ ಕಲೆಯಾಗುವುದಾದರೆ...! ಮಾನವೀಯ ಮೌಲ್ಯ, ಉದಾತ್ತತೆಯ ಅರ್ಥವೇನು? ಇವನ್ನು ಹೊರತುಪಡಿಸಿದ ಕತೆ ಸುಂದರವಾಗಿದ್ದ ಮಾತ್ರಕ್ಕೆ ಕಲೆಯಾಗಬಲ್ಲದೇ? ಬಹುಶಃ ಆಸ್ಕರ್ ಜ್ಯೂರಿಗಳು ಕಲೆಯನ್ನು ಮಾನವೀಯ ಮೌಲ್ಯದಡಿಯಲ್ಲಿ ವಿಮರ್ಶಿಸು

(೨೫ನೇ ಪುಟಕ್ಕೆ)

ಬಹುಶಃ ಆಸ್ಕರ್ ಜ್ಯೂರಿಗಳು ಕಲೆಯನ್ನು ಮಾನವೀಯ ಮೌಲ್ಯದಡಿಯಲ್ಲಿ ವಿಮರ್ಶಿಸುತ್ತಾರೆ ಎನಿಸುತ್ತದೆ?! ಹಾಗಾಗಿಯೇ 'ತೆರಿಗೆ' ಸೋತಿತು! 'ಮನುಷ್ಯರಿಲ್ಲದ ನೆಲ' ಗೆದ್ದಿತು ಅನಿಸುತ್ತದೆ!! ಏಕೆಂದರೆ ಲಗಾನ್ ಮತ್ತು ಸ್ವದೇಶ್ ಕೇವಲ ಮನರಂಜನಾ ಚಿತ್ರಗಳಲ್ಲ, ಅವು ಶುದ್ಧ 'ಜನಾಂಗೀಯ ರಾಜಕೀಯದ' ಚಿತ್ರಗಳು. ಸಾಂಸ್ಕೃತಿಕ ಚಿತಾವಣೆ/ಜಾತಿಯ ಗ್ರಹಿಕೆಯ ಚಿತ್ರಗಳು. ಇದರಲ್ಲಿ ಕಲಾತ್ಮಕತೆ ಇದ್ದರೂ ಅವು ಪೂರ್ವಾಗ್ರಹ ಪೀಡಿತವಾದವು.

'Don't follow me, I'm not going to lead you;
Don't lead me, I'm not going to follow you
Come with me, let's walk together'

- Jean Paul satre

-0-0-0-

ಕಿನ್ನರರ ಪ್ರಸಾಧನ ವಸ್ತು-
ಗಳೊಳಗೆ ಕೊಳಕಾದ ಬಟ್ಟೆಗಳನ್ನು
ಮಡಿಚಿ ಬಿಡೋಣ.
ಗುಂಡುಗಳಿಗೆದುರಾಗಿ
ನಮ್ಮೆಲ್ಲ ಶಕ್ತಿ -
ಒಗ್ಗೂಡಿಸಿ
ಪಾರಿವಾಳಗಳ ಹಿಂಡನ್ನು
ಹಾರಿಬಿಡೋಣ.
ಬಾಂಬ್‌ಗಳಿಂದ ನಾಶವಾದ ಮನೆ
ಗಳಿಗೆ
ಬೀಗ ಹಾಕಿ ಭದ್ರವಾಗಿ
ಮುಚ್ಚಿಬಿಡೋಣ

- ಪಾಬ್ಲೊ ಪಿಕಾಸೊ

-0-0-0-

'ಎಲ್ಲಿ ನಾಗರಿಕ ಸರ್ಕಾರ ಅಸ್ತಿತ್ವದಲ್ಲಿದೆಯೋ, ಪ್ರಜಾಪ್ರಭುತ್ವ ನಿಯಮಗಳು ಅಸ್ತಿತ್ವದಲ್ಲಿವೆಯೋ ಅಲ್ಲಿ ನಡೆಯುವ ಯಾವುದೇ ವಿಧವಾದ ಪ್ರತೀಕಾರದ ಹಿಂಸೆಯನ್ನು ಕ್ಷಮಿಸಲು ಸಾಧ್ಯವಿಲ್ಲ'

-ಕಿಶನ್ ಪಟ್ನಾಯಕ್

-0-0-

ವಕಾಶದಲ್ಲಿ ಕುಲಗೆಟ್ಟಿರುವ ವ್ಯವಸ್ಥೆಯ ವಿರುದ್ಧ ರೂಪುಗೊಂಡ ತರುಣ ಮನಸ್ಸಿನ ಅಸಮಾಧಾನ, ಅತೃಪ್ತಿಗಳು ಹೆಚ್ಚಾಗಿ ಪರಿವರ್ತನೆಯಾಗುವ ಸನ್ನಿವೇಶವನ್ನು ಗುರುತಿಸಲು, ಆ ಮೂಲಕ ಆ ಸನ್ನಿವೇಶವನ್ನು ಸೃಷ್ಟಿಸುವ ಕಾರಣವನ್ನು ಕಂಡುಕೊಳ್ಳಲು; ಅವುಗಳ ಪರಿಹಾರಕ್ಕೆ ಸೂಕ್ತ ಪರ್ಯಾಯವನ್ನು ಹುಡುಕಿಕೊಳ್ಳುವ ಚರ್ಚೆಗೆ ಸಂಕೇತವಾಗಿಯೂ ಸ್ವೀಕರಿಸಬಹುದು ಎಂಬುದನ್ನಷ್ಟೆ ಸೂಚಿಸುತ್ತೇನೆ.

-0-0-

ಹಾಗೆ ನೋಡಿದರೆ ಹಿಂಸೆ-ಅಹಿಂಸೆ-ಪ್ರತಿಹಿಂಸೆಗಳ ಸಂಕೀರ್ಣ ಚರ್ಚೆ ಬಹಳ ಹಳೆಯದು. ಜೀವಪ್ರೀತಿ, ಅಹಿಂಸೆಯನ್ನು ಬೋಧಿಸಿದ ಬುದ್ಧ ಕೊನೆಗೆ ಮಾಂಸ ತಿಂದು ಸತ್ತ ಎಂಬುದನ್ನು ಇಂದಿನ ಸಂದರ್ಭದಲ್ಲಿ ನಿಂತುಕೊಂಡು ಸಸ್ಯಾಹಾರಿಯೊಬ್ಬ ನೋಡಿದರೆ ಹೇಗೆ ಕಂಡೀತು ? ಹಾಗೇ ಮಹಾವೀರನ ಬಗ್ಗೆಯೂ ಕೂಡಾ. 'ಅಹಿಂಸೆ' ಪದಕ್ಕೆ ವ್ಯುತ್ಪತ್ತಿಯಿಂದಲೇ ಋಣಾತ್ಮಕ ವ್ಯಾಖ್ಯೆ ಅಂಟಿಕೊಂಡಿದೆ : ಅದು ನಿರ್ಲಿಪ್ತತೆ. ಅಹಿಂಸಾ ತತ್ವದ ಈ ನೆಲೆ ಹಿಂಸೆಯ ಅಮೂರ್ತ ತಾತ್ವಿಕ ಸಮರ್ಥನೆಯಾಗಿ ಕೆಲಸ ಮಾಡುವುದನ್ನು ಗಮನಿಸಿ ಅದನ್ನು ಧನಾತ್ಮಕ ನಿಲುವಾಗಿ ರೂಪಿಸಿದವರು ಗಾಂಧೀಜಿ. ಗಾಂಧಿ ಕಂಡಂತೆ ಅಹಿಂಸೆಯೆಂದರೆ ಹಿಂಸಾಕೃತ್ಯಗಳಲ್ಲಿ ತೊಡಗದಿರುವುದಷ್ಟೇ ಅಲ್ಲ; ಹಿಂಸೆಯ ವಿರುದ್ಧ-ಅದು ನಾಗರಿಕ ಸಮಾಜದ ಹಿಂಸೆಯಾಗಿರಬಹುದು ಅಥವಾ ಪ್ರಭುತ್ವದ ಹಿಂಸೆಯಾಗಬಹುದು; ಹಿಂಸೆ ಪ್ರಭುತ್ವದಿಂದ ಬಂದಾಕ್ಷಣ ಅದಕ್ಕೆ sanctity ಬರದು; ಅದು ಯಾವುದೇ ಕಾರಣಕ್ಕೂ ಪವಿತ್ರಗೊಂಡು ಸಮರ್ಥನೀಯವಾಗುವುದಿಲ್ಲ; ಇದೇ ಕಾರಣಕ್ಕೆ ಗಾಂಧಿ ಆಧುನಿಕ ಪ್ರಭುತ್ವಗಳನ್ನು ಆತ್ಮವಿಲ್ಲದ ಕ್ರೂರ ಯಂತ್ರಗಳೆಂದದ್ದು - ಹಿಂಸೆಯ ವಿರುದ್ಧ ದನಿಯೆತ್ತದೆ ನಿಷ್ಕ್ರಿಯವಾಗಿರುವುದೂ ಆ ಹೇಯ ಕೃತ್ಯಗಳಲ್ಲಿ ಭಾಗವಹಿಸಿದಷ್ಟೇ ಪರಿಣಾಮವುಳ್ಳದ್ದು. (ಡಿ.ಆರ್.ನಾಗರಾಜ್ 'ಸಂಸ್ಕೃತಿ ಕಥನ'ದಲ್ಲಿ ಈ ಬಗ್ಗೆ ಚರ್ಚಿಸಿದ್ದಾರೆ).

ಹಿಂಸೆಯನ್ನು ವ್ಯಾಖ್ಯಾನಿಸುವ ಗಾಂಧಿಯ ಯತ್ನಕ್ಕೊಂದು ಚೌಕಟ್ಟು ನೀಡಿದರೆ ಅದು (ಭಾರತೀಯ ಸಂದರ್ಭದಲ್ಲಿ) ಹಿಂದೂ ಕೋಮುವಾದಿಗಳ (ಒಟ್ಟಿನಲ್ಲಿ ಮೂಲಭೂತ ವಾದಿಗಳ) ಮತ್ತು ಮಾರ್ಕ್ಸ್‌ವಾದೀ ಮೂಲದ ಅಂತರರಾಷ್ಟ್ರೀಯವಾದಿಗಳ ನಡುವಿನ ದ್ವಂದ್ವಯುದ್ಧವಾಗಿ ಕಾಣುತ್ತದೆ. ಅಹಿಂಸೆಯನ್ನು ವ್ಯಾಖ್ಯಾನಿಸುವಲ್ಲಿ ಅದರ activist ಆಯಾಮಗಳನ್ನು ಅಧ್ಯಯನ ಮಾಡಿದ ಗಾಂಧಿಗೂ ದ್ವಂದ್ವ ಬಗೆಹರಿದಿರಲಿಲ್ಲ. ಅದನ್ನು 'ಅಹಿಂಸೆ' ಮತ್ತು 'ವಿಮೋಚನಾ ಹಿಂಸೆ'ಗಳ ನಡುವಿನ ದ್ವಂದ್ವ ವೆನ್ನುತ್ತೇನೆ: 'ಶಸ್ತ್ರಾಸ್ತ್ರಗಳನ್ನು ಉಪಯೋಗಿಸಲೇಬೇಕಾಗಿ ಬಂದರೆ ಸದುದ್ದೇಶಕ್ಕಾಗಿ ಮಾತ್ರ ಉಪಯೋಗಿಸು. ಆದರೆ ಅವುಗಳ ದುರುಪಯೋಗ ಮಾಡಬೇಡ.'

'ಶಸ್ತ್ರಾಸ್ತ್ರ ಚಳವಳಿ ಮಾಡಲು ಇಚ್ಛಿಸದ ಕೈಲಾಗದ ದುರ್ಬಲರಷ್ಟೇ ನಿಷ್ಕ್ರಿಯ ಪ್ರತಿಭಟನೆ ನಡೆಸುತ್ತಾರೆ' (ಮಹಾತ್ಮ: ಸಂ ೭ ಮತ್ತು ೮)

ಗಾಂಧಿಗೆ ಎದುರಾದ ಹಿಂಸೆಯ ಸಮಸ್ಯಾತ್ಮಕತೆಯನ್ನೂ, ವಿರೋಧಾಭಾಸವನ್ನೂ ಇವು ತೋರಿಸುತ್ತವೆ. ಗಾಂಧಿಯ ನಿಷ್ಕ್ರಿಯ ಪ್ರತಿಭಟನೆಯನ್ನು ಪ್ರತಿಹಿಂಸೆಯಾಗಿಯೂ ನೋಡಬಹುದಾಗಿದೆ.

ಬೆಟ್ಟ ಸರಿಸಿದ ಮೂರ್ಖ ಮುದುಕ

ಸಾಕೇತ್ ಸತ್ತು ಹೋದ ಎಂದರೆ ಸಾಕು. ಆತ ಎನ್‌ಕೌಂಟರ್‌ಗೆ ಬಲಿಯಾದ ಎಂದುಕೊಂಡು ನೈತಿಕ ಸ್ಥೈರ್ಯ ಕಳೆದುಕೊಂಡ ಸರ್ಕಾರವನ್ನು ಇನ್ನೊಮ್ಮೆ ನೆನಪಿಸಿಕೊಳ್ಳಬೇಕಾಗಿಯೂ ಇಲ್ಲ; ಅಥವಾ ಆತನನ್ನು ಹುತಾತ್ಮ ಪಟ್ಟಕ್ಕೆ ಏರಿಸಬೇಕಾಗಿಯೂ ಇಲ್ಲ. ಏಕೆಂದರೆ ಆತನ ಸಾವಿನೊಂದಿಗೆ ಚಳವಳಿ ಅಂತ್ಯಗೊಳ್ಳುತ್ತದೆ ಎಂದುಕೊಳ್ಳುವುದು ಮೂರ್ಖತನವಾಗುತ್ತದೆ. ವ್ಯವಸ್ಥೆಯೊಂದು ಹದಗೆಟ್ಟಾಗ ಅದರ ವಿರುದ್ಧ ಹಿಂಸಾತ್ಮಕ ಅಥವಾ ಅಹಿಂಸಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗುವುದು ಸಹಜ ಎನ್ನುವುದು ಇತಿಹಾಸವನ್ನು ಗಮನಿಸಿದರೆ ತಿಳಿಯುವ ಅಂಶ.

ಹಾಗೆ ನೋಡಿದರೆ ಇತಿಹಾಸಕಾರನೊಬ್ಬ ಇತಿಹಾಸವನ್ನು ನಾಗರಿಕತೆ ಗಳ ಹುಟ್ಟು ಸಾವಿನ ಕಥನ (rise and fall of eivilisations) ಎಂದಿದ್ದಾನೆ. ಯಾಕೆ ಒಂದು ನಾಗರಿಕತೆ ಅವನತಿ ಗೊಳ್ಳಬೇಕು? ಕನ್ನಡದ ಸಂಸ್ಕೃತಿ ವಿಮರ್ಶಕ ಡಿ.ಆರ್. ನಾಗರಾಜ್ ಬೇರೊಂದು ಸಂದರ್ಭದಲ್ಲಿ 'ಪಿತೃ ಹತ್ಯೆಯೇ ಪ್ರಗತಿಯ ಹೆದ್ದಾರಿ' ಎನ್ನುತ್ತಾರೆ. ಜೀವ ಸಂಕುಲ ಬೆಳೆದು ಬಂದ ಬಗೆಯೇ ಇದು; ಇತಿಹಾಸದ ಚಕ್ರ ಉರುಳಿದ ರೀತಿಯೇ ಇದು. ಈ ಮೂಲಕ ಹಿಂಸೆಯನ್ನು ಸಮರ್ಥಿಸು ವುದು, ವೈಭವೀಕರಿಸುವುದು ನನ್ನ ಉದ್ದೇಶವಲ್ಲ; ಸಾಕೇತ್ ಸಾವನ್ನು ಒಂದು ವಿಸ್ತಾರವಾದ

ಮಾವೋ ತ್ಸೆ ತುಂಗ್

ವಿಶ್ಲೇಷಣೆ

ಭಗತ್‌ನನ್ನು ದೇಶಪ್ರೇಮಿಯಾಗಿಸಿದ ಬ್ರಿಟಿಷ್ ರಾಜ್ ವಿರುದ್ಧದ ಅದೇ ಬಂಡಾಯ ಸ್ವತಂತ್ರ ಭಾರತದಲ್ಲಿ ನಡೆದರೆ ದೇಶದ್ರೋಹವಾಗುತ್ತದೆ. ಹಿಂಸೆಯನ್ನು ವಿರೋಧಿಸುವುದಾದರೆ ಎಲ್ಲಾ ರೀತಿಯ ಹಿಂಸೆಯನ್ನು ವಿರೋಧಿಸಬೇಕು. ಭಗತ್‌ನನ್ನು ಹೀರೋ ಆಗಿಸುವ ಮಂದಿಗೆ, ಹಾಗೇ ವಿಧಾನಸೌಧದಲ್ಲಿ ಬಾಂಬ್ ಇಟ್ಟ ಮಟ್ಟೆಣ್ಣವರ್‌ನನ್ನು ಸಮರ್ಥಿಸುವ, ಚುನಾವಣಾ ಪ್ರಚಾರದ ಪರಿಕರವಾಗಿ ಬಳಸಿಕೊಳ್ಳುವ ಮಂದಿಗೆ ಸಾಕೇತ್ ಹತ್ಯೆಗೆ ಪ್ರತಿಕ್ರಿಯಿಸಲು ಯಾವುದೇ ನೈತಿಕ ಹಕ್ಕಿಲ್ಲ. ಹಿಂಸೆಗೆ ಪ್ರತಿರೋಧವನ್ನೊಡ್ಡುವುದಾದರೆ ಅದು ಹಿಂಸೆಯ ಎಲ್ಲಾ ಸ್ವರೂಪಗಳ ವಿರುದ್ಧದ ಪ್ರತಿರೋಧವಾಗಬೇಕು.

○ ಶ್ರೀಶ ಉಡುಪ

ಗಾಂಧಿ ಸ್ವತಃ ಈ ಅಂಶವನ್ನೆ ಗುರುತಿಸಿದ್ದರು ಎಂಬುದು ಮೇಲಿನ ಮಾತು ಗಳಲ್ಲಿ ವ್ಯಕ್ತವಾಗುತ್ತಿದೆಯೆ? ಗಾಂಧಿಯ ಅಹಿಂಸೆ ಅಪ್ಪಟ ರಾಜಕಾರಣದ ವ್ಯವಹಾರವಾದರೂ ಅದರ ಸುತ್ತ ಆಧ್ಯಾತ್ಮಿಕ ಪ್ರಭಾವಳಿ ಸುತ್ತಿಕೊಳ್ಳುತ್ತಿದೆ. ಚಂಪಾರಣ್ ಚಳವಳಿಯಂತಹ ರಾಜಕೀಯ ಚಲನೆಯನ್ನು ಗಾಂಧಿ ಆಧ್ಯಾತ್ಮಿಕ ಚೌಕಟ್ಟಿನಲ್ಲಿ ಉದಾತ್ತೀಕರಿಸಿಕೊಂಡು (ಅವರು ಆತ್ಮಕಥೆಯನ್ನು 'ಚಂಪಾ ರಣ್ ಸತ್ಯಾಗ್ರಹ'ದ ಕುರಿತಾದ ಅಧ್ಯಾಯವೊಂದನ್ನು 'ಅಹಿಂಸಾ ದೇವಿಯ ಸಮ್ಮುಖದಲ್ಲಿ' ಎಂದು ಕರೆದುಕೊಂಡಿರುವುದನ್ನು ಜೊತೆಗೇ ಗುರುತಿಸಬೇಕು) ತಮ್ಮ 'ಅಹಿಂಸೆ' ರಾಜಕೀಯ ಚೌಕಟ್ಟಿನ 'ಪ್ರತಿಹಿಂಸೆ'ಯಾಗುವ ಅಪಾಯದಿಂದ ತಪ್ಪಿಸಿಕೊಳ್ಳುತ್ತಾರೆ.

ಗಾಂಧಿ ಪ್ರಭುತ್ವದ ದಮನಕಾರಿ ಹಿಂಸೆಯನ್ನು ಎದುರಿಸಲು ಉಪಯೋಗಿಸಿದ ಅಹಿಂಸೆಯನ್ನು ಆತ ಆಧ್ಯಾತ್ಮೀಕರಣಗೊಳಿಸಿ ಪ್ರತಿಹಿಂಸೆಯೆಂದು ಗುರುತಿಸಿದರೆ ತಪ್ಪೇನಿಲ್ಲ. ನಿಷ್ಕ್ರಿಯ ಪ್ರತಿಭಟನೆ ಮತ್ತು ಗೆರಿಲ್ಲಾ ಯುದ್ಧ ತಂತ್ರದ ಮಧ್ಯೆ ಶ್ಲಾಘನೀಯವಾದ ಆಪ್ತತೆ ಇರುವುದನ್ನು ಹಲವು ಚಿಂತಕರು ಗುರುತಿಸಿದ್ದಾರೆ. ಪ್ರಭುತ್ವದ ದಮನಕಾರಿ ಶಕ್ತಿಯನ್ನು ರಾಜಕೀಯ ದೃಷ್ಟಿಯಲ್ಲಿ ನಿಖರವಾಗಿ ತುಲನೆ ಮಾಡಿ ಅದಕ್ಕೆ ಪ್ರತಿಯಾದ ಪ್ರತಿಭಟನೆಯ ಮಾದರಿಯನ್ನು ರೂಪಿಸುವಲ್ಲಿಯೇ ಗಾಂಧಿವಾದಿ ನೈತಿಕತೆ ಅಡಗಿದೆ. ಚಂಪಾರಣ್ ಸಂದರ್ಭದಲ್ಲಿ ಇದು ಜಮೀನ್ದಾರರ ವಿರುದ್ಧದ ರೈತರ ಸಮರವಾದರೆ ಬ್ರಿಟಿಷ್ ಇಂಡಿಯಾದಲ್ಲಿ ಆಡಳಿತ ಯಂತ್ರದ ಹಿಂಸೆಗೆ ಪ್ರತಿಹಿಂಸೆಯಾಗುತ್ತದೆ. ಹೀಗಾಗಿ ತೀರಾ ಸಾಂದರ್ಭಿಕವಾಗಿರುವ ಹಿಂಸೆ-ಅಹಿಂಸೆಗಳ ವ್ಯಾಖ್ಯೆಯನ್ನು ಸಾರ್ವತ್ರಿಕಗೊಳಿಸುವುದು ಸರಿಯೆ ?

-೦-೦-

ಈ ಸಂದರ್ಭದಲ್ಲಿ 'ಬೆಟ್ಟವನ್ನು ಸರಿಸಿದ ಮೂರ್ಖ ಮುದುಕ'ನ ಕತೆ ನೆನಪಾಗುತ್ತಿದೆ ; ಅದು ಮಾವೋನ 'The foolish old man who moved the mountain' : ಸ್ಥೂಲವಾಗಿ ಸಂಗ್ರಹಿಸುವುದಾದರೆ :

ಒಂದು ಊರಿನಲ್ಲಿ ಒಬ್ಬ ಮುದುಕ ರೈತನಿರುತ್ತಾನೆ. ಆತನ ಹೊಲ ಮತ್ತು ಮನೆಗಳ ನಡುವೆ ಒಂದು ಬೆಟ್ಟವಿರುತ್ತದೆ. ಮನೆಯಿಂದ ಹೊಲಕ್ಕೆ ಹೋಗಬೇಕಾದರೆ ಬೆಟ್ಟವನ್ನು ಏರಿ ಇಳಿಯಲೇಬೇಕಾಗಿರುವ ಅನಿವಾರ್ಯತೆಯನ್ನು ನೋಡಿ ಆತ ಆ ಬೆಟ್ಟವನ್ನು ಅಗೆಯಲು ಆರಂಭಿಸುತ್ತಾನೆ. ಊರವರು ಹುಚ್ಚನೆನ್ನುತ್ತಾರೆ. ಆತನನ್ನು; ಇದು ಮುಗಿಯದ ಕೆಲಸವೆಂದು. ಆತ 'ತನ್ನ ಮುಂದಿನ ತಲೆಮಾರುಗಳೂ ತನ್ನಂತೆಯೇ ದುಡಿದು ಬೆಟ್ಟವನ್ನು ಕಡಿದು ತೆಗೆಯುತ್ತಾರೆ' ಎಂಬ ಭರವಸೆ ವ್ಯಕ್ತಪಡಿಸಿ ತನ್ನ ಕೆಲಸವನ್ನು ಮುಂದುವರಿಸುತ್ತಾನೆ. ಕ್ರಮೇಣ ಊರವರೆಲ್ಲರೂ ಅವನ ಜೊತೆ ಸೇರಿಕೊಳ್ಳುತ್ತಾರೆ. ಕೊನೆಗೆ ಬೆಟ್ಟ ಮಾಯವಾಗುತ್ತದೆ.

ಇಲ್ಲಿ ಹುಚ್ಚ ಯಾರು ? ಮುದುಕ ರೈತನೋ ಅಥವಾ ಆತನನ್ನು ಹುಚ್ಚನೆಂದು ಕರೆದ ವ್ಯವಸ್ಥೆಯೋ ? ಇನ್ನೂ ನೇರವಾಗಿ ಇಲ್ಲಿಗೆ ಅನ್ವಯಿಸಿ ಹೇಳಬೇಕಾದರೆ ಯಾರು ಹಿಂಸೆಯ (ಮೂಲ) ಶಕ್ತಿ ? ಸಾಕೇತ್‌ನಂಥ ರೊಚ್ಚಿಗೆದ್ದ ಆಕ್ರೋಶಿತ ಹುಡುಗರೋ ಅಥವಾ.. ?

-೦-೦-

ಅಹಿಂಸೆಯ ಪರಮ ಪ್ರತಿಪಾದಕರಾದ ಗಾಂಧಿ, ಭಗತ್‌ಸಿಂಗ್ ನೇಣುಗಂಬವನ್ನೇರಿದ ಸಂದರ್ಭದಲ್ಲಿ ಹೀಗೆ ಬರೆಯುತ್ತಾರೆ : ಭಗತ್‌ರ ಶೌರ್ಯ, ಧೈರ್ಯ, ಕೆಚ್ಚನ್ನು ಗೌರವಿಸೋಣ; ತತ್ವನಿಷ್ಠೆಗೆ ತಲೆಬಾಗೋಣ; ಆದರೆ ಅವರ ದಾರಿ ನಮಗೆ ಸ್ಫೂರ್ತಿಯಾಗದಿರಲಿ ಎಂದು. ಸಾಕೇತ್ ಸಾವಿನ ನಂತರ ಅವನನ್ನು ಭಗತ್ ಜೊತೆ ಹೋಲಿಸಿ ನೋಡುವ ಪ್ರಯತ್ನ ನಡೆದಿತ್ತು : ಭಗತ್ ಬ್ರಿಟಿಷ್ ರಾಜ್‌ಗೆ ಹೇಗೆ ಕಂಡರೋ ಸಾಕೇತ್ ಇಂದಿನ ವ್ಯವಸ್ಥೆಯ ದೃಷ್ಟಿಯಲ್ಲಿ ಹಾಗೆಯೇ ಕಾಣುತ್ತಾರೆ ; ಭಗತ್ ಶವವನ್ನು ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರ ಅರೆಬರೆ ದಹಿಸಿತ್ತು -ತರಾತುರಿಯಲ್ಲಿ; ಅನಂತರ ಈಗ ಸಾಕೇತ್ ಸರದಿ ; ಇಬ್ಬರೂ ಅವಿರತ ಓದುಗಾರರು ಇತ್ಯಾದಿ. ಈ ಯತ್ನವನ್ನು ಸಾಕೇತ್‌ನನ್ನು ಹುತಾತ್ಮನನ್ನಾಗಿಸುವ ಯತ್ನ ಎಂದರೆ ತಪ್ಪಾಗುತ್ತದೆ. ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಭಗತ್ ದಾರಿ ಹೀಗಿರದೇ ಬೇರೆ ಹೇಗಿರಲು ಸಾಧ್ಯ ? ಭಗತ್‌ನನ್ನು ದೇಶಪ್ರೇಮಿಯಾಗಿಸಿದ ಬ್ರಿಟಿಷ್ ರಾಜ್ ವಿರುದ್ಧದ ಅದೇ ಬಂಡಾಯ ಸ್ವತಂತ್ರ ಭಾರತದಲ್ಲಿ ನಡೆದರೆ ದೇಶದ್ರೋಹವಾಗುತ್ತದೆ. ಇಲ್ಲಿ ಹೇಳಬೇಕಾಗಿರುವುದು ಇಷ್ಟೇ: ಹಿಂಸೆಯನ್ನು ವಿರೋಧಿಸುವುದಾದರೆ ಎಲ್ಲಾ ರೀತಿಯ ಹಿಂಸೆಯನ್ನು ವಿರೋಧಿಸಬೇಕು. ಭಗತ್‌ನನ್ನು ಹೀರೋ ಆಗಿಸುವ ಮಂದಿಗೆ, ಹಾಗೇ ವಿಧಾನಸೌಧದಲ್ಲಿ ಬಾಂಬ್ ಇಟ್ಟ ಮಟ್ಟಣ್ಣವರ್‌ನನ್ನು ಸಮರ್ಥಿಸುವ, ಚುನಾವಣಾ ಪ್ರಚಾರದ ಪರಿಕರವಾಗಿ ಬಳಸಿಕೊಳ್ಳುವ ಮಂದಿಗೆ ಸಾಕೇತ್ ಹತ್ಯೆಗೆ ಪ್ರತಿಕ್ರಿಯಿಸಲು ಯಾವುದೇ ನೈತಿಕ ಹಕ್ಕಿಲ್ಲ. ಹಿಂಸೆಗೆ ಪ್ರತಿರೋಧವನ್ನೊಡ್ಡುವುದಾದರೆ ಅದು ಹಿಂಸೆಯ ಎಲ್ಲಾ ಸ್ವರೂಪಗಳ ವಿರುದ್ಧದ ಪ್ರತಿರೋಧವಾಗಬೇಕು; double standನ ಅವಶ್ಯಕತೆ ಇಲ್ಲವೇ ಇಲ್ಲ.



ಯಾರ ಜೀವವನ್ನು ತೆಗೆಯಲೂ ಪ್ರಭುತ್ವಕ್ಕೆ ಹಕ್ಕಿಲ್ಲ. ಪೊಲೀಸರ ಹತ್ಯೆ ಎಷ್ಟು ಖಂಡನೀಯವೋ ಅಷ್ಟೇ ಖಂಡನೀಯ ಧನಂಜಯ ಚಟರ್ಜಿಯ ಮರಣದಂಡನೆ; ವೀರಪ್ಪನ್‌ನ ಸಾವು. ಇಂಥ ವ್ಯವಸ್ಥೆ ಪ್ರಾಯಶಃ ಎಲ್ಲರೂ ತಮ್ಮ ತಪ್ಪಿಗಾಗಿ ಪಶ್ಚಾತ್ತಾಪ ಪಡುವ ದಾಸ್ತೋವ್‌ಸ್ಕಿಯ ರೋಡಿಯಾಗಳಾದಾಗ, ಇನ್ನೊಬ್ಬರು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವ ಟಾಲ್‌ಸ್ಟಾಯ್‌ನ ನೆಕ್ಲುದೋವ್‌ಗಳಾದಾಗ, ವ್ಯವಸ್ಥೆಯ ತಪ್ಪಿಗೆ ತನ್ನಲ್ಲೇ ಕಾರಣ ಹುಡುಕಿಕೊಳ್ಳುವ ಗಾಂಧಿಯಾದಾಗ ಮಾತ್ರ ಸಾಧ್ಯವೇನೋ?

-೦-೦-

ಕಳೆದ ವಾರದ ಎರಡು ಬರ್ಬರ ಹತ್ಯೆಗಳು - ಮೆಣಸಿನ ಹಾಡ್ಯದಲ್ಲಿ ನಕ್ಸಲರ ಹತ್ಯೆ ಮತ್ತು ವೆಂಕಟಮ್ಮನಹಳ್ಳಿಯ ಪೊಲೀಸರ ಹತ್ಯೆಗಳು ಪ್ರಜಾಸತ್ತೆಯ ನೈತಿಕ ನೆಲೆಗಟ್ಟನ್ನೇ ಅಲುಗಾಡಿಸುವಂಥವುಗಳು. ಅನಂತಮೂರ್ತಿಯವರು ಸರಕಾರದ ಸಂತತನದ ಬಗ್ಗೆ ಬರೆದಿದ್ದರು. ಹಾಗಿರಲು ಎಂದೂ ಸಾಧ್ಯವಾಗಲಿಲ್ಲವೆಂದು. ಪ್ರಭುತ್ವದ ಈ ಕ್ರೌರ್ಯವನ್ನು ಗಾಂಧಿ 'ಹಿಂದ್ ಸ್ವರಾಜ್'ನಲ್ಲೇ ಗುರುತಿಸಿದ್ದರು. ಅದಕ್ಕಾಗಿ ಅವರ ಪರಿಕಲ್ಪನೆಯ 'ಧರ್ಮ' ಮನು ರಾಜಕೀಯದೊಂದಿಗೆ ಬೆರೆಸಿದ್ದರು. ಕೊನೆಕೊನೆಗೆ ಅವರು 'ಶುದ್ಧ ಅಹಿಂಸೆ'ಯ ಹುಡುಕಾಟವನ್ನು ನಿಲ್ಲಿಸಿ ಈ 'ಕಲಬೆರಕೆ ರಾಜಕೀಯ' (ಧನಾತ್ಮಕ ಅರ್ಥದಲ್ಲಿ ಬಳಸುತ್ತಿದ್ದೇನೆ) ವನ್ನು ಪ್ರಯೋಗಿಸತೊಡಗಿದ್ದರು -ಒಂದು ಮಾತೃ ಸ್ವರೂಪ ಪ್ರಭುತ್ವವನ್ನು ಕಂಡುಕೊಳ್ಳಲು. ಜನ ಯಾವತ್ತೂ ನಿರೀಕ್ಷಿಸುವುದು ಈ ತಾಯಿತನವನ್ನು. ತನ್ನ ಮಗು ತಪ್ಪು ಮಾಡಿದರೆ ತಾಯಿ ತಿದ್ದುತ್ತಾಳೆ; ಕೊಲ್ಲುವುದಿಲ್ಲ. ಆದರೆ ಈಗ ಪ್ರಭುತ್ವ ತನ್ನ ಮಕ್ಕಳನ್ನು ಕೊಲ್ಲಲು ಹೊರಟಿದೆ. ಜನರ ಹುಡುಗಾಟಕ್ಕೂ ಸರ್ಕಾರದ ಪುಂಡಾಟಕ್ಕೂ ಆತ್ಯಂತಿಕವಾಗಿ ಬಹಳ ವ್ಯತ್ಯಾಸವಿದೆ.

ಯಾರ ಜೀವವನ್ನು ತೆಗೆಯಲೂ ಪ್ರಭುತ್ವಕ್ಕೆ ಹಕ್ಕಿಲ್ಲ. ಪೊಲೀಸರ ಹತ್ಯೆ ಎಷ್ಟು ಖಂಡನೀಯವೋ ಅಷ್ಟೇ ಖಂಡನೀಯ ಧನಂಜಯ ಚಟರ್ಜಿಯ ಮರಣದಂಡನೆ; ವೀರಪ್ಪನ್‌ನ ಸಾವು. ಇಂಥ ವ್ಯವಸ್ಥೆ ಪ್ರಾಯಶಃ ಎಲ್ಲರೂ ತಮ್ಮ ತಪ್ಪಿಗಾಗಿ ಪಶ್ಚಾತ್ತಾಪ ಪಡುವ ದಾಸ್ತೋವ್‌ಸ್ಕಿಯ ರೋಡಿಯಾಗಳಾದಾಗ (Crime and Punishment), ಇನ್ನೊಬ್ಬರು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವ ಟಾಲ್‌ಸ್ಟಾಯ್‌ನ ನೆಕ್ಲುದೋವ್ (Resurrection) ಗಳಾದಾಗ, ವ್ಯವಸ್ಥೆಯ ತಪ್ಪಿಗೆ ತನ್ನಲ್ಲೇ ಕಾರಣ ಹುಡುಕಿಕೊಳ್ಳುವ ಗಾಂಧಿಯಾದಾಗ ಮಾತ್ರ ಸಾಧ್ಯವೇನೋ? ಸದ್ಯದ ಪರಿಸ್ಥಿತಿಯಲ್ಲಿ ಇದು ಯುಟೋಪಿಯನ್ ಕನಸು; ಪ್ಲೇಟೋನ ಆದರ್ಶ ರಾಜ್ಯದ ಕನಸು. ಪ್ರತಿ ಗ್ರಾಮಗಳೂ 'ಗ್ರಾಮ ಸ್ವರಾಜ್ಯ'ಗಳಾದಾಗ ಇದು ಸಾಧ್ಯವಾದೀತೇನೋ. ಅಲ್ಲಿ ಪ್ರತಿಯೊಬ್ಬನನ್ನೂ ನಿಭಾಯಿಸಬಹುದು. ಭೀತಿಗೆ ಅಲ್ಲಿ ಅವಕಾಶವಿಲ್ಲ; ಇಲ್ಲಿಯಾದರೆ ಅಂತಹವರು ಎಲ್ಲಿ ತನಗೆ ಸವಾಲಾಗಿಬಿಡಬಹುದೋ ಎಂಬ ಭಯ ಪ್ರಭುತ್ವಕ್ಕೆ. ಇದು ಸಾಧ್ಯವಾಗಬೇಕಾದರೆ ರಾಷ್ಟ್ರ ಪ್ರಭುತ್ವ, ರಾಷ್ಟ್ರೀಯತೆಯ ಕಲ್ಪನೆಗಳು ಸ್ಫೋಟಗೊಂಡು ಛಿದ್ರಗೊಳ್ಳಬೇಕು. ಇದು ಸುಲಭವಲ್ಲ...

-೦-೦-

ಸಾಕೇತ್ ಶವದಹನ ಸಂಬಂಧದ ವಿವಾದ ಅಧಿಕಾರಶಾಹಿ (bureaucracy) ಅಪಾಯಕಾರಿ ಮಟ್ಟಕ್ಕೆ ಬೆಳೆಯುತ್ತಿರುವುದನ್ನು ತೋರಿಸಿಕೊಟ್ಟಿದೆ. ಖುದ್ದು ಮುಖ್ಯಮಂತ್ರಿಯವರ ಮಾತನ್ನು ಮೀರಿದೆ ಪೊಲೀಸ್ ಇಲಾಖೆ. ನಾವು ಪೊಲೀಸ್ ರಾಜ್ಯದತ್ತ ಸಾಗುತ್ತಿದ್ದೇವೆಯೇ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ. ಈ ಬೆಳವಣಿಗೆಯನ್ನು communication gap ಎಂದು ವ್ಯಾಖ್ಯಾನಿಸಿದ ಮುಖ್ಯಮಂತ್ರಿಗಳ ದೈನೇಸಿತನಕ್ಕೆ ನಾಚಿಕೆ ಪಡಬೇಕಾಗಿದೆ. ಹಾಗಾದರೆ ಎಲ್ಲಿದೆ ಜನರ ಪ್ರಭುತ್ವ ? ಅಧಿಕಾರಶಾಹಿ, ಅದರಲ್ಲೂ ಪೊಲೀಸ್, ಸೈನ್ಯದಂತಹ ಸಶಸ್ತ್ರ ಇಲಾಖೆಗಳು ಬಲಗೊಂಡು ದರ್ಬಾರು ನಡೆಸುವುದು ಸರ್ವಾಧಿಕಾರೀ ಪ್ರವೃತ್ತಿ ಮೊಳಕೆಯೊಡೆಯುವ ಲಕ್ಷಣ. ಇವುಗಳ ಒಂದೊಂದು ಸ್ವೇಚ್ಛಾಚಾರೀ ಯತ್ನಗಳೂ ಜನರ ಸಾರ್ವಭೌಮತ್ವವನ್ನು ಕಸಿಯುವಂತಹವುಗಳು; ಪ್ರಜಾಪ್ರಭುತ್ವದ ಶವಪೆಟ್ಟಿಗೆಯ ಒಂದೊಂದು ಮೊಳೆಗಳು... ಮಣಿಪುರದಲ್ಲಿ ಭಾರತೀಯ ಸೈನ್ಯದ ಮಾನ ಹರಾಜಾಗಿರು

ವುದನ್ನು ಜನ ಮರೆತಿಲ್ಲ; ವೀರಪ್ಪನ್ ಬೇಟೆಯ ಸಂದರ್ಭದ ಎಸ್‌ಟಿಎಫ್ ದೌರ್ಜನ್ಯದ ನೆನಪು ಮಸುಕಿಲ್ಲ... ಜನ ಕೊಚ್ಚಿ ಹೋಗುವ ಆಡಳಿತಶಾಹಿ ಗೂಳಿಯನ್ನು ಪಳಗಿಸುತ್ತಾರೆ. ಇಲ್ಲದಿದ್ದರೆ ನಾಡಿಗೆ ದುರಂತ ಖಾತ್ರಿ...

-೦-೦-

ಸಾಕೇತ್ ಜೊತೆ ಮೃತನಾದ ಶಿವಲಿಂಗುವನ್ನು ಗಮನಿಸಿರಬೇಕು. ಆತನ ಶವವನ್ನು ಗುರುತಿಸಲು ತೊಡಗಿದಲ್ಲಿಂದ ಹಿಡಿದು ನಂತರದ ಬೆಳವಣಿಗೆಯುದ್ದಕ್ಕೂ ವ್ಯಕ್ತವಾದ ಶೀತಲ ನಿರ್ಲಕ್ಷ್ಯವನ್ನು ನೋಡಬೇಕು. ಇದು ನಕ್ಸಲಿಸಂನ ದೌರ್ಬಲ್ಯವನ್ನು ತೋರಿಸುತ್ತದೆಯೇ ಅಥವಾ ನಾವೇ ನಮ್ಮ ದೃಷ್ಟಿಕೋನವನ್ನು ಆರೋಪಿಸುತ್ತಿದ್ದೇವೋ ಅರ್ಥವಾಗುತ್ತಿಲ್ಲ. ಆದರೆ ಸಮಾನತೆಯ ಸತ್ವವನ್ನು ಭ್ರಷ್ಟಗೊಳಿಸುವ ಶ್ರೇಣೀಕರಣಗಳು ಸಾಂಸ್ಥಿಕ ಚೌಕಟ್ಟನ್ನು ಪಡೆದ ಗುಂಪುಗಳಲ್ಲಿ ಸಾಮಾನ್ಯ. ಇವುಗಳಿಗೆ ಮಿಲಿಟೆಂಟ್ ಟಚ್ ಸಿಕ್ಕಿಬಿಟ್ಟರೆ ಸಾಕು, ಇದು ಅನಿವಾರ್ಯವಾಗಿಬಿಡುತ್ತದೆ. ಸೈನಿಕ ಜಗತ್ತಿಗೆ ತಿಳಿದಿರುವ ಭಾಷೆ ವಿಧೇಯತೆ, ಗುಲಾಮಿತನಗಳು ಮಾತ್ರ. ಸೈನಿಕ ಬದುಕಿನ ಮೂಲಪ್ರಾಣ ಅಂತಸ್ತುಗಳ ಕಲ್ಪನೆ. ಕೆಳಶ್ರೇಣಿಯವನು ಮೇಲುಶ್ರೇಣಿಯವನಿಗೆ ಒಂದು ಚಿಕ್ಕ ಅವಿನಯ ತೋರಿಸುವುದನ್ನು ಊಹಿಸಲೂ ಸಾಧ್ಯವಿಲ್ಲ. ಇಂತಹ ಶ್ರೇಣೀಕೃತ ಪಡೆಗಳಿಂದ ಸಮಾನತೆಯ ಸಮಾಜವನ್ನು ಸ್ಥಾಪಿಸುವುದು ಒಂದು ದೊಡ್ಡ ವ್ಯಂಗ್ಯ. ಇಂಥಲ್ಲಿ ಹೆಚ್ಚು ಸಮಾನರ ಸಂಖ್ಯೆ ಹೆಚ್ಚಾಗಬಹುದಷ್ಟೆ. ಗೆರಿಲ್ಲಾ ಯುದ್ಧ ತಂತ್ರ ಅಥವಾ ಯಾವುದೇ ಸಾಂಸ್ಥಿಕ ಹಿಂಸಾ ತಂತ್ರಗಳಿಗೆ ಇಂಥ ವಿವೇಕಕ್ಕೆ ಗುಡ್‌ಬೈ ಹೇಳುವ ಶಿಸ್ತು (Iron discipline) ಅವಶ್ಯಕ. ಆದರೆ ಶಿಸ್ತಿಗೂ ಗುಲಾಮಗಿರಿಗೂ ಅವಿನಾ ಸಂಬಂಧ...

-೦-೦-

ಇನ್ನೊಂದು ವಿಚಾರವನ್ನು ಪ್ರಸ್ತಾಪಿಸಿ ಟಿಪ್ಪಣಿಯನ್ನು ಮುಗಿಸುತ್ತೇನೆ. ಜಾಗತೀಕರಣ ಗೋಬೆಲ್ ಪ್ರಚಾರ ತಂತ್ರಕ್ಕೆ ಸಾಕೇತ್ ಪ್ರತಿರೋಧದ ರೂಪಕವಾಗುತ್ತಾನೆ. ೨೦೦೩ರ ನವೆಂಬರ್‌ನಲ್ಲಿ ಈದುವಿನಲ್ಲಿ ಹಾಜಿಮಾ, ಪಾರ್ವತಿಯರ ಸಾವಿಗೆ ಕಾರಣವಾದ ನಕಲಿ ಎನ್‌ಕೌಂಟರ್ ನಂತರ ಪೊಲೀಸರು ಹಬ್ಬಿಸಿದ ಸುದ್ದಿಗಳನ್ನು ಸುಳ್ಳೆಂದು ತೋರಿಸಿದವನು ಪ್ರೇಂ ಅಥವಾ ಸಾಕೇತ್. ಅನಂತರ ಪ್ರತಿಹಂತದಲ್ಲೂ ಪೊಲೀಸರ ಸುಳ್ಳುಗಳನ್ನು ಮುಖಕ್ಕೆ ರಾಚುವಂತೆ ಎತ್ತಿ ತೋರಿಸಿದ. ನಕ್ಸಲೀಯರ ಕುರಿತು ಸುಳ್ಳು ಊಹಾಪೋಹಗಳೆದ್ದಾಗ ಖುದ್ದು ಮಾಧ್ಯಮದವರನ್ನೇ ಕಾಡಿಗೆ ಕರೆದುಕೊಂಡು ಹೋಗಿ ವಾಸ್ತವವನ್ನು ತೋರಿಸಿದ. ಆಗಾಗ ಪತ್ರಿಕಾ ಪ್ರಕಟಣೆಗಳನ್ನು ನೀಡುತ್ತಾ ನಕ್ಸಲ್ ಭೂಗತ ಜಗತ್ತು ಮತ್ತು ಜನಸಾಮಾನ್ಯರ ಹೊರ ಜಗತ್ತಿನ ನಡುವೆ ಸಂಪರ್ಕ ಸೇತುಯಾದ. ಪ್ರಾಯಶಃ ಪೊಲೀಸರಿಗೆ ಇರಿಸು ಮುರಿಸು ಮಾಡಿ ಸಿಟ್ಟು ಬರಿಸಿದ್ದು ಅವರ ತಪ್ಪುಗಳನ್ನು ಈತ ಮಾಧ್ಯಮದಲ್ಲಿ ಎತ್ತಿ ತೋರಿಸಿದ ರೀತಿ. ಹೀಗಾಗಿ ಪೊಲೀಸರಿಗೆ ಸಾಕೇತ್‌ನನ್ನು ಕೊಲ್ಲುವುದು ಅನಿವಾರ್ಯವಾಗಿತ್ತು. ತಮ್ಮ ಮುಖವನ್ನು, ಮುಖೇಡಿ ವ್ಯಕ್ತಿತ್ವವನ್ನು ರಕ್ಷಿಸಿಕೊಳ್ಳಲು ಸಾಕೇತ್‌ನ ಬಾಯಿಯನ್ನು ಶಾಶ್ವತವಾಗಿ ಮುಚ್ಚುವುದು, ಆತನ ಲೇಖನಿಗೆ ಶಾಶ್ವತ ವಿರಾಮ ಕೊಡುವುದು ಅಗತ್ಯವಾಗಿತ್ತು; ಅವನ ರಕ್ತ ಹರಿಯಬೇಕಾಗಿತ್ತು.

ಬಂಡವಾಳಶಾಹಿ ಜಗತ್ತಿನಲ್ಲಿ ಅದರಲ್ಲೂ ಮುಖ್ಯವಾಗಿ ಜಾಗತೀಕರಣದ ಸಂದರ್ಭದಲ್ಲಿ ಗೋಬೆಲ್ ನೀತಿ ಜಾಗತಿಕ ಅನಿವಾರ್ಯತೆ. ಅದು ಆಧುನಿಕ ಯುದ್ಧತಂತ್ರ ಕೂಡಾ. ಅಮೆರಿಕಾ ಅಂಡ್ ಕಂ., ಇರಾಕ್‌ನಲ್ಲಿ ಅನುಸರಿಸಿದ್ದು ಇದನ್ನೇ. ಇಸ್ರೇಲ್-ಪ್ಯಾಲೆಸ್ಟೈನ್‌ಗಳು, ಅಷ್ಟೆಲ್ಲ ಯಾಕೆ, ಭಾರತ-ಪಾಕಿಸ್ತಾನಗಳು ಅನುಸರಿಸುತ್ತಿರುವುದು ಕೂಡಾ ಇದನ್ನೇ. ಸುಳ್ಳನ್ನೇ ನೂರು ಸಾರಿ ಹೇಳಿದರೆ ಅದು ಸತ್ಯವಾಗುತ್ತದೆ ಎಂದವನು ಹಿಟ್ಲರ್‌ನ ಪ್ರಚಾರ ಕಾರ್ಯದರ್ಶಿ ಗೊಬೆಲ್. ಇವತ್ತು ಹಿಂದೂ ಕೋಮುವಾದಿಗಳು ಹೇಳುವುದೂ ಹೀಗೆಯೇ. ಹಾಗೇ ಪೊಲೀಸರ ಕಾರ್ಯತಂತ್ರವೂ ಈ ಜಾಗತಿಕ ಪ್ರಕ್ರಿಯೆಯ ಒಂದು ಭಾಗ; ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಳ್ಳಲು ಸುಳ್ಳನ್ನು ಸತ್ಯವೆಂದು ನಂಬಿಸಬೇಕಾಗಿದ್ದು ವ್ಯವಸ್ಥೆಯ ಮೂಲಭೂತ ಅಗತ್ಯ.

ಸಾಕೇತ್ ಒಬ್ಬ ನಕ್ಸಲೀಯ ನಾಯಕ ಎನ್ನುವುದಕ್ಕಿಂತ ಆತ ಗೊಬೆಲ್ ನೀತಿಗೆ ಒಡ್ಡಿದ ಪ್ರತಿರೋಧ ನನಗೆ ಮುಖ್ಯ. ಕೆಲವೇ ವಾರಗಳ ಹಿಂದೆ ಆತ ಟಿವಿಗೆ ನೀಡಿದ ಸಂದರ್ಶನವನ್ನು ಈ ಹಿನ್ನೆಲೆಯಲ್ಲಿ ಗುರುತಿಸಬೇಕು. ಆತ ಸತ್ತ ಐದೇ ದಿನದಲ್ಲಿ ಕರ್ನಾಟಕಕ್ಕೆ ಆಂಧ್ರ ಮಾದರಿಯ ಹಿಂಸಾಚಾರ ಕಾಲಿಟ್ಟದ್ದನ್ನು ನೋಡಿದರೆ ಸಾಕೇತ್ ಏನನ್ನು resist ಮಾಡಿದ್ದ ಎನ್ನುವುದು ತಿಳಿಯುತ್ತದೆ. ನಕ್ಸಲೀಯ ಚಳವಳಿಯ ಸಿದ್ಧ ಮಾದರಿಯಿಂದ ಸಾಕೇತ್ ಪ್ರತ್ಯೇಕಗೊಳ್ಳುವುದು ಈ ಕಾರಣಕ್ಕೆ. ಆತ ನಮಗೆ ಮುಖ್ಯನಾಗುವುದು ಹಿಂಸೆಯ ವಕ್ತಾರನಾಗಿ ಅಲ್ಲ; ಸತ್ಯದ ವಕ್ತಾರನಾಗಿ. ನಿಜದ ಹಾದಿಯ ಪ್ರವಾದಿ ಆತ.

-೦-೦-

ಮತ್ತೆ ಮಾಪೋನ ಕತೆಗೆ ಮರಳಬೇಕೆಂದರೆ :
ಆ ಮುದುಕ ರೈತ ಯಾರು ?
ಆ ಬೆಟ್ಟ ಯಾವುದು ?
ಹುಚ್ಚ ಯಾರು ?

> ಸಾಕೇತ್ ಒಬ್ಬ ನಕ್ಸಲೀಯ ನಾಯಕ ಎನ್ನುವುದಕ್ಕಿಂತ ಆತ ಗೊಬೆಲ್ ನೀತಿಗೆ ಒಡ್ಡಿದ ಪ್ರತಿರೋಧ ನನಗೆ ಮುಖ್ಯ. ಆತ ಸತ್ತ ಐದೇ ದಿನದಲ್ಲಿ ಕರ್ನಾಟಕಕ್ಕೆ ಆಂಧ್ರ ಮಾದರಿಯ ಹಿಂಸಾಚಾರ ಕಾಲಿಟ್ಟದ್ದನ್ನು ನೋಡಿದರೆ ಸಾಕೇತ್ ಏನನ್ನು resist ಮಾಡಿದ್ದ ಎನ್ನುವುದು ತಿಳಿಯುತ್ತದೆ. ನಕ್ಸಲೀಯ ಚಳವಳಿಯ ಸಿದ್ಧ ಮಾದರಿಯಿಂದ ಸಾಕೇತ್ ಪ್ರತ್ಯೇಕಗೊಳ್ಳುವುದು ಈ ಕಾರಣಕ್ಕೆ.

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

(೨೧ನೇ ಪುಟದಿಂದ)

ತ್ತಾರೆ ಎನಿಸುತ್ತದೆ ?! ಹಾಗಾಗಿಯೇ 'ತೆರಿಗೆ' ಸೋತಿತು ! 'ಮನುಷ್ಯರಿಲ್ಲದ ನೆಲ' ಗೆದ್ದಿತು ಅನಿಸುತ್ತದೆ !! ಏಕೆಂದರೆ ಲಗಾನ್ ಮತ್ತು ಸ್ವದೇಶ್ ಕೇವಲ ಮನರಂಜನಾ ಚಿತ್ರಗಳಲ್ಲ, ಅವು ಶುದ್ಧ 'ಜನಾಂಗೀಯ ರಾಜಕೀಯದ' ಚಿತ್ರಗಳು. ಸಾಂಸ್ಕೃತಿಕ ಚಿತಾವಣೆ/ಜಾತಿಯ ಗ್ರಹಿಕೆಯ ಚಿತ್ರಗಳು. ಇದರಲ್ಲಿ ಕಲಾತ್ಮಕತೆ ಇದ್ದರೂ ಅವು ಪೂರ್ವಾಗ್ರಹ ಪೀಡಿತವಾದವು. ಈ ಶೀತಲ ಭಯೋತ್ಪಾದನೆಯ ರಹಸ್ಯವರಿಯದ ದಡ್ಡರು ಬಂದೂಕ ಹಿಡಿಯುತ್ತಾರೆ. ಬಂದೂಕವೇ ನೆಪವಾಗಿ ಕೊಲ್ಲಿಸಲ್ಪಡುತ್ತಾರೆ.

ಇಲ್ಲಿ ನಕ್ಸಲರ ಹುಟ್ಟಿನ ರಹಸ್ಯವಿದೆ. ಹಾಗೇ ಅಂತ್ಯಗೊಳಿಸುವ ಮಂತ್ರವೂ ಇದೆ. ಬಂದೂಕದಿಂದ ಈ ಗೋಜಲನ್ನು ಬಿಡಿಸಲಾಗದು ಎಂಬ ಸಂಕೇತವೂ ಇದೆ. ಆದರೆ ಪೊಲೀಸ್ ಇಲಾಖೆ ಪರಾಕ್ರಮದ ಮಾತನ್ನಾಡುತ್ತದೆ. ಶಿಖಂಡಿ ಸರ್ಕಾರ ಅದರ ರೆಕ್ಕೆಗೆ ನೀರು ತಟ್ಟುತ್ತದೆ. ಸಂಘ ಪರಿವಾರಗಳು ಗಾಳಿ ಹಾಕುತ್ತಾರೆ. ಸತ್ಯು ನರ ಹರಿದುಕೊಳ್ಳು

ಈವರೆಗೂ ಈ ಸಾಂಸ್ಕೃತಿಕ ಚಿತಾವಣೆ/ ಜಾತೀಯ ಗ್ರಹಿಕೆಯ ಕಲಾತ್ಮಕತೆಯು ನಮಗೆ ಅರ್ಥವಾಗದಿರುವ ಕಾರಣದಿಂದಲೇ ಸಂಘ ಪರಿವಾರ ನಕ್ಸಲಿಸಮ್ಮಿನ ವಿರುದ್ಧ, ಸತ್ಯು, ಡಾ॥ ರಾಜ್ ವಿರುದ್ಧ ಮನಸ್ಸಿಗೆ ಬಂದಂತೆ ಮಾತನಾಡಿದಾಗ ಒಂದು ತಾತ್ಕಾಲಿಕ ಪ್ರತಿಭಟನೆ ಸೃಷ್ಟಿಯಾಗುವುದು. ಹಾಗೂ ಅಷ್ಟೇ ತುರ್ತಾಗಿ ನಂದಿಹೋಗುವುದು. ಮಾನವಂತರಾದರೆ ಇದನ್ನು ಸಂಘ ಪರಿವಾರ ಮತ್ತು ಸತ್ಯುಗಿಂತ ಮುಂಚೆ ಅರಿಯಬೇಕಾಗಿರುವುದು ಇವರನ್ನು ವಿರೋಧಿಸುತ್ತಿರುವ ಜನ.

ತ್ತಾರೆ. ಅವರ ವಿರೋಧಿಗಳು ಗಂಟಲು ಕಿತ್ತುಕೊಳ್ಳುತ್ತಾರೆ. ಆದರೆ ಇದು ಕಲೆಯ ಬಗ್ಗೆ ಮಾತನಾಡುವ ಎಲ್ಲರಿಗೂ ಅರ್ಥವಾಗಬೇಕು. ಚಿನ್ನದ ಕಟ್ಟು ತೊಡಿಸಿದ್ದೆಲ್ಲಾ ಅನನ್ಯವಲ್ಲ. ಅನನ್ಯವೆಂದು ಅವರು ಹೇಳಿದ್ದೆಲ್ಲಾ ಸತ್ಯವಲ್ಲ. ಇದು ಅಶುತೋಷ್ ಗೌರೀಕರ್‌ಗೆ, ಎಂ.ಎಸ್.ಸತ್ಯುಗೆ, ಇಂಥವರ ಯಶಸ್ವೀ ಸಂವಾಹಕ ನಟರಾದ ಅಮೀರ್‌ಖಾನ್ ಮತ್ತು ಶಾರುಖ್ ಖಾನ್‌ಗೆ, ಹಾಗೇ ಅಭಿಜಾತ ನಟರಾದ ಡಾ॥ ರಾಜ್‌ರವರಿಗೆ.

ಈವರೆಗೂ ಈ ಸಾಂಸ್ಕೃತಿಕ ಚಿತಾವಣೆ/ಜಾತೀಯ ಗ್ರಹಿಕೆಯ ಕಲಾತ್ಮಕತೆಯು ನಮಗೆ ಅರ್ಥವಾಗದಿರುವ ಕಾರಣದಿಂದಲೇ ಸಂಘ ಪರಿವಾರ ನಕ್ಸಲಿಸಮ್ಮಿನ ವಿರುದ್ಧ ಸತ್ಯು, ಡಾ॥ ರಾಜ್ ವಿರುದ್ಧ ಮನಸ್ಸಿಗೆ ಬಂದಂತೆ ಮಾತನಾಡಿದಾಗ ಒಂದು ತಾತ್ಕಾಲಿಕ ಪ್ರತಿಭಟನೆ ಸೃಷ್ಟಿ ಯಾಗುವುದು. ಹಾಗೂ ಅಷ್ಟೇ ತುರ್ತಾಗಿ ನಂದಿಹೋಗುವುದು. ಮಾನವಂತರಾದರೆ ಇದನ್ನು ಸಂಘ ಪರಿವಾರ ಮತ್ತು ಸತ್ಯುಗಿಂತ ಮುಂಚೆ ಅರಿಯಬೇಕಾಗಿರುವುದು ಇವರನ್ನು ವಿರೋಧಿಸುತ್ತಿರುವ ಜನ. ಹಾಗೇ ನಮ್ಮ ಪೊಲೀಸರು ಹಾಗೂ ಶೂದ್ರ ಮುಖ್ಯ/ಉಪಮುಖ್ಯಮಂತ್ರಿಗಳು ಸಹ. □

ಬಂಡಾಯ!

ಸಾರಾಸಗಟಾಗಿ
ಬಂಡಾಯವೆಲ್ಲಾ
'ಅಕಾದಮಿ, ಪ್ರಾಧಿಕಾರ, ಎಂಎಲ್‌ಸಿ' ಎಂಬ
ಗದ್ದಿಗೆ ಬಿಲದಡಿ ಮೂಸುತ್ತಾ
ಬಿಸಾಡಿದ ಮಾಂಸದ ತುಂಡಿಗೆ
ಹೋಯಿತು ಹರಸಿ !

ಸಾರಾಸಗಟಾಗಿ
ದಲಿತ ನೋವು
ರಕ್ತಪಾತ
ಅನ್ಯಾಯಗಳನು
ಕವಿತೆಯೊಳಗೆ ಹೆಣೆದು
ಮಾರಿಕೊಂಡಿತು ಕಿಲುಬು ಕಾಸಿಗೆ !

ಕೊಳೆತ ಭಾವನೆ
ತಳಕು ಭಾಷೆ ಸರಪಳಿಯಲಿ
ಹೊಳೆ ಹೊಳೆಸಿ ತುಕಾಲಿ ಆಸೆಗಳಿಗೆ
ಅಡವಿರಿಸಿ ಅಟ್ಟಕೇರಿಸಿತು !

ಬಂಡಾಯ ಬೋರ್ಗರೆದು
ಮಳೆನಿಂತ ಆಗಸವಾಗಿ
ನದಿಬತ್ತಿದ ನೆಲವಾಗಿ
ಚುನಾವಣೆಗೆ ನಿಂತ ರಾಜಕಾರಣಿಯಾಗಿ
ರೂಪಗೊಳ್ಳುತ್ತಲೇ ನರಳಿತು ರೌರವ !

ಹಿಂಬಾಲಿಸಿದ ಕಂದಮ್ಮಗಳ
ಕೊಟ್ಟು 'ಮಾರಿ ಬಲಿ'
ಪಬ್ಬು-ಕ್ಲಬ್ಬಿನಲಿ
ಲೈವ್ ಹುಡುಗಿಯರ
ಸೊಂಟ ಸುತ್ತ ಹಣಕುತಿತ್ತು !

ಡಾಕ್ಟರೇಟುಗಳಿಗೆ ಗೋಗರೆಯುತ್ತಾ
ಯೂನಿವರ್ಸಿಟಿ ಹೆಬ್ಬಾಗಿಲಿಗೆ
ತಲೆಯಿಟ್ಟು ಮುಲುಕುತ್ತಿತ್ತು !

ಸದ್ಯಕ್ಕೆ ಕುಂಬಕರ್ಣ ನಿದ್ದೆಯೊಳಗೆ
ಕನಸ ಹೊದ್ದು ಕೆಂಬಾವುಟ ಸಣ್ಣನೇ
ಕಿಡಿಯಾಡಿಸುತ್ತಲೇ ಇದೆ !

○ ಟಿ.ಎಸ್. ರಾಜೇಂದ್ರ ಪ್ರಸಾದ್

ಕಾಳಜಿ

ಸ್ವಾತಂತ್ರ್ಯ ಭಾರತದಲ್ಲಿ ಆಳುವವರು ತಮ್ಮ ಜವಾಬ್ದಾರಿಯನ್ನು ಮರೆತಿದ್ದಾರೆ. ದುಡಿಯುವ ಕೈಗಳಿಗೆ ಸಾಕಷ್ಟು ಕೆಲಸ, ಶ್ರಮಕ್ಕೆ ತಕ್ಕ ಫಲ ಲಭಿಸುವಂತೆ ಮಾಡುವ ಕೆಲಸವನ್ನು ಆಳುವವರು ಮಾಡುತ್ತಿಲ್ಲ. ಬಡತನಕ್ಕೆಲ್ಲ ಸಂಪನ್ಮೂಲ ಕೊರತೆ ಮತ್ತು ಜನಸಂಖ್ಯಾ ಸ್ಫೋಟ ಎಂಬ ಬೂಟಾಟಿಕೆಯ ಮಾತುಗಳಿಂದ ಜನರನ್ನು ನಂಬಿಸುತ್ತಿದ್ದಾರೆ. ಮುಖ್ಯವಾಗಿ ಇಲ್ಲಿ ಅಭಾವವಿದ್ದದ್ದು ಸಂಪನ್ಮೂಲ ಮತ್ತು ಜನಸಂಖ್ಯಾ ಸ್ಫೋಟ ಅಲ್ಲ. ಶೋಷಣೆ ರಹಿತ, ಭ್ರಷ್ಟಾಚಾರ ರಹಿತ ಆಳ್ವಿಕೆಯದ್ದು. ಹೀಗಾಗಿ ಸ್ವತಂತ್ರ ಭಾರತದಲ್ಲಿ ಬಡತನಕ್ಕೆ ಆಳುವವರ ಅಯೋಗ್ಯತೆ, ಅಧಿಕಾರ ರೂಢರ ಸಂಕಲ್ಪ ಹೀನತೆ, ಆಳರಸರ ದುರಾಡಳಿತವೇ ಕಾರಣವಲ್ಲವೆ ?

○ ನರಸಿಂಹ

ಹಸಿವು ಮತ್ತು ಬಡತನ, ಅನ್ಯಾಯ-ಶೋಷಣೆ- ದೌರ್ಜನ್ಯದ ವಿರುದ್ಧ ದನಿಯೆತ್ತಲು ಪ್ರೇರೇಪಿಸುತ್ತವೆ. ಮತ್ತು ಅವು ಯಾವ ವಿಶ್ವವಿದ್ಯಾಲಯ ಕಲಿಸದ ಪಾಠವನ್ನು ಕಲಿಸುತ್ತವೆ. ಬಾಹ್ಯಕಾಶ ಮತ್ತು ಅಣುಶಕ್ತಿ ಸಂಶೋಧನೆಗೆ ಕೋಟಿ ಕೋಟಿ ಹಣ ಸುರಿಯುತ್ತಿರುವ ನಮ್ಮ ದೇಶದಲ್ಲಿ ಜನರು ಮೂರು ಹೊತ್ತಿನ ತುತ್ತಿಗಾಗಿ ನರಳುತ್ತಿದ್ದಾರೆ. ಪ್ರಪಂಚದ ಶೇ. ೫ ರಷ್ಟು ಸಂಪನ್ಮೂಲ ನಮ್ಮ ಭಾರತದಲ್ಲಿದೆ. ಆದರೆ ಸ್ವಾತಂತ್ರ್ಯ ಬಂದಾಗಿನಿಂದ ೧೦ ಕೋಟಿಗೂ ಹೆಚ್ಚು ಐದು ವರ್ಷದೊಳಗಿನ ಮಕ್ಕಳು ಸಾಕಷ್ಟು ಆಹಾರ, ಶುಚಿಯಾದ ಕುಡಿಯುವ ನೀರು, ಪ್ರಾಥಮಿಕ ಆರೋಗ್ಯದ ಅವಶ್ಯಕತೆಯಿಲ್ಲದೇ ಮತ್ತು ಪೌಷ್ಟಿಕ ಆಹಾರವಿಲ್ಲದೇ ಇರುವುದರಿಂದ ಸಾವನ್ನಪ್ಪಿದ್ದಾರೆ.

ಭಾರತದ ಆಹಾರೋತ್ಪಾದನೆ ೨೦೦ ದಶಲಕ್ಷ ಟನ್. ಆದರೆ ೩೦೦ ದಶಲಕ್ಷ ನಮ್ಮ ಸಹೋದರರು ಆಹಾರವಿಲ್ಲದೇ ಜೀವಿಸುತ್ತಿದ್ದಾರೆ. ಮತ್ತು ದೇಶದಲ್ಲಿ ೬೨.೩೫ ಮಿಲಿಯನ್ ಮಕ್ಕಳು ಮೂರು ಹೊತ್ತಿನ ತುತ್ತಿಗಾಗಿ ಹೊಟೆಲ್, ಕಟ್ಟಡ ನಿರ್ಮಾಣ, ಗುಡಿಕೈಗಾರಿಕೆ, ಹಲವು ಕ್ಷೇತ್ರಗಳಲ್ಲಿ ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇಂದು ಭಾರತದಲ್ಲಿ ರೈತರು ಪ್ರತಿನಿತ್ಯ ಮೂರು ಪಟ್ಟು ತಿನ್ನುವಷ್ಟು ಆಹಾರೋತ್ಪಾದನೆ ಮಾಡಿದರೂ ಒಂದೊತ್ತಿನ ಕೂಳಿಗಾಗಿ ಪರಿತಪಿಸುತ್ತಿದ್ದಾನೆ. ಎಲ್ಲರಿಗೂ ಅನ್ನ ನೀಡುವ ರೈತರು ತಮ್ಮ ಕುಟುಂಬದೊಂದಿಗೆ ನೀರು ಕುಡಿದು ಉಪವಾಸ ನರಳಿ ಆತಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಎಲ್ಲಾರಿಗೂ ಅರಮನೆಗಳನ್ನು ನಿರ್ಮಿಸಿಕೊಡುವ, ಪಾದರಕ್ಷೆಗಳನ್ನು ಹೊಲಿಯುವ ವಿಪ್ಪಾರರು, ಕುಂಬಾರ-ಕಂಬಾರ, ದಲಿತರು, ಬಡಿಗರು ಕೊಳೆಗೇರಿಗಳಲ್ಲಿ ನಿರಾಶ್ರಿತರಾಗಿ ಬದುಕುತ್ತಿದ್ದಾರೆ.

೧೯೯೧ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ೨೮೫ ಮಿಲಿಯನ್ ಜನರು ದುಡಿಯುವವರು ಆಗಿದ್ದರೆ ೫೫೩ ಮಿಲಿಯನ್ ಜನರು ಯಾವುದೇ ದುಡಿಮೆಯಲ್ಲಿ ತೊಡಗಿರಲಿಲ್ಲ. ಏಕೆಂದರೆ ಪ್ರಭುತ್ವ ಅವರಿಗೆ ಉದ್ಯೋಗ ಕಲ್ಪಿಸಿಕೊಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ದುಡಿಮೆಗಾರನ ಮೇಲೆ ಇಬ್ಬರು ಅವಲಂಬಿಸಿದ್ದಾರೆ. ಸರಕಾರಿ ಅಂಕಿ ಸಂಖ್ಯೆಗಳ ಪ್ರಕಾರ ೧೯೫೧ರಲ್ಲಿ ಬಡತನ ರೇಖೆಯ ಕೆಳಗೆ ಬದುಕುತ್ತಿದ್ದ ಜನಸಂಖ್ಯಾ ೧೬೫ ಮಿಲಿಯನ್ ಆಗಿದ್ದದ್ದು ೧೯೯೩ರಲ್ಲಿ ೩೨೦ ಮಿಲಿಯನ್‌ಗೆ ತಲುಪಿತು. ಬಡತನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ದುಡಿಯುವವರ ಸಂಖ್ಯೆ ಕಡಿಮೆ ಇರುವುದರಿಂದಲ್ಲ. ದುಡಿಯುವವರಿಗೆ ಸಾಕಷ್ಟು ಕೂಲಿ ದೊರೆಯುತ್ತಿಲ್ಲ. ತಮ್ಮ ಶ್ರಮಕ್ಕೆ ತಕ್ಕ ಫಲ ಸಿಗುತ್ತಿಲ್ಲ.

ಅಂದರೆ ಒಬ್ಬ ದುಡಿಮೆಗಾರ ಎಷ್ಟು ದುಡಿದರು ತನ್ನನ್ನು ಹಾಗೂ ತನ್ನನ್ನು ಅವಲಂಬಿಸಿರುವ ಕುಟುಂಬದ ಇಬ್ಬರು ಸದಸ್ಯರನ್ನು ಬಡತನದಿಂದ ನಿರ್ಮೂಲನೆ ಮಾಡಲು ಆಗುತ್ತಿಲ್ಲ. ಇಂದು ದುಡಿಮೆಗಾರನಿಗೆ ಮಾಲೀಕರು ಕೊಡುವ ಹಣದಿಂದಲೇ ಪ್ರಯಾಣದ ಖರ್ಚು ಇತ್ಯಾದಿಗಳನ್ನು ಈ ಕನಿಷ್ಠ ಕೂಲಿಯಲ್ಲಿಯೇ ಸರಿದೂಗಿಸಬೇಕು. ಹೀಗಿದ್ದಾಗ ಬಟ್ಟೆ, ಚಪ್ಪಲಿ, ಸಾಬೂನು, ಪಾತ್ರೆ ಹಾಗೂ ದಿನನಿತ್ಯದ ಬಳಕೆಯ ವಸ್ತುಗಳನ್ನು ತೆಗೆದುಕೊಳ್ಳುವುದಾಗಿ ಕನಸಿನಲ್ಲೂ ಕಾಣಲಾಗದು. ಇನ್ನೂ ವಾಸಕ್ಕೆ ಮನೆಯೋ ? ಹಾದಿ-ಬೀದಿಗಳೇ ಗತಿ. ಇದು ಪ್ರಜಾತಾಂತ್ರಿಕ ಸ್ವತಂತ್ರ್ಯ ಭಾರತದಲ್ಲಿ ಬದುಕುತ್ತಿರುವ ಬಡವರ ಸ್ಥಿತಿ-ಗತಿ.

ನರ್ಮದಾ ನದಿಗೆ ಕಟ್ಟುತ್ತಿರುವಂತಹ ಅಣೆಕಟ್ಟುಗಳು, ಕುದುರೆಮುಖ ರಾಷ್ಟ್ರೀಯ ಉದ್ಯಾನವನಗಳು, ಬೆಂಗಳೂರು-ಮೈಸೂರು ಕಾರಿಡಾರ್ ಯೋಜನೆಗಳು, ಕೃಷ್ಣ ನದಿ ಅಣೆಕಟ್ಟಿನ ನಾರಾಯಣಪುರ ದಂಡೆ, ಬಲದಂಡೆ ಕಾಲುವೆಗಳು, ಕಲ್ಲಿದ್ದಲು ಹಾಗೂ ಗಣಿಗಳ ಅಭಿವೃದ್ಧಿ ಕೈಗಾರಿಕಾ ಯೋಜನೆಗಳು, ರಕ್ಷಣಾ ಯೋಜನೆಗಳು, ಪಶುಪಕ್ಷಿಗಳಿಗೆಂದು ನಿರ್ಮಿಸುತ್ತಿರುವ ಬಂಡಿಪುರ, ನಾಗರಹೊಳೆಯಂತಹ ಪಕ್ಷಿಧಾಮಗಳು, ಬ್ಯಾಂಕ್‌ನಲ್ಲಿ ರೈತರಿಗೆ ಕಿಸಾನ್ ಕಾರ್ಡ್‌ನ ಸಾಲಗಳು ಇವೆಲ್ಲವುಗಳು ನಿರ್ಮಾಣ ಮಾಡುವುದರಿಂದ ಕೋಟ್ಯಾಂತರ ಜನರು ತಲ-ತಲಾಂತರಗಳಿಂದ ವಾಸಮಾಡಿದ ಮನೆಗಳನ್ನು ಕಳೆದುಕೊಂಡಿದ್ದಾರೆ. ಆಳುವ ವರ್ಗಗಳು ಸಾಮ್ರಾಜ್ಯಶಾಹಿಗಳ ಸೇವೆ ಮಾಡುವುದಕ್ಕೆ ಅಭಿವೃದ್ಧಿ ನೆಪದಲ್ಲಿ ಜನರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇಂತಹ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಗಳಿಗೆ ಬಲಿಯಾಗುವವರು, ಆದಿವಾಸಿಗಳು, ಬುಡಕಟ್ಟು ಜನರು, ಸಮಾಜದ ದುರ್ಬಲ ವರ್ಗದವರು. ಈ ಮೇಲಿನ ಎಲ್ಲಾ ಯೋಜನೆಗಳ ಫಲ ಪಡೆದುಕೊಳ್ಳುವವರು ಬಲಿಷ್ಠರು ಮತ್ತು ಶ್ರೀಮಂತರು. ಆಳುವವರು ಒಕ್ಕಲೆಬ್ಬಿಸಿದ ಆದಿವಾಸಿಗಳನ್ನು ಸಮಾಜದ ದುರ್ಬಲ ವರ್ಗದವರನ್ನು ದಲಿತರನ್ನು ಗುಜರಾತಿನಂತಹ ಕೋಮುಗಲಭೆಯಲ್ಲಿ ಬಳಸಿಕೊಳ್ಳುತ್ತಾರೆ.

ಹಸಿವು



ಇಂದು ದೇಶದಲ್ಲಿ ಮಕ್ಕಳು ಮತ್ತು ಯುವಜನತೆ ಭಿಕ್ಷೆ, ಕಳ್ಳತನ, ಲಾಟರಿ, ಜೂಜು ಇವೆಲ್ಲವುಗಳನ್ನು ಈ ವ್ಯವಸ್ಥೆಯಲ್ಲಿರುವ ಆರ್ಥಿಕ-ಸಾಮಾಜಿಕ ಅಸಮಾನತೆ, ಶೋಷಣೆ ಅನ್ಯಾಯ ಅವುಗಳನ್ನು ವ್ಯವಸ್ಥೆಯಲ್ಲಿ ಸ್ಥಿರವಾಗಿರಲು ಪೋಷಿಸಿ ಬೆಳೆಸುತ್ತಿವೆ ಮತ್ತು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಡವರಿದ್ದು ಅವರು ಮಕ್ಕಳನ್ನು ಶಾಲೆಗೆ ಕಳುಹಿಸಲು ಶಕ್ತರಾಗಿಲ್ಲ. ಹೆಚ್ಚಿನ ಮಕ್ಕಳು ಕೃಷಿಕರ ಕುಟುಂಬದಿಂದ ಬಂದಿರುವುದರಿಂದ ಕೃಷಿಯನ್ನು ನಂಬಿಕೊಂಡು ಜೀವನ ಕಳೆಯುತ್ತಿದ್ದಾರೆ. ಜಾಗತೀಕರಣದಿಂದ ದೇಶದಲ್ಲಿ ೧೯೯೦ರಿಂದ ನಿರುದ್ಯೋಗ ಪ್ರಮಾಣ ಮತ್ತು ಭೂ ಹೀನ ರೈತರ ಪ್ರಮಾಣ ಹೆಚ್ಚಾಗಿದೆ. ಮತ್ತು ಜಾಗತೀಕರಣದಿಂದ ಬಡವರು ಇನ್ನಷ್ಟು ಬಡವರಾಗಿ ಬೀದಿಪಾಲಾಗಿದ್ದರೆ ಟಾಟಾ, ಬಿರ್ಲಾ, ಅಂಬಾನಿಯಂತಹ ಶ್ರೀಮಂತರ ಆಸ್ತಿಗಳು ಮೂರು-ನಾಲ್ಕು ಪಟ್ಟು ಜಾಸ್ತಿಯಾಗುತ್ತಿವೆ. ೧೯೯೫-೯೬ ಸಾಲಿನಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಯಿತು. ಹಾಗೂ ದೇಶದಲ್ಲಿ ೪ ಲಕ್ಷ ಕಾರ್ಖಾನೆಗಳು ಮುಚ್ಚಿರುವುದರಿಂದ ಲಕ್ಷಾಂತರ ಕಾರ್ಮಿಕರು ಬೀದಿಪಾಲಾದರು. ನಂತರ ಜೀವನ ಸಾಗಿಸಲು ಹಳ್ಳಿಯಿಂದ ಉದ್ಯೋಗಕ್ಕಾಗಿ ನಗರಕ್ಕೆ ಕೆಲಸಕ್ಕೆ ಬಂದರೆ ನಗರದಲ್ಲಿ ಕೂಡ ಶ್ರೀಮಂತರು, ಗುತ್ತಿಗೆದಾರರು, ಬಡವರನ್ನು ಶೋಷಿಸುತ್ತ ದುಡಿಯುವ ಕೈಗಳಿಗೆ ಸರಿಯಾಗಿ ಕೆಲಸ ಕೊಡದೇ ಅಥವಾ ದುಡಿಯುವ ಕೈಗಳಿಗೆ ಕೆಲಸ ಕೊಟ್ಟು ಅವರ ಶ್ರಮಕ್ಕೆ ತಕ್ಕ ಫಲ ಕೊಡದೇ ಇನ್ನಷ್ಟು ಬಡತನಕ್ಕೆ ತಳ್ಳಿದರು.

ಶ್ರಮಜೀವಿಗಳ ಶೋಷಣೆ, ಅಸಂಘಟಿತ ಕಾರ್ಮಿಕರ ಶೋಷಣೆ, ಹಾಗೂ ಗ್ರಾಮವಾಸಿಗಳ ದಿವ್ಯ ನಿರ್ಲಕ್ಷತೆ ಹಾಗೂ ಸಾಮಾಜಿಕ-ಆರ್ಥಿಕ ಅಸಮಾನತೆ, ಅನ್ಯಾಯ ಅಸಮಾನತೆಯಿಂದ ಕೂಡಿದ ಇಂದಿನ ನಮ್ಮ ದೇಶದಲ್ಲಿ ಕೆಲವೇ ಕೆಲವು ಜನ (ಅಂದರೆ ಶೇ ೨೦) ಸಂಪತ್ತು ಸಮೃದ್ಧಿಯಲ್ಲಿ ಹೊರಳಾಡುತ್ತಿರುವಾಗ ಬಹುಸಂಖ್ಯಾತ ಜನರಿಗೆ (ಶೇ. ೮೦) ತಿನ್ನಲು ಒಪ್ಪೊತ್ತಿನ ಕೂಳಿಗೂ ದಿಕ್ಕಿಲ್ಲದೇ ನರಳುತ್ತಿದ್ದಾರೆ. ಭಾರತದ ನೆರೆಹೊರೆಯ ರಾಷ್ಟ್ರಗಳೊಂದಿಗೆ ನಮ್ಮ ದೇಶವನ್ನು ಹೋಲಿಸಿ ನೋಡಿದರೆ ಮಿಲಿಟರಿ ಆಡಳಿತದಲ್ಲಿರುವ ಪಾಕಿಸ್ತಾನ, ರಾಜರ ಆಳ್ವಿಕೆಯಲ್ಲಿರುವ ನೇಪಾಳ, ಕಮ್ಯುನಿಸ್ಟ್ ಆಳ್ವಿಕೆಯಲ್ಲಿರುವ ಚೀನಾ, ಅರಾಜಕತೆಯಲ್ಲಿ ಬದುಕುತ್ತಿರುವ ಶ್ರೀಲಂಕಾ, ಮೂಲಭೂತವಾದದಿಂದ ತತ್ತರಿಸುತ್ತಿರುವ ಆಫ್ಘಾನಿಸ್ತಾನ ಇವುಗಳಿಗೆ ಹೋಲಿಸಿದರೆ ಬಡತನ ಭಾರತದಲ್ಲಿ ಸ್ವಲ್ಪ ಹೆಚ್ಚಾಗಿದೆ. ಅದು ಹೇಗೆ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಯಿತು ನಮ್ಮದು ?

ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಿಲ್ಲದ ರಾಜಕೀಯ ಪ್ರಜಾಸತ್ತೆ ಯಾವಾಗಲೂ ಅಸ್ಥಿರವಾಗಿರುತ್ತದೆ. ಆರ್ಥಿಕ ಪ್ರಜಾಸತ್ತೆ ಸಾಮಾಜಿಕ ಸ್ಥಿರತೆಯನ್ನು ಘನಿಷ್ಠಗೊಳಿಸಲು ಸಹಾಯ ಮಾಡುತ್ತದೆ. ಮತ್ತು ಅದು ರಾಜಕೀಯ ಪ್ರಜಾಪ್ರಭುತ್ವದ ಕ್ರಿಯೆ-ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ನಮ್ಮ ದೇಶದಲ್ಲಿ ಸಾಮಾನ್ಯ ಜನರು ದುರ್ಬಲ ವರ್ಗದವರು, ದಲಿತರು ಸಾಮಾಜಿಕ-ಆರ್ಥಿಕ-ರಾಜಕೀಯ ಅಸಮಾನತೆಯಿಂದ ನರಳುತ್ತಿದ್ದಾರೆ. ಯಾವುದೇ ಒಂದು ಪ್ರಗತಿಪರ ಚಳವಳಿ, ರಾಜಕೀಯ ಪಕ್ಷ ಮೊದಲು ಜನರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಪ್ರಬಲಗೊಳಿಸುತ್ತ ಕೊನೆಗೆ ರಾಜಕೀಯ ಅಧಿಕಾರ ಹಿಡಿದರೆ ಆ ಜನ – ಆ ದೇಶ ಅಭಿವೃದ್ಧಿ ಹೊಂದುತ್ತದೆ.

ಶ್ರೀಮಂತ ವರ್ಗಗಳಿಗೆ ಮತ್ತು ದೇಶದ ಆಡಳಿತ ಚುಕ್ಕಾಣಿಯನ್ನು ಹಿಡಿದ ಜಾತಿಗಳ ಜನಜೀವನಕ್ಕೆ ಹೋಲಿಸಿದಲ್ಲಿ ಈ ಬಡತನ ಒಂದು ಸಹಜವಾಗಿ ಆದ ಬೆಳವಣಿಗೆ ಅಲ್ಲ, ಬದಲಾಗಿ ಪ್ರಯತ್ನಪೂರ್ವಕವಾಗಿ ಸೃಷ್ಟಿ ಮಾಡಿದಂತಹ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಇರಬಹುದು ಅನಿಸುತ್ತಿಲ್ಲವೆ? ಬಡತನದ ಬೇಗೆಯಲ್ಲಿ ಬದುಕುತ್ತಿದ್ದು ನಿರ್ಲಕ್ಷ್ಯಕ್ಕೊಳಗಾಗಿ ಅತ್ಯಂತ ದಯನೀಯ ಸ್ಥಿತಿಯಲ್ಲಿ ನರಳುತ್ತಿದ್ದ ಒಂದು ಪ್ರಜಾತಾಂತ್ರಿಕ ದೇಶ ಆ ಬಡ ಜನತೆಯನ್ನು ಆ ದಾರುಣ ಸ್ಥಿತಿಯಿಂದ ಮೇಲೆತ್ತಲು ಪ್ರಯತ್ನಿಸದಿದ್ದರೆ ಮತ್ತು ಅವರ ಸಮಸ್ಯೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸದಿದ್ದರೆ ಆ ವ್ಯವಸ್ಥೆ ಸದಾ ಅಪಾಯದಲ್ಲಿರುತ್ತವೆ. ಇದು ಇತಿಹಾಸ ನಿರೂಪಿಸಿದ ಸತ್ಯ. ಸ್ವಾತಂತ್ರ್ಯ ಭಾರತದಲ್ಲಿ ಆಳುವವರು ತಮ್ಮ ಜವಾಬ್ದಾರಿಯನ್ನು ಮರೆತಿದ್ದಾರೆ. ದುಡಿಯುವ ಕೈಗಳಿಗೆ ಸಾಕಷ್ಟು ಕೆಲಸ, ಶ್ರಮಕ್ಕೆ ತಕ್ಕ ಫಲ ಲಭಿಸುವಂತೆ ಮಾಡುವ ಕೆಲಸವನ್ನು ಆಳುವವರು ಮಾಡುತ್ತಿಲ್ಲ. ಬಡತನಕ್ಕೆಲ್ಲ ಸಂಪನ್ಮೂಲ ಕೊರತೆ ಮತ್ತು ಜನಸಂಖ್ಯಾ ಸ್ಫೋಟ ಎಂಬ ಬೂಟಾಟಿಕೆಯ ಮಾತುಗಳಿಂದ ಜನರನ್ನು ನಂಬಿಸುತ್ತಿದ್ದಾರೆ. ಮುಖ್ಯವಾಗಿ ಇಲ್ಲಿ ಅಭಾವವಿದ್ದದ್ದು ಸಂಪನ್ಮೂಲ ಮತ್ತು ಜನಸಂಖ್ಯಾ ಸ್ಫೋಟ ಅಲ್ಲ. ಶೋಷಣೆ ರಹಿತ, ಭ್ರಷ್ಟಾಚಾರ ರಹಿತ ಆಳ್ವಿಕೆಯದ್ದು. ಹೀಗಾಗಿ ಸ್ವತಂತ್ರ ಭಾರತದಲ್ಲಿ ಬಡತನಕ್ಕೆ ಆಳುವವರ ಅಯೋಗ್ಯತೆ, ಅಧಿಕಾರ ರೂಢರ ಸಂಕಲ್ಪ ಹೀನತೆ, ಆಳರಸರ ದುರಾಡಳಿತವೇ ಕಾರಣವಲ್ಲವೆ ?

ನಮ್ಮ ದೇಶದಲ್ಲಿ ಸಾಮಾನ್ಯ ಜನರು ದುರ್ಬಲ ವರ್ಗದವರು, ದಲಿತರು ಸಾಮಾಜಿಕ-ಆರ್ಥಿಕ- ರಾಜಕೀಯ ಅಸಮಾನತೆಯಿಂದ ನರಳುತ್ತಿದ್ದಾರೆ. ಯಾವುದೇ ಒಂದು ಪ್ರಗತಿಪರ ಚಳವಳಿ, ರಾಜಕೀಯ ಪಕ್ಷ ಮೊದಲು ಜನರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಪ್ರಬಲಗೊಳಿಸುತ್ತ ಕೊನೆಗೆ ರಾಜಕೀಯ ಅಧಿಕಾರ ಹಿಡಿದರೆ ಆ ಜನ – ಆ ದೇಶ ಅಭಿವೃದ್ಧಿ ಹೊಂದುತ್ತದೆ.

ಇಂದು ದೇಶದಲ್ಲಿ ಕೇಂದ್ರ ಮತ್ತು ರಾಜ್ಯದಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ಬಹುಮತ ಬರುತ್ತಿಲ್ಲ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಹಾಗೆಯೇ ದಳ ಇನ್ನಿತರ ಪಕ್ಷಗಳು ಅಧಿಕಾರಕ್ಕೆ ಬರುತ್ತಿವೆ. ಇದರರ್ಥ ಜನರು ಈ ಶೋಷಕ ವ್ಯವಸ್ಥೆಯೊಳಗಡೆ ಯಾರು ಹಿತವರು ನಮಗೆ ಎಂದು ಹುಡುಕುತ್ತಿದ್ದಾನೆ ಎಂದರ್ಥ. ಕೊನೆಗೆ ಎಲ್ಲಾರೂ ಜಿಗಣೆಗಳೇ ನಮ ನೆತ್ತರಿಗೆ ಎಂದು ತಿಳಿದುಕೊಂಡಿದ್ದಾನೆ. ಒಟ್ಟಾರೆ ಇಂದು ದೇಶದಲ್ಲಿ ಜನರು ಈ ವ್ಯವಸ್ಥೆ ಮೇಲೆ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಜನ ಪರ್ಯಾಯ ವ್ಯವಸ್ಥೆಗಾಗಿ ಕಾಯುತ್ತಿದ್ದಾರೆ. ಆ ಪರ್ಯಾಯ ವ್ಯವಸ್ಥೆಯ ನಾಯಕತ್ವದ ಜವಾಬ್ದಾರಿ ನಮೆಲ್ಲರ ಮೇಲಿದೆ. □

With Best Compliments From

SHRI VIMAL NATH JAIN MANDIR & DADAWADI
BASAVANAGUDI
BANGALORE

SHRI SRIMANDHAR SWAMI SHANTI SURI JAIN TEMPLE
V.V. PURAM
BANGALORE

ON OCCASION OF

PRAN PRATHITHA MAHOTSAV OF TEMPLES

ದಲಿತ್ ಡೈರಿ

ಡಾ॥ ಅಂಬೇಡ್ಕರ್‌ರವರ ನಿಲುವಿನಿಂದಾಗಿ ಮೀಸಲಾತಿಯು ಜಾರಿ ಯಾಗಿ ದಲಿತರು ಅದನ್ನು ತಮ್ಮ ಅನುಕೂಲಕ್ಕಾಗಿ ಬಳಸುತ್ತಿದ್ದಾರೆ. ಈ ಮೀಸಲಾತಿಯಿಂದಾಗಿಯೇ ಮೇಲಿನ ಮಧ್ಯಮ ವರ್ಗ ವೊಂದು ಮಾರುಕಟ್ಟೆಯಲ್ಲಿ ಎಂಥಾ ಪದಾರ್ಥಗಳು ಮತ್ತು ಸೇವೆಗಳನ್ನು ಪಡೆಯಬಹುದೆಂದು ಯೋಚಿಸಬೇಕಾಗಿದೆ. ರಾಜ್ಯಾಂಗದಿಂದಾಗಿ ಅವರು ಏನನ್ನು ಗಳಿಸುತ್ತಾರೋ ಅದನ್ನು ಭಾರತದ ಖಾಸಗೀ ವಲಯದಲ್ಲಿ ಖರ್ಚು ಮಾಡುವವರಾಗಿದ್ದಾರೆ. ಆದ್ದರಿಂದ ಕೇವಲ ವಾಣಿಜ್ಯ ದೃಷ್ಟಿಯಿಂದ ಮಾತ್ರ ನೋಡುವುದಾದರೆ ಈ ಖಾಸಗೀ ವಲಯವು ರೂ. ೩೦೦ ಬಿಲಿಯನ್ ಪ್ರಶ್ನೆಯನ್ನು ಎದುರಿಸಿ ದಲಿತರಿಗಾಗಿರುವ ಮೀಸಲಾತಿಯನ್ನು ಒಪ್ಪಿಕೊಳ್ಳಬಾರದೇ !

❍ ಅನು : ಡಿ. ಡೊಮಿನಿಕ್

ರೂ. 300 ಬಿಲಿಯನ್‌ಗಳ ಕ್ಲಬ್

ಸರ್ಕಾರದಲ್ಲಿರುವ ಮೀಸಲಾತಿಯಿಂದಾಗಿ ಅಸ್ಪೃಶ್ಯರು ಮತ್ತು ಆದಿವಾಸಿಗಳಾದ ದಲಿತರು ಅದರ ಮೊದಲ ಪ್ರಯೋಜನವನ್ನು ಪಡೆದವರಾಗಿದ್ದಾರೆ. ಇದು ನಮಗೆಲ್ಲ ಗೊತ್ತಿದೆ. ಆದರೆ ಸತ್ಯಸಂಗತಿಯೆಂದರೆ, ದಲಿತರಿಗಿರುವ ಮೀಸಲಾತಿಯಲ್ಲಿ ಪ್ರಯೋಜನ ಪಡೆದ ೨ನೇ ದೊಡ್ಡ ವಲಯವೆಂದರೆ ಭಾರತದ ಖಾಸಗೀ ವಲಯವೇ ಆಗಿದೆ. ಇದು ಹೇಗೆಂದು ಪರಿಶೀಲಿಸೋಣ :

ಸು. ೩೫ ಲಕ್ಷ ದಲಿತರು ಮೀಸಲಾತಿಯಿಂದಾಗಿ ಸರ್ಕಾರದ ಉದ್ಯೋಗಗಳನ್ನು ಪಡೆದಿದ್ದಾರೆ. (ಕೇಂದ್ರ/ರಾಜ್ಯ ಸರ್ಕಾರಗಳು/ ಸಾರ್ವಜನಿಕ ವಲಯಗಳು ಇತ್ಯಾದಿ). ಈ ನನ್ನ ಲೆಕ್ಕಾಚಾರವು ಎಸ್‌ಸಿ/ ಎಸ್‌ಟಿಗಳಿಗಾಗಿರುವ ರಾಷ್ಟ್ರೀಯ ಸಮಿತಿಯ ವರದಿಯ ಮೇಲೆ ಆಧರಿಸಿದ್ದಾಗಿದೆ. ದುರಾದೃಷ್ಟವೆಂದರೆ ಕೇಂದ್ರದಲ್ಲಿ ಯಾವುದೇ ಏಜೆನ್ಸಿಯಾಗಲಿ, ಯೋಜನಾ ಸಮಿತಿಯನ್ನು ಒಳಗೊಂಡಂತೆ ಸಾಮಾಜಿಕ ನ್ಯಾಯ ಮತ್ತು ಸಶಕ್ತತೆಗಾಗಿರುವ ಸಚಿವಾಲಯ, ಭಾರತದ ಜನಗಣತಿ ಕಮಿಷನರ್ ಅಥವಾ ರಾಷ್ಟ್ರೀಯ ಸಮೀಕ್ಷಾ ಕೇಂದ್ರ ಇವ್ಯಾವುವೂ ಸಹ ಭಾರತದ ಅಥವಾ ರಾಜ್ಯ ಸರ್ಕಾರದ ಮಟ್ಟದಲ್ಲಿ ನೌಕರಿಯಲ್ಲಿರುವ ದಲಿತರ ಸ್ಥಾನಮಾನ/ ಅವರ ಸಂಖ್ಯೆ/ ಶೇಕಡಾವಾರು ಅಂಕಿ-ಅಂಶಗಳನ್ನು ಇದುವರೆಗೂ ಮೇಲಿನ ಏಜೆನ್ಸಿಗಳಾವುವೂ ಪ್ರಕಟಪಡಿಸಿಲ್ಲ. ಸು. ೩೩ಲಕ್ಷ ದಲಿತರು ವಾಣಿಜ್ಯ/ವ್ಯಾಪಾರ/ ತಯಾರಿಕಾ ಘಟಕಗಳನ್ನು ಹೊಂದಿದ್ದಾರೆ. (ಉತ್ಪಾದನಾ ಮಟ್ಟ ಕಮ್ಮಿಯಿದ್ದರೂ ಸಹ). ಅಂದರೆ ಮೇಲಿನ ಸಂಖ್ಯೆಯಲ್ಲಿ ಸು. ೧೬.೫ಲಕ್ಷದಷ್ಟು ಮೀಸಲಾತಿಯ ಪರಿಣಾಮದಿಂದಾಗಿಯೇ ಆಗಿದೆ ಎಂದರೆ ತಪ್ಪಾಗಲಾರದು. (ದಲಿತ ನೌಕರರು/ಅಧಿಕಾರಿಗಳು ತಮ್ಮ ನಿರುದ್ಯೋಗ ಮಕ್ಕಳ ವ್ಯಾಪಾರಕ್ಕಾಗಿ ಹಣವನ್ನು ಒದಗಿಸುತ್ತಿದ್ದಾರೆ.)

ಇದರ ಅರ್ಥವೆಂದರೆ ಸು. ೫೦ ಲಕ್ಷ ದಲಿತರು ಮೀಸಲಾತಿ ಯನ್ನು ಬಳಸಿಕೊಂಡು ಭಾರತೀಯ ಮಧ್ಯಮವರ್ಗದ ಅಥವಾ ಕೆಳ ಮಧ್ಯಮ ವರ್ಗದ, ಇದನ್ನು ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಮೀಸಲಾತಿಯು ಸು. ೫೦ ಲಕ್ಷ ದಲಿತರಿಗೆ ಅಂದರೆ ಸು. ೨.೫ ಕೋಟಿ ದಲಿತ ಜನಕ್ಕೆ (ಭಾರತದಲ್ಲಿ ಕುಟುಂಬವೊಂದಕ್ಕೆ ೫ ಮಂದಿಯೆಂದು ಪರಿಗಣಿಸಿದಲ್ಲಿ) ಮಾರುಕಟ್ಟೆಯಲ್ಲಿ ಕೊಳ್ಳುವ ಶಕ್ತಿ ದೊರೆತಂತಾಗಿದೆ. ಈ ಮೀಸಲಾತಿ ಇಲ್ಲದೆ ಅಭಿವೃದ್ಧಿಯ ಸಹಜ ಪ್ರಕ್ರಿಯೆಗಳನ್ನು ತೆಗೆದುಕೊಂಡಿದ್ದಲ್ಲಿ ಇವರ್‍ಯಾರೂ ಸಹ ಮಾರುಕಟ್ಟೆಯನ್ನು ಪ್ರವೇಶಿಸಲಾಗುತ್ತಿರಲಿಲ್ಲ. ಆದರೂ ಇದು ಹೇಗೆ ಖಾಸಗಿ ವಲಯಕ್ಕೆ ಸಹಾಯವಾಗಿದೆ ? ನಗರ ಮತ್ತು ಪಟ್ಟಣಗಳಲ್ಲಿ ದಲಿತರು ಉದ್ಯೋಗ ಹೊಂದಿರುವುದಾದರೆ ಅದು ಮೀಸಲಾತಿಯಿಂದಾಗಿಯೇ? ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಇವರೆಲ್ಲರ ಜೀವನ ಶೈಲಿ ಹಾಗೂ ಸಾಂಸ್ಕೃತಿಕ ನಡಾವಳಿಯು ಭಾರತೀಯ ನಗರ ಕೇಂದ್ರಿತವಾದುದು. ನಗರ ವಾಸಿಗಳಲ್ಲಿ ತಿಂಗಳ ವೇತನ ಇರುವವರೆಲ್ಲರೂ ಸಹ ಹಲ್ಲುಜ್ಜಲು ಬ್ರಶ್‌ಗಳನ್ನು ಬಳಸುತ್ತಾರಾದರೆ ದಲಿತ ನೌಕರರು/ಅಧಿಕಾರಿಗಳು/ಸಣ್ಣ ವ್ಯಾಪಾರಸ್ಥರೂ ಸಹ ಇದನ್ನೇ ಅನುಸರಿಸುತ್ತಾರೆ. ಇವರೆಲ್ಲಾ ವರ್ಷದಲ್ಲಿ ಕಮ್ಮಿಯೆಂದರೂ ಎರಡು ಬ್ರಶ್‌ಗಳನ್ನು ಬಳಸುತ್ತಾರೆಂದು ಊಹಿಸಿದಲ್ಲಿ ೨.೫ ಕೋಟಿ ದಲಿತರು ೫ ಕೋಟಿ ಹಲ್ಲುಜ್ಜುವ ಬ್ರಶ್‌ಗಳನ್ನು ಕೊಂಡು ರೂ. ೫೦ ಕೋಟಿ ಹಣವನ್ನು ವಾರ್ಷಿಕವಾಗಿ



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಈ ಬ್ರಶ್ ಉದ್ಯಮಕ್ಕೆ ಅದರ ರೂ. ೩,೦೦೦ ಮಿಲಿಯನ್ ಆದಾಯದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ.

ಒಂದು ದಲಿತ ಕುಟುಂಬವು ರೂ. ೧೦ನ್ನು ಟೂತ್‌ಪೇಸ್ಟ್/ ಪೌಡರ್ (ವರ್ಷಕ್ಕೆ ರೂ. ೧೨೦) ಗಾಗಿ ಖರ್ಚು ಮಾಡುತ್ತಾರೆಂದು ಭಾವಿಸಿದಲ್ಲಿ ೫೦ ಲಕ್ಷ ದಲಿತ ಕುಟುಂಬಗಳು ವಾರ್ಷಿಕವಾಗಿ ಆ ಉದ್ಯಮದ ಒಟ್ಟಾರೆ ಆದಾಯದ ರೂ. ೯,೫೦೦ ಮಿಲಿಯನ್‌ಗೆ ರೂ.೬೦೦ ಮಿಲಿಯನ್‌ನನ್ನು ಪ್ರತೀ ವರ್ಷವೂ ಕೊಡುಗೆಯಾಗಿ ನೀಡುತ್ತಿದ್ದಾರೆ.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ೬೧ ಮಿಲಿಯನ್ ಕುಟುಂಬಗಳು ಪ್ರೆಶರ್ ಕುಕ್ಕರ್‌ಗಳನ್ನು ಬಳಸುತ್ತಿದ್ದಾರೆ. ಅಂದರೆ ಸು.೫ ಮಿಲಿಯನ್ ದಲಿತ ಕುಟುಂಬಗಳು ಈ ಪ್ರೆಶರ್ ಕುಕ್ಕರ್‌ಗಳನ್ನು ಬಳಸುತ್ತಾರೆಂದು ಭಾವಿಸಬಹುದಾಗಿದೆ. ಪ್ರತಿಯೊಂದು ಪ್ರೆಶರ್ ಕುಕ್ಕರ್‌ನ ಸರಾಸರಿ ಬೆಲೆ ರೂ. ೩೦೦ ಎಂದು ಇಟ್ಟುಕೊಂಡಲ್ಲಿ ಮೇಲಿನ ೫ ಮಿಲಿಯನ್ ದಲಿತ ಕುಟುಂಬಗಳು ಈ ಉದ್ಯಮಕ್ಕೆ ಸು.ರೂ. ೧,೫೦೦ ಮಿಲಿಯನನ್ನು ಪಾವತಿಸುತ್ತಿದ್ದಾರೆ. ಭಾರತದ ಮಧ್ಯಮವರ್ಗ/ಕೆಳಮಧ್ಯಮವರ್ಗದ ಕುಟುಂಬಗಳು ತಿಂಗಳಿಗೆ ಕಮ್ಮಿಯೆಂದರೂ ೨ ಪೆನ್ಸಿಲ್‌ಗಳನ್ನು ಕೊಳ್ಳುವವರಾದರೆ ೫ ಮಿಲಿಯನ್ ದಲಿತ ಕುಟುಂಬಗಳು ಸು. ೧೨೦ ಮಿಲಿಯನ್ ಪೆನ್ಸಿಲ್‌ಗಳನ್ನು ೧ ವರ್ಷಕ್ಕೆ ಕೊಳ್ಳುತ್ತಿದ್ದಾರೆ. ಪೆನ್ಸಿಲ್‌ನ ಬೆಲೆ ೧ ರೂ. ಆದರೆ ವಾರ್ಷಿಕವಾಗಿ ರೂ. ೧೨೦ ಮಿಲಿಯನ್ ಈ ಉದ್ಯಮಕ್ಕೆ ದಲಿತರು ನೀಡುತ್ತಿದ್ದಾರೆ.

ಭಾರತದ FMCG ಉದ್ಯಮವು ತೀವ್ರಗತಿಯಲ್ಲಿ ಗ್ರಾಹಕ ಪದಾರ್ಥಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ಇದು ಸೌಂದರ್ಯವರ್ಧಕಗಳಾದ ಸಾಬೂನು/ಶಾಂಪು, ಇತ್ಯಾದಿಗಳಿಂದ ಸು. ರೂ. ೬೦೦ ಮಿಲಿಯನ್ ಮೌಲ್ಯದ ಪದಾರ್ಥಗಳನ್ನು ಉತ್ಪಾದಿಸುತ್ತಿದೆ. ಈ ಗ್ರಾಹಕ ಜನರಲ್ಲಿ ನಗರದ ಮಧ್ಯಮ ವರ್ಗ ಮತ್ತು ಕೆಳ ಮಧ್ಯಮವರ್ಗದವರು ಅಧಿಕ ಸಂಖ್ಯೆಯಲ್ಲಿ ಇರುವುದಾದರೆ ಅವರಲ್ಲಿ ೫೦ ಲಕ್ಷ ದಲಿತ ಕುಟುಂಬಗಳೂ ಸಹ ಈ ಸೌಂದರ್ಯ ವರ್ಧಕಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಪ್ರತಿಯೊಂದು ದಲಿತ ಕುಟುಂಬವೂ ಸಹ ಸರಾಸರಿಯೆಂದರೆ ತಿಂಗಳಿಗೆ ೨ ಸೋಪುಗಳನ್ನು ಕೊಳ್ಳುವುದಾದರೆ ವರ್ಷಕ್ಕೆ ರೂ. ೧೨೦ ಮಿಲಿಯನ್ ಸೋಪುಗಳನ್ನು ಕೊಳ್ಳುತ್ತಿದ್ದಾರೆ. ೧ ಸೋಪು ಸರಾಸರಿ ರೂ. ೫ ಎಂದಾದರೆ ಈ ಉದ್ಯಮಕ್ಕೆ ಪ್ರತೀವರ್ಷವೂ ರೂ. ೬೦೦ ಮಿಲಿಯನ್‌ಗಳನ್ನು ದಲಿತರು ನೀಡುತ್ತಿದ್ದಾರೆ.

ಸರ್ಕಾರೀ ಉದ್ಯಮಗಳು/ಅಧಿಕಾರಿಗಳು ತಿಂಗಳಿಗೆ ಸರಾಸರಿ ರೂ. ೧೦ಸಾವಿರ ವೇತನವನ್ನು ಪಡೆಯುತ್ತಾರಾದರೆ ಹಾಗೂ ಅದರಲ್ಲಿ ಅರ್ಧದಷ್ಟನ್ನು ಮಾರುಕಟ್ಟೆಯಲ್ಲಿ ಖರ್ಚು ಮಾಡುತ್ತಾರಾದರೆ ಮೀಸಲಾತಿ ಪಡೆದ ದಲಿತ ಉದ್ಯೋಗಿಗಳು ತಿಂಗಳೀಗೆ ರೂ. ೨೫ ಬಿಲಿಯನ್ ಅಥವಾ ವಾರ್ಷಿಕವಾಗಿ ರೂ. ೩೦೦ ಬಿಲಿಯನ್ ಹಣವನ್ನು ಭಾರತದ ಖಾಸಗೀ ವಲಯಕ್ಕೆ ಕೊಡುಗೆಯಾಗಿ ನೀಡುತ್ತಿದ್ದಾರೆ.

ಡಾ॥ ಅಂಬೇಡ್ಕರ್‌ರವರ ನಿಲುವಿನಿಂದಾಗಿ ಮೀಸಲಾತಿಯು ಜಾರಿಯಾಗಿ ದಲಿತರು ಅದನ್ನು ತಮ್ಮ ಅನುಕೂಲಕ್ಕಾಗಿ ಬಳಸುತ್ತಿದ್ದಾರೆ. ಈ ಮೀಸಲಾತಿಯಿಂದಾಗಿಯೇ ಮೇಲಿನ ಮಧ್ಯಮ

ವರ್ಗವೊಂದು ಮಾರುಕಟ್ಟೆಯಲ್ಲಿ ಎಂಥಾ ಪದಾರ್ಥಗಳು ಮತ್ತು ಸೇವೆಗಳನ್ನು ಪಡೆಯಬಹುದೆಂದು ಯೋಚಿಸಬೇಕಾಗಿದೆ. ರಾಜ್ಯಾಂಗದಿಂದಾಗಿ ಅವರು ಏನನ್ನು ಗಳಿಸುತ್ತಾರೋ ಅದನ್ನು ಭಾರತದ ಖಾಸಗೀ ವಲಯದಲ್ಲಿ ಖರ್ಚು ಮಾಡುವವರಾಗಿದ್ದಾರೆ.

ಆದ್ದರಿಂದ ಕೇವಲ ವಾಣಿಜ್ಯ ದೃಷ್ಟಿಯಿಂದ ಮಾತ್ರ ನೋಡುವುದಾದರೆ ಈ ಖಾಸಗೀ ವಲಯವು ರೂ. ೩೦೦ ಬಿಲಿಯನ್ ಪ್ರಶ್ನೆಯನ್ನು ಎದುರಿಸಿ ದಲಿತರಿಗಾಗಿರುವ ಮೀಸಲಾತಿಯನ್ನು ಒಪ್ಪಿಕೊಳ್ಳಬಾರದೇ!

ಉದ್ಯಮಶೀಲ ಗ್ರಾಹಕರು

ಗ್ರಾಹಕ ವಲಯ ಕಿರಿದಾಗಿರುವಿಕೆ ಮತ್ತು ಶಕ್ತಿಶಾಲಿಯಾದ ಖಾಸಗೀ ವಲಯ - ಇವೆರಡೂ ದ್ವಂದ್ವಾತ್ಮಕವಾದುವುಗಳು. ಅಧಿಕವಾದ ಕೈಗಾರಿಕಾ ಉತ್ಪನ್ನ ದೊಡ್ಡ ಗಾತ್ರದ ಗ್ರಾಹಕ ವಲಯವನ್ನು ಬಯಸುತ್ತದೆ. ಕೇವಲ ಸಂಪತ್ತಿದ್ದರೆ ಮಾತ್ರ ಕೈಗಾರಿಕೆ ಬೆಳೆಯುತ್ತದೆ ಎನ್ನುವುದು ತಪ್ಪು ಕಲ್ಪನೆಯಷ್ಟೆ. ಕೈಗಾರಿಕೆಯ ಬೆಳವಣಿಗೆ ಹೆಚ್ಚಾಗಿ ಜನರು ಖರ್ಚು ಮಾಡುವ ಪ್ರವೃತ್ತಿಯ ಮೇಲೆ ಅವಲಂಬಿಸಿರುತ್ತದೆ. ಜನ ಯಾವಾಗ ಗ್ರಾಹಕರಾಗಿ ಪರಿವರ್ತನೆಯಾಗುತ್ತಾರೋ ಆಗಷ್ಟೆ ಸಂಪತ್ತು ಒಂದು ಸಾಮಾಜಿಕ ಲಕ್ಷಣವನ್ನು ಪಡೆದು, ಮುಕ್ತವಾಗಿ ಚಲಿಸಲಾರಂಭಿಸುತ್ತದೆ. ಆದ್ದರಿಂದ ಖಾಸಗೀ ವಲಯ ದೊಡ್ಡದಾಗಿ ಬೆಳೆಯಬೇಕಾದರೆ, ಅದಕ್ಕೊಂದು ಗ್ರಾಹಕ ತಳಹದಿ ಅಗತ್ಯವಾದುದು. ಹಾಗೂ ಜನ ಉದ್ಯಮಶೀಲ ಗ್ರಾಹಕರಾದಾಗ ಮಾತ್ರ ಸಾಧ್ಯವಾಗುತ್ತದೆ.

ಭಾರತ ಮೂಲತಃ ಒಂದು ಜಾತಿ ಸಮಾಜ. ಈ ವಾಸ್ತವದ ಮೇಲೆಯೇ ಯಾವುದೇ ಆರ್ಥಿಕ ಬೆಳವಣಿಗೆಯ ಅರ್ಥಪೂರ್ಣ ವಿಶ್ಲೇಷಣೆ ನಡೆಯುವುದು. ಆದರೆ ಖಾಸಗೀ ವಲಯ ಸಕಾರಾತ್ಮಕ ಕ್ರಿಯೆಯ ಬಗ್ಗೆ ತೀವ್ರವಾದ ತಿರಸ್ಕಾರವನ್ನು ಹೊಂದಿದೆ. ಮಾರುಕಟ್ಟೆಯಲ್ಲಿ ಜಾತಿಗುಂಪುಗಳು ಹೇಗೆ ಕ್ರಿಯಾಶೀಲವಾಗುತ್ತವೆ ಎಂಬುದರ ಬಗ್ಗೆ ಭಾರತೀಯ ಅರ್ಥಶಾಸ್ತ್ರಜ್ಞರಿಗೆ ಕಿಂಚಿತ್ತೂ ಅರಿವು ಇಲ್ಲ. ಅಂದರೆ ಬಂಡವಾಳ ರೂಪುಗೊಳ್ಳುವಿಕೆಗೆ 'ಜಾತಿ' ಒಂದು ಅಡಚಣೆಯೇ ? ಗ್ರಾಹಕ ಪ್ರವೃತ್ತಿ ಜಾತಿಯಿಂದ ಜಾತಿಗೆ ಭಿನ್ನವಾದುದೇ ? ಈ ಪ್ರಶ್ನೆಗಳಿಗೆ ಯಾರೂ ಸಹ ಅಧಿಕಾರಯುತವಾಗಿ ಉತ್ತರಿಸಲಾಗದು. ನಮ್ಮ ಅನುಭವದ ಮೇರೆಗೆ ಪ್ರಮೇಯಗಳನ್ನು ಹಾಕಿಕೊಳ್ಳುವುದೇ ನಮಗೆ ಮಾರ್ಗವಾದೀತು.

ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯಿಂದಾಗಿ ದಲಿತ ಮಧ್ಯಮವರ್ಗವೊಂದು ಎದ್ದು ನಿಲ್ಲುತ್ತಿದೆ. ಸಿವಿಲ್ ಸರ್ವಿಸ್ ಹುದ್ದೆಗಳೆಲ್ಲಾ ಕೇವಲ ಎರಡನೇ ತಲೆಮಾರಿನ ಶಿಕ್ಷಿತ ದಲಿತರೇ ಕಬಳಿಸುತ್ತಿದ್ದಾರೆಂದು ಹೇಳಿದರೂ ಸಹ ಮೇಲಿನದನ್ನು ತಿರಸ್ಕರಿಸಲಾಗದು. ಕೇಂದ್ರ ಸರ್ಕಾರದಲ್ಲಿರುವ ದಲಿತ ಶ್ರಮಶಕ್ತಿ (ಸಾರ್ವಜನಿಕ ವಲಯ ಮತ್ತು ಬ್ಯಾಂಕು) ಯ ಅಂಕಿ-ಅಂಶಗಳನ್ನು ರಾಷ್ಟ್ರೀಯ ಎಸ್‌ಸಿ/ಎಸ್‌ಟಿ ಕಮಿಷನ್ ನಮಗೆ ನೀಡುತ್ತದೆ. ಅದರ ಪ್ರಕಾರ ೧೯೯೭-೯೮ರಲ್ಲಿ ಗ್ರೂಪ್ 'ಎ'ನಲ್ಲಿ ಶೇ. ೬.೭ ಅಷ್ಟೆ. ಈ ಗುಂಪಿನ ಅಧಿಕಾರಿಗಳ ಮಕ್ಕಳು ಗ್ರೂಪ್ 'III' ರ ಹುದ್ದೆಗಳನ್ನು ಸ್ವೀಕರಿಸುತ್ತಾರಾದರೆ ಅದೊಂದು ವಿಚಿತ್ರ ಸಂಗತಿಯೇ ಸರಿ. ಹಾಗೆಯೇ ಗ್ರೂಪ್ 'III' ರ ದಲಿತ ಮಕ್ಕಳು ಗ್ರೂಪ್ 'IV' ರ ಉದ್ಯೋಗಗಳನ್ನು ಸ್ವೀಕರಿಸುವುದೂ ಸಹ ಅಚ್ಚರಿಯೇ. ಅಂದರೆ ಗ್ರೂಪ್ 'IV'ರ ದಲಿತ ಉದ್ಯೋಗಿಗಳ ಮಕ್ಕಳು ಗ್ರೂಪ್ 'III'ಕ್ಕೇರುವುದು ಮತ್ತು ಗ್ರೂಪ್ 'III'ದಲಿತ ಉದ್ಯೋಗಿಗಳ ಮಕ್ಕಳು ಗ್ರೂಪ್ 'ಎ' ಸಿವಿಲ್ ಸರ್ವಿಸ್ ಉದ್ಯೋಗಗಳನ್ನು ಪಡೆಯುವುದು ಸಹಜವಷ್ಟೆ. ಆದ್ದರಿಂದ ಮೀಸಲಾತಿಯಿಂದಾಗಿ ಮೊದಲ ತಲೆಮಾರಿನ ಶಿಕ್ಷಿತ ದಲಿತರು ಸರ್ಕಾರಿ ಹುದ್ದೆಗಳನ್ನು ಪಡೆಯುವುದು ಸರಿಯಷ್ಟೆ.

ಈ ಮೊದಲ ತಲೆಮಾರಿನ ಶಿಕ್ಷಿತ ದಲಿತ ವ್ಯಕ್ತಿಯು ಸರ್ಕಾರಿ ಕೆಲಸಕ್ಕೆ ಸೇರುವುದು ಖಾಲಿ ಕೈಯಿಂದಲೇ. ಉದ್ಯೋಗಕ್ಕೆ ಸೇರಿದ ಮೊದಲ ವರ್ಷದಲ್ಲಿ ಗಳಿಸಿದೆಲ್ಲವನ್ನು ತನ್ನ ವಾಸ್ತವ್ಯ ಹೂಡಲು ಬಳಸುವುದರಿಂದ, ಮನೆಗೆ ಏನನ್ನು ಕಳುಹಿಸಲಾಗುವುದಿಲ್ಲ. ಆದರೆ ಒಬ್ಬ ದಲಿತೇತರ ವ್ಯಕ್ತಿ ಉದ್ಯೋಗಕ್ಕೆ ಸೇರುವಾಗ ತನ್ನ ವಾಸ್ತವ್ಯಕ್ಕೆ ಅಗತ್ಯವಾದ ಅರ್ಧದಷ್ಟನ್ನು ತನ್ನ ಮನೆಯಿಂದಲೇ ಕೊಂಡೊಯ್ಯುತ್ತಾನೆ. ಆತ ಮೊದಲ ದಿನದಿಂದಲೇ ಹಣವನ್ನು ಉಳಿಸತೊಡಗುತ್ತಾನೆ.

ದಲಿತ ಉದ್ಯೋಗಿ ಎರಡನೇ ವರ್ಷದಲ್ಲಿ ಎರಡು ಸೈಕಲ್‌ಗಳನ್ನು ಖರೀದಿಸುತ್ತಾನೆಂದು ಭಾವಿಸಬಹುದೇನೋ. ಒಂದು ತನಗೆ ಮತ್ತು ಇನ್ನೊಂದು ತನ್ನ ಮನೆಯವರಿಗೆ ! ಆದರೆ ದಲಿತೇತರ ವ್ಯಕ್ತಿಯೊಬ್ಬ ಒಂದು ಸೈಕಲನ್ನು ತಾನು ಖರೀದಿಸಿದರೆ, ತನ್ನ ಹೆಂಡತಿಗೆ ಆಭರಣ ಖರೀದಿಸುತ್ತಾನೆ.

> ಈ ಖಾಸಗೀ ವಲಯ ಮೀಸಲಾತಿ ನೀತಿಯನ್ನು ತನ್ನ ಉದ್ದಿಮೆಗಳಲ್ಲಿ ಅಳವಡಿಸಿಕೊಂಡು ೫ ಮಿಲಿಯನ್ ದಲಿತರಿಗೆ ಉದ್ಯೋಗ ನೀಡಿದರೆ ಅವರು ಆಸ್ಟ್ರೇಲಿಯಾದಲ್ಲಿರುವಷ್ಟು ಗ್ರಾಹಕ ಸಂಖ್ಯೆಯನ್ನು ಗಳಿಸಿಕೊಳ್ಳುತ್ತಾರೆ. ಅಂದರೆ ೫ ಮಿಲಿಯನ್ ದಲಿತರು ೨೫ ಮಿಲಿಯನ್ ಎಂದರ್ಥ ! ಆದ್ದರಿಂದ ಇಂಡಿಯಾದ ಖಾಸಗಿ ವಲಯಕ್ಕೆ ಸಕಾರಾತ್ಮಕ ಕ್ರಿಯೆಗೆ ಅನುಮೋದನೆ ನೀಡಿದಲ್ಲಿ ಅದೊಂದು ಚಾರಿತ್ರಿಕ ಅವಕಾಶವಾಗಿ ದೊಡ್ಡದಾಗಿ ಬೆಳೆದು, ಅಧಿಕ ಲಾಭಗಳಿಸಿ, ತನ್ನ ಗ್ರಾಹಕ ವಲಯವನ್ನು ವಿಸ್ತರಿಸಿಕೊಳ್ಳಬಹುದಾಗಿದೆ.

ದಲಿತ ಉದ್ಯೋಗಿ ಪ್ರತಿವರ್ಷವೂ ಒಂದು ಕೈ ಗಡಿಯಾರವನ್ನು ತನಗೆ ಮತ್ತು ತನ್ನ ಬಂಧುಗಳಿಗೆಲ್ಲಾ ಕೊಳ್ಳಲಾರ. ಈ ದಲಿತ ಉದ್ಯೋಗಿ ತನ್ನ ಊರಿಗೆ ಹೋಗುವಾಗಲೆಲ್ಲಾ ತನ್ನ ಬಂಧುಗಳಿಗೆ ಗಿಫ್ಟ್‌ಗಳನ್ನು ಕೊಂಡೊಯ್ಯುತ್ತಿರುತ್ತಾನೆ. ಉದ್ಯೋಗದ ಮೊದಲ ದಶಕದಲ್ಲಿ ತನ್ನ ಗಳಿಕೆಯೆಲ್ಲವನ್ನು ಖರ್ಚು ಮಾಡಿಬಿಟ್ಟಿರುತ್ತಾನೆ. ಅವರಲ್ಲಿ ಕೆಲವೇ ಮಂದಿ ಮೊದಲ ತಲೆಮಾರಿನ ದಲಿತ ಉದ್ಯೋಗಿಗಳು ಮಾತ್ರ ಸಿಟಿಯಲ್ಲಿ ಮನೆಗಳನ್ನು ಖರೀದಿಸಬಹುದೇನೋ ! ಮಾರುಕಟ್ಟೆಯಲ್ಲಿ ಪದಾರ್ಥ ಕೊಳ್ಳುವುದರಲ್ಲೇ ಅವರ ಬಹುಪಾಲು ಗಳಿಗೆ ವ್ಯಯವಾಗುತ್ತಿರುತ್ತದೆ. ಈ ರೀತಿಯಲ್ಲೇ ಅವರು ತಮ್ಮ ಮನೆಗಳಿಗೆ ನೆರವಾಗುವುದು. ಅಲ್ಲದೆ ಅನೇಕ ಬಾರಿ ಇವರು ತಮ್ಮ ಸಂಬಂಧಿಗಳ ಮನೆಯವರಿಗೆ ನೆರವಾಗುತ್ತಾರೆ. ಒಬ್ಬ ದಲಿತ ಉದ್ಯೋಗಿ ತನ್ನೊಡನೆ, ಉಳಿದೆರಡು ಕುಟುಂಬಗಳಿಗೆ ಗ್ರಾಹಕನಾಗಿ ಬಿಡುತ್ತಾನೆ. ದಲಿತೇತರ ವ್ಯಕ್ತಿಗಳಲ್ಲಿ ಇಂತಹದ್ದು ಅಪರೂಪವಷ್ಟೆ.

ಎರಡನೇ / ಮೂರನೇ ತಲೆಮಾರಿನ ದಲಿತ ಉದ್ಯೋಗಿಗಳು ಉದಾಹರಣೆಗೆ, (ಸಿವಿಲ್ ಸರ್ವೆಂಟ್ಸ್/ ವೈದ್ಯರು / ಇಂಜಿನಿಯರುಗಳು / ಮ್ಯಾನೇಜರ್/ ವೃತ್ತಿಪರರು...) ಒಂದು ನಿರ್ದಿಷ್ಟ ಕೊಳ್ಳುವ / ಖರೀದಿಸುವ ಪ್ರವೃತ್ತಿಗೆ ಒಳಗಾಗುತ್ತಾರೆ. ಒಬ್ಬ ದಲಿತ ಅಧಿಕಾರಿ, ತನ್ನ ತಂದೆಯೂ ಅಧಿಕಾರಿಯಾಗಿದ್ದಲ್ಲಿ ತನಗೆ ಅಥವಾ ತನ್ನ ಮನೆಗೆ ಒಂದು ಎ.ಸಿ. ಯನ್ನು ಕೊಂಡುಕೊಳ್ಳಬಹುದು. ಆತ ತನಗೆ ಒಂದು ಕಂಪ್ಯೂಟರ್ ಖರೀದಿಸಿದರೆ, ತನ್ನ ಮಕ್ಕಳಿಗೆ ಮತ್ತೊಂದನ್ನು ಖರೀದಿಸುತ್ತಾನೆ. ದಲಿತೇತರ ವ್ಯಕ್ತಿಗೆ ಸಂಬಂಧಿಸಿದಂತೆ ಈಗಾಗಲೇ ಎ.ಸಿ. ಕಾರು/ ಕಂಪ್ಯೂಟರ್‌ಗಳನ್ನು ಹೊಂದಿರಬಹುದೇನೋ. ಆದ್ದರಿಂದ ಇವರು ತಮ್ಮ ಗಳಿಕೆಯನ್ನು ಹೂಡುವುದು ರಿಯಲ್ ಎಸ್ಟೇಟ್, ಒಡವೆಗಳಲ್ಲಿ ಅಷ್ಟೆ.

ಅಂದರೆ ದಲಿತೇತರರು ಅಚಿರ ಆಸ್ತಿಯನ್ನಾಗಿ ತಮ್ಮ ಗಳಿಕೆಯನ್ನು ಪರಿವರ್ತಿಸುತ್ತಿರುತ್ತಾರೆ. ಅಂದರೆ ಹಣ ಅಲ್ಲೇ ಬಂಧಿಯಾಗಿಬಿಡುತ್ತದೆ. ಇದು ಮಾರುಕಟ್ಟೆಯ ಅರ್ಥಶಾಸ್ತ್ರಕ್ಕೆ ವಿರುದ್ಧವಾದುದು. ಆದರೆ ಕೆಲವೊಮ್ಮೆ ದಲಿತೇತರ ಅಧಿಕಾರಿಗಳೂ ಸಹ ದಲಿತರಿಗಿಂತ ಅಧಿಕವಾಗಿ ಉದ್ಯಮಶೀಲ ಗ್ರಾಹಕರಾಗಬಹುದು. ಆದರೆ ಅವರೆಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳನ್ನಷ್ಟೇ ಖರೀದಿಸುತ್ತಾರೆ.

ಭಾರತೀಯ ಕೈಗಾರಿಕಾ ಕುಟುಂಬಗಳು ಎಂದೂ ದೊಡ್ಡ ಉದ್ದಿಮೆಗಳಾಗಿ ಬೆಳೆಯುವುದಿಲ್ಲ. ಕಾರಣ ಕೂಡಿಟ್ಟ ಹಣ ಖರ್ಚಾಗುವುದಿಲ್ಲ. ಈ ಖಾಸಗೀ ವಲಯ ಮೀಸಲಾತಿ ನೀತಿಯನ್ನು ತನ್ನ ಉದ್ದಿಮೆಗಳಲ್ಲಿ ಅಳವಡಿಸಿಕೊಂಡು ೫ ಮಿಲಿಯನ್ ದಲಿತರಿಗೆ ಉದ್ಯೋಗ ನೀಡಿದರೆ ಅವರು ಆಸ್ಟ್ರೇಲಿಯಾದಲ್ಲಿರುವಷ್ಟು ಗ್ರಾಹಕ ಸಂಖ್ಯೆಯನ್ನು ಗಳಿಸಿಕೊಳ್ಳುತ್ತಾರೆ. ಅಂದರೆ ೫ ಮಿಲಿಯನ್ ದಲಿತರು ೨೫ ಮಿಲಿಯನ್ ಎಂದರ್ಥ ! ಆದ್ದರಿಂದ ಇಂಡಿಯಾದ ಖಾಸಗಿ ವಲಯಕ್ಕೆ ಸಕಾರಾತ್ಮಕ ಕ್ರಿಯೆಗೆ ಅನುಮೋದನೆ ನೀಡಿದಲ್ಲಿ ಅದೊಂದು ಚಾರಿತ್ರಿಕ ಅವಕಾಶವಾಗಿ ದೊಡ್ಡದಾಗಿ ಬೆಳೆದು, ಅಧಿಕ ಲಾಭಗಳಿಸಿ, ತನ್ನ ಗ್ರಾಹಕ ವಲಯವನ್ನು ವಿಸ್ತರಿಸಿಕೊಳ್ಳಬಹುದಾಗಿದೆ. ಆದರೆ ಅದಕ್ಕಾಗಿ ಬೆಲೆಯೊಂದನ್ನು ತೆರಬೇಕಿದೆ. ಖಾಸಗೀ ವಲಯ ತನ್ನ ಮಾರ್ವಾಡಿ/ದಲ್ಲಾಳಿ ಬುದ್ಧಿಯನ್ನು ತೊರೆದು ಬಹುರಾಷ್ಟ್ರೀಯ ಕಂಪನಿಗಳ ಪ್ರಾಮಾಣಿಕ ಬುದ್ಧಿಯಲ್ಲಿ ಸಾಗಬೇಕಾಗುತ್ತದೆ.

ಧನ ಪಿಶಾಚಿಗಳು ಮತ್ತು ಸಂಕಷ್ಟಗಳು

ಚೈನಾದ ಸೌಂದರ್ಯ ಉದ್ಯಮವು ೨೪ ಬಿಲಿಯನ್ ಡಾಲರ್ ಮೌಲ್ಯವುಳ್ಳದ್ದು. ಅದೇ ಜನಸಂಖ್ಯೆಯನ್ನು ಹೊಂದಿರುವ ಭಾರತೀಯ ಸೌಂದರ್ಯ ಉದ್ಯಮದ ಮೌಲ್ಯ ಕೇವಲ ೨ ಬಿಲಿಯನ್ ಡಾಲರ್. ಅಂದರೆ ಭಾರತವನ್ನು ಚೈನಾಕ್ಕೆ ಹೋಲಿಸುವುದಾದರೆ ಭಾರತದ ಗ್ರಾಹಕ ವಲಯ ತುಂಬಾ ಸಣ್ಣದ್ದು ಅಥವಾ ಭಾರತೀಯರು ಹೆಚ್ಚು ಖರ್ಚು ಮಾಡುವುದಿಲ್ಲ ಅಥವಾ ಅವೆರಡೂ ಸಹ ಸೇರಿಕೊಂಡಿರಬಹುದು. ಕಳೆದ ವರ್ಷ ೧.೩ ಬಿಲಿಯನ್ ಜನಸಂಖ್ಯೆಯನ್ನು ಹೊಂದಿರುವ ಚೈನಾ ೫ ಬಿಲಿಯನ್ ಕಾಲುಚೀಲಗಳನ್ನು ತಯಾರಿಸಿತ್ತು. ಅಲ್ಲದೆ ಅಮೇರಿಕಾ ಮತ್ತು ಜಪಾನ್ ದೇಶಗಳು ಒಟ್ಟಾಗಿ ಉತ್ಪಾದಿಸಿದ ಸ್ಟೀಲ್‌ಗಿಂತ, ಚೈನ ೨೨೦ ಮಿಲಿಯನ್ ಟನ್‌ಗಳಷ್ಟನ್ನು ಕಳೆದ ವರ್ಷ ಉತ್ಪಾದಿಸಿತ್ತು. ಇಲ್ಲಿ ಸೌಂದರ್ಯ, ಕಾಲುಚೀಲ ಮತ್ತು ಸ್ಟೀಲ್ ಉದ್ಯಮಗಳ ನಡುವೆ ನೇರ ಸಂಬಂಧ ಇದೆ. ಅಧಿಕ ಸೌಂದರ್ಯ ಪಾರ್ಲರ್‌ಗಳೆಂದರೆ ಅಧಿಕ ಕಟ್ಟಡಗಳ ನಿರ್ಮಾಣವಾದ್ದರಿಂದ ಹೆಚ್ಚು ಸ್ಟೀಲ್ ಬೇಕಾಗುತ್ತದೆ.

ಭಾರತೀಯ ಉದ್ಯಮಿಯೊಬ್ಬನ ಕಥೆಯೊಂದಿದೆ. ಸ್ನಾನದ ಟವಲ್ ೪.೫ ವರ್ಷಗಳಷ್ಟು ಆಯಸ್ಸುಳ್ಳದ್ದೆಂದು ಅಂದಾಜಿಸಲಾಗಿದೆ. ಅದರರ್ಥ ಟವಲ್ ಉದ್ಯಮಕ್ಕೆ ಆತ ನೀಡುವ ಕೊಡುಗೆಯೆಂದರೆ ಜಡತ್ವ ಹಾಗೂ ನಿರುದ್ಯೋಗವನ್ನು ಖಾತರಿಗೊಳಿಸುತ್ತಾನೆ. ಆತ ಪ್ರತಿ ೧೫ ದಿನಗಳಿಗೊಮ್ಮೆ ಟೂತ್‌ಬ್ರಶ್‌ನ್ನು ಬದಲಿಸುತ್ತಿರಬೇಕು. ಆದರೆ ೧.೫ ವರ್ಷ ಕಾಲ ಟೂತ್‌ಬ್ರಶ್ ಬದಲಾಯಿಸುವುದಿಲ್ಲ. ಈ ಉದ್ಯಮಕ್ಕೂ ಆತನ ಕೊಡುಗೆ ಮೇಲಿನಂತೆಯೇ. ಆತನೆಂದೂ ನೀರು ಬಾಟಲಿಯನ್ನು ಕೊಳ್ಳುವುದಿಲ್ಲವಾದ್ದರಿಂದ ಈ ಉದ್ಯಮಕ್ಕೂ ಆತನ ಕೊಡುಗೆ ಏನೂ ಇಲ್ಲ. ಆತ ಅಪರೂಪಕ್ಕೊಂಬಂತೆ ಸೋಪು ಕೊಳ್ಳುವುದರಿಂದ ಸೋಪು ಉದ್ಯಮಕ್ಕೆ ಜಡತ್ವ. ಈ ಭಾರತೀಯ ಉದ್ಯಮಿಯ ಜೀವನ ಶೈಲಿಯನ್ನು ಪ್ರತಿಯೊಬ್ಬ ಭಾರತೀಯ ಪ್ರಜೆ ಅನುಸರಿಸಿದ್ದೆ ಆದಲ್ಲಿ ಭಾರತ ಬಹುಬೇಗ ಕೈಗಾರೀಕರಣದಿಂದ ಹಿಂದೆ ಸರಿಯುತ್ತದೆ.

ದೆಹಲಿಯಲ್ಲೊಬ್ಬ ವ್ಯಾಪಾರಸ್ಥ ದಿನಕ್ಕೆ ರೂ. ೩ ಸಾವಿರ ಗಳಿಸುತ್ತಾನೆ. ತನ್ನ ಡ್ರೈವರ್‌ಗೆ ಆತ ತಿಂಗಳಿಗೆ ರೂ.೩೦೦೦/- ಕೊಡುತ್ತಾನೆ. ಆತನ ಪೂರ್ಣಾವಧಿ ಕೆಲಸದವಳಿಗೆ ರೂ. ೧,೫೦೦/- ಹಾಗೂ ಕಾವಲು ವ್ಯಕ್ತಿಗೆ ರೂ. ೨೦೦೦/- ತಿಂಗಳಿಗೆ ನೀಡುತ್ತಾನೆ. ಇದರರ್ಥ ಈ ಮೂರು ಮಂದಿಯ ಸೇವೆಗೆ ಆತ ನೀಡುವ ಹಣ ಎರಡು ದಿನಕ್ಕಿಂತ ತುಸು ಹೆಚ್ಚಿನ ತನ್ನ ಸಂಪಾದನೆಯಷ್ಟೆ. ದೆಹಲಿಯಲ್ಲಿರುವ ನರ್ಸಿಂಗ್ ಹೋಮ್‌ಗಳು ಅಧಿಕ ಲಾಭವನ್ನು ಗಳಿಸುತ್ತವೆಯಾದರೂ ಅಲ್ಲಿ ಉದ್ಯೋಗಿಗಳಾಗಿರುವ ನರ್ಸ್‌ಗಳಿಗೆ ತಿಂಗಳ ವೇತನ ಕೇವಲ ೩,೦೦೦/- ಅಷ್ಟೆ. ಭಾರತದ ಅಸಂಘಟಿತ ಕಾರ್ಮಿಕರು ಅತೀ ಕಮ್ಮಿ ಕೂಲಿ ಪಡೆಯುವುದರಿಂದಾಗಿ ಅವರ‍್ಯಾರು ಮಾರುಕಟ್ಟೆಯನ್ನು ಪ್ರವೇಶಿಸಲಾಗುವುದಿಲ್ಲ. ಹೀಗಿರುವಲ್ಲಿ ಮಾರುಕಟ್ಟೆ ವಿಸ್ತರಿಸುವುದು ಮತ್ತು ಉದ್ಯಮ ಬೆಳೆಯುವುದಾದರೂ ಹೇಗೆ?

ಭಾರತೀಯ ಮಧ್ಯಮ ವರ್ಗಗಳು ಉದ್ಯಮಶೀಲ ಧನಪಿಶಾಚಿಗಳಾಗಿದ್ದಾರೆ. ಒಬ್ಬ ವ್ಯಾಪಾರಸ್ಥ ಮರ್ಸಿಡಿಸ್ ಬೆಂಝ್ ಹೊಂದುವಷ್ಟು ಆರ್ಥಿಕ ಸ್ಥಿರತೆಯಲ್ಲಿದ್ದರೂ ಸಹ ಆತ ಒಂದು ದಿನಪತ್ರಿಕೆಯನ್ನಷ್ಟೇ ಕೊಳ್ಳಬಹುದು. ಈ ರೀತಿಯ ಮನೋಭಾವದಿಂದ ಮಾರುಕಟ್ಟೆಯಲ್ಲಿ ಫ್ಲಾಟ್‌ಸ್ಕ್ರೀನ್ ಟಿ.ವಿ. ಇದ್ದಾಗ್ಯೂ ಹಳೇ ಕಾಲದ ಕಲರ್ ಟಿ.ವಿ.ನೇ ಆತ ಖರೀದಿಸುತ್ತಾನೆ. ೧೯೯೧ರಲ್ಲಿ ಖರೀದಿಸಿದ ರೆಫ್ರಿಜರೇಟರ್ ಮತ್ತು ವಾಷಿಂಗ್ ಮೆಷಿನ್ ಕೂಡ ಆತ ಬದಲಾಯಿಸಿರಲಾರ. ೧೯೯೧ರಲ್ಲಿ ಹೊಂದಿದ ಮಾರುತಿ ಕಾರಿನೊಟ್ಟಿಗೆ ಹಾಕಿಸಿಕೊಂಡ ಏರ್ ಕಂಡೀಷನ್ ಯಂತ್ರ ಮತ್ತು ಕಂಪ್ಯೂಟರನ್ನು ಸಹ ಬದಲಾಯಿಸಿರಲಾರ. ಅಂದರೆ ಅವನ ಆದಾಯದೊಟ್ಟಿಗೆ ಹೋಲಿಸಿದಲ್ಲಿ ಆತ ಜಿಪುಣನಾಗಿ ಜೀವಿಸುತ್ತಿದ್ದಾನೆ. ಈತ ಭಾರತೀಯ ಕೈಗಾರಿಕಾ ಬೆಳವಣಿಗೆಯನ್ನು ಕುಂಠಿತಗೊಳಿಸುವ ಪ್ರಜ್ಞಾವಂತ ಯಂತ್ರವೇ ಸರಿ. ಮಾರುಕಟ್ಟೆ ಆಧಾರಿತ ಆರ್ಥಿಕತೆಗೆ ವಿರುದ್ಧವಾಗಿ ಅನೇಕ ಭಾರತೀಯರು ಸಂಪತ್ತನ್ನು ಹೊಂದಿದ್ದು ಅದರ ಚಲಾವಣೆಯನ್ನು ಇಂದಿಗೂ ನಿಲ್ಲಿಸುತ್ತಿದ್ದಾರೆ.

ಭಾರತೀಯ ಉದ್ಯಮಿಯೊಬ್ಬನ ಕಥೆಯೊಂದಿದೆ. ಸ್ನಾನದ ಟವಲ್ ೪.೫ ವರ್ಷಗಳಷ್ಟು ಆಯಸ್ಸುಳ್ಳದ್ದೆಂದು ಅಂದಾಜಿಸಲಾಗಿದೆ. ಅದರರ್ಥ ಟವಲ್ ಉದ್ಯಮಕ್ಕೆ ಆತ ನೀಡುವ ಕೊಡುಗೆಯೆಂದರೆ ಜಡತ್ವ ಹಾಗೂ ನಿರುದ್ಯೋಗವನ್ನು ಖಾತರಿಗೊಳಿಸುತ್ತಾನೆ. ಆತ ಪ್ರತಿ ೧೫ ದಿನಗಳಿಗೊಮ್ಮೆ ಟೂತ್‌ಬ್ರಶ್‌ನ್ನು ಬದಲಿಸುತ್ತಿರಬೇಕು. ಆದರೆ ೧.೫ ವರ್ಷ ಕಾಲ ಟೂತ್‌ಬ್ರಶ್ ಬದಲಾಯಿಸುವುದಿಲ್ಲ. ಈ ಉದ್ಯಮಕ್ಕೂ ಆತನ ಕೊಡುಗೆ ಮೇಲಿನಂತೆಯೇ. ಆತನೆಂದೂ ನೀರು ಬಾಟಲಿಯನ್ನು ಕೊಳ್ಳುವುದಿಲ್ಲವಾದ್ದರಿಂದ ಈ ಉದ್ಯಮಕ್ಕೂ ಆತನ ಕೊಡುಗೆ ಏನೂ ಇಲ್ಲ. ಆತ ಅಪರೂಪಕ್ಕೊಂಬಂತೆ ಸೋಪು ಕೊಳ್ಳುವುದರಿಂದ ಸೋಪು ಉದ್ಯಮಕ್ಕೆ ಜಡತ್ವ. ಈ ಭಾರತೀಯ ಉದ್ಯಮಿಯ ಜೀವನ ಶೈಲಿಯನ್ನು ಪ್ರತಿಯೊಬ್ಬ ಭಾರತೀಯ ಪ್ರಜೆ ಅನುಸರಿಸಿದ್ದೆ ಆದಲ್ಲಿ ಭಾರತ ಬಹುಬೇಗ ಕೈಗಾರೀಕರಣದಿಂದ ಹಿಂದೆ ಸರಿಯುತ್ತದೆ.

ದಲಿತ್ ಡೈರಿ

ಭಾರತೀಯ ನಗರ ಸಂಪತ್ತು ಜಾತಿ ವ್ಯವಸ್ಥೆಯ ಸದಸ್ಯರಿಗೆ ಸೇರಿದ್ದು. ಈ ವ್ಯವಸ್ಥೆಯ ಪ್ರಕಾರ ಸಂಪತ್ತನ್ನು ಖರ್ಚು ಮಾಡದೆ ಉಳಿಸಿಕೊಳ್ಳಬೇಕು. ಈ ಜಾತಿ ವ್ಯವಸ್ಥೆಯಿಂದಾಗಿಯೇ ಬ್ರಾಹ್ಮಣರು ಮತ್ತು ವೇಶ್ಯೆಯರು ಮಾಂಸಾಹರ ವರ್ಜಿಸಿರುವುದು. ಕೋಳಿಸಾಕಾಣಿಕೆ ಅಥವಾ ಮೀನು ಉದ್ಯಮಕ್ಕೆ ಇವರಿಂದಾಗುವ ತೊಂದರೆಯನ್ನು ಊಹಿಸಲಾದೀತೆ? ಇವರ‍್ಯಾರೂ ಜಾತಿ ವ್ಯವಸ್ಥೆಯ ಮೇರೆಗೆ ಕುಡಿಯುವುದಿಲ್ಲ. ಇದರಿಂದ ಭಾರತೀಯ ವೈನ್ ಉದ್ಯಮಕ್ಕೆ ಆಗುವ ತೊಂದರೆಯನ್ನು ಅಳೆಯಲಾದೀತೆ? ಇವರ‍್ಯಾರು ಸೇದಬಾರದೆಂದೂ ಸಹ ಬಯಸಲಾಗುತ್ತದೆ. ಇದರಿಂದಾಗಿ ಟೊಬ್ಯಾಕೊ ಉದ್ಯಮಕ್ಕಾಗಿರುವ ನಷ್ಟವನ್ನು ಅಳೆಯಲಾದೀತೆ? ಇಂಥದೊಂದು ವರ್ಗವು ಸಾಂಸ್ಕೃತಿಕವಾಗಿ/ವಿಧಿಬದ್ಧವಾಗಿ ಮಾಂಸಾಹಾರ ತಿನ್ನುವುದು, ಕುಡಿಯುವುದು, ಸೇದುವುದು ತಪ್ಪೆಂದು ಪರಿಗಣಿಸಿದಲ್ಲಿ ಇಂಥವರಿಂದ ಮಾರುಕಟ್ಟೆ ಸ್ನೇಹಿತನವನ್ನು ಬಯಸಲಾಗುವುದಿಲ್ಲ. ಈ ಜನ ಸೌಂದರ್ಯ ಪಾರ್ಲರ್‌ಗಳಿಗೂ ಸಹ ಭೇಟಿ ಕೊಡಲಾರರು. ಅಥವಾ ಪರ್ಸನಾಲಿಟಿ ಅಭಿವೃದ್ಧಿ ಕೇಂದ್ರಗಳಿಗೂ ಹೋಗಲಾರರು.

ಒಟ್ಟಾರೆಯಾಗಿ ಹೇಳುವುದಾದರೆ ಸಮಾಜದ ಗಣ್ಯರೆನಿಸಿಕೊಂಡವರು ಧನ ಪಿಶಾಚಿಗಳಾದರೆ ಅಂತಹ ಸಮಾಜದ ವ್ಯಕ್ತಿತ್ವವು ಮಾರುಕಟ್ಟೆ ಬೇಡಿಕೆಗೆ ಹೊಂದಿಕೊಳ್ಳಲಾಗುವುದಿಲ್ಲ.

ಮಾರುಕಟ್ಟೆ ಆರ್ಥಿಕತೆಯಲ್ಲಿ ಸಂಪತ್ತು ನಿರಂತರವಾಗಿ ಕೈ ಬದಲಾಯಿಸುತ್ತಿರಲೇಬೇಕು. ನಮಗೆಲ್ಲ ತಿಳಿದಿರುವಂತೆ ಭಾರತ ತೀವ್ರವಾದ ಕೈಗಾರಿಕಾ ಬೆಳವಣಿಗೆಯನ್ನೇನೂ ಕಾಣುತ್ತಿಲ್ಲ. ಇಂತಹ ಜಡಗೊಂಡಂತಹ ಆರ್ಥಿಕ ಬೆಳವಣಿಗೆಗೆ ಕಾರಣವೆಂದರೆ ಭಾರತೀಯ ಶ್ರೀಮಂತರ ಖರ್ಚು ಮಾಡದ ಹವ್ಯಾಸದಿಂದಾಗಿಯೇ ಎಂದು ತಿಳಿಯಬೇಕಾಗಿದೆ.

ದಲಿತರು ಅಥವಾ ಬಹಿಷ್ಕೃತರು ಒಂದು ಭಿನ್ನವಾದ ಸಮಾಜವೆಂದೇ ಹೇಳಬೇಕು. ಅವರು ಒಂದು ಭಿನ್ನ ಸಂಸ್ಕೃತಿ ಮತ್ತು ಪರಂಪರೆಗಳನ್ನು ಹೊಂದಿದವರಾಗಿದ್ದಾರೆ. ಅವರು ಮೊದಲ ತಲೆಮಾರಿನ ಗ್ರಾಹಕರಾಗಿ ತೀವ್ರವಾದ ಖರೀದಿಯಲ್ಲಿ ತೊಡಗುತ್ತಾರೆ. ಚೈನಾದ ಸೌಂದರ್ಯ ಉದ್ಯಮವು ೨೪ ಬಿಲಿಯನ್ ಡಾಲರ್ ಮೌಲ್ಯವುಳ್ಳದ್ದಾಗಿದ್ದರೆ ಅಥವಾ ೧.೫ ಬಿಲಿಯನ್ ಚೈನಾ ಜನರು ೫ ಮಿಲಿಯನ್ ಕಾಲುಚೀಲಗಳನ್ನು ವರ್ಷವೊಂದಕ್ಕೆ ಬಳಸುತ್ತಾರಾದರೆ, ಅವರು ಅಗತ್ಯವಾಗಿ ಅನೇಕ ಮಿಲಿಯನ್ ಮೊದಲ ತಲೆಮಾರಿನ ಗ್ರಾಹಕರನ್ನು ತಯಾರು ಮಾಡಿದ್ದಾರೆಂದು ಅರ್ಥ.

ದಲಿತರನ್ನು ಕೈಗಾರಿಕೆ ಮತ್ತು ಒಟ್ಟಾರೆ ಆರ್ಥಿಕತೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಭಾರತದ ಸಂಕಷ್ಟಗಳು ಕೆಲವೇ ದಶಕಗಳಲ್ಲಿ ಕೊನೆಗೊಂಡು ಭಾರತೀಯ ಮಧ್ಯಮವರ್ಗದ ವೆಚ್ಚ ಮಾಡುವ ಹವ್ಯಾಸದ ಮೇಲೆ ತೀವ್ರವಾದ ಪರಿಣಾಮ ಬೀರಬಲ್ಲದು.

ದಲಿತ್ ಡೈರಿ

ಮಾರುಕಟ್ಟೆ ರಾಯಭಾರಿಗಳು

ಗ್ರಾಮೀಣ ಪ್ರದೇಶವೆಲ್ಲಿರುವ ದಲಿತರ ಸಾಮಾಜಿಕ ಸ್ಥಾನದಿಂದಾಗಿ ದಲಿತೇತರ ಹುಡುಗಿಯರು ದಲಿತ ಹುಡುಗರೊಂದಿಗೆ ವ್ಯವಹರಿಸುತ್ತಾರೆನ್ನುವುದು ಅತಾರ್ಕಿಕವಾದುದು. ದಲಿತೇತರರು ಒಂದು ಗ್ಲಾಸ್ ನೀರನ್ನು ದಲಿತರಿಗೆ ನೀಡುವುದನ್ನು ಸಹ ಧಾರ್ಮಿಕವಾಗಿ ಮೈಲಿಗೆ ಅಥವಾ ಪಾಪಕೃತ್ಯವೆಂದು ಭಾವಿಸುತ್ತಾರೆಂದರೆ ದಲಿತೇತರ ಹುಡುಗಿಯರು ದಲಿತ ಹುಡುಗರೊಂದಿಗೆ ಓಡಿಹೋಗುವುದೂ ಸಹ ಅಷ್ಟೇ ದುಸ್ಸಾಧ್ಯವೇ ಸರಿ. ಉತ್ತರ ಪ್ರದೇಶದ ಪಶ್ಚಿಮ ಭಾಗ, ಹರಿಯಾಣ ಹಾಗೂ ರಾಜಸ್ಥಾನದ ಹಲವೆಡೆಗಳಲ್ಲಿ ಶೂದ್ರರೇ ಇರುತ್ತಾರಾದರೂ ದಲಿತ ವರರು ತಮ್ಮ ಮದುವೆಗಳ ಸಂದರ್ಭದಲ್ಲಿ ಕತ್ತೆಸವಾರಿ ಮಾಡಲೂ ಸಹ ಬಿಡುವುದಿಲ್ಲ.

ಒಬ್ಬ ಜಾಟ್ ಅಥವಾ ಒಬ್ಬ ಯಾದವ ಹುಡುಗಿಯರು ದಲಿತ ಹುಡುಗನೊಂದಿಗೆ ಓಡಿಹೋಗಿ ಅವರಿಬ್ಬರು ಕೊಲೆಗೀಡಾದುದನ್ನು ಪ್ರತೀ ತಿಂಗಳೂ ಮಾಧ್ಯಮಗಳಲ್ಲಿ ನೋಡಬಹುದು. ಮಧ್ಯಯುಗೀನ ಮಥುರಾದಿಂದಾಚೆಗೆ ಒಬ್ಬ ಜಾಟ್ ಹುಡುಗಿಯು ದಲಿತ ಹುಡುಗನೊಂದಿಗೆ ಓಡಿಹೋದಾಗ ಅವರನ್ನು ಹಾಡುಹಗಲಲ್ಲೇ ಗಲ್ಲಿಗೇರಿಸುತ್ತಾರೆ. ಈ ಪ್ರದೇಶದ ಈ ಶೂದ್ರ ಹುಡುಗಿಯರು ದಲಿತ ಹುಡುಗರೊಂದಿಗೆ ಓಡಿಹೋಗಲು ಇರುವಂತಹ ಕಾರಣಗಳನ್ನು ನಾನು ಹುಡುಕಲು ಪ್ರಯತ್ನಿಸಿದ್ದೆ. ಅಂತಹ ಎಲ್ಲಾ ಘಟನೆಗಳು ಸಹ ಮಾಧ್ಯಮದ ಗಮನವನ್ನು ಸೆಳೆಯುತ್ತದೆಂದು ಅರ್ಥವಾದಲ್ಲಿ ಒಬ್ಬ ಶೂದ್ರ ಹುಡುಗಿಯು ಒಬ್ಬ ದಲಿತ ಹುಡುಗನೊಂದಿಗೆ ಓಡಿ ಹೋಗುತ್ತಾಳೆಂದರೆ ಭಾರತೀಯ ಸಮಾಜಶಾಸ್ತ್ರಜ್ಞರಿಗೆ ಇಂತಹ ವಿದ್ಯಮಾನವು ಅಧ್ಯಯನಕ್ಕೆ ಯೋಗ್ಯವಾದುದೇನೂ ಅಲ್ಲ. ಭಾರತೀಯ ಅರ್ಥಶಾಸ್ತ್ರಜ್ಞರು ಯಾವುದೇ ರೀತಿಯಲ್ಲಿ ವರ್ಣವ್ಯವಸ್ಥೆಯೊಂದಿಗೆ ಆರ್ಥಿಕತೆಯನ್ನು ಇಟ್ಟು ನೋಡಲಾರರು.

ಈ ಪ್ರದೇಶಗಳಲ್ಲಿ ಬ್ರಾಹ್ಮಣರು ಅತೀ ವಿರಳ. ಆದ್ದರಿಂದಾಗಿ ಗ್ರಾಹಕ ಪದಾರ್ಥಗಳನ್ನು ಅಲ್ಲಿ ಪರಿಚಯಿಸುವ ಸಾಮಾಜಿಕ ಶಕ್ತಿ ಇಲ್ಲವಾಗಿದೆ. ಮೀಸಲಾತಿಯಿಂದಾಗಿ ಅನೇಕ ಮಂದಿ ದಲಿತರು ಪ್ರತಿಯೊಂದು ಗ್ರಾಮವನ್ನು ಪ್ರತಿನಿಧಿಸುತ್ತಾ ಸರ್ಕಾರೀ ಉದ್ಯೋಗಗಳನ್ನು ಪಡೆದುಕೊಂಡಿದ್ದಾರೆ. ಅನೇಕ ದಲಿತರು ದೆಹಲಿಗೆ ಕೈಗಾರಿಕಾ ಕಾರ್ಮಿಕರಾಗಿ ವಲಸೆ ಹೋಗಿದ್ದಾರೆ. ವೇತನ ಪಡೆಯುವ ವರ್ಗವನ್ನು ದಲಿತರು ಯಾವಾಗ ಪ್ರವೇಶಿಸುತ್ತಾರೋ ಅವರೆಲ್ಲಾ ಮತ್ತೊಂದು ಸಾಮಾಜಿಕ ಬದಲಾವಣೆಗೆ ಕಾರಣರಾಗುತ್ತಾರೆ. ಸಾಮಾಜಿಕವಾಗಿ ಬಹಿಷ್ಕೃತರಾದ ಇವರು ತಮ್ಮ ಸಾಮಾಜಿಕ ಸ್ಥಾನವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುತ್ತಾರಷ್ಟೆ. ಅದಕ್ಕೆ ಮೌಲ್ಯವನ್ನು ಸಹ ನೀಡಲು ತಯಾರಾಗಿದ್ದಾರೆ.

ಆದ್ದರಿಂದಾಗಿ ಒಬ್ಬ ದಲಿತನು ಒಂದು ಶಾಲಾ ಉಪಾಧ್ಯಾಯ ಅಥವಾ ಕ್ಲರ್ಕ್ ಆದಾಗ ತನ್ನ ಮೊದಲ ವೇತನದಿಂದ ಒಂದು ಪ್ರೆಶರ್ ಕುಕ್ಕರ್ ಅನ್ನು ಖರೀದಿಸುತ್ತಾನಷ್ಟೆ. ಈ ವಿಶಿಷ್ಟ ಪಾಕ ಯಂತ್ರವು ಹಳ್ಳಿಯ ಕುತೂಹಲವನ್ನು ಕೆರಳಿಸುತ್ತದಷ್ಟೆ. ಇದಾದ ನಂತರ ಒಬ್ಬ ದಲಿತ ಗ್ರಾಹಕ ಪದಾರ್ಥಗಳನ್ನು ಯಾರೂ ಯೋಚಿಸಲಾಗದಷ್ಟು ತನ್ನ ಮನೆಗೆ ಕೊಂಡು ತರುತ್ತಾನೆ. ಆ ಹಳ್ಳಿಯಲ್ಲಿ ಆತನ ಮಕ್ಕಳು ಮೊದಲಿಗರಾಗಿ ಶಾಂಪು, ತೆಂಗಿನೆಣ್ಣೆ, ಸ್ನಾನದ ಸೋಪು, ಟೂತ್ ಬ್ರಶ್ ಅಥವಾ ಸೌಂದರ್ಯ ವರ್ಧಕಗಳನ್ನು ಬಳಸಲಾರಂಭಿಸುತ್ತಾರೆ.

ವೇತನ ಪಡೆಯುವ ವರ್ಗವನ್ನು ದಲಿತರು ಯಾವಾಗ ಪ್ರವೇಶಿಸುತ್ತಾರೋ ಅವರೆಲ್ಲಾ ಮತ್ತೊಂದು ಸಾಮಾಜಿಕ ಬದಲಾವಣೆಗೆ ಕಾರಣರಾಗುತ್ತಾರೆ.

ಹಾಗೆಯೇ ಹಳ್ಳಿಯಲ್ಲಿ ಈ ದಲಿತ ಕುಟುಂಬಕ್ಕೆ ಮೊದಲ ಬಾರಿಗೆ ಒಂದು ಅಲಾರಾಮ್ ಗಡಿಯಾರ ಪ್ರವೇಶಿಸುತ್ತದೆ. ಒಬ್ಬ ಶೂದ್ರ ಅದೇ ಸ್ಥಿತಿಯಲ್ಲಿದ್ದಾಗ ಅಥವಾ ಅದಕ್ಕಿಂತ ಉತ್ತಮ ಆರ್ಥಿಕ ಸ್ಥಿತಿಯನ್ನು ಹೊಂದಿದ್ದು ಒಬ್ಬ ಶಾಲಾ ಉಪಾಧ್ಯಾಯ ಅಥವಾ ಗುಮಾಸ್ತನಾದಲ್ಲಿ ಆತ ಒಂದು ಭಿನ್ನವಾದ ಬದಲಾವಣೆಗೆ ಕಾರಣನಾಗುತ್ತಾನೆ. ಆತ ಹಣವನ್ನು ಉಳಿಸಿ ಒಂದು ಗನ್ ಖರೀದಿಸುತ್ತಾನೆ ಇಲ್ಲವೇ ರಸ್ತೆ ಬದಿ ಒಂದು ತುಂಡು ಭೂಮಿಯನ್ನು ಅಥವಾ ಒಂದು ಟ್ರ್ಯಾಕ್ಟರ್ ಅನ್ನು ಅಥವಾ ೧೫೦ ಸಿ.ಸಿ. ಬುಲೆಟ್ ಮೋಟಾರ್ ಬೈಕನ್ನು ಖರೀದಿಸಬಹುದು.

ಭೂ ಹಿಡುವಳಿದಾರರಾಗಿಯೂ ಸಹ, ಸರ್ಕಾರೀ ಉದ್ಯೋಗವನ್ನು ಪಡೆದೂ ಸಹ ಒಂದು ಶೂದ್ರ ಕುಟುಂಬವು ಆಧುನಿಕ ಸೌಲಭ್ಯಗಳಿಲ್ಲದೆ ಜೀವನ ಸಾಗಿಸುತ್ತಿರುತ್ತದೆ. ಒಬ್ಬ ಶೂದ್ರ ಹುಡುಗಿಯು ಇವೆಲ್ಲವನ್ನೂ ಗಮನಿಸುತ್ತಿರುತ್ತಾಳೆ. ದಲಿತ ಮನೆಯಲ್ಲಿರುವ ಕಲರ್ ಟಿವಿ, ಪಾಕಯಂತ್ರ, ರೈಲ್ವೆ ಇಂಜಿನ್ ತರಹ ಕೂಗುವುದು -ಇವೆಲ್ಲಾ ಆಕೆಗೆ ಮನೆಯ ಹೊರಗಡೆ ಇರುವ ಟ್ರ್ಯಾಕ್ಟರ್‌ಗಿಂತ ಥ್ರಿಲ್ ನೀಡುತ್ತವೆ. ಅದರ ಬದಲು ಗೋಡೆಗೆ ನೇತಾಕಿದ ಒಂದು ಗನ್‌ನಿಂದ ತೊಂದರೆಯೇ. ಇಂಥವಳು ಒಬ್ಬ ದಲಿತ ಹುಡುಗ ಕೂಲಿಂಗ್ ಗ್ಲಾಸ್ ಧರಿಸಿ, ನೀಟಾದ ಪ್ಯಾಂಟ್ ಹಾಕಿ ಆಕರ್ಷಕ ಟೀ ಶರ್ಟ್ ತೊಟ್ಟು ಕೋಕ್ ಬಾಟಲಿಯನ್ನು ಬುರ್ರ್ ಅಂತ ತೆರೆದು ಹೀರುವುದನ್ನು ಕಂಡಾಗ ಆಕರ್ಷಣೆಯಲ್ಲದೆ ಮತ್ತೇನು?

ಒಬ್ಬ ಶೂದ್ರ ಹುಡುಗ ಲೀಟರ್‌ನಷ್ಟು ಹಾಲುಕುಡಿದು, ಡಜನ್‌ಗಟ್ಟಲೆ ಚಪಾತಿ ತಿಂದು ತನ್ನ ಪ್ಯಾಂಟನ್ನು ಇಸ್ತ್ರಿ ಮಾಡದೆ ತಲೆ ಕೂದಲನ್ನು ತೊಳೆಯಲು ಬಟ್ಟೆ ಸೋಪನ್ನು ಉಪಯೋಗಿಸುವಾಗ ಒಬ್ಬ ದಲಿತ ಹುಡುಗ ಆಕೆಗೆ ಆಕರ್ಷಕವಾಗಿ ಕಾಣುತ್ತಾನಲ್ಲದೆ ಈತನಲ್ಲ ಒಬ್ಬ ಬಾಟಲಿ ಕೋಕ್ ಮತ್ತು ಒಂದು ಸಣ್ಣ ಸೌಂದರ್ಯ ವರ್ಧಕದಿಂದಾಗಿ ಈ ಶೂದ್ರ ಹುಡುಗಿಯು ದಲಿತ ಗಾಳಿಗೆ ಸಿಲುಕುತ್ತಾಳೆ. ಹೀಗೆ ಮಾಡುವುದರಿಂದ ಆಕೆಯೇನೂ ಸಾಮಾಜಿಕ ಕ್ರಾಂತಿಕಾರಿಯೇನೂ ಅಲ್ಲ. ಆಕೆಯು ಮಧ್ಯಯುಗೀನ ಬದುಕಿನ ಕ್ರಮಗಳಿಂದ ಬಿಡುಗಡೆಯನ್ನಷ್ಟೇ ಬಯಸುತ್ತಿದ್ದಾಳೆ.

ಭಾರತದ ಅನೇಕ ಕಡೆಗಳಲ್ಲಿ ವೇತನ ಪಡೆಯುವ ದಲಿತ ಕುಟುಂಬವು ಹಳ್ಳಿಯ ಗ್ರಾಹಕ ಪ್ರವೃತ್ತಿಯನ್ನು ವಿದ್ಯುತ್ತೀಕರಿಸುತ್ತದೆ. ದಲಿತರ ಮನೆಯ ಪ್ರೆಶರ್ ಕುಕ್ಕರ್, ಟಿ.ವಿ., ಫ್ಯಾನು, ಟ್ಯೂಬ್‌ಲೈಟು ದಲಿತೇತರರ ಅಹಂ ಅನ್ನು ನೋಯಿಸುತ್ತದೆ.

ಅವರೂ ಸಹ ದಲಿತರನ್ನು ಹಿಂದಕ್ಕೆ ತಳ್ಳಲು ಕೊಳ್ಳಲೇಬೇಕಾಗುತ್ತದೆ. ಹಾಗೆ ಮಾಡಿಲ್ಲವಾದರೆ ಅವರ ಹುಡುಗಿಯರೂ ಸಹ ಈ ದಲಿತ ಬಿರುಗಾಳಿಗೆ ಕೊಚ್ಚಿ ಹೋಗುತ್ತಾರೆ. ದಲಿತರು ತಮ್ಮ ಸಾಮಾಜಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ತೀವ್ರತರ ಗ್ರಾಹಕ ಪ್ರವೃತ್ತಿಗೆ ಒಳಗಾಗುತ್ತಾರೆ. ಹೀಗಾಗಿ ಅವರು ಕೈಗಾರಿಕೆ ಬೆಳೆಯಲು ನೆರವಾಗುತ್ತಾರೆ.

ಈಗ ಹೇಳಿ, ಖಾಸಗೀ ವಲಯದ ಉತ್ಪಾದನಾ ಪದಾರ್ಥಗಳಿಗೆ ಈ ದಲಿತರು ಜಾಹೀರಾತುದಾರರಾಗಿ ಮಾರುಕಟ್ಟೆಯ ರಾಯಭಾರಿಗಳಾಗಿಲ್ಲವೆ? ಆದ್ದರಿಂದ ಈ ಖಾಸಗೀ ವಲಯದವರು ಮೀಸಲಾತಿಯನ್ನು ಹಿಡಿದುಕೊಂಡು ತಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವುದು ಜಾಣತನವಲ್ಲವೆ? □

ಭಾರತದ ಅನೇಕ ಕಡೆಗಳಲ್ಲಿ ವೇತನ ಪಡೆಯುವ ದಲಿತ ಕುಟುಂಬವು ಹಳ್ಳಿಯ ಗ್ರಾಹಕ ಪ್ರವೃತ್ತಿಯನ್ನು ವಿದ್ಯುತ್ತೀಕರಿಸುತ್ತದೆ. ದಲಿತರ ಮನೆಯ ಪ್ರೆಶರ್ ಕುಕ್ಕರ್, ಟಿ.ವಿ., ಫ್ಯಾನು, ಟ್ಯೂಬ್‌ಲೈಟು ದಲಿತೇತರರ ಅಹಂ ಅನ್ನು ನೋಯಿಸುತ್ತದೆ. ಅವರೂ ಸಹ ದಲಿತರನ್ನು ಹಿಂದಕ್ಕೆ ತಳ್ಳಲು ಕೊಳ್ಳಲೇಬೇಕಾಗುತ್ತದೆ. ಹಾಗೆ ಮಾಡಿಲ್ಲವಾದರೆ ಅವರ ಹುಡುಗಿಯರೂ ಸಹ ಈ ದಲಿತ ಬಿರುಗಾಳಿಗೆ ಕೊಚ್ಚಿ ಹೋಗುತ್ತಾರೆ. ದಲಿತರು ತಮ್ಮ ಸಾಮಾಜಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ತೀವ್ರತರ ಗ್ರಾಹಕ ಪ್ರವೃತ್ತಿಗೆ ಒಳಗಾಗುತ್ತಾರೆ. ಹೀಗಾಗಿ ಅವರು ಕೈಗಾರಿಕೆ ಬೆಳೆಯಲು ನೆರವಾಗುತ್ತಾರೆ. ಈಗ ಹೇಳಿ, ಖಾಸಗೀ ವಲಯದ ಉತ್ಪಾದನಾ ಪದಾರ್ಥಗಳಿಗೆ ಈ ದಲಿತರು ಜಾಹೀರಾತುದಾರರಾಗಿ ಮಾರುಕಟ್ಟೆಯ ರಾಯಭಾರಿಗಳಾಗಿಲ್ಲವೆ? ಆದ್ದರಿಂದ ಈ ಖಾಸಗೀ ವಲಯದವರು ಮೀಸಲಾತಿಯನ್ನು ಹಿಡಿದುಕೊಂಡು ತಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವುದು ಜಾಣತನವಲ್ಲವೆ?

ವಾಸ್ತವ

ನಿರ್ಮಲ-ಶಾಂತ ಗಿರಿ ಶಿಖರ ಬಾಬಾಬುಡನ್‌ಗಿರಿಗೆ ಕೋಮುವಾದಿಗಳು ಬೆಂಕಿ ಹಚ್ಚಿದ್ದಾರೆ. ಮುಗ್ಧ ಜನರನ್ನು ಕೆರಳಿಸಿ, ಅದರ ಲಾಭ ಪಡೆದು ಅಧಿಕಾರ ಹಿಡಿಯುವ ಸಂಘ ಪರಿವಾರದ ಹುನ್ನಾರ ಕುಸಿದು ಬಿದ್ದಿದೆ. ಹಿಂದೂ-ಮುಸ್ಲಿಂ ಮೂಲಭೂತತನವನ್ನು ತಿರಸ್ಕರಿಸಿ ಜನತೆ ಧರ್ಮ ಕಟ್ಟಿದ ಬಾಬಾಬುಡನ್ ಮತ್ತು ದತ್ತಾತ್ರೇಯರಂಥ ಅನುಭಾವಿಗಳ ನೆಲೆಯಾದ ಈ ಪ್ರದೇಶದ ಕುರಿತಂತೆ ನಿಜದ ನೆಲೆಗಟ್ಟಿನ ವಿಶ್ಲೇಷಣೆ ಅಗತ್ಯವಾಗಿದೆ. ಇಂತಹ ವಿಶ್ಲೇಷಣೆಯನ್ನು ಲೇಖಕರು ಇಲ್ಲಿ ನಡೆಸಿದ್ದಾರೆ. ಅದರ ಮೂರನೇ ಹಾಗೂ ಕೊನೆಯ ಕಂತು ಇದು.

○ ಪ್ರೊ॥ ರಹಮತ್ ತರೀಕೆರೆ

ಬಾಬಾ ದತ್ತರ ಗಿರಿಕಾರಣ

ಮುಸ್ಲಿಮರು ಹಾಗೂ ದತ್ತ ಪಂಥ

ದತ್ತಪಂಥಕ್ಕೆ ಮುಸ್ಲಿಮರ ಪ್ರವೇಶವು ಅಥವಾ ಸೂಫಿಪಂಥಕ್ಕೆ ದತ್ತಪಂಥಿಗಳ ಪ್ರವೇಶವು ಬಹಮನಿ ಹಾಗೂ ಆದಿಲಶಾಹಿಗಳ ಕಾಲದಿಂದಲೇ ಶುರುವಾಯಿತು. ಶ್ರೀಪಾದವಲ್ಲಭರು ಕುರುಮಗಡ್ಡೆಯ ಬೆಸ್ತರಿಗೆ 'ಮುಂದೆ ನಾನು ಮುಸ್ಲಿಮನಾಗಿ ಹುಟ್ಟಿ ರಾಜನಾಗುತ್ತೇನೆ' ಎಂದು ಹೇಳಿದರೆನ್ನುವ ಕಥೆಯನ್ನು ಇದೇ ಅರ್ಥದಲ್ಲಿ ಗಮನಿಸಬೇಕು. ದತ್ತಪಂಥದ ಜನಪ್ರಿಯ ಸಂತರಾಗಿದ್ದ ಮಾಣಿಕಪ್ರಭು ಅವರನ್ನು ಮುಸ್ಲಿಮರು ಪೀರಾನೆಪೀರ್ ದಸ್ತಗಿರ್ ಎಂದು ಕರೆಯುತ್ತಿದ್ದರು. ದಸ್ತಗಿರ್ ಎಂಬುದು ಖಾದ್ರಿಯಾ ಪಂಥದ ಗುರುವಿನ ಹೆಸರು. ಮಾಣಿಕಪ್ರಭು ಕುರಾನಿನ ಪ್ರಸಿದ್ಧ ವ್ಯಾಖ್ಯಾನಕಾರ ಆಗಿದ್ದರು. ಬಿಜಾಪುರದ ಆದಿಲಶಾಹಿಗಳ ಕೋಟೆ ಆವರಣದ ನರಸಿಂಹದತ್ತ ಮಂದಿರದಲ್ಲಿ ಮಾಣಿಕಪ್ರಭುವಿನ ಅಪರೂಪದ ಚಿತ್ರಪಟವಿದೆ. ಅದರಲ್ಲಿ ಅವರು ಸೂಫಿಯ ವೇಷ ಧರಿಸಿದ್ದಾರೆ.

ಈಗಲೂ ಮಹಾರಾಷ್ಟ್ರ ಕರ್ನಾಟಕದ ಗಡಿಯ ಆಸುಪಾಸಿನ ಊರುಗಳಲ್ಲಿ ನೂರಾರು ದತ್ತಪಂಥಿಗಳಾಗಿರುವ ಮುಸ್ಲಿಮರಿದ್ದಾರೆ. ಅಕ್ಕಲಕೋಟೆಯ ದಾತಾಪೀರ್ ದರ್ಗಾದಲ್ಲಿ ಇದ್ದಾರೆ. ಇದೇ ಅಕ್ಕಲಕೋಟೆಯಿಂದ ಬಂದ ಮೀರಾಲಂ ನವಾಜ್ ಎಂಬ ಸೂಫಿಯ ದರ್ಗಾ ಹೊಸಪೇಟೆಯಲ್ಲಿದೆ. ಈತನ ತಂದೆಯ ದರ್ಗಾ ಅಕ್ಕಲಕೋಟೆಯಲ್ಲಿದ್ದು, ಅವನಿಗೆ ದಾತಾಪೀರ್ ಅಲ್ಲಮಪ್ರಭು ಎಂದು ಕರೆಯುತ್ತಾರೆ. ಈ ದಾತಾಪೀರ್ ಎಂಬುದು ದತ್ತಾಪೀರ್ ಕೂಡ ಆಗಿರಬಹುದು. ಇದು ದತ್ತಪಂಥದ ಜತೆಗಿನ ಸೂಫಿಗಳ ಸಂಬಂಧವನ್ನು ಸೂಚಿಸುತ್ತದೆ. ಅಕ್ಕಲಕೋಟೆಯು ದತ್ತಾವತಾರಿ ಸ್ವಾಮಿಸಮರ್ಥರ ಸಮಾಧಿ ಇರುವ ಊರು. ಸ್ವಾಮಿಸಮರ್ಥರು, ಪಕ್ಕ ದಲ್ಲೇ ಇರುವ ಶೇಕ್ ನೂರು ದ್ದೀನ್ ಚಿಸ್ತಿಯ ಸಿಸುಮಗನೆಂದೂ ಅವನ ದರ್ಗಾದೆದುರು ತಪಸ್ಸು ಕುಳಿತಿದ್ದರೆಂದೂ ಜನ ಒಂದು ಜಾಗ ತೋರಿಸುತ್ತಾರೆ. ಶಂಬಾ ಪ್ರಕಾರ "ಆಧುನಿಕ ಕಾಲದಲ್ಲಿ ದತ್ತನ ಅವತಾರವೆಂದೇ ನಂಬಿದ್ದ ಅಕ್ಕಲಕೋಟೆಯ ಸ್ವಾಮಿಗಳು ಯಾವುದೇ ಜಾತಿಯವರ ಮನೆಯಲ್ಲಿ ಊಟ ಮಾಡುತ್ತಿದ್ದರು. ಮಸೀದಿಗಳಿಗೆ ಪ್ರಾರ್ಥನೆಗೆ ಹೋಗುತ್ತಿದ್ದರು. ಮಡಿ ಮೈಲಿಗೆಯ ವಿಧಿ ನಿಷೇಧಗಳು ಅವರಲ್ಲಿ ಇರಲಿಲ್ಲ. ನಿರಂಜನ ಅವಲಿಯಾ ಎಂದೇ ಅವರ ಪ್ರಸಿದ್ಧಿ ಇತ್ತು." (ಮರ್ಹಾಠಿ ಸಂಸ್ಕೃತಿ ಪು. ೨೨೫) ಅವರ ಈ ಹಿನ್ನೆಲೆಯಲ್ಲಿ ದತ್ತಪೀಠ ಸೂಫಿದರ್ಗಾ ನಾಥಮಠಗಳು ಜತೆಜತೆಯಲ್ಲಿ ಇರುವುದು ಸಹಜವಾಗಿದೆ.

ನಾಥಪಂಥ ಹಾಗೂ ದತ್ತಪಂಥ

ನಾಥಪಂಥದ ಮೇಲೆ ರಾ ಚಿಂ ಢೇರೆಯವರು ತಮ್ಮ ಕೃತಿಯ ಕೊನೆಗೆ ಹೇಳುವ ಸಾರರೂಪಿಯಾದ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು:

೧. ಪರಿಶುದ್ಧವಾದ ಆಧ್ಯಾತ್ಮಿಕ ಸಾಧನೆಯು ದೇಶ ಕಾಲ ಧರ್ಮ ವಂಶ ಜಾತಿ ಭಾಷಾ ಈ ಎಲ್ಲ ಭೇದಗಳಿಗೆ ಅತೀತವಾಗಿರುತ್ತದೆ ಎಂಬುದನ್ನು ಗೋರಖನಾಥನು ತನ್ನ ಸಂಪ್ರದಾಯದ ಮೂಲಕ ಸಕಲರಿಗೂ ಮನವರಿಕೆ ಮಾಡಿಕೊಟ್ಟನು. ಗೋರಖನು ಒಂದೆಡೆ ಒಬ್ಬ ಖಾಜಿಯನ್ನು ಉದೇಶಿಸಿ ಹೇಳಿದ್ದಾನೆ. 'ಏ ಖಾಜಿ, ನೀನು ಬರೇ ಮಹಮ್ಮದ ಮಹಮ್ಮದ ಎಂದು ಜಪ ಮಾಡಬೇಡ. ಮಹಮ್ಮದನನ್ನು ಅರಿತುಕೊಳ್ಳುವುದು ತುಂಬಾ ಕಠಿಣ. ಮಹಮ್ಮದನ ಕೈಯಲ್ಲಿರುವ ಚೂರಿ ಲೋಹದ್ದಲ್ಲ. ಪ್ರೇಮದ್ದು'. ಗೋರಖನ ಶಿಷ್ಯರಲ್ಲಿ ಹಿಂದೂ ಮುಸಲ್ಮಾನ ಇಬ್ಬರೂ ಇದ್ದರು. ಬಾಬಾರತನ ಹಾಜಿ ಪೇಶಾವರ ಈತನು ಗೋರಖನ ಪ್ರಮುಖ ಮುಸ್ಲಿಂ ಅನುಯಾಯಿ ಯಾಗಿದ್ದನು. ಅವನು ನಾಥಸಂಪ್ರದಾಯದ ಪ್ರಸಾರ ವನ್ನು ವಾಯುವ್ಯ ಭಾರತ ಮತ್ತು ಕಾಬೂಲದವರೆಗೆ ಮಾಡಿದನು. ಇಂದಿಗೂ ಕಾಬೂಲಿನ

ಹಾಲವೇರಿ ಮಠದ ಪೀರ್ ಸೋಮನಾಥ್ ಅವರೊಂದಿಗೆ ಪ್ರೊ॥ ರಹಮತ್ ತರೀಕೆರೆ

ಜೋಗಿಗಳು ಬಾಬಾರತನ ಹಾಜಿಯ ಫಕೀರರೆಂದು ಗುರುತಿಸಲ್ಪಡುತ್ತಾರೆ. ಈ ರತನ ಹಾಗೂ ರೋರಖನ ಭೆಟ್ಟಿಯು ದಕ್ಷಿಣದ ಗೋದಾವರಿ ತೀರದಲ್ಲಿ ಆಯಿತು. ರತನ ಹಾಜಿಯು ಹಾವುದೋ ಮಹಮ್ಮದನೆಂಬ ಬಾದಶಹನಿಗೆ ಹಿಂದು ಮುಸ್ಲಿಂ ಅನುರೋಧಕ್ಕಾಗಿ ಕಾಫಿರಬೋಧ ಎಂಬ ಗ್ರಂಥ ಬರೆದನು.

ಜಿಸಪಾಣೀಸೆ ಕುಲ ಆಲಂ ಉತಪಾನಾ ।
ತೆ ಹಿಂದೂ ಬೋಲಿಯೇ ಕಿ ಮುಸಲ್ಮಾನಾ ॥
ಹಿಂದೂ ಮುಸ್ಲಿಂ ಖಿದಾಯಿಕೆ ಬಂದೆ ।
ಹಂ ಜೋಗಿ ನ ರಖೇ ಕಿಸ ಹಿಕೆ ಛಂದೇ ॥

(ಹಿಂದೂ ಮುಸ್ಲಿಂ ಬೇರೆಬೇರೆ ಎಂದು ತಿಳಿಯಬೇಕಿಲ್ಲ. ಯಾಕೆಂದರೆ ಯಾವ ಬಿಂದುವಿನಿಂದ ಹಿಂದು ಮುಸ್ಲಿಮರು ನಿರ್ಮಾಣಗೊಂಡರೋ ಅವನು ಹಿಂದೂ ಅಲ್ಲ. ಮುಸ್ಲಿಮನೂ ಅಲ್ಲ. ಹಿಂದೂ ಮುಸ್ಲಿಮರೆಲ್ಲ ದೇವರ ಸೇವಕರು. ನಾವು ಜೋಗಿಗಳು. ಈ ಬೇಧವನ್ನು ಒಪ್ಪುವುದಿಲ್ಲ.)

ಇದು ಬಾಬಾರತನ ಹಾಜಿಯ ಕಾಫಿರಬೋಧದ ಆಶಯವಾಗಿದೆ. ರತನಹಾಜಿ ಹಲವು ಮುಸಲ್ಮಾನರಿಗೆ ನಾಥಪಂಥದ ದೀಕ್ಷೆ ನೀಡಿದನು. ನಾಥಪಂಥದ ರಾವಳ ಶಾಖೆಯಲ್ಲಿ ಇಂದಿಗೂ ಮುಸಲ್ಮಾನರ ಸಂಖ್ಯೆಯಿದೆ. ಧರ್ಮನಾಥ ಪರಂಪರೆಯಲ್ಲಿ ಪೀರ ಎಂಬ ಮುಸಲ್ಮಾನ ಜೋಗಿಗಳ ಒಂದು ವರ್ಗವಿದೆ. ನೇಕಾರ ವೃತ್ತಿಯನ್ನು ಮಾಡುವ ಗೃಹಸ್ಥಯೋಗಿಗಳ ಜುಗಿ ಜಾತಿಯಲ್ಲಿ ಪ್ರಮುಖ ಮುಸಲ್ಮಾನರಿದ್ದಾರೆ. ಇಂಥದೇ ಜುಗಿ ಜಾತಿಯಲ್ಲಿ ಸಂತ ಕಬೀರನ ಜನ್ಮವಾಯಿತು. ಕಬೀರ ನಾನಕ ಇವರಿಗೆ ಹಿಂದೂ ಮುಸ್ಲಿಂ ಐಕ್ಯದ ಪ್ರೇರಣೆ ಸಿಕ್ಕಿದ್ದು ನಾಥಸಂಪ್ರದಾಯದಿಂದ. (ನಾಥಪಂಥದ ಇತಿಹಾಸ ಪು. ೨೩೮ ೨೩೯)

೨. ಹಿಂದು ಮುಸ್ಲಿಂ ಐಕ್ಯದ ಮೊದಲ ಪ್ರಣೇತಾ ಅಧಃ ಪತನಗೊಂಡ ಭಾರತೀಯ ಸಾಧನೆಯ ಉದ್ಧಾರಕ, ಸ್ತ್ರೀಶೂದ್ರ ರಕ್ಷಕ, ಜಾನಪದ ಭಾಷೆಯ ಪ್ರಥಮ ಪುರಸ್ಕೃತ ಮತ್ತು ವರ್ಣಾಶ್ರಮ ಶಬ್ದಪ್ರಾಮಾಣ್ಯ ತೀರ್ಥಯಾತ್ರೆ ವ್ರತನೇಮಾದಿಕರ್ಮಕಾಂಡದಿಂದ ತುಂಬಿ ತುಳುಕಿದ ಚೈತನ್ಯಹೀನ ಸರ್ವಸಾಧಾರಣ ಸಮಾಜಕ್ಕೆ ಆತ್ಮ ಪ್ರಾಮಾಣ್ಯದ ಹಾದಿ ತೋರಿಸುವ ಗುರುಗೋರಕ್ಷನಾಥ ಹಾಗೂ ಅವನ ನಾಥಸಂಪ್ರದಾಯವು ಭಾರತೀಯ ಸಾಧನೆಯ ಇತಿಹಾಸದಲ್ಲಿ ಚಿರಂತನವಾಗಿ ಉಳಿದಿದೆ. (ನಾಥಪಂಥದ ಇತಿಹಾಸ ಪು. ೨೪೧)

೩. "ಕಂನಾಡಿನ ಉತ್ತರ ಮೇರೆಯಲ್ಲಿ ೧೫ನೇ ಶತಮಾನದ ಸುಮಾರಿಗೆ ವಿಶೇಷ ಪ್ರಚಾರದಲ್ಲಿ ಬಂದ ದತ್ತಸಂಪ್ರದಾಯದ ಮೇಲೆ ನಾಥಪಂಥದ ಪರಿಣಾಮವು ಬಹಳವಾಗಿದೆ. ಇದಕ್ಕೆ ಅವಧೂತ ಮಾರ್ಗವೆಂದು ಹೇಳುವರು. ಇದು ಮುಖ್ಯವಾಗಿ 'ಯತಿ'ಪಂಥವು. ಯತಿ ಸಂಪ್ರದಾಯವು ವೇದಗಳಿಗೆ ಅಷ್ಟು ಸಮ್ಮತವಲ್ಲವೆಂದು ಈ ಮೊದಲೆ ಸೂಚಿಸಿದೆ. ಹೀಗಿದ್ದೊಂದು ಎರಡು ಸಂಸ್ಕೃತಿಗಳ ಕೂಡಲಸಂಗಮ. ಇದರಲ್ಲಿ ಮುಸಲ್ಮಾನ ಧರ್ಮದ ಬಾವಾ ಫಕೀರ ವೃತ್ತಿಯ ಛಾಯೆಯೂ ಕಾಣಿಸಿಕೊಳ್ಳುವುದು."
(ಶಂಬಾ ಜೋಶಿ, ಏಡೆಗಳು ಹೇಳುವ ಕಂನಾಡಕತೆ, ಪು. ೨೨೭)

'ಯತಿಪಂಥ' ಎಂದರೇನು? ಶಂಬಾ ಪ್ರಕಾರ ವೇದಪ್ರಮಾಣವನ್ನು ಒಪ್ಪದ ಜಾತಿ ವ್ಯವಸ್ಥೆಯನ್ನು ನಿರಾಕರಿಸುವ ಸನ್ಯಾಸ ಪಂಥಕ್ಕೆ ಯತಿಪಂಥ ಎಂದು ಹೆಸರು. ಇದಕ್ಕೆ ವಿರುದ್ಧವಾಗಿ ವೇದಪ್ರಮಾಣವನ್ನು ಒಪ್ಪುವ ವರ್ಣಾಶ್ರಮವನ್ನು ನಂಬುವ ಬ್ರಾಹ್ಮಣ ಋಷಿಪಂಥ ವೊಂದು ಇತ್ತು. ಸಹಜವಾಗಿ ಯತಿಪಂಥಕ್ಕೂ ಋಷಿ ಪಂಥಕ್ಕೂ ಸಂಘರ್ಷ ಶುರುವಾಯಿತು. ಋಷಿಪಂಥದ ಸಮರ್ಥಕನಾದ ಇಂದ್ರನು ಯತಿಗಳನ್ನು ಸಂಹರಿಸಿ ಅವರ ಮಾಂಸವನ್ನು ತೋಳಗಳಿಗೆ ಹಾಕುವ ವರ್ಣನೆ ವೇದಗಳಲ್ಲಿ ಬರುತ್ತವೆ. ಇವು ಈ ಋಷಿಯತಿಗಳ ಸಂಘರ್ಷಗಳನ್ನೇ ಸೂಚಿಸುತ್ತವೆ. ಕೊನೆಗೂ ಯತಿಪಂಥವನ್ನು ಸಂಪ್ರದಾಯ ವಾದಿ ಋಷಿಪಂಥವು ಸೋಲಿಸಲಾಗಲಿಲ್ಲ. ಬದಲಿಗೆ ಅದು ತನ್ನಲ್ಲಿ ಯತಿಮಾರ್ಗವನ್ನು ಅಳವಡಿಸಿಕೊಂಡಿತು. ಇದರ ಫಲವೇ ದತ್ತಪಂಥ ಹಾಗೂ ದತ್ತಪಂಥದ ಯತಿಗಳು. ನಾಥಪಂಥವು ಬೌದ್ಧರ ಯೋಗ ಮತ್ತು ಶೂನ್ಯಕಲ್ಪನೆ ಯನ್ನು ಸೇರಿಸಿಕೊಂಡು ಹುಟ್ಟಿದಂತೆ, ದತ್ತಪಂಥವು ಬೌದ್ಧ ವೈದಿಕ ಸೂಫಿ ನಾಥ ಸತ್ವಗಳನ್ನೆಲ್ಲ ಅರಗಿಸಿಕೊಂಡು ಮೂಡಿತು. ಇದರ ಫಲವಾಗಿ ದತ್ತಾತ್ರೇಯನು ಸೂಫಿಸಂತನ ರೂಪದಲ್ಲಿ ಭಕ್ತರಿಗೆ ದರ್ಶನ ನೀಡುವ ಕತೆಗಳು ಹುಟ್ಟಿದವು. ಇದರ ಫಲವಾಗಿಯೇ ದತ್ತಾತ್ರೇಯನು ನವನಾಥರಿಗೆ ಬೋಧೆ ಕೊಡುವ ಕತೆಗಳು ಹುಟ್ಟಿಕೊಂಡವು. ಮರಾಠಿಯ 'ನವನಾಥ ಕಥಾಸಾರ'ದಲ್ಲಿ ನಾಥಪಂಥದ ಮತ್ಸ್ಯೇಂದ್ರನಾಥ ಗೋರಖ ನಾಥರಿಗೆ ಸ್ವಯಂ ದತ್ತಾತ್ರೇಯನೇ ಗುರುಮಂತ್ರ ಕಲಿಸುವ ವರ್ಣನೆಗಳಿವೆ. ಆದರೆ ಚಾರಿತ್ರಿಕವಾಗಿ ೧೦ನೇ ಶತಮಾನ ದಷ್ಟು ಪ್ರಾಚೀನವಾದ ನಾಥಪಂಥವು ೧೫ನೇ ಶತಮಾನ ದಲ್ಲಿ ಹುಟ್ಟಿದ ದತ್ತಪಂಥದ ಮೇಲೆ ಪ್ರಭಾವ ಬೀರಿತು ಎನ್ನುವುದೇ ವಾಸ್ತವ ಸಂಗತಿ.

ಮಹಾರಾಷ್ಟ್ರದಲ್ಲಿ ದತ್ತ ನಾಥ ಸೂಫಿ ಸಂತರಲ್ಲಿ ಬಹಳ ವ್ಯತ್ಯಾಸವಿರಲಿಲ್ಲ. ನಾಥಗುರುಗಳ ಹೆಸರಲ್ಲಿ ಪೀರ್ (ಸೂಫಿಗುರು) ಎಂಬುದು ಸಾಮಾನ್ಯ. ಬೆಳಗಾವಿಯ ಹಂಡಿಬಡಗನಾಥ ಮಠದ ನಾಥಗುರುವಿನ ಹೆಸರು ಪೀರ್ ಸಿಧನಾಥ್. ಕುಂದಾಪುರ ಹಲವೇರಿ ಮಠದ ಗುರುವಿನ ಈಗಿನ ಹೆಸರು ಪೀರ್ ಸೋಮನಾಥಜಿ; ಢೇರೆಯವರು ಹೇಳುವ ವಿವರಣೆಗೆ ಇದು ಸರಿಯಾಗಿದೆ. ಕರ್ನಾಟಕದಲ್ಲಿರುವ ಹಂಡಿಬಡಗನಾಥನು ಕಾಬೂಲಿನಿಂದ ಬಂದವನು. ಅವನು ನಾಥದೀಕ್ಷೆ ಪಡೆದ ಮುಸ್ಲಿಮ್ ದೊರೆ.

ಶಂಬಾ ಪ್ರಕಾರ ವೇದಪ್ರಮಾಣವನ್ನು ಒಪ್ಪದ ಜಾತಿ ವ್ಯವಸ್ಥೆಯನ್ನು ನಿರಾಕರಿಸುವ ಸನ್ಯಾಸ ಪಂಥಕ್ಕೆ ಯತಿಪಂಥ ಎಂದು ಹೆಸರು. ಇದಕ್ಕೆ ವಿರುದ್ಧವಾಗಿ ವೇದಪ್ರಮಾಣವನ್ನು ಒಪ್ಪುವ ವರ್ಣಾಶ್ರಮವನ್ನು ನಂಬುವ ಬ್ರಾಹ್ಮಣ ಋಷಿಪಂಥವೊಂದು ಇತ್ತು. ಸಹಜವಾಗಿ ಯತಿಪಂಥಕ್ಕೂ ಋಷಿ ಪಂಥಕ್ಕೂ ಸಂಘರ್ಷ ಶುರುವಾಯಿತು. ಕೊನೆಗೂ ಯತಿಪಂಥವನ್ನು ಸಂಪ್ರದಾಯವಾದಿ ಋಷಿಪಂಥವು ಸೋಲಿಸಲಾಗಲಿಲ್ಲ. ಬದಲಿಗೆ ಅದು ತನ್ನಲ್ಲಿ ಯತಿಮಾರ್ಗವನ್ನು ಅಳವಡಿಸಿಕೊಂಡಿತು.

ಸೂಫಿ ದತ್ತ ನಾಥ ಮಹಾನುಭಾವ, ವಾರಕರಿಪಂಥಗಳೆಲ್ಲ ಉತ್ತರಭಾರತದಲ್ಲಿ ಮಿಲನಗೊಂಡು ಕರ್ನಾಟಕದತ್ತ ಬಂದಿರಬೇಕು. ಇಲ್ಲಿಗೆ ಬಂದ ಮೇಲೂ ಮಿಲನಗೊಂಡಿರಬಹುದು.

ಈ ಪಂಥದ ಸಂತರ ಲಕ್ಷಣವೇ ದಟ್ಟವಾದ ಅಡವಿ ಹಾಗೂ ಗುಹೆಗಳಲ್ಲಿ ಬದುಕುವುದು. ಹಂಡಿಬಡಗನಾಥವು ದಟ್ಟ ಅರಣ್ಯದಲ್ಲಿದೆ. ಬಾಬಾಬುಡನ ಗಿರಿ ಪರ್ವತಶ್ರೇಣಿಯ ಈ ಗುಹೆಗಳು ಅವರಿಗೆ ಉಪಯುಕ್ತವಾಗಿ ಕಂಡವು. ಎಂತಲೇ ಬಾಬಾಬುಡನಗಿರಿ ಪರಿಸರದಲ್ಲಿ ಸೂಫಿದರ್ಗಾ, ಕಾಪಾಲಿಕ ಶೈವಮಠ, ಭೈರವಾರಾಧನೆ ಹಾಗೂ ದತ್ತಪೀಠಗಳು ಆಸುಪಾಸಿನಲ್ಲಿ ನೆಲೆಸಿದವು. ಇದರ ದಕ್ಷಿಣಕ್ಕೆ ಘಟ್ಟದ ಕೆಳಗೆ ಪ್ರಸಿದ್ಧ ನಾಥಕೇಂದ್ರದ ಮಂಗಳೂರಿನ ಕದ್ರಿಯ ಮಠವಿದೆ. ಪೂರ್ವಕ್ಕೆ ಚುಂಚನಗಿರಿ ಮಠವಿದೆ. ದತ್ತನಾಥ ಪಂಥಕ್ಕೂ ಭೈರವಾರಾಧನೆಗೂ ಸಂಬಂಧವಿದೆ. ನಾಥಪಂಥದ ದೈವವಾದ ಭೈರವರಾಧನೆಯು ಈ ಪ್ರದೇಶದಲ್ಲಿ ವಿಶೇಷವಾಗಿದೆ. ಚಿಕ್ಕಮಗಳೂರು ಪರಿಸರದಲ್ಲಿ ಅಪಾರ ಸಂಖ್ಯೆಯ ಭೈರವ ಹೆಸರಿನ ಗುಡಿಗಳೂ ಊರುಗಳೂ ಇರುವುದನ್ನು ಗಮನಿಸಬೇಕು. ನಗ್ನಮೂರ್ತಿಯಾದ ಭೈರವನು ಪಕ್ಕಾ ಅವೈದಿಕ ದೇವತೆ. ಇವನ ಬಳಿಯೂ ದತ್ತಾತ್ರೇಯನ ಬಳಿ ಇರುವಂತೆ ನಾಯಿ ಇದೆ. ಭೈರವನ ಕೈಯಲ್ಲಿ ವೀರಭದ್ರನ ಮೂರ್ತಿಯಲ್ಲಿ ಬ್ರಹ್ಮವಿರೋಧಿ ಗುರುತಿರುವಂತೆ, ಬ್ರಹ್ಮಶಿರವಿದೆ.

ಮೂಡಿಗೆರೆ ಸಕಲೇಶಪುರ ಚಿಕ್ಕಮಗಳೂರು ಸಕಲೇಶ ಪುರ ಬೇಲೂರು ಮೂಡಿಗೆರೆಗಳ ಘಟ್ಟಪ್ರದೇಶದಲ್ಲಿರುವ ಒಕ್ಕಲಿಗರು ಮೂಲದಲ್ಲಿ ಭೈರವಾರಾಧಕರು. ನಾಥಶೈವ ಸಂಪ್ರದಾಯಕ್ಕೆ ಸೇರಿದವರು. ಈ ಬಗೆಗಿನ ವಿವರಗಳನ್ನು ಮಾಕೋನಹಳ್ಳಿ, ದೊಡ್ಡಪ್ಪಗೌಡರು ತಮ್ಮ 'ಪಾಶುಪತ ಶೈವರು ಮತ್ತು ಗೌಡಸಮಾಜ' ಎಂಬ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಬಾಬಾಬುಡನಗಿರಿ ಪರಿಸರದಲ್ಲಿ ಇರುವ ನಿರ್ವಾಣಸ್ವಾಮಿ, ಭಿಸಗ್ನಿಸಿದ್ಧೇಶ್ವರ, ಮುಳ್ಳಯ್ಯಸ್ವಾಮಿ ಇವರೆಲ್ಲ ಅವಧೂತರು. ಮುಳ್ಳಯ್ಯನಗಿರಿಯಲ್ಲೂ ಗುಹೆಯಿದೆ. ನಿರ್ವಾಣಸ್ವಾಮಿ ಮಠದ ಮುಂದೆ ಒಬ್ಬ ಜೋಗಿ ಕಿನ್ನರಿ ಹಿಡಿದು, ಬ್ರಹ್ಮನ ರುಂಡಹಿಡಿದು ನಿಂತಿರುವ ಮೂರ್ತಿಯಿದೆ. ಇವೆಲ್ಲವೂ ಇಡೀ ಬಾಬಾಬುಡನಗಿರಿ ಪರಿಸರವು ವೈದಿಕ ವಿರೋಧಿಯಾದ ನಾಥ ಸೂಫಿ ದತ್ತ ಮುಂತಾದ ಗುರುಪಂಥಗಳಿಂದ ಕೂಡಿದ ಪ್ರದೇಶವೆಂದು ಸೂಚಿಸುತ್ತವೆ.

ದತ್ತಪಂಥ ಹಾಗೂ ಅವೈದಿಕತೆ

ಈ ಎಲ್ಲ ಗುರುಪಂಥಗಳ ಮುಖ್ಯ ಲಕ್ಷಣವೆಂದರೆ ಗುರುವಿನ ಭಕ್ತಿ. ಗುರುವಿನ ಸಮಾಧಿ ಪೂಜೆ. ಶವವನ್ನೂ ಶವಕ್ಕೆ ಸಂಬಂಧಿಸಿದ ಸ್ಮಶಾನ ಮುಂತಾದ ಎಲ್ಲವನ್ನೂ ಅಪವಿತ್ರ ಎಂದು ಪರಿಗಣಿಸುವ ವೈದಿಕ ಸಂಸ್ಕೃತಿಗೆ ಇದು ವಿರುದ್ಧ. ಮಂಗಳೂರಿನ ಕದ್ರಿಯು ನಾಥಗುರುಗಳ ದೇಹತ್ಯಾಗ ಮಾಡುವ ತಾಣವೂ ಆಗಿದೆ. ಈ ಕದರಿವನವೂ ಶ್ರೀಶೈಲದ ಕದಳಿವನವೂ ಮೂಲತಃ ಒಂದೇ. ಶ್ರೀಶೈಲವು ನಾಥ ಬೌದ್ಧ ವಜ್ರಾಯಾನ ರಸಸಿದ್ಧ ಮುಂತಾದ ಅವೈದಿಕ ಪಂಥಗಳ ಚಟುವಟಿಕೆಗಳ ತಾಣ. ಗಾಣಗಾಪುರದ ನರಸಿಂಹ ಸರಸ್ವತಿಯು ದೇಹತ್ಯಾಗಕ್ಕಾಗಿ ಶ್ರೀಶೈಲದ ಕದಳಿವನಕ್ಕೆ ಹೋಗುವುದು ಗಮನಾರ್ಹ. ೧೨ನೇ ಶತಮಾನದ ಶಿವಶರಣೆ ಅಕ್ಕಮಹಾದೇವಿ ಹಾಗೂ ನಾಥಪರಂಪರೆಯಲ್ಲಿ

ಕಾಣಿಸಿಕೊಳ್ಳುವ ಅಲ್ಲಮಪ್ರಭುವೂ ದೇಹತ್ಯಾಗ ಮಾಡಲು ಇದೇ ಕದಳಿವನಕ್ಕೆ ಹೋಗುತ್ತಾರೆ. ಮಂಗಳೂರಿನ ಕದ್ರಿ ಬೆಟ್ಟದಲ್ಲಿರುವ ಮಂಜುನಾಥ ಗುಡಿಯು ಮೂಲತಃ ಬೌದ್ಧ ವಜ್ರಾಯಾನ ಪಂಥಕ್ಕೂ ನಾಥಪಂಥಕ್ಕೂ ಕೇಂದ್ರವಾಗಿತ್ತು. ಈಗಲೂ ಕದ್ರಿಯ ಮಂಜುನಾಥ ದೇವಸ್ಥಾನದೊಳಗೆ ಬುದ್ಧ ಅವಲೋಕಿತೇಶ್ವರನ ವಿಗ್ರಹವೂ, ಮೂರೂ ದಿಕ್ಕುಗಳಲ್ಲಿ ನಾಥಪಂಥದ ಯೋಗಿಗಳಾದ ಮತ್ಸ್ಯೇಂದ್ರನಾಥ ಗೋರಖನಾಥ ಹಾಗೂ ಚೌರಂಗಿನಾಥರ ಆಳೆತ್ತರದ ವಿಗ್ರಹಗಳೂ ಇವೆ. ಗುಡಿಯ ಪಕ್ಕದಲ್ಲಿ ನವನಾಥರ ಹೆಸರಿನಲ್ಲಿ ೯ ಕೊಳಗಳಿವೆ. ಇವುಗಳ ಮೇಲಿರುವ ಗೋಡೆಗಳಲ್ಲಿ ದತ್ತಾತ್ರೇಯನ ಚಿತ್ರವಿದೆ. ಕದ್ರಿಬೆಟ್ಟದಲ್ಲಿ ಒಬ್ಬ ಸೂಫಿಯ ದರ್ಗಾ ಕೂಡ ಇದೆ.

ಆದರೆ ಶತಮಾನಗಳಿಂದ ನಾಥಸಂಪ್ರದಾಯದ ಗುಡಿಯಾಗಿದ್ದ ಕದ್ರಿಯ ಮಂಜುನಾಥ ದೇವಸ್ಥಾನವನ್ನು ವೈದಿಕರು ಕಸಿದುಕೊಂಡರು. ಅದನ್ನು ವಶಪಡಿಸಿಕೊಂಡ ಮೇಲೆ, ಆಗಮೋಕ್ತವಾದ ಪೂಜೆಯನ್ನು ಜಾರಿತಂದು ಅದನ್ನು ಇಡಿಯಾಗಿ ವೈದಿಕಗೊಳಿಸಿದರು. ಮಾತ್ರವಲ್ಲ ಕದ್ರಿಮಠದ ನಾಥಪಂಥದ ಗುರು ಟೆಹಲನಾಥರು ಕದ್ರಿ ಮಂಜುನಾಥನ ಪೂಜೆಯ ಹಕ್ಕಿಗಾಗಿ ಸಲ್ಲಿಸಿದ್ದ ಮೊಕದ್ದಮೆಯನ್ನು ವಿಚಾರಣೆ ಮಾಡಿದ ನ್ಯಾಯಮೂರ್ತಿ ಶ್ರೀಮುಂಡಪ್ಪ ಬಂಗೇರ ಅವರು ಗರ್ಭಗುಡಿ ಪರಿಶೀಲಿಸದೆ ತೀರ್ಪುಕೊಡುವುದಿಲ್ಲ ಎಂದು ಗುಡಿಪ್ರವೇಶ ಮಾಡಿದಕ್ಕೆ ಬ್ರಹ್ಮಕಲಶೋತ್ಸವ ಮಾಡಿ (ಮೇ ೭, ೧೯೧೬) ಶುದ್ಧೀಕರಿಸಿದರು. ಇದನ್ನು ಜೋಗಿ ಆನಂದನಾಥರು ತಮ್ಮ ನಾಥಪಂಥಕ್ಷೇತ್ರ ಜೋಗಿಮಠ ಕದಲಿ ಎಂಬ ಕೃತಿಯಲ್ಲಿ ಬರೆದಿದ್ದಾರೆ. (೨೦೦೩, ಪು.೪೨)

ಶೂದ್ರಮಾಂಸಾಹಾರ, ಪ್ರಾಣಿಬಲಿ, ಅವೈದಿಕ ದೇವತೆಗಳಾದ ಭೈರವ ವೀರಭದ್ರರಿಂದಲೂ, ಕೆಳಜಾತಿ ಭಕ್ತರಿಂದಲೂ ತುಂಬಿಹೋಗಿರುವ ಗಿರಿಯಲ್ಲಿ ಬ್ರಾಹ್ಮಣ ಪುರೋಹಿತರ ಮೂಲಕ ಮಾಡಿಸಲಾಗುತ್ತಿರುವ ಯಾಗ ಹೋಮಗಳು ಮೂಲತಃ ಈ ಪಂಥಗಳ ಮೂಲಸ್ವರೂಪಕ್ಕೆ ವಿರುದ್ಧವಾದವು. ಎಂತಲೇ ಹೇಳಿದ್ದು ಸಂಘಪರಿವಾರವು ತನ್ನದಲ್ಲದ ಆಹಾರವನ್ನು ತನ್ನದು ಎಂದು ನುಂಗುತ್ತಿದೆ ಎಂದು. ಬುದ್ಧನನ್ನು ದಶಾವತಾರ ಮಾಡಿದ ಸಂಸ್ಕೃತಿಗೆ ಇದು ಅಸಹಜವಲ್ಲ.

ಮೂಲತಃ ದತ್ತ ನಾಥ ಪಂಥಗಳ ಲಕ್ಷಣವೆಂದರೆ ಅವೈದಿಕತೆ. ಅಂದರೆ ಜಾತಿಭೇದವನ್ನು ಧಿಕ್ಕರಿಸುವುದು. ಯಜ್ಞಯಾಗ ಮಾಡದಿರುವುದು, ಬ್ರಾಹ್ಮಣ ಶ್ರೇಷ್ಠತೆಯನ್ನು ಒಪ್ಪದಿರುವುದು. ಎಂತಲೆ ನಾಥ ಹಾಗೂ ದತ್ತಪಂಥಗಳಲ್ಲಿ ಅನೇಕ ಮುಸ್ಲಿಮರೂ ದಲಿತರೂ ಗುರುಗಳಾಗಿದ್ದಾರೆ. ಇವು ಮೂಲತಃ ಅವೈದಿಕ ದರ್ಶನಗಳು. ಶಂಬಾ ಹೇಗೆ 'ದತ್ತಮಾರ್ಗ'ವು ಅವೈದಿಕ ದರ್ಶನವಾಗಿದೆ ಎಂಬ ಬಗ್ಗೆ ಚರ್ಚೆ ಮಾಡುತ್ತ ಒಂದು ಮೂಲಭೂತವಾದ ಪ್ರಶ್ನೆಯನ್ನು ಎತ್ತುತ್ತಾರೆ. ಪುರಾಣಕತೆಯ ಪ್ರಕಾರ ದತ್ತಾತ್ರೇಯನು ವಿಷ್ಣುವಿನ ಅವತಾರ. ತ್ರಿಮೂರ್ತಿಗಳ ಅಂಶಗಳನ್ನು ಒಳಗೊಂಡ ದೇವತೆ. ಆದರೆ ದತ್ತಪಂಥದ ಗುರುವಾಗಿರುವ ದತ್ತಾತ್ರೇಯನ ಸುತ್ತ ನಾಲ್ಕು ನಾಯಿಗಳು ಹೇಗೆ ಬಂದವು? ಇದೇ ಆ ಪ್ರಶ್ನೆ.

"ಈ ನಾಲ್ಕು ನಾಯಿಗಳನ್ನು ಕಂಡಾಗ ದತ್ತಾತ್ರೇಯ ವೈದಿಕ ಸಂಪ್ರದಾಯದ ದೇವತೆ ಹೇಗೆ ಎಂದು ಸಂಶಯ ಸುಳಿಯುತ್ತದೆ. ನಾಯಿ ಎಂದರೆ ವೈದಿಕರಿಗೆ ಮೆಚ್ಚಿಗೆಯಲ್ಲದ ಪ್ರಾಣಿ. ಅದನ್ನು ಮುಟ್ಟಿದರೆ ಸಚೈಲ ಸ್ನಾನ ಮಾಡಬೇಕೆಂದು ಧರ್ಮಸೂತ್ರದ ಆಜ್ಞೆಯಿದೆ.

ಶ್ವಾನಾ ದೃಷ್ಟಸ್ತು ಯೋ ವಿಪ್ರೋ ನದೀಂ ಗತ್ವಾ ಸಮುದ್ರಾಗಾಂ ।
ಪ್ರಾಣಾಯಾಮಶತಂ ಕೃತ್ವಾ ಧೃತಂ ಪ್ರಾಪ್ಯ ವಿಶುದ್ಧತಿ ॥
ಸುವರ್ಣ ರಜತಾಭ್ಯಾಂ ವಾ ಗವಾಂ ಶೃಂಗೋದಕೇನ ವಾ ।
ನವೈಶ್ಚ ಕಲಶೈಸ್ನಾತ್ವಾ ಸದ್ಯ ಏವ ಶುಚಿರ್ಭವೇತ್ ॥

(ಬೌಧಾಯನ ಧರ್ಮಸೂತ್ರ ೧೨೪-೧೨೫)

ನಾಯಿಯಂಥ ಅಪವಿತ್ರ ಪ್ರಾಣಿಯನ್ನು ಹತ್ತಿರವಿಟ್ಟುಕೊಂಡ ದೇವರು, ಅದರಲ್ಲೂ ಸನ್ಯಾಸಿ ಇದು ವೈದಿಕ ಮಾರ್ಗವಾಗಿರುವುದು ಸಾಧ್ಯವೇ? ದತ್ತನ ಚಿತ್ರದಲ್ಲಿರುವ ನಾಯಿಗಳು ನಾಯಿಗಳೇ ಅಲ್ಲ, ನಾಯಿ ರೂಪದಿಂದ ವೇದಗಳು ದತ್ತನನ್ನು ಅನುಸರಿಸುತ್ತವೆಂದು ಹೇಳಲಾಗುತ್ತದೆ... ಧೀಉಪಾಸಕರಾದ ವೈದಿಕ ಮತದ ವೇದಗಳೆ ಅನಯಾಯಿಗಳಾಗಿ ಅವಧೂತ ನಿರಂಜನನಾದ ದತ್ತನ ಹಿಂದೆ ನಾಯಿಗಳಂತೆ ಅನುಸರಿಸಿದವು ಎಂಬ ಪ್ರತೀಕದಲ್ಲಿ ಏನೋ ವಿಶೇಷವಾದ ವ್ಯಂಗಾರ್ಥವಿದೆ.. ದತ್ತಾತ್ರೇಯ ಒಬ್ಬ ಯತಿ ಎಂಬ ಸಂಗತಿ ಸರ್ವಶ್ರುತವಾಗಿದೆ. ಆರ್ಯರ ವೈಶಿಷ್ಟ್ಯವೆಂದರೆ ಅಗ್ನಿಪೂಜೆ. ಯತಿಗಳು ನಿರಗ್ನಿಗಳು. ಅಗ್ನಿ ಎಂದರೆ ಶಿಖಿ, ಬ್ರಾಹ್ಮಣರ ಶಿಖೆ. ಶಿಖೆ ಹಾಗೂ ಜನಿವಾರ ಈ ಎರಡೂ ಪ್ರತೀಕಗಳನ್ನು ನಿರಾಕರಿಸಿ ನಿರಗ್ನಿಯನ್ನು ಸ್ವೀಕರಿಸಲು ಹೇಳುವ ಪಂಥ ವೈದಿಕವಾಗಿರುವುದು ಸಾಧ್ಯವೇ?" (ಮರ್‍ಹಾಠಿ ಸಂಸ್ಕೃತಿ ಪು.೧೯೭ - ೧೯೮)

ಶಾಂಡಿಲ್ಯ ಉಪನಿಷತ್ತಿನ ಪ್ರಕಾರ ಮೂಲತಃ ದತ್ತಪಂಥವು ಅವೈದಿಕ ದರ್ಶನ ಅಥವಾ ಪಂಥವಾಗಿದೆ. ವೈದಿಕರಾದವರು ದತ್ತೋಪಾಸನೆಯನ್ನು ಮಾಡಬಾರದು. ಆಗಮ ಶಾಸ್ತ್ರ ಯಜ್ಞ ಯಾಗಗಳ ಮೂಲಕ ದತ್ತನ ಆರಾಧನೆ ಮಾಡಬಾರದು ಎಂದು ಇದು ವಿಧಿಸುತ್ತದೆ. ದತ್ತಾವತಾರಿ ಜನಾರ್ಧನಸ್ವಾಮಿಯ ಶಿಷ್ಯನಾದ ಏಕನಾಥರು ಯಾಗವಿರೋಧಿಯಾಗಿದ್ದರು.

ಗುರುಸಂಪ್ರದಾಯ ಧರ್ಮತೇಚಿ ಜಯಾ ವರ್ಣಾಶ್ರಮ ।
ಗುರುಚೇ ನಾಮಮಾತ್ರ ತೇಚಿಆಮ್ಹಾಂ ವೇದಶಾಸ್ತ್ರ।
ಅಗ್ನಿಹೋತ್ರಾಚಾ ಸುಕಾಳ ವಟಪಿಂಪಳಾಶೀ ಕಾಳ।
ತೀನ್ಹೀದೇವ ಪಿಂಪಳಾಂತ ಅಗ್ನಿಹೋತ್ರೀಂ ಕೇಲಾಘಾತ ॥

(ಅರ್ಥ=ಗುರುಮಾರ್ಗವೇ ಧರ್ಮ. ಅದೇ ವರ್ಣಾಶ್ರಮ. ಗುರುವಿನ ನಾಮವೆ ನಮಗೆ ವೇದಶಾಸ್ತ್ರ. ಅಗ್ನಿಹೋತ್ರಿಗೆ ಪವಿತ್ರಕಾಲವೆಂದರೆ ಆಲ ಅರಳಿಗಳಿಗೆ ಸಾವು. ಅರಳಿಯಲ್ಲಿ ತ್ರಿಮೂರ್ತಿಗಳಿರುತ್ತಾರೆ. ಆದರೆ ಅಗ್ನಿಹೋತ್ರಿ ಯಾಗಕ್ಕಾಗಿ ಅದನ್ನೇ ಕಡಿಯುತ್ತಾನೆ)

ಇವೆಲ್ಲವನ್ನು ಕಂಡರೆ ದತ್ತಪಂಥವು ಯಾಗವಿರೋಧಿ, ಸನಾತನ ಬ್ರಾಹ್ಮಣ ವಿರೋಧಿಯೆಂದು ಖಚಿತವಾಗುತ್ತದೆ. ಅದು ನಾಥಪಂಥದ ಮೂಲಕ ಕೆಳಜಾತಿಗಳನ್ನೂ ಸೂಫಿಪಂಥದ ಸಹವಾಸದಿಂದ ಮುಸ್ಲಿಮರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು ಎಂದು ಗೊತ್ತಾಗುತ್ತದೆ. ಭಾರತದ ಅವಧೂತ ಸಂಸ್ಕೃತಿಯ ಪಾಲಿಗೆ ಒಂದೇ ಜಾಗದಲ್ಲಿ ದತ್ತಯತಿ ಹಾಗೂ ಸೂಫಿಗಳು ಇರುವುದು ಅಥವಾ ದರ್ಗಾಗಳಿಗೆ ಹಿಂದು ಭಕ್ತರು ಬರುವುದು ಒಂದು ವಿಶೇಷ ಸಂಗತಿಯೇ ಅಲ್ಲ. ಸಂಘಪರಿವಾರಕ್ಕೆ ಮಾತ್ರ ಇದು ಒಂದು ಭಯಂಕರ ಸಂಗತಿಯಾಗಿದೆ.

ಹಿಂದೂಗಳ ಕೈಯಲ್ಲಿ ದರ್ಗಾಗಳು !

ಬಾಬಾಬುಡನಗಿರಿಯ ಗುಹೆಯಲ್ಲಿ ದರ್ಗಾ ಹಾಗೂ ಪೀಠಗಳಿರುವುದು, ಅದರ ಆಡಳಿತ ಖಲಂದರ ಪಂಥದ ಗುರುವಿನಲ್ಲಿರುವಂತೆ, ಭಾರತದ ನೂರಾರು ದರ್ಗಾದ ಉಸ್ತುವಾರಿ ಇಡಿಯಾಗಿ ಹಿಂದುಗಳ ಕೈಯಲ್ಲಿದೆ. ಶಿರಡಿಯ ಸಾಯಿಬಾಬಾನ ದರ್ಗಾ ಇಂತಹದು. ಮುಂಬಯಿಯ ಕಲ್ಯಾಣದ ಬೆಟ್ಟದ ಮೇಲಿನ ದರ್ಗಾದಲ್ಲಿ ಈಗಲೂ ಬ್ರಾಹ್ಮಣರೆ ಅರ್ಚಕರು. ಬಿಜಾಪುರ ಬಾಗಲಕೋಟೆ ಜಿಲ್ಲೆಯ ಬೀಳಗಿಯ ಪ್ರಸಿದ್ಧ ಡೋಂಗ್ರಿಸಾಹೇಬನ ದರ್ಗಾದ ಉಸ್ತುವಾರಿ ಹಿಂದುಗಳದ್ದು. ಅವರ ಹೆಸರು ಡೋಗ್ರಿಸಾಬ್ ಕಣವಿ; ಇಳಕಲ್ಲಿನ ಮುರ್ತುಜಾಖಾದ್ರಿ

ಶಿರಹಟ್ಟಿಯ ಫಕೀರೇಶ್ವರನ ದೀಕ್ಷಾಗುರು ಬಿಜಾಪುರದ ಅಮೀನುದ್ದೀನ್ ಚಿಸ್ತಿ. ಗೋಕಾಕ್ ಸಾವಳಗಿಯ ಶಿವಲಿಂಗೇಶ್ವರ ಹಾಗೂ ಬಂದೇನವಾಜರ ಸ್ನೇಹವು ಖ್ಯಾತವಾದುದು. ಈಗಲೂ ಶಿರಹಟ್ಟಿ ಹಾಗೂ ಸಾವಳಗಿಯಲ್ಲಿ ಅಮೀನುದ್ದೀನ್ ಹಾಗೂ ಬಂದೇನವಾಜರ ಹೆಸರಲ್ಲಿ ಪರಾಕು ಕೂಗದೆ ಜಾತ್ರೆ ನಡೆಯುವುದಿಲ್ಲ. ಇದು ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆ. ಈ ವಿಶಿಷ್ಟತೆಯ ಭಾಗವಾಗಿಯೇ ಬಾಬಾಬುಡನಗಿರಿಯಲ್ಲಿ ಖಲಂದರ ಪಂಥದ ಸೂಫಿಗಳ ಹಾಗೂ ಅವೈದಿಕ ದತ್ತರ ಮಿಲನವಾಗಿದೆ. ಬಾಬಾಬುಡನಗಿರಿ ದರ್ಗಾದ ಗುರುಗಳ ಸಾಂಪ್ರದಾಯಕ ಉಡುಗೆ ಈಗಲೂ ತಿಳಿಯಾದ ಕಾವಿಯದು.

ದರ್ಗಾದ ಉಸ್ತುವಾರಿಯಲ್ಲಿ ಹೆಚ್ಚಿನವರು ಹಿಂದುಗಳು. ಕರ್ನಾಟಕದಲ್ಲಿ ಬೇರೆ ಧರ್ಮದ ಗುರುಗಳ ಜತೆ ಸೂಫಿಗಳು ಗಾಢಸ್ನೇಹ ಮಾಡಿದ್ದರು. ಅದರಲ್ಲಿ ವಾಡಿಯ ಬಾದಶಾಖಾದ್ರಿ, ಬಿಜಾಪುರದ ಅಮೀನುದ್ದೀನ್, ಗುಲಬರ್ಗಾದ ಬಂದೇನವಾಜ್ ಪ್ರಮುಖರು.

ಶಿರಹಟ್ಟಿಯ ಫಕೀರೇಶ್ವರನ ದೀಕ್ಷಾಗುರು ಬಿಜಾಪುರದ ಅಮೀನುದ್ದೀನ್ ಚಿಸ್ತಿ. ಗೋಕಾಕ್ ಸಾವಳಗಿಯ ಶಿವಲಿಂಗೇಶ್ವರ ಹಾಗೂ ಬಂದೇನವಾಜರ ಸ್ನೇಹವು ಖ್ಯಾತವಾದುದು. ಈಗಲೂ ಶಿರಹಟ್ಟಿ ಹಾಗೂ ಸಾವಳಗಿಯಲ್ಲಿ ಅಮೀನುದ್ದೀನ್ ಹಾಗೂ ಬಂದೇನವಾಜರ ಹೆಸರಲ್ಲಿ ಪರಾಕು ಕೂಗದೆ ಜಾತ್ರೆ ನಡೆಯುವುದಿಲ್ಲ. ಇದು ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆ. ಈ ವಿಶಿಷ್ಟತೆಯ ಭಾಗವಾಗಿಯೇ ಬಾಬಾಬುಡನಗಿರಿಯಲ್ಲಿ ಖಲಂದರ ಪಂಥದ ಸೂಫಿಗಳ ಹಾಗೂ ಅವೈದಿಕ ದತ್ತರ ಮಿಲನವಾಗಿದೆ. ಬಾಬಾಬುಡನಗಿರಿ ದರ್ಗಾದ ಗುರುಗಳ ಸಾಂಪ್ರದಾಯಕ ಉಡುಗೆ ಈಗಲೂ ತಿಳಿಯಾದ ಕಾವಿಯದು. ಗುಲಬರ್ಗಾ ಜಿಲ್ಲೆಯ ಗೋಗಿಯ ದರ್ಗಾದ ಗುರುಗಳೂ ಬಿಜಾಪುರದ ಅಮೀನದರ್ಗಾದ ಗುರುಗಳೂ ಕಾವಿ ಉಡುತ್ತಾರೆ. ಇದು ಸೂಫಿ ಪರಂಪರೆಯ ಸಂಕೇತವಾಗಿರುವಂತೆಯೇ ಭಾರತದ ಯೋಗಪಂಥಗಳ ಜತೆಗಿನ ಮಿಲನದ ಸಂಕೇತವೂ ಆಗಿದೆ. ಇಸ್ಲಾಮ್ ಭಾರತೀಕರಣಗೊಂಡಿರುವ ಬಹಳ ಸೂಕ್ಷ್ಮವಾದ ನೆಲೆಗಳಿವು. ಅದರಲ್ಲೂ ಚಿಸ್ತಿ ಹಾಗೂ ಖಲಂದರ್ ಪಂಥಗಳು ಅವೈದಿಕನಾಥ ದತ್ತ ಪಂಥಗಳ ಜತೆ ಗಾಢಸ್ನೇಹ ಮಾಡಿದವು ಮತ್ತು ಅತ್ಯಂತ ಭಾರತೀಕರಣಗೊಂಡಂತಹವು.

ಇದನ್ನು ಭಾರತದ ಸೂಫಿಗಳ ಮೇಲೆ ಅಧಿಕಾರಯುತ ಗ್ರಂಥಗಳನ್ನು ಬರೆದಿರುವ ರಿಜ್ವಿಯವರು ಬರೆಯುತ್ತಾರೆ. A History of Sufism in India ಕೃತಿಯಲ್ಲಿರುವ The Interaction between Medieval Hindu Mystic Tradition and Sufism ಎಂಬ ಅಧ್ಯಾಯವು ಇದರ ಬಗ್ಗೆ ವಿಸ್ತಾರವಾದ ಚರ್ಚೆಯನ್ನು ಮಾಡುತ್ತದೆ. ಬ್ರಾಹ್ಮಣ ಪುರೋಹಿತ ಶಾಹಿಯ ಆರಾಧಕರಾದ ಸಂಘಪರಿವಾರಕ್ಕೆ ಈ ಸೂಕ್ಷ್ಮ ಗೊತ್ತಾಗುವುದಿಲ್ಲ. ಅವರಿಗೆ ದತ್ತಾತ್ರೇಯನ ಹೆಸರುಳ್ಳ ಬೇಂದ್ರೆಯವರೂ ಗೊತ್ತಿಲ್ಲ. ಆದರೆ ದುಡಿಯುವ ವರ್ಗದ ಶೂದ್ರ ದಲಿತ ಜನರನ್ನು ಅವರ ಪಂಥಗಳನ್ನೂ ಸಂಸ್ಕೃತಿಗಳನ್ನು ತಮ್ಮ ರಾಜಕಾರಣಕ್ಕಾಗಿ ಆಕ್ರಮಿಸಿಕೊಳ್ಳುವ ಉಪಾಯಗಳು ಮಾತ್ರ ಗೊತ್ತು.

ಬಾಬಾಬುಡನಗಿರಿಯಲ್ಲಿರುವುದು ಇಸ್ಲಾಮೀಕರಣವೇ

ವಿಚಿತ್ರ ಎಂದರೆ ಮುಸ್ಲಿಮರು ಭಾರತೀಕರಣಗೊಳ್ಳಬೇಕು ಎಂದು ಸಂಘಪರಿವಾರ ಬೊಬ್ಬೆಹಾಕುತ್ತದೆ. ಆದರೆ ಸನಾತನವಾದಿ ಇಸ್ಲಾಮಿನ ವಿರುದ್ಧ ತಾತ್ವಿಕ ಸಂಘರ್ಷ ಮಾಡಿ, ತತ್ವಕ್ಕಾಗಿ ತಲೆದಂಡಗಳನ್ನು ಕೊಟ್ಟು, ಭಾರತೀಕರಣಗೊಂಡ ಸೂಫಿ ಪರಂಪರೆಗಳನ್ನು 'ಇಸ್ಲಾಮೀಕರಣ' ಎನ್ನುತ್ತದೆ. ಇದು ಹಿಂದುಗಳಿಗೆ ಸೇರಬೇಕು ಎನ್ನುತ್ತದೆ. ಸಂಘಪರಿವಾರದ ಪ್ರಕಾರ ಬಾಬಾಬುಡನಗಿರಿಯಲ್ಲಿ ಇಸ್ಲಾಮೀಕರಣ ನಡೆದಿದೆ. ಆದರೆ ಅಲ್ಲಿ ನಡೆದಿರುವುದು ಇಸ್ಲಾಮೀಕರಣವಲ್ಲ. ಸೂಫೀಕರಣ. ಸಂತರ ಸಮಾಧಿಗಳಿಗೆ ನಡೆದುಕೊಳ್ಳುವುದು ಸಾಂಪ್ರದಾಯಕ ಇಸ್ಲಾಮಿಗೆ ಎಂದೂ ಸಮ್ಮತವಲ್ಲ. ನಮಾಜು ಮಾಡುವ ಮುಸಲ್ಮಾನರು ಸಂತರ ಸಮಾಧಿಪೂಜೆ ಮಾಡುವುದನ್ನು ಅವರು ಕಟುವಾಗಿ ವಿರೋಧಿಸುತ್ತಾರೆ. ಇದು ಹಿಂದೂಕರಣಗೊಂಡ ಇಸ್ಲಾಂ ಎನ್ನುತ್ತಾರೆ. ಹಸಿರುಬಾವುಟಗಳನ್ನು ಕಂಡೊಡನೆ ಸಂಘಪರಿವಾರಕ್ಕೆ ಅದು ಪಾಕಿಸ್ತಾನದ ಬಾವುಟ ಎನ್ನುತ್ತದೆ. ಇಂತಹ ಬಾವುಟದ ಬಗ್ಗೆ ಶಿವಮೊಗ್ಗ ಜಿಲ್ಲೆಯ ಚೀಲೂರಿನಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿದ್ದಾರೆ ಎಂದು ಗಲಭೆ ಎಬ್ಬಿಸಿತು. ಆದರೆ ಹಸಿರು ಬಾವುಟವು ಸೂಫಿ ಆಚರಣೆಗಳಿಗೆ ಸಂಬಂಧಿಸಿದ್ದು. ಮಸೀದಿ ಸಂಸ್ಕೃತಿಯದಲ್ಲ.

ಸಂಘಪರಿವಾರಕ್ಕೆ ಬೇಕಾಗಿರುವುದು ನಮ್ಮ ಸಂಸ್ಕೃತಿಯ ಸೂಕ್ಷ್ಮಸತ್ಯಗಳಲ್ಲ, ವಿವಾದ. ವಿವಾದಗೊಳಿಸುವ ಮೂಲಕ ಅದು ಎರಡು ಗುಪ್ತ ಅಜೆಂಡಗಳನ್ನು ಸಾಧಿಸಬಯಸಿದೆ. ಮೊದಲನೆಯದಾಗಿ, ಜನರನ್ನು ಬೆಸೆಯುವ ಎಲ್ಲ ಸೌಹಾರ್ದದ ಮಿಲನದ ಸಂಸ್ಕೃತಿಗಳನ್ನು ನಾಶಮಾಡುವುದು. ವಿಚಿತ್ರ ಎಂದರೆ ಸೂಫಿ ಸಂಸ್ಕೃತಿಯನ್ನು ಸನಾತನವಾದಿ ಮುಸ್ಲಿಮರೂ ನಿರಾಕರಿಸುತ್ತಾರೆ, ಸಂಘಪರಿವಾರವೂ ನಿರಾಕರಿಸುತ್ತಿದೆ. ಮಿಲನದ ಸಂಸ್ಕೃತಿಯ ಸಂಕೇತವಾದ ಸೂಫಿಪರಂಪರೆಯು ಇಸ್ಲಾಂ ಹಾಗೂ ಮುಸ್ಲಿಮರು ನಮ್ಮ ದೇಶದ ಸಂಸ್ಕೃತಿಗೆ ಹೊರತಾದವರು ಎಂದು ದ್ವೇಷದ ಪ್ರಚಾರ ಮಾಡಲು ತೊಡಕಾಗುತ್ತದೆ ಎಂತಲೇ ಬಾಬಾಬುಡನಗಿರಿಯನ್ನು ಅವರು ತಮ್ಮ ಎದುರಾಳಿಯನ್ನಾಗಿ ಮಾಡಿಕೊಂಡಿದ್ದಾರೆ.

ಈಗಲೂ ಖಾದ್ರಿಯ ಪಂಥದ ಸ್ಥಾಪಕರಾದ ಖ್ಯಾತ ಸೂಫಿ ಬಾಗ್ದಾದಿನ ಅಬ್ದುಲ್ ಖಾದರ್ ಜೀಲಾನಿಯ ಹೆಸರಲ್ಲಿ ದಸ್ತಗಿರ್ ಎಂಬ ತಿಂಗಳು ಮುಸ್ಲಿಂ ಕ್ಯಾಲೆಂಡರುಗಳಲ್ಲಿದೆ. ದಸ್ತಗೀರರ ಹೆಸರಲ್ಲಿ ಮುಸ್ಲಿಮರು ಗ್ಯಾರವಿ ಎಂಬ ಔತಣಕೂಟ ಮಾಡುತ್ತಾರೆ. ಅದಕ್ಕೆ ಎಲ್ಲ ಜನಾಂಗದ ಜನರನ್ನು ಕರೆದು ಊಟಕೊಡುತ್ತಾರೆ. ಆ ದಿನ ಒಂದು ಹಸಿರು ಬಾವುಟವನ್ನು ಕೋಲಿಗೆ ಸಿಕ್ಕಿಸಿ, ಅದಕ್ಕೆ ಗಂಧಬಳಿದು, ಹೂವಿಕ್ಕಿ ಬೇವಿನಮರಕ್ಕೆ ಸಿಕ್ಕಿಸುತ್ತಾರೆ. ಆ ಮರದ ಬುಡಕ್ಕೆ ಒಂದು ದೀಪ ಹಚ್ಚುತ್ತಾರೆ. ಸಂಜೆಹೊತ್ತಲ್ಲಿ ಆ ಮರದ ಕಟ್ಟೆಯ ಬಳಿ ಅನೇಕರು ಕುಳಿತು ಪ್ರಾರ್ಥನೆ ಮಾಡುವುದನ್ನು ನೋಡಬಹುದು. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಇಂತಹ ಲಕ್ಷಾಂತರ ಕಟ್ಟೆಗಳಿವೆ. ಇದನ್ನು ಸಂಪ್ರದಾಯಸ್ಥ ಮುಸ್ಲಿಮರು ಒಪ್ಪುವುದಿಲ್ಲ. ಆದರೂ ಈ ಸೂಫಿ ಜಾನಪದ ಸಂಸ್ಕೃತಿ ಜಾರಿಯಲ್ಲಿದೆ. ಬಾಬಾಬುಡನಗಿರಿಯಂತಹ ಸೂಫಿ ಸ್ಥಳಗಳು ಅವರಿಗೆ ಅಷ್ಟು ಮುಖ್ಯವಲ್ಲ.

ಸಂಘಪರಿವಾರಕ್ಕೆ ಬೇಕಾಗಿರುವುದು ನಮ್ಮ ಸಂಸ್ಕೃತಿಯ ಸೂಕ್ಷ್ಮಸತ್ಯಗಳಲ್ಲ, ವಿವಾದ. ವಿವಾದಗೊಳಿಸುವ ಮೂಲಕ ಅದು ಎರಡು ಗುಪ್ತ ಅಜೆಂಡಗಳನ್ನು ಸಾಧಿಸಬಯಸಿದೆ. ಮೊದಲನೆಯದಾಗಿ, ಜನರನ್ನು ಬೆಸೆಯುವ ಎಲ್ಲ ಸೌಹಾರ್ದದ ಮಿಲನದ ಸಂಸ್ಕೃತಿಗಳನ್ನು ನಾಶಮಾಡುವುದು. ವಿಚಿತ್ರ ಎಂದರೆ ಸೂಫಿ ಸಂಸ್ಕೃತಿಯನ್ನು ಸನಾತನವಾದಿ ಮುಸ್ಲಿಮರೂ ನಿರಾಕರಿಸುತ್ತಾರೆ, ಸಂಘಪರಿವಾರವೂ ನಿರಾಕರಿಸುತ್ತಿದೆ. ಮಿಲನದ ಸಂಸ್ಕೃತಿಯ ಸಂಕೇತವಾದ ಸೂಫಿಪರಂಪರೆಯು ಇಸ್ಲಾಂ ಹಾಗೂ ಮುಸ್ಲಿಮರು ನಮ್ಮ ದೇಶದ ಸಂಸ್ಕೃತಿಗೆ ಹೊರತಾದವರು ಎಂದು ದ್ವೇಷದ ಪ್ರಚಾರ ಮಾಡಲು ತೊಡಕಾಗುತ್ತದೆ. ಎಂತಲೇ ಬಾಬಾಬುಡನಗಿರಿಯನ್ನು ಅವರು ತಮ್ಮ ಎದುರಾಳಿಯನ್ನಾಗಿ ಮಾಡಿಕೊಂಡಿದ್ದಾರೆ.

ಎರಡನೆಯದಾಗಿ, ಸೂಫಿಸಂತರ ದರ್ಗಾಗಳಿಗೆ ನಡೆದುಕೊಳ್ಳುವ ಕೆಳಜಾತಿಯ ಜನರನ್ನು ಸಂತ ಪರಂಪರೆಯಿಂದ ಕತ್ತರಿಸುವುದು. ಅವರನ್ನು ಅವರ ಸಾಂಪ್ರದಾಯಕ ದೈವಗಳಿಂದ ಬಿಡಿಸಿ ಪುರೋಹಿತಶಾಹಿಯ ಹಿಡಿತಕ್ಕೆ ತರುವುದು. ಎಲ್ಲಿಯವರೆಗೆ ಅವರು ಸಂತರಿಗೆ ನಡೆದುಕೊಳ್ಳುತ್ತಾರೋ ಅಲ್ಲಿಯವರೆಗೆ ಸನಾತನವಾದಿಗಳ ಹಿಡಿತಕ್ಕೆ ಸಿಗುವುದಿಲ್ಲ. ದತ್ತಾತ್ರೇಯ ಪೀಠ ಸಂರಕ್ಷಣಾ ಸಮಿತಿಯ ಕರಪತ್ರದಲ್ಲಿ (೨೦೦೩) ದತ್ತಪೀಠವನ್ನು 'ಸಮಸ್ತ ಹಿಂದೂ ಸಮಾಜದ ಶ್ರದ್ಧಾಕೇಂದ್ರ' ಎಂದು ಕರೆಯಲಾಗಿದೆ. ಈ 'ಸಮಸ್ತ ಹಿಂದೂ'ಗಳು ಎಂದರೆ ಯಾರು? ಈ ದುರ್ಗಮವಾದ ಬೆಟ್ಟಗುಡ್ಡಗಳಲ್ಲಿ ಇರುವ ದರ್ಗಾ, ಪೀಠ, ಗದ್ದುಗೆಗಳಿಗೆ ಮೇಲುಜಾತಿಯ ಜನರು ನಡೆದುಕೊಂಡ ದಾಖಲೆಗಳೇ ಇಲ್ಲ. ಯಾಕೆಂದರೆ ನಮ್ಮ ಸಮಾಜದ ಬಡವರು ಕೆಳಜಾತಿಯ ಜನರು ಮಡಿಮೈಲಿಗೆ ಹಂಗಿಲ್ಲದೆ, ಜಾತಿಧರ್ಮಗಳ ಹಂಗಿಲ್ಲದೆ ನಡೆದುಕೊಳ್ಳುವ ಈ ಧರ್ಮದ ಪರಿಕಲ್ಪನೆಯೇ ಸನಾತನವಾದಿಗಳಿಗೆ ಸಮ್ಮತವಿಲ್ಲ.

ಸಕಲೆಂಟು ಜಾತಿಧರ್ಮಗಳನ್ನು ಒಂದುಗೂಡಿಸುವ ಈ ದರ್ಗಾ/ಪೀಠ/ಮಠಗಳು ಮೇಲುಜಾತಿಯ ಜನರಿಗೆ ಶೃಂಗೇರಿಯಂತೆ ಎಂದೂ ಶ್ರದ್ಧೆಯ ಕೇಂದ್ರಗಳಾಗಿರಲಿಲ್ಲ. ಅವರ ಪೂರ್ವಜರ್ಯಾರೂ ಗಿರಿಯ ದೈವಗಳಿಗೆ ನಡೆದುಕೊಂಡವರಲ್ಲ. ಈಗಲೂ ಹಿರಿಯ ವಯಸ್ಸಿನ ಮೇಲುಜಾತಿಯ ಜನರನ್ನು ಕೇಳಿದರೆ ಗೊತ್ತಾಗುತ್ತದೆ. ಉದ್ದಕ್ಕೂ ಈ ಪರಿಸರದ ದಲಿತರು ಶೂದ್ರರು ಮುಸ್ಲಿಮರು ಈ ಗಿರಿಗಳಲ್ಲಿರುವ ಬಿಸಗ್ನಿಮಠ, ಫಲಾಹಾರಮಠ, ಬಾಬಾಬುಡನಗಿರಿ ದರ್ಗಾ, ಮುಳ್ಳಯ್ಯನಗಿರಿಗೆ ನಡೆದುಕೊಳ್ಳುತ್ತಿದ್ದವರು. ಫಲಾಹಾರ ಮಠದ ಶಾಸನಗಳು ಸೂಚಿಸುವಂತೆ, ಶತಮಾನಗಳಿಂದ ದತ್ತಾತ್ರೇಯ ಆದಿಗದ್ದುಗೆಗಳಿರುವ ಫಲಹಾರ ಮಠ ಹಾಗೂ ಬಿಸಗ್ನಿಮಠಗಳಿಗೆ ಭಕ್ತರಾಗಿದ್ದವರಲ್ಲಿ ಹೆಚ್ಚಿನವರು ನಮ್ಮ ಸಮಾಜದ 'ಕಡಿಮೆ ಜನರು'; ಮಾಂಸ ತಿನ್ನುತ್ತಿದ್ದ ಕೆಳಜಾತಿಗಳವರು.

ಮಾಂಸಾಹಾರ ಹಾಗೂ ಬಲಿಪದ್ಧತಿಯ ಮಾತು ಬಂದಾಗ ಒಂದು ಸಂಗತಿಯನ್ನು ಹೇಳಲೇಬೇಕು. ಶ್ರೀಗುರು ದತ್ತಾತ್ರೇಯ ಪೀಠಪೂಜಾ ಸೇವಾಸಮಿತಿಯ ಹೆಸರಲ್ಲಿ ವಿಎಚ್‌ಪಿ ಜಿಲ್ಲಾಡಳಿತಕ್ಕೆ ಸಲ್ಲಿಸಿರುವ ಅರ್ಜಿಗಳಲ್ಲಿ ಒಂದು ವಾಕ್ಯ ಮತ್ತೆಮತ್ತೆ ಬರುತ್ತದೆ. ಅದೆಂದರೆ 'ಪೀಠದ ಪರಿಸರದಲ್ಲಿ ಪ್ರಾಣಿಬಲಿ ನಡೆಯುತ್ತಿರುವುದು ಹಿಂದುಗಳ ಭಾವನೆಗಳಿಗೆ ತೀವ್ರ ಹಾನಿಯಾಗಿರುವ ವಿಚಾರವಾಗಿದೆ.' ಬಾಬಾಬುಡನಗಿರಿ ದರ್ಗಾಕ್ಕೆ ನೂರಾರು ವರುಷಗಳಿಂದ ಬರುತ್ತಿರುವ ಭಕ್ತರೆಂದರೆ, ಹಿಂದೂ ಕೆಳಜಾತಿಗಳಿಗೆ ಸೇರಿದವರು ಹಾಗೂ ಮೂಲಭೂತವಾದಿಗಳಲ್ಲದ ಸಾಮಾಜಿಕವಾಗಿ ಹಿಂದುಳಿದ ಮುಸ್ಲಿಮರು. ಇವರಿಗೆ

ಜಾತಿಧರ್ಮಗಳ ಭೇದ ಎಂದೂ ಕಾಡಲಿಲ್ಲ. ಈಗಲೂ ದರ್ಗಾದ ಭಂಡಾರಖಾನದಲ್ಲಿ ಭಕ್ತರಿಗೆ ಹಂಚುವ ಪ್ರಸಾದವನ್ನು (ದಾದಾಪೀರಕಾ ಭಂಡಾರ) ತಯಾರಿಸುವವರು ದಲಿತರು. ಗಿರಿಗೆ ಬರುವ ಈ ಎಲ್ಲರೂ ಕುರಿ, ಕೋಳಿಗಳನ್ನು ಕೊಯಿದು ಅಡುಗೆ ಮಾಡಿ ಊಟ ಮಾಡುವುದು ಮೊದಲಿಂದಲೂ ನಡೆದಿದೆ.

ಬಾಬಾಬುಡನಗಿರಿ ಪರಿಸರದಲ್ಲಿರುವ ಕೆಳಜಾತಿಯ ಹಿಂದು ಭಕ್ತರು ಹೋಗುವ ಬಿಸಗ್ನಿಮಠ, ಫಲಾಹಾರ ಸ್ವಾಮಿ ಮಠ, ಗಾಳಿಕೆರೆಗಳಲ್ಲಿ ಈಗಲೂ ಕೋಳಿಬಲಿ ಪದ್ಧತಿಯಿದೆ. ಇದಕ್ಕೆ ಕಾರಣ ಅಲ್ಲಿರುವ ಶಕ್ತಿದೇವತೆಗಳು ಹಾಗೂ ಭೈರವ ಸಂಪ್ರದಾಯ. ಅದರ ಬಗ್ಗೆ ಸಂಘಪರಿವಾರ ಮಾತಾಡುವುದಿಲ್ಲ. ಆದರೆ ದರ್ಗಾದಲ್ಲಿ ನಿಲ್ಲಿಸಬೇಕು. ಸಮಸ್ತ ಹಿಂದುಗಳ ಹೆಸರಲ್ಲಿ ದತ್ತಪೀಠ ವಿಮೋಚನೆಗೆ ಗಲಭೆ ಮಾಡುತ್ತಿರುವ ಸಂಘಪರಿವಾರವು ಆಳದಲ್ಲಿ ದಲಿತರ ಶೂದ್ರರ ಆರಾಧನೆಯ ಹಕ್ಕನ್ನು ಮಾತ್ರವಲ್ಲ, ಅವರ ಆಹಾರದ ಹಕ್ಕನ್ನು ಕೂಡ ನಿರಾಕರಿಸುತ್ತಿದೆ. ಇದೇ ಶಕ್ತಿಗಳು ತಾನೆ ದನದಮಾಂಸ ತಿನ್ನುವವರ ನಾಲಗೆ ಕತ್ತರಿಸುತ್ತೇವೆ ಎಂಬುದನ್ನು ಕುರುಬರಾದ ಈಶ್ವರಪ್ಪನವರ ಮೂಲಕ ಹೇಳಿಸಿದವರು; ಸತ್ತದನವನ್ನು ಹಸಿವಿಗಾಗಿ ತಿನ್ನುತ್ತಿದ್ದ ದಲಿತರನ್ನು ಹರಿಯಾಣದ ಝಜ್ಜರ್‌ನಲ್ಲಿ ಜೀವಂತ ಕೊಂದವರು. ಇಂಥವರು ವಿಮೋಚನೆಗೊಳಿಸುವ ದತ್ತಪೀಠದಲ್ಲಿ ಯಾವ ಪೂಜಾಪದ್ಧತಿ ಬರುತ್ತದೆ, ಯಾವ ಆಹಾರ ಸಂಸ್ಕೃತಿ ಬರುತ್ತದೆ, ಯಾರು ಅರ್ಚಕರಾಗುತ್ತಾರೆ ಎಂಬುದು ತನಗೆ ತಾನೆ ಸ್ಪಷ್ಟವಾಗಿದೆ..

ದಲಿತರು ಹಾಗೂ ಗಿರಿ

ಗಿರಿಯ ಪರಿಸರದಲ್ಲಿ ಇರುವ ಅನೇಕ ಗದ್ದುಗೆ, ಪೀಠ ಹಾಗೂ ಗುಡಿಗಳಲ್ಲಿ ಮುಖ್ಯವಾಗಿ ಜಂಗಮ ಅರ್ಚಕರಿದ್ದಾರೆ. ಸಂಘಪರಿವಾರದ ಕರಪತ್ರಗಳು ಬ್ರಾಹ್ಮಣ ವೀರಶೈವ ಅರ್ಚಕರು ಪೂಜೆ ನಡೆಸುತ್ತಿದ್ದರು'' ಎಂದು ಹೇಳುತ್ತವೆ. ಇಲ್ಲಿ ಬ್ರಾಹ್ಮಣರನ್ನು ಉಪಾಯವಾಗಿ ಸೇರಿಸಲಾಗಿದೆ. ಗಿರಿಶ್ರೇಣಿಯ ಅವಧೂತರಾದ ಸಮಾಧಿಗಳಿಗೆ ಬ್ರಾಹ್ಮಣ ಅರ್ಚಕರು ಎಂದೂ ಇರಲಿಲ್ಲ. ಸಮಾಧಿಗಳು ಇರುವುದು ಶವವನ್ನು ಹೂಳುವ ಸಂಸ್ಕೃತಿಯಲ್ಲಿ. ಸುಡುವ ಸಂಸ್ಕೃತಿಯಲ್ಲಿ ಅಲ್ಲ. ಗಿರಿಯ ದತ್ತಪೀಠದಲ್ಲಿ ಹಿಂದೂಗಳಿಗೆ ಇಲ್ಲಿ ಪೂಜಾಹಕ್ಕು ಸ್ಥಾಪನೆ ಮಾಡಬೇಕು ಎನ್ನುವುದು ಸಂಘಪರಿವಾರದ ವಾದ. ವಾಸ್ತವದಲ್ಲಿ ದರ್ಗಾದಲ್ಲಿ ಇಲ್ಲಿಯ ತನಕ ಧರ್ಮದ ಹೆಸರಲಿನಲ್ಲಿ ಯಾರಿಗೂ ಪ್ರವೇಶ ನಿರಾಕರಿಸಿಲ್ಲ. ಆದರೆ ಬಾಬಾಬುಡನಗಿರಿ ಆಸುಪಾಸಿನಲ್ಲಿರುವ ನಿರ್ವಾಣಸ್ವಾಮಿ ಗದ್ದುಗೆ ಅಥವಾ ಸೀತಾಳಯ್ಯನ ಗುಡಿಗಳಲ್ಲಿ ಈಗಲೂ ದಲಿತರು ಒಳಗೆ ಪ್ರವೇಶಿಸುವುದಿಲ್ಲ. ಇದು ಸಂಘಪರಿವಾರಕ್ಕೆ ಗೊತ್ತಿದೆ ಮತ್ತು ಅದು ಇದನ್ನು ಬದಲಿಸಲು ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಪಶ್ಚಿಮಘಟ್ಟದ ಅನೇಕ ದೇವಸ್ಥಾನಗಳಲ್ಲಿ ಬ್ರಾಹ್ಮಣರಿಗೆ ಬೇರ ಶೂದ್ರರಿಗೆ ಬೇರ ಪಂಕ್ತಿ ಇರುವುದು ಅದಕ್ಕೆ ಗೊತ್ತು. ಇದಕ್ಕೂ ಅದು ಮಾಡುವುದಿಲ್ಲ. ಆದರೆ ಎಲ್ಲ ಧರ್ಮದ ಜನರೂ ಹೋಗಿಬರುವ ದರ್ಗಾವನ್ನು ಮಾತ್ರ ಅದು ಹಿಂದುಗಳಿಗೆ ಆಗಿರುವ ಅನ್ಯಾಯ ಎಂದು ಹೇಳುತ್ತಿದೆ. ಬಾಬಾಬುಡನಗಿರಿ ದರ್ಗಾದಲ್ಲಿ ದಲಿತರಿಗೆ ಪ್ರವೇಶವಿದೆ, ಮಾತ್ರವಲ್ಲ, ಉರುಸುಗಳಲ್ಲಿ ದರ್ಗಾದ ಪ್ರಸಾದ ತಯಾರಿಸುವ ಕೆಲಸವನ್ನು ದಲಿತರೇ ಮಾಡುತ್ತಾರೆ. ಮಂಜ ಎನ್ನುವ ದಲಿತವ್ಯಕ್ತಿಯು ಅಲ್ಲಿ ಬಹಳ ಕಾಲದಿಂದ ಪಾಕಶಾಲೆಯ ಸೇವೆಯಲ್ಲಿದ್ದಾರೆ. ಚಿಕ್ಕಮಗಳೂರು ಸೀಮೆಯ ಯಾವುದೇ ಬ್ರಾಹ್ಮಣ ಮೇಲುಜಾತಿಯ ಹಿರಿಯರನ್ನು ಕೇಳಿದರೆ ಗೊತ್ತಾಗುತ್ತದೆ. ಅವರು ಎಂದೂ ಗಿರಿಯ ದೇವರಿಗೆ ನಡೆದುಕೊಂಡಿಲ್ಲ. ಎಲ್ಲವೂ ಕೆಳಜಾತಿಯ ಜನರೇ ಗಿರಿಗೆ ಬರುವುದು. ಇದಕ್ಕೆ ಕಾರಣವೆಂದರೆ ಎಲ್ಲ ಅವಧೂತ ಸೂಫಿ ಪಂಥಗಳು ಜಾತಿಪದ್ಧತಿಗೆ ವಿರುದ್ಧವಾಗಿದ್ದವು. ಎಂತಲೇ ಇಲ್ಲಿ ಜಾತ್ಯತೀತ ಸಂಸ್ಕೃತಿ ನೆಲೆನಿಂತಿತು.

ಸಮಸ್ತ ಹಿಂದುಗಳ ಹೆಸರಿನಲ್ಲಿ

ಸಂಘಪರಿವಾರವು 'ಸಮಸ್ತ ಹಿಂದುಗಳ' ಹೆಸರಿನಲ್ಲಿ ತನ್ನ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ. ಅದು ಸಮಸ್ತ ಹಿಂದುಗಳ ಹೆಸರಲ್ಲಿ ಏನೇ ಮಾಡಲಿ, ಆಳದಲ್ಲಿ ಕೆಲಸ ಮಾಡುವುದು ಮಾತ್ರ ಸನಾತನವಾದದ ರಹಸ್ಯ ಆಶಯವೇ ಆಗಿರುತ್ತವೆ. ಇದಕ್ಕೆ ದತ್ತಜಯಂತಿಯ ಕರಪತ್ರಗಳು ಸೂಚನೆ ನೀಡುತ್ತವೆ. ಅ. ಈ ಕರಪತ್ರದಲ್ಲಿ (೧೯೯೮) ಕುರುಮಗಡ್ಡಿಯನ್ನು ಗಾಣಗಾಪುರವನ್ನು ಸ್ಮರಿಸಲಾಗಿದೆ. ಆದರೆ ಜನಾರ್ಧನಸ್ವಾಮಿಯಿರುವ ದೌಲತಾಬಾದನ್ನಾಗಲೀ ಸ್ವಾಮಿ ಸಮರ್ಥನಿದ್ದ ಅಕ್ಕಲಕೋಟೆಯನ್ನಾಗಲೀ ನೆನೆಯುವುದಿಲ್ಲ! ಯಾಕಿರಬಹುದು?

ಮೊದಲಿನ ಎರಡು ಜಾಗಗಳು ಬ್ರಾಹ್ಮಣರಾಗಿದ್ದ ದತ್ತವತಾರಿಗಳ ಪೀಠಗಳು, ಎರಡನೆಯ ಇಬ್ಬರು ವರ್ಣಾಶ್ರಮ ಜಾತಿಪದ್ಧತಿ ಧಿಕ್ಕರಿಸಿ ಕೆಳಜಾತಿಯವರ ಹಾಗೂ ಮುಸಲ್ಮಾನರ ಜತೆ ಸಂಬಂಧ ಇಟ್ಟುಕೊಂಡಿದ್ದ ದತ್ತಾವತಾರಿಗಳಾಗಿರುವುದು. ಆ. ಈ ಕರಪತ್ರಗಳಲ್ಲಿ ''ಶಿವಾಜಿ ಮಹಾರಾಜರಿಗೆ ಪ್ರೇರಣೆ ನೀಡಿದ ಅವರ ಗುರುಗಳಾದ ಸಮರ್ಥ ರಾಮದಾಸರು ಶ್ರೀಗುರು ದತ್ತಾತ್ರೇಯರ ಆರಾಧಕರು'' ಎಂಬ ಸಂಗತಿ ಪ್ರಸ್ತಾಪಿಸಲಾಗಿದೆ. ಮುಸ್ಲಿಮರ ವಿರುದ್ಧ ದ್ವೇಷವನ್ನು ಹುಟ್ಟಿಸಲು ಕೋಮುವಾದವು ಬಳಸಿದ ಚರಿತ್ರೆಯ ಅನೇಕ ಸಂಕೇತಗಳಲ್ಲಿ ಶಿವಾಜಿಯದು ಮುಖ್ಯವಾದುದು. ಶಿವಾಜಿಯ ಗುರುವನ್ನು ಇಲ್ಲಿ ಪ್ರಸ್ತಾಪಿಸುವುದರ ರಾಜಕಾರಣ ತನಗೆತಾನೇ ಸ್ಪಷ್ಟ. ಅದು ಮುಸ್ಲಿಮ್ ದ್ವೇಷ ಹರಡುವುದಕ್ಕೆ ಪೀಠಿಕೆ. ಸಮರ್ಥ ರಾಮದಾಸರು (೧೬೦೮-೧೬೮೧) ದತ್ತೋಪಾಸಕರಾಗಿದ್ದರು ನಿಜ. ಆದರೆ ಅವರು ಎಂಥ ದತ್ತೋಪಾಸಕರಾಗಿದ್ದರು ಎಂದು ಶಂಬಾ ಜೋಶಿ ಹೇಳುತ್ತಾರೆ.

> **ನಮ್ಮ ದೇಶದಲ್ಲಿ ತಂತಮ್ಮ ಧರ್ಮದ ಜಾತಿಯ ಜನರೆ ಹೋಗುವ ಸ್ಥಳಗಳು ನಮ್ಮಲ್ಲಿ ಬಹಳ ಇವೆ. ಆದರೆ ಎಲ್ಲ ಜಾತಿಧರ್ಮಗಳ ಜನ ಹೋಗುವ ಕ್ಷೇತ್ರಗಳೆ ಕಡಿಮೆ. ಬಾಬಾಬುಡನಗಿರಿ ಇಂತಹ ಅಪೂರ್ವವಾದ ಜಾಗಗಳಲ್ಲಿ ಒಂದು. ಸಂಪ್ರದಾಯವಾದಿಗಳಿಗೆ ಪ್ರಿಯವಲ್ಲದ, ಸಾಮಾನ್ಯ ಬಡ ಹಿಂದೂ ಮುಸ್ಲಿಮರು ಧಾರ್ಮಿಕ ಭೇದಗಳಿಲ್ಲದೆ ಬೆರೆಯುವ ಜಾಗವಿದು. ಹಿಂದೂ ಮುಸ್ಲಿಂ ಅಲ್ಲದ ಮೂರನೇ ಧರ್ಮದ ಜಾಗವಿದು. ಇಲ್ಲಿನ ಜಾತ್ಯತೀತತೆಯನ್ನು ನಾನು ಸಹಜ ಸೆಕ್ಯುಲರಿಸಂ ಎನ್ನಬಹುದು.**

ಅವರ ಪ್ರಕಾರ, ರಾಮದಾಸರು ಬ್ರಾಹ್ಮಣ ಶ್ರೇಷ್ಠತೆಯನ್ನು ನಂಬುವ ದತ್ತಮಾರ್ಗಕ್ಕೆ ಸೇರಿದವರು. ಸಾಮಾಜಿಕವಾಗಿ ಸಮಾನತೆಯನ್ನು ಸಾರುವ ದತ್ತಪಂಥದ ಶಾಖೆಗೆ ಸೇರಿದವರಲ್ಲ. ರಾಮದಾಸರು ತಮ್ಮ 'ದಾಸಬೋಧೆ' ಕೃತಿಯಲ್ಲಿ ದತ್ತಪಂಥಕ್ಕೆ ಮುಸ್ಲಿಮರಿರಲಿ, ಕೆಳಜಾತಿ ಹಿಂದೂಗಳನ್ನೂ ಸೇರಿಸಿಕೊಳ್ಳಲು ಸಹ ವಿರೋಧಿಸಿದರು. ಬ್ರಾಹ್ಮಣನಿಗೆ ಗುರುವಾಗಿ ಬ್ರಾಹ್ಮಣನೇ ಇರಬೇಕೆಂದು ಪ್ರತಿಪಾದಿಸಿದರು. ಇದು ಅವರು ಜನಾರ್ಧನಸ್ವಾಮಿಯ ದತ್ತಪಂಥಕ್ಕೆ ಕೊಟ್ಟ ಉತ್ತರವಾಗಿತ್ತು. ಏಕೆಂದರೆ ಜನಾರ್ಧನ ಸ್ವಾಮಿಯವರ ಶಿಷ್ಯನಾದ ಏಕನಾಥರು 'ಜಾತಿ ಅಭಿಮಾನವು ಕೆಟ್ಟದ್ದು, ಗುರುವು ಯಾವ ಜಾತಿಯವನಾದರೂ ಅವರ ಎಂಜಲು ತಿನ್ನುವೆ' ಎಂದು ಹೇಳುತ್ತಿದ್ದರು. ರಾಮದಾಸರ ಸನಾತನವಾದಿ ನಿಲುವನ್ನು ಶಂಬಾ ಹೀಗೆ ವಿಶ್ಲೇಷಿಸುತ್ತಾರೆ.

''ಗುರುಮಾರ್ಗದೊಳಗಿನ ಪಾದೋದಕ, ತೀರ್ಥ, ಪ್ರಸಾದ ಇವೆಲ್ಲವನ್ನು ಇಟ್ಟುಕೊಂಡರೂ ಯಾವುದೇ ಜಾತಿಯವನು ಗುರುವಾಗುವುದು ಅವರಿಗೆ ಒಪ್ಪಿಗೆ ಇರಲಿಲ್ಲ. ಈ ಪದ್ಧತಿಯನ್ನು ಅವರು ನಿಷೇಧಿಸಿದರು. ಅವರ ಪಂಥದಲ್ಲಿ ಯವನರು ಹೋಗಲಿ, ಅಬ್ರಾಹ್ಮಣರಾದವರನ್ನೂ ಬಹಳಷ್ಟು ಒಳಗೆ ಬರಗೊಡಲಿಲ್ಲ. ತಾರತಮ್ಯವನ್ನು ಪಾಲಿಸಿ ಕೆಲಸ ಮಾಡುವ ವ್ಯಾವಹಾರಿಕ ತತ್ವಜ್ಞಾನವನ್ನು ರಾಮದಾಸರು ದುರ್ಲಕ್ಷಿಸಲಿಲ್ಲ. ವಾರಕರಿ ಪಂಥದ ಸರ್ವಸಮಭಾವದ ಉಪದೇಶದಿಂದ ಮತ್ತು ಬೇಕಾದ ಜಾತಿಯವನನ್ನು ಗುರು ಮಾಡಿಕೊಳ್ಳುವ ಪದ್ಧತಿಯಿಂದ ವರ್ಣಾಶ್ರಮ ಧರ್ಮದ ತಳಹದಿ ಅದುರತೊಡಗಿತು. ಇದರಿಂದ ಜಾಗ್ರತರಾದ ಬ್ರಾಹ್ಮಣರು ವಾರಕರೀ ಪಂಥದ ವಿರುದ್ಧ ಹೂಡಿದ ಚಳವಳಿಯಿಂದ ಆದ ತೊಂದರೆ ತುಕಾರಾಮ ಮೊದಲಾದ ಸಂತರ ಚರಿತ್ರೆಯಿಂದ ಗೊತ್ತಾಗುತ್ತದೆ. ಬ್ರಾಹ್ಮಣ ವರ್ಗಕ್ಕೆ ತನ್ನ ಸತ್ವವನ್ನು ರಕ್ಷಿಸಿಕೊಳ್ಳಲು ಒಂದು ಸ್ವತಂತ್ರ ಪಕ್ಷದ ಆವಶ್ಯಕತೆ ತೀವ್ರವಾಗಿ ಅನಿಸತೊಡಗಿತು. ಇಂಥ ಸಾಮಾಜಿಕ ಮನಃಸ್ಥಿತಿಯಲ್ಲಿ ಸಮರ್ಥ ರಾಮದಾಸರ ಪಂಥ ಉದಯಕ್ಕೆ ಬಂದಿತು.'' (ಮರ್ಹಾಠಿ ಸಂಸ್ಕೃತಿ ಪು.೨೨೨)

ಜರೀಬ್ರಾಹ್ಮಣ ಝಾಲಾ ಭ್ರಷ್ಟಅ ತರೀ ತೋ ತನ್ಹೀಲೋಕೀ ಶ್ರೇಷ್ಠಅಜರೀಬ್ರಾಹ್ಮಣ ಮೂಢಮತೀಅ ತರೀ ಲೋ ಜಗದ್ವಂದ್ಯಅ

ಗುರೂತೋ ಸಕಳಾಸೀ ಬ್ರಾಹ್ಮಣ।
ಜರೀ ತೋ ಜಾಹಲಾ ಕ್ರಿಯಾಹೀನ ॥
ತರೀ ತಯಾಸೀ ಶರಣ।
ಅನನ್ಯ ಭಾವೇ ಅಸಾವೇ ॥ (ದಾಸಬೋಧೆ)

(ಅರ್ಥ = ಬ್ರಾಹ್ಮಣನು ಭ್ರಷ್ಟನಾದರೂ ಮೂರು ಲೋಕಗಳಲ್ಲಿಯೂ ಉತ್ತಮನು. ಅವನು ಮೂಢನಾದರೂ ಜಗತ್ತಿನಲ್ಲಿ ವಂದನೀಯನು; ಬ್ರಾಹ್ಮಣನೇ ಎಲ್ಲರಿಗೂ ಗುರು. ಅವನು ಕ್ರಿಯಾಹೀನನಾಗಿದ್ದರೂ ಅವನಿಗೆ ಅನನ್ಯ

ಭಾವದಿಂದ ಶರಣು ಹೋಗಬೇಕು). ಇದನ್ನು ಉಲ್ಲೇಖಿಸುವ ಶಂಬಾಜೋಶಿ ''ಈ ರೀತಿಯ ಸ್ವಾಭಿಮಾನ ಗುರುದತ್ತ ಮಾರ್ಗದಲ್ಲಿ ಇರುವುದು ಸಾಧ್ಯವಿಲ್ಲ'' ಎಂದು ಸ್ಪಷ್ಟವಾಗಿ ನುಡಿಯುತ್ತಾರೆ. (ಮರ್ಹಾಠಿ ಸಂಸ್ಕೃತಿ ಪು.೨೨೧); ಸಮರ್ಥ ರಾಮದಾಸರ ಉಲ್ಲೇಖವು ಕೇವಲ ಮುಸ್ಲಿಂ ದ್ವೇಷದ ಭಾಗವಾಗಿ ಬಂದಿಲ್ಲ, ಅದು ಸಾಮಾಜಿಕ ಅಸಮಾನತೆಯನ್ನು ಉಳಿಸಿಕೊಂಡು ಹೋಗುವ ಉಚ್ಚಜಾತಿಗಳ ಆಶಯವಾಗಿ ಕೂಡ ಬಂದಿದೆ. ಈ ಹಿನ್ನೆಲೆಯಲ್ಲಿ ತಂತಮ್ಮ ಧರ್ಮಗಳ ಸನಾತನವಾದಿಗಳ ಜತೆ ಸಂಘರ್ಷ ಮಾಡಿ ಪ್ರೇಮತತ್ವದ ಮೇಲೆ ಹುಟ್ಟಿದ ಸೂಫಿಪರಂಪರೆಯನ್ನು ಸಂಘಪರಿವಾರವು ದ್ವೇಷಿಸಿದರೆ ಅದು ಸೋಜಿಗವೇ ಅಲ್ಲ. ಹಿಂದೊಮ್ಮೆ ಹಿಂದುತ್ವದ ಸನಾತನವಾದದ ವಿರುದ್ಧ ಹುಟ್ಟಿದ ಜನರನ್ನು ಧರ್ಮಜಾತಿಗಳ ಭೇದವಿಲ್ಲದೆ ಬೆಸೆವ ಕೆಲಸ ಮಾಡಿದ ದತ್ತಪಂಥವನ್ನು ಆಪೋಶನ ತೆಗೆದುಕೊಳ್ಳಲು ನೋಡುತ್ತಿದೆ. ವೈದಿಕ ಸನಾತನವಾದದ ವಿರುದ್ಧ ದಂಗೆಯೆದ್ದು ಪರ್ಯಾಯ ಧರ್ಮವನ್ನು ನೀಡಿದ ಬೌದ್ಧಧರ್ಮವನ್ನು ಈ ದೇಶದಿಂದ ಓಡಿಸಿ ಸೇಡು ತೀರಿಸಿಕೊಂಡಿತು. ಸನಾತನವಾದಕ್ಕೆ ಸಮಾನತೆ ಸಾರುವ ಎಲ್ಲ ತತ್ವಗಳೂ ಎಲ್ಲ ಜಾಗಗಳೂ ಎಲ್ಲ ಸಂತರೂ ವಿರುದ್ಧ. ವಿಶ್ವಮಾನವ ಸಂದೇಶ ಸಾರಿದ ಕುವೆಂಪು ಅವರಂತಹ ಲೇಖಕರನ್ನು ೧೯೪೮ರಲ್ಲಿ ದೇಶಬಿಟ್ಟು ಹೋಗಬೇಕು ಎಂದಿದ್ದನ್ನು ನೆನೆಯಬಹುದು.

ಬಾಬಾಬುಡನಗಿರಿ ಯಾಕೆ ಪವಿತ್ರ

ನಮ್ಮ ದೇಶದಲ್ಲಿ ತಂತಮ್ಮ ಧರ್ಮದ ಜಾತಿಯ ಜನರೆ ಹೋಗುವ ಸ್ಥಳಗಳು ನಮ್ಮಲ್ಲಿ ಬಹಳ ಇವೆ. ಆದರೆ ಎಲ್ಲ ಜಾತಿಧರ್ಮಗಳ ಜನ ಹೋಗುವ ಕ್ಷೇತ್ರಗಳೆ ಕಡಿಮೆ. ಬಾಬಾಬುಡನಗಿರಿ ಇಂತಹ ಅಪೂರ್ವವಾದ ಜಾಗಗಳಲ್ಲಿ ಒಂದು. ಸಂಪ್ರದಾಯವಾದಿಗಳಿಗೆ ಪ್ರಿಯವಲ್ಲದ, ಸಾಮಾನ್ಯ ಬಡ ಹಿಂದೂ ಮುಸ್ಲಿಮರು ಧಾರ್ಮಿಕ ಭೇದಗಳಿಲ್ಲದೆ ಬೆರೆಯುವ ಜಾಗವಿದು. ಹಿಂದೂ ಮುಸ್ಲಿಂ ಅಲ್ಲದ ಮೂರನೇ ಧರ್ಮದ ಜಾಗವಿದು. ಇಲ್ಲಿನ ಜಾತ್ಯತೀತತೆಯನ್ನು ನಾನು ಸಹಜ ಸೆಕ್ಯುಲರಿಸಂ ಎನ್ನಬಹುದು. ಇವತ್ತು ಹೀಗೆ ಯಾವ ಧರ್ಮಕ್ಕೂ ಸೇರದ ಮೂರನೆಯ ಧರ್ಮಕ್ಕೆ ಸೇರಿದ ಎಲ್ಲ ಸಮುದಾಯಗಳು ಬಿಕ್ಕಟ್ಟನ್ನು ಎದುರಿಸುತ್ತಿವೆ. ಅವು ಒಂದೋ ಹಿಂದು ಅನಿಸಿಕೊಳ್ಳಬೇಕು. ಇಲ್ಲವೇ ಮುಸ್ಲಿಮ್ ಅಥವಾ ಕ್ರೈಸ್ತದಲ್ಲಿ ಗುರುತಿಸಿಕೊಳ್ಳಬೇಕು. ಇಂತಹ ಒಂದು ಒತ್ತಡವು ೧೯೯೨ ರ ಡಿಸೆಂಬರ್ ೬ ರಿಂದ ಹೆಚ್ಚಾಗಿಬಿಟ್ಟಿದೆ. ಇದು ಭಾರತದ ಜಾತ್ಯತೀತ ಸಾಂಸ್ಕೃತಿಕ ಪರಂಪರೆ ದೃಷ್ಟಿಯಿಂದ ಬಹಳ ಅಪಾಯಕಾರಿ. ಇದರಲ್ಲಿ ಭಾರತದ ನೂರಾರು ಸೂಫಿ ಅವಧೂತ ಆರೂಢ ಪರಂಪರೆಗಳು ನಾಶವಾಗುತ್ತವೆ ಇಲ್ಲವೇ ಮತೀಕರಣಗೊಳ್ಳುತ್ತವೆ. ಇದು ಭಾರತದ ಸಂತಪರಂಪರೆಯ ಮೇಲಿನ ಹಲ್ಲೆ, ಬಾಬಾಬುಡನಗಿರಿ ನಮ್ಮ ದೇಶದ ಮಹತ್ವವೂ ಪವಿತ್ರವೂ ಆದ ಜಾಗವಾಗಿರುವುದು ಅದರ ಕೂಡುಸಂಸ್ಕೃತಿಯ ದೃಷ್ಟಿಯಿಂದ. ಹಿಂದೂಮುಸ್ಲಿಂ ಅಲ್ಲದ ಮೂರನೆಯ ಧರ್ಮವಿರುವ ಕಾರಣಕ್ಕಾಗಿ.

ಕೋಮುವಾದಿಗಳಿಂದ ವಿಮೋಚನೆಗೊಳಿಸುವಂತೆ ಹಲವು ಸಂಘಟನೆಗಳು ಮೆರವಣಿಗೆ ನಡೆಸುತ್ತಿರುವುದು

ಸ್ಮೃತಿನಾಶದ ಕೆಲಸ

ಸಂಘ ಪರಿವಾರವು ವಾಸ್ತವವಾಗಿ ಬಾಬಾಬುಡನಗಿರಿಯ ಸಂಸ್ಕೃತಿಗೆ ಸಂತೋಷ ಪಡಬೇಕಿತ್ತು. ಯಾಕೆಂದರೆ ಅದು ಇಸ್ಲಾಮನ್ನು ಹೊರಗಿನಿಂದ ಬಂದ ಧರ್ಮ, ಮುಸ್ಲಿಮರು ಹೊರಗಿನಿಂದ ಬಂದವರು ಎನ್ನುತ್ತದೆ. ಇದಕ್ಕೆ ಪರಿಹಾರ ಇಸ್ಲಾಂ ಮತ್ತು ಭಾರತೀಕರಣಗೊಳ್ಳಬೇಕು ಎನ್ನುತ್ತದೆ. ಅದರ ಭಾರತೀಕರಣಗೊಳ್ಳುವ ಪರಿಕಲ್ಪನೆಯನ್ನು, ಅದರ ಬಗೆಗಿನ ನಮ್ಮ ತಕರಾರುಗಳನ್ನು ಸದ್ಯಕ್ಕೆ ಬದಿಗಿಟ್ಟು, ಒಪ್ಪಿಕೊಳ್ಳೋಣ. ಬಾಬಾಬುಡನಗಿರಿಯಲ್ಲಿರುವುದು ಎಲ್ಲ ಅರ್ಥಗಳಲ್ಲಿ ಭಾರತೀಕರಣಗೊಂಡ ಸಂಸ್ಕೃತಿಯಾಗಿದೆ. ಇಲ್ಲಿರುವುದು ಅರಬಸ್ಥಾನದ ಇಸ್ಲಾಮ್ ಅಲ್ಲ. ಅರಬಸ್ಥಾನದಲ್ಲಿ ಸೂಫಿದರ್ಗಾ ಆರಾಧನೆ ನಿಷಿದ್ಧವಾಗಿದೆ. ಇದು ಇರುವುದು ಹಿಂದುಸ್ಥಾನ, ಪಾಕಿಸ್ತಾನ, ಇರಾನ್, ಬಾಂಗ್ಲಾದೇಶಗಳಲ್ಲಿ ಮಾತ್ರ. ಸೂಫಿಧರ್ಮವು ತಾನೊಂದು ಗುರುಪಂಥವಾಗಿ ಭಾರತದ ಸಮಸ್ತ ಗುರುಪಂಥಗಳ ಜತೆ ಅನನ್ಯವಾಗಿ ಬೆರೆಯಿತು.

ಸೂಫಿಗಳು ಈ ದೇಶದ ಎಲ್ಲ ಯೋಗ ವೇದಾಂತ ಅದ್ವೈತ ಪಠ್ಯಗಳನ್ನು ಅನುವಾದ ಮಾಡಿದರು. ವ್ಯಾಖ್ಯಾನ ಬರೆದರು. ಅವುಗಳ ಜತೆ ತಮ್ಮ ತತ್ವವನ್ನು ಬೆರೆಸಿದರು. ಬೆಸೆದರು. ಈ ಕೆಲಸಕ್ಕಾಗಿ ಇಸ್ಲಾಮಿ ಸನಾತನವಾದಿಗಳಿಂದ ಬಹಿಷ್ಕಾರ ಹಾಕಿಸಿಕೊಂಡರು. ಈಗಲೂ ಚಿಕ್ಕಮಗಳೂರಿನ ಸಂಪ್ರದಾಯವಾದಿ ಮುಸ್ಲಿಮರು ಗಿರಿಯ ಕಡೆ ಮುಖಹಾಕುವುದಿಲ್ಲ. ಬಾಬಾಬುಡನಗಿರಿಯಲ್ಲಿರುವ ಅನೇಕ ಆಚರಣೆಗಳು ಸಂಕೇತಗಳು ಹೀಗೆ ಸ್ವೀಕಾರಗೊಂಡವು. ದರ್ಗಾದ ಗುರುಗಳು ತಿಳಿಯಾದ ಕಾವಿ ತೊಡುತ್ತಾರೆ. ಉರುಸುಗಳಲ್ಲಿ ಫಕೀರರು ಕೊಂಬನ್ನು ಊದುತ್ತಾರೆ. ನಗಾರಿ ಬಾರಿಸಲಾಗುತ್ತದೆ. ಇವೆಲ್ಲ ಸ್ವೀಕಾರದ ಸಂಕೇತಗಳು. ಆದರೆ ಸಂಘಪರಿವಾರಕ್ಕೆ ಮುಸ್ಲಿಮರ ಆಕ್ರಮಣವಾದರೂ ಉಳಿದಿರುವ ಹಿಂದೂ ಚಿಹ್ನೆಗಳು ಅನಿಸುತ್ತವೆ. ಈ ಚಿಹ್ನೆಗಳೇ ಇದು ಹಿಂದುಗಳದ್ದು ಎಂದು ಕೇಸುಹಾಕಲು ಕಾರಣವಾಗುತ್ತದೆ. ಇದೊಂದು ವಿಚಿತ್ರ ಕಷ್ಟ. ಮೂಲ ಇಸ್ಲಾಮಿನತ್ತ ಹೋದರೆ ಇಲ್ಲಿ ಭಾರತೀಯತೆ ಇಲ್ಲ ಎಂದು ಆಪಾದಿಸಲಾಗುತ್ತದೆ. ಸ್ಥಳೀಕರಣಗೊಂಡರೆ ಇದು ಹಿಂದುಗಳದ್ದು ಎನ್ನಲಾಗುತ್ತದೆ. ಇದಕ್ಕಾಗಿ ಮೂಲ ಗುರುತುಗಳನ್ನು ನಾಶಮಾಡಲಾಗುತ್ತದೆ. ಸಂಘಪರಿವಾರವು ಬಾಬಾಬುಡನಗಿರಿ ಎಂಬ ಶಬ್ದವು ಚಿಕ್ಕಮಗಳೂರು ಜಿಲ್ಲೆಯ ಮೈಲಿಕಲ್ಲುಗಳಿಂದ ಬರವಣಿಗೆಯಿಂದ, ಪ್ರವಾಸೋದ್ಯಮದ ಬೋರ್ಡುಗಳಿಂದ ತೆಗೆದುಹಾಕುತ್ತಿದೆ. ದತ್ತಪೀಠ ಎಂದು ಬದಲಾಯಿಸುತ್ತಿದೆ. ಇದು ಸ್ಮೃತಿನಾಶ ಮಾಡುವ ಕೆಲಸ. ಕನಕನ ಕಿಂಡಿಯನ್ನು ನವಗ್ರಹಕಿಂಡಿ ಎಂದು ಹೆಸರಿಡುವುದು, ಕನಕಗೋಪುರವನ್ನು ಕೆಡಹುವುದು ಕೂಡ ಸ್ಮೃತಿನಾಶದ ಕೆಲಸ.

ಮತ್ತದೇ ಪ್ರಶ್ನೆ ಯಾಕೆ ಹೀಗಾಗುತ್ತಿದೆ. ಸಂಘಪರಿವಾರಕ್ಕೆ ನಮ್ಮ ಸಂಸ್ಕೃತಿಯ ಅರಿವೇ ಇಲ್ಲ ಎಂಬುದು ಅರ್ಧಸತ್ಯ. ಅರಿವಿದೆ. ಆದರೆ ಅದನ್ನು ತನ್ನ ರಾಜಕಾರಣಕ್ಕಾಗಿ ಒಪ್ಪುತ್ತಿಲ್ಲ. ಧರ್ಮವನ್ನು ಕತ್ತಿಮಾಡಿ ಜನರನ್ನು ವಿಭಜಿಸುವ ರಾಜಕಾರಣಕ್ಕೆ ಜಾತಿಧರ್ಮಗಳಾಚೆ ಹೋಗಿ ಜನ ಒಂದುಗೂಡಿ ಬದುಕುವುದು ಸಮ್ಮತವಿಲ್ಲ. ಅದು ಬಾಬಾಬುಡನಗಿರಿಯ ಬಗ್ಗೆ ಎತ್ತುತ್ತಿರುವ ಪ್ರಶ್ನೆಗಳಂತೂ ನಮ್ಮ ನಾಡಿನ ಅನುಭಾವದ ಸಂಸ್ಕೃತಿಗೆ ಹೇಗೆ ಅನ್ಯವಾದುದು ಎಂಬುದನ್ನು ಸೂಚಿಸುತ್ತದೆ. ಕರ್ನಾಟಕವನ್ನು ಮುಂದಿನ ದಿನಗಳಲ್ಲಿ ರಕ್ತಪಾತದಿಂದ ತೋಯಿಸಬೇಕು ಎಂಬುದು ಅದರ ಉದ್ದೇಶ. ಹಾಗಾಗಬಾರದು ಎಂಬುದು ನಮ್ಮ ಉದ್ದೇಶ. ಆದ್ದರಿಂದ ಈಗ ಬಾಬಾಬುಡನಗಿರಿಯು ಕೇವಲ ದರ್ಗಾ ಉಳಿಸುವ ಪ್ರಶ್ನೆಯಾಗಿ ಉಳಿದಿಲ್ಲ. (ಮುಗಿಯಿತು) □

ಸಕಲೆಂಟು ಜಾತಿಧರ್ಮಗಳನ್ನು ಒಂದುಗೂಡಿಸುವ ಈ ದರ್ಗಾ/ಪೀಠ/ಮಠಗಳು ಮೇಲುಜಾತಿಯ ಜನರಿಗೆ ಶೃಂಗೇರಿಯಂತೆ ಎಂದೂ ಶ್ರದ್ಧೆಯ ಕೇಂದ್ರಗಳಾಗಿರಲಿಲ್ಲ. ಅವರ ಪೂರ್ವಜರ್‍ಯಾರೂ ಗಿರಿಯ ದೈವಗಳಿಗೆ ನಡೆದು ಕೊಂಡವರಲ್ಲ. ಈಗಲೂ ಹಿರಿಯ ವಯಸ್ಸಿನ ಮೇಲುಜಾತಿಯ ಜನರನ್ನು ಕೇಳಿದರೆ ಗೊತ್ತಾಗುತ್ತದೆ. ಉದ್ದಕ್ಕೂ ಈ ಪರಿಸರದ ದಲಿತರು ಶೂದ್ರರು ಮುಸ್ಲಿಮರು ಈ ಗಿರಿಗಳಲ್ಲಿರುವ ಬಿಸಗ್ನಿಮಠ, ಫಲಾಹಾರಮಠ, ಬಾಬಾಬುಡನಗಿರಿ ದರ್ಗಾ, ಮುಳ್ಳಯ್ಯನಗಿರಿಗೆ ನಡೆದುಕೊಳ್ಳುತ್ತಿದ್ದವರು.

ನೋಟ

೧೯೯೬ರಲ್ಲಿ ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿ ಪಂಚಯಿತಿಗಳಿಗೆ ಚುನಾವಣೆ ನಡೆದಿತ್ತು. ಅಲ್ಲಿಯ ಮುನೆಲವು ಎಂಬ ಪಂಚಾಯಿತಿಯಲ್ಲಿ ದಲಿತರೇ ಜಾಸ್ತಿ. ಅವರ ಸಂಖ್ಯೆಗೆ ಅನುಸಾರವಾಗಿ ಅವರಿಗೆ ಸ್ಥಾನಗಳನ್ನು ಮೀಸಲಾತಿಯಾಗಿ ಇಡಲಾಗಿತ್ತು. ಈ ಸ್ಥಾನಗಳಿಗೆ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಅನೇಕ ದಲಿತ ವ್ಯಕ್ತಿಗಳು ಸಿದ್ಧರಿದ್ದರು. ಅವರು ಸ್ಪರ್ಧೆಗೆ ಇಳಿದರೆ ಅವರ ಜೀವಗಳಿಗೆ ಅಪಾಯವನ್ನು ಒಡ್ಡಿದ ಗೌಂಡರ್ ಮತ್ತು ತೆವಾರ್ ಸಮಾಜದ ವ್ಯಕ್ತಿಗಳು ಅವರನ್ನು ಸ್ಪರ್ಧಿಸಲೇ ಬಿಡಲಿಲ್ಲ. ಹಾಗೆ ಭೀತಿಯನ್ನು ಉಂಟು ಮಾಡಿದ ಕಾರಣ ಸ್ವಾಭಾವಿಕವಾಗಿ ಅವರು ಸ್ಪರ್ಧಿಸಲು ಹಿಂಜರಿದರು.

○ಪಿ.ಎಂ.ಎನ್. ಮೂರ್ತಿ

ದಲಿತರು 'ಹಿಂದೂ'ಗಳೇ ?

ವರ್ಣಾಶ್ರಮ ಪದ್ಧತಿಯ ಪ್ರಕಾರ ಹಿಂದೂಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಮಾತ್ರ. ದಲಿತರು (ಪಂಚಮರು) ಈ ಪರಿಧಿಯೊಳಗೆ ಬರುವುದೇ ಇಲ್ಲ. ಹಿಂದುತ್ವವಾದಿಗಳು ಅವರನ್ನು ಇಂದಿಗೂ ಹಿಂದು ಮತಕ್ಕೆ ಸೇರಿದವರು ಎಂದು ಪ್ರಮಾಣಿಕವಾಗಿ ಭಾವಿಸುವುದೇ ಇಲ್ಲ. ೨೦೦೧ ರಲ್ಲಿ ನಡೆದ ಜನಗಣನೆಯ ಪ್ರಕಾರ ಹಿಂದೂಗಳ ಸಂಖ್ಯೆ ೮೩ ಕೋಟಿ ಎಂದು ಹೇಳಲಾಗಿತ್ತು. ಈ ಸಂಖ್ಯೆಯಲ್ಲಿ ದಲಿತರ ಸಂಖ್ಯೆಯೂ ಅಡಕವಾಗಿತ್ತು. ಆದರೆ ಆರ್‌ಎಸ್‌ಎಸ್‌ನ ಅತ್ಯಂತ ಹಿರಿಯ ಮುಖಂಡರಾದ ಸುದರ್ಶನ್ ಈಗ್ಗೆ ಎರಡು ತಿಂಗಳ ಹಿಂದೆ ಪಂಜಾಬಿನ ನಗರವೊಂದರಲ್ಲಿ ಮಾಡಿದ ಭಾಷಣದಲ್ಲಿ ಭಾರತದಲ್ಲಿ ಹಿಂದುಗಳ ಸಂಖ್ಯೆ ಇಳಿಮುಖವಾಗಿದೆ. ಈಗ ಅವರ ಸಂಖ್ಯೆ ೬೮ ಕೋಟಿ ಮಾತ್ರ ಎಂದಿದ್ದರು. ಅವರು ನೀಡಿದ ಈ ವಿವರದ ಸಂಖ್ಯೆಯಲ್ಲಿ ಈಗ್ಗೆ ಸುಮಾರು ೨೦ ಕೋಟಿ ದಲಿತರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂಬುದು ಇದರಿಂದ ಖಚಿತವಾಗುತ್ತದೆ.

ದೇಶಕ್ಕೆ ಸ್ವತಂತ್ರ ದೊರೆತು ಈಗಾಗಲೇ ೫೮ ವರ್ಷಗಳಾಗಿವೆ. ಆದರೂ ದೇಶದ ಜನಸಂಖ್ಯೆಯಲ್ಲಿ ಐದರಲ್ಲಿ ಒಂದಂಶವಾಗಿರುವ ದಲಿತ ಸಮುದಾಯದ ಸುಧಾರಣೆಯು ಬಹುತೇಕವಾಗಿ ಇನ್ನೂ ನಗಣ್ಯವಾಗಿಯೇ ಉಳಿದಿದೆ. ಅವರಿನ್ನೂ ತೀವ್ರವಾದ ಶೋಷಣೆ, ಹಾಗೆಯೇ ಮರ್ದನಕ್ಕೆ ಒಳಗಾಗಿಯೇ ಇದ್ದಾರೆ. ಆದರೆ ಅವರ ಪಾಡನ್ನು ಈ ರೀತಿಯಲ್ಲಿ ಸಾಮಾನ್ಯವಾಗಿ ಹೇಳಿದರೆ ನಿಜಸ್ಥಿತಿಯ ಕುರಿತು ಜನರಿಗೆ ಮನವರಿಕೆಯಾಗುವುದಿಲ್ಲ. ಆದುದರಿಂದ ಈ ಕುರಿತು ಜ್ವಲಂತ ದೃಷ್ಟಾಂತಗಳನ್ನು ಜನಸಾಮಾನ್ಯರ ಮುಂದಿಟ್ಟರೆ ಮಾತ್ರ ಅವರಲ್ಲಿ ಸ್ವಲ್ಪ ಮಟ್ಟಿಗಾದರೂ ಸೃಜನಾತ್ಮಕವಾದ ಭಾವನೆಗಳು ಉಂಟಾಗುವ ಸಂಭವಗಳಿವೆ. ಆದುದರಿಂದ ಈ ಕುರಿತಂತೆ ಒಂದೆರಡು ಉದಾಹರಣೆಗಳ ಆಧಾರಗಳ ನೆಲೆಗಳಲ್ಲೇ ಈ ಕುರಿತು ವಿಶ್ಲೇಷಣೆ ನಡೆಸುವ.

೧೯೯೬ರಲ್ಲಿ ತಮಿಳುನಾಡಿನ ಮಧುರೈ ಜಿಲ್ಲೆಯಲ್ಲಿ ಪಂಚಯಿತಿಗಳಿಗೆ ಚುನಾವಣೆ ನಡೆದಿತ್ತು. ಅಲ್ಲಿಯ ಮುನೆಲವು ಎಂಬ ಪಂಚಾಯಿತಿಯಲ್ಲಿ ದಲಿತರೇ ಜಾಸ್ತಿ. ಅವರ ಸಂಖ್ಯೆಗೆ ಅನುಸಾರವಾಗಿ ಅವರಿಗೆ ಸ್ಥಾನಗಳನ್ನು ಮೀಸಲಾತಿಯಾಗಿ ಇಡಲಾಗಿತ್ತು. ಈ ಸ್ಥಾನಗಳಿಗೆ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಅನೇಕ ದಲಿತ ವ್ಯಕ್ತಿಗಳು ಸಿದ್ಧರಿದ್ದರು. ಅವರು ಸ್ಪರ್ಧೆಗೆ ಇಳಿದರೆ ಅವರ ಜೀವಗಳಿಗೆ ಅಪಾಯವನ್ನು ಒಡ್ಡಿದ ಗೌಂಡರ್ ಮತ್ತು ತೆವಾರ್ ಸಮಾಜದ ವ್ಯಕ್ತಿಗಳು ಅವರನ್ನು ಸ್ಪರ್ಧಿಸಲೇ ಬಿಡಲಿಲ್ಲ. ಸ್ಪರ್ಧಿಸಿದರೆ ತಮ್ಮ ಜೀವಗಳನ್ನೇ ಕಳಕೊಳ್ಳಬೇಕಾದೀತು ಎಂಬ ಸಂದರ್ಭ. ಹಾಗೆಯೇ ಭೀತಿಯನ್ನು ಉಂಟು ಮಾಡಿದ ಕಾರಣ ಸ್ವಾಭಾವಿಕವಾಗಿ ಅವರು ಸ್ಪರ್ಧಿಸಲು ಹಿಂಜರಿದರು. ಅವರಲ್ಲಿ ಓರ್ವನು ಮಾತ್ರ ಧೈರ್ಯದಿಂದ ನಾಮ ಪತ್ರವನ್ನು ಸಲ್ಲಿಸಿದ. ಆದರೆ ಅದೇ ರಾತ್ರಿ ಆತನ ಗುಡಿಸಲಿಗೆ ಬೆಂಕಿ ಹಚ್ಚಲಾಯಿತು. ಸ್ಪರ್ಧೆಯಿಂದ ಹಿಂತೆಗೆಯದೆ ಇದ್ದರೆ ಆತನ ಜೀವಕ್ಕೆ ಅಪಾಯವಾಗುವುದು ಖಚಿತ ಎಂಬ ಭೀತಿಯನ್ನು ಉಂಟು ಮಾಡಲಾಯಿತು. ಇವುಗಳ ಪರಿಣಾಮವಾಗಿ ಆತ ಮಾರನೇ ದಿವಸವೇ ತನ್ನ ನಾಮ ಪತ್ರವನ್ನು ಹಿಂದಕ್ಕೆ ತೆಗೆದುಕೊಂಡ. ನಂತರ ಎರಡನೇ ಸಾರಿಗೆ ಈ ಚುನಾವಣೆಗಳನ್ನು ನಡೆಸಲು ಅಧಿಕಾರಿಗಳು ದಿನವನ್ನು ನಿರ್ಧರಿಸಿದರು. ಅಭ್ಯರ್ಥಿಗಳಿಗೆ ತಾವು ಸಾಕಷ್ಟು ರಕ್ಷಣೆ ನೀಡುತ್ತೇವೆ ಎಂದು ಪೊಲೀಸರು ಆಶ್ವಾಸ ನೀಡಿದರು. ಈ ಆಶ್ವಾಸನೆಯ ಆಧಾರದಲ್ಲಿ ಹಲವು ದಲಿತ ವ್ಯಕ್ತಿಗಳು ನಾಮ ಪತ್ರ ಸಲ್ಲಿಸಿದರು. ಆದರೆ ಈ ಗೌಂಡರ್ ಮತ್ತು ತೇವಾರ್ ಕೋಮುಗಳ ಬೆಂಬಲಿಗರು ಹೆಚ್ಚಿನ ದಲಿತರನ್ನು ಮತಗಟ್ಟೆಗೆ ಹೋಗಲು ಬಿಡಲಿಲ್ಲ. ಮತಗಟ್ಟೆಗಳಿಂದ ಮತದ ಪೆಟ್ಟಿಗೆಗಳನ್ನೇ ಹಾರಿಸಲಾಯಿತು. ಹೀಗೆ ಎರಡನೇ ಸಾರಿ ನಡೆಸಿದ ಚುನಾವಣೆಯ ಪ್ರಕ್ರಿಯೆ ಕೂಡಾ ನಿಷ್ಫಲವಾಯಿತು. ಇದಾದ ನಂತರ ೩ನೇ ಬಾರಿಗೆ ಈ ಚುನಾವಣೆಗೆ ದಿನ ನಿಶ್ಚಯಿಸಲಾಯಿತು. ಪೊಲೀಸರ ಬಂದೋಬಸ್ತಿನಲ್ಲಿ ಚುನಾವಣೆ ನಡೆಯಿತು. ಡಿ.ಎಂ.ಕೆ ಪಕ್ಷದ ವತಿಯಿಂದ ಸ್ಪರ್ಧಿಸಿದ ಮುರುಗೇಶನ್ ಎಂಬ ವ್ಯಕ್ತಿ ಚುನಾಯಿತನಾದ. ಆದರೆ ಆತನಿಗೆ ಪಂಚಾಯತ್ ಕಛೇರಿಗೆ ಕಾಲಿಡಲು ಕೂಡಾ ಈ ಕೋಮುಗಳ ಗುಂಪುಗಳು ಬಿಡಲಿಲ್ಲ.

ಹೀಗೆ ಆತನ ಗೆಲುವನ್ನು ನಿರರ್ಥಕಗೊಳಿಸುವುದರ ವಿರುದ್ಧವಾಗಿ ಜಿಲ್ಲಾ ಕಲೆಕ್ಟರಿಗೆ ಒಂದು ಮನವಿ ನೀಡಲು ದಲಿತರು ಮತ್ತು ಆದರ ಮುಖಂಡರು ನಿರ್ಧರಿಸಿದರು. ಊರಿನ ಇತರ ಪಂಗಡಗಳಿಗೆ ಸೇರಿದ ಇತರ ಜನಸಾಮಾನ್ಯರು ಅವರಿಗೆ ತಮ್ಮ ಬೆಂಬಲವನ್ನು ಸೂಚಿಸಿದರು. ೧೯೯೭ರ ಜೂನ್ ೧೭ ರಂದು ಮುರುಗನ್ ಸಮೇತವಾಗಿ ಒಂದು ನಿಯೋಗವು ಜಿಲ್ಲಾ ಕಲೆಕ್ಟರರ ಕಚೇರಿಗೆ ಭೇಟಿ ಇತ್ತಿತ್ತು. ಆದರೆ ಅಂದು ಈ ನಿಯೋಗಕ್ಕೆ ಕಲೆಕ್ಟರರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ.

ನಂತರ ತಮ್ಮ ಊರಿಗೆ ಹಿಂತಿರುಗಲು ಒಂದು ಬಸ್ಸನ್ನು ಏರಿದರು. ಆ ಬಸ್ಸು ಹೊರಡುವ ಸಮಯಕ್ಕೆ ಸರಿಯಾಗಿ ಆರು ಮಂದಿ ತೇವಾರರ ಯುವಕರು ಬಸ್ಸನ್ನು ಏರಿದರು. ಅವರ ಊರಿಗೆ ಇನ್ನೂ ಎರಡು ಮೈಲುಗಳಿವೆ ಎಂಬ ಸ್ಥಳದಲ್ಲಿ ಓರ್ವ ರೋಗಿ ಮುದುಕಿಯನ್ನು ಬಸ್ಸಿಗೆ ಹತ್ತಿಸಲಿಕ್ಕಿದೆ ಎಂದು ಕಂಡಕ್ಟರರಿಗೆ ಹೇಳಿ ಬಸ್ಸನ್ನು ನಿಲ್ಲಿಸಿದರು. ಬಸ್ಸು ನಿಂತದ್ದೇ ತಡ ಸುಮಾರು ೧೦ ಮಂದಿ ಕೈಯ್ಯಲ್ಲಿ ಕತ್ತಿ ದೊಣ್ಣೆಗಳನ್ನು ಹಿಡಿದುಕೊಂಡು ಬಸ್ಸನ್ನು ಹತ್ತಿದರು. ದಲಿತರಲ್ಲದವರೆಲ್ಲರೂ ಕೂಡಲೇ

ಬಸ್ಸಿನಿಂದ ಇಳಿಯಬೇಕೆಂದು ಈ ವ್ಯಕ್ತಿಗಳು ಆಜ್ಞಾಪಿಸಿದರು. ಈ ಪ್ರಯಾಣಿಕರು ಬಸ್ಸಿನಿಂದ ಇಳಿದೊಡನೆ ಮುರುಗನ್ ಮೇಲೆ ಪ್ರಥಮವಾಗಿ ಕತ್ತಿಯಿಂದ ಧಾಳಿ ನಡೆಯಿತು. ಇತರರ ಮೇಲೆ ದೊಣ್ಣೆಗಳಿಂದ ಪ್ರಹಾರ ನಡೆಯಿತು. ಹೀಗೆ ೬ ಮಂದಿ ದಲಿತರನ್ನು ಬಸ್ಸಿನ ಒಳಗೆ ಹತ್ತಿಕ್ಕಲಾಯಿತು. ಈ ಮಧ್ಯೆ ೩ ದಲಿತರು ಬಸ್ಸಿನಿಂದ ಹಾರಿ ಓಡಲು ಹೊರಟರು. ಅವರಲ್ಲಿ ಒಬ್ಬನಿಗೆ ಹಿಂದಿನಿಂದ ಕಲ್ಲುಗಳನ್ನು ಎಸೆದು ಅವನನ್ನು ಅಲ್ಲೇ ಸಾಯಿಸಲಾಯಿತು. ಇನ್ನೆರಡು ಮಂದಿ ಪಾರಾದರು. ಕಲ್ಲಿನ ಹೊಡೆತಕ್ಕೆ ಬಲಿಯಾದ ವ್ಯಕ್ತಿಯ ಹೆಸರು ಸುಂದರ್‌ರಾಜನ್. ಬಸ್ಸಿನ ಒಳಗೆ ಬಲಿಯಾದವ ರೆಂಥರೆ ಚಿಣ್ಣಯ್ಯ, ಮೋನ್, ಸೆವುಗುರು ಮೂರ್ತಿ, ಟೆಲ್ಲಿ ದುಶಿಯ ಭೂಪತಿ. ಚೆನ್ನಯ್ಯ ಮತ್ತು ಕುಮಾರ ಎಂಬ ಇಬ್ಬರು ತಪ್ಪಿಸಿ ಓಡಿ ತಮ್ಮ ಜೀವಗಳನ್ನು ಉಳಿಸಿಕೊಂಡರು.

ಊರಿನ ದಲಿತರು ಇತರರ ಸಹಾಯದಿಂದ ಈ ಕೃತ್ಯಗಳ ವಿವರವಾದ ಹೇಳಿಕೆಗಳಿಂದ ಕೂಡಿದ ಒಂದು ಅರ್ಜಿಯನ್ನು ಸ್ಥಳೀಯ ಪೊಲೀಸ್ ಸ್ಟೇಶನ್ನಿಗೆ ಕೂಡಲೇ ಒಪ್ಪಿಸಿದರು. ಅದರಲ್ಲಿ ಬಸ್ಸನ್ನು ಹತ್ತಿದ ಆರು ಮಂದಿ ತೆವಾರರ ಹೆಸರುಗಳು ಮತ್ತು ದಲಿತರ ವಿರುದ್ಧವಾಗಿ ಕತ್ತಿ ದೊಣ್ಣೆಗಳಿಂದ ಧಾಳಿ ನಡೆಸಿ ಅವರನ್ನು ಕೊಲೆ ಮಾಡಿದ ವ್ಯಕ್ತಿಗಳ, ಹಾಗೆಯೇ ಸುಂದರ್‌ರಾಜನ್ನಿಗೆ ಕಲ್ಲು ಎಸೆದು ಆತನನ್ನು ಸಾಯಿಸಿದ ವ್ಯಕ್ತಿಗಳ ಹೆಸರುಗಳನ್ನು ಕ್ರಮಪ್ರಕಾರವಾಗಿ ನಮೂದಿಸಲಾಗಿತ್ತು. ಆದರೆ ಪೊಲೀಸ್ ಡೈರಿಯಲ್ಲಿ ದಾಖಲಾದದ್ದು ಸತ್ತವರ ಹೆಸರುಗಳು ಮಾತ್ರ ಅಪರಾಧಿಗಳ ಹೆಸರುಗಳನ್ನು ಈ ಅರ್ಜಿಯಲ್ಲಿ ಕಾಣಿಸಿದರೂ ಡೈರಿಯಲ್ಲಿ ಅವುಗಳನ್ನು ಬರೆದಿರಲಿಲ್ಲ. ನಂತರ ಅಪರಾಧಿಗಳನ್ನು ಗೊತ್ತು ಹಚ್ಚಲು ಸಾಧ್ಯವಾಗದ್ದರಿಂದ ಅಪರಾಧದ ಪಟ್ಟಿಯನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ ಎಂಬ ವರದಿಯನ್ನು ನ್ಯಾಯ ಸ್ಥಾನಕ್ಕೆ ಸಲ್ಲಿಸಿ ಕೇಸನ್ನು ತಳ್ಳಿಹಾಕಲಾಯಿತು. ಇಂತಹ ನಡುಹಗಲಲ್ಲೇ ಸಾರ್ವಜನಿಕವಾಗಿ ನಡೆದ ಹತ್ಯಾಕಾಂಡವು ಈ ರೀತಿಯಲ್ಲಿ ಸಮಾಪ್ತಿಯಾಯಿತು.

ಇದರಿಂದ ತಮಿಳುನಾಡಿನ ಕೆಲವು ಭಾಗಗಳಲ್ಲಿ ದಲಿತರ ಮೇಲಾಗುವ ಹಿಂಸಾಚಾರಗಳು, ಅವರ ಮೇಲಾಗುವ ದೌರ್ಜನ್ಯಗಳು, ಅವರ ಈ ಕಷ್ಟ ಸಂಕಷ್ಟಗಳಿಗೆ ಸ್ಪಂಧಿಸದೆ ಇರುವ ಪೊಲೀಸು ಇಲಾಖೆಯ ರೀತಿನೀತಿಗಳು ಇವುಗಳನ್ನೆಲ್ಲಾ ಯಥಾ ದೃಷ್ಟಿಯಿಂದ ಸಮೀಕ್ಷಿಸಿದರೆ ಈ ದಲಿತರನ್ನು (ಈ ಮೇಲ್ಜಾತಿಯ ಗೌಂಡರು ಮತ್ತು ತೆವಾರ್‌ಗಳು) ಮಾನವರೆಂದು ಗುರುತಿಸುವುದಿಲ್ಲ, ಬದಲು ಅವರು ಪ್ರಾಣಿಗಳೆಂದೇ ಎಣಿಸುವರು ಎಂಬುದು ಅತ್ಯಂತ ದುಃಖಕರವಾದದ್ದು ಎಂಬುದು ನಿಸ್ಸಂದೇಹ.

ತಮಿಳುನಾಡಿನಲ್ಲಿ ಮೊದಲಿಂದಲೂ ದಲಿತರನ್ನು ಪ್ರಾಣಿಗಳಂತೆಯೇ ನಡೆಸಿಕೊಳ್ಳುವುದು ಒಂದು ಪದ್ಧತಿಯಾಗಿಯೇ ನಡೆದು ಬಂದಿದೆ. ದಲಿತರು ತಮ್ಮನ್ನು ಬರೇ ಗುಲಾಮರ ಪರಿಸ್ಥಿತಿಗೆ ಇಳಿಸಿಕೊಳ್ಳಲು ಈ ದಲಿತರೇ ಕಾರಣ ಎಂಬ ಭಾವನೆಯು ಈ ಮೇಲ್ಜಾತಿಯ ವ್ಯಕ್ತಿಗಳಲ್ಲಿ ಹರಳುಗಟ್ಟಿದೆ.

೧೯೧೮ರಲ್ಲಿ ಈ ಮೇಲ್ಜಾತಿಯ ಹಲವು ವ್ಯಕ್ತಿಗಳು ಒಂದು ಸಭೆ ಸೇರಿ ಈ ದಲಿತರು ಹೇಗೆ ನಡೆದುಕೊಳ್ಳಬೇಕು ಎಂಬುದರ ಕುರಿತು ೧೦ ಅಂಶಗಳ ಒಂದು ದೈವಾಜ್ಞೆಯನ್ನು ರೂಪಿಸಿ ಅವುಗಳನ್ನು ದಲಿತರ ಮೇಲೆ ಹೊರಿಸಿದ್ದರು. ೧೯೩೯ರಲ್ಲಿ ಈ ದೈವಾಜ್ಞೆಯನ್ನು ನವೀಕರಿಸಲಾಯಿತು.

೧.ದಲಿತರು, ತೆವಾರರು ಮತ್ತು ಅವರಿಗಿಂತಲೂ ಮೇಲ್ಜಾತಿಯುವರ ಭೂಮಿಗಳನ್ನೇ ಕೃಷಿ ಮಾಡಲು ದೊರಕಬೇಕು. ೨.ಅವರು ಖಾಸಗೀ ಬಾವಿಗಳಿಂದ ನೀರನ್ನು ಎತ್ತಬಾರದು. ಸಾರ್ವಜನಿಕರ ಹಾಗೆಯೇ ಪಶುಗಳಿಗಾಗಿರುವ ಕೆರೆಗಳ ನೀರನ್ನು ಮಾತ್ರ ಅವರು ಉಪಯೋಗಿಸಲು ಅರ್ಹರು. ೩. ದಲಿತರ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವ ಕುರಿತು ಆಲೋಚಿಸಕೂಡದು. ೪.ಮಹಿಳೆಯರು ಚಿನ್ನ ಅಥವಾ ಬೆಳ್ಳಿಯ ಆಭರಣಗಳನ್ನು ಧರಿಸಬಾರದು. ೫. ಗಂಡಸರು ತಲೆವಸ್ತ್ರಗಳನ್ನು ಕಟ್ಟಿಕೊಳ್ಳಬಾರದು. ಪಾದರಕ್ಷೆಗಳನ್ನು ಉಪಯೋಗಿಸಬಾರದು. ೬. ಮೇಲ್ಜಾತಿಯವರ ವಸತಿಗಳ ಸಮೀಪದಲ್ಲಿ ಅವರು ತಮ್ಮ ಗುಡಿಸಲುಗಳನ್ನು ನಿರ್ಮಿಸಬಾರದು. ೭. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ದಲಿತರು ಗ್ರಾಮಗಳ ಅಂಚುಗಳಲ್ಲೇ ತಮ್ಮ ವಸತಿಗೆ ಏರ್ಪಾಡು ಮಾಡಿಕೊಳ್ಳತಕ್ಕದ್ದು. ೮. ಮೇಲ್ಜಾತಿಯವರು ಉಪಯೋಗಿಸುವ ಅನೇಕ ವಸ್ತುಗಳು ಅವರಿಗೆ ಅಲಭ್ಯವಾಗಿರಬೇಕು. ೯. ದೇವಸ್ಥಾನಗಳ ಸಮೀಪ ಅವರ ಚಲನವಲನವಿರಕೂಡದು. ೧೦. ಉಚ್ಚ ಜಾತಿಯವರೇ ಜೀವಿಸುವ ಪ್ರದೇಶಗಳಲ್ಲಿಯ ಮಧ್ಯದ ದಾರಿಗಳಲ್ಲಿ ಅವರು ಸಂಚರಿಸಕೂಡದು.

ಈ ಕಟ್ಟಾಜ್ಞೆಗಳ ಎಲ್ಲಾ ಅಂಶಗಳನ್ನು ಜಾರಿಯಲ್ಲಿಡಲು ಇಂದು ಸಾಧ್ಯವಾಗುತ್ತಿಲ್ಲ. ಆದರೆ ಅವುಗಳ ಬೇರೆ ಬೇರೆ ವಿಧಾನಗಳಲ್ಲಿ ಹಾಗೆಯೇ ಕೆಲವು ಮಟ್ಟಿಗೆ ರೂಪಾಂತರಗೊಳಿಸಿ ಅವುಗಳನ್ನು ಆಚರಣೆಗಳಲ್ಲಿ ಇರಿಸಲಾಗಿದೆ.

ಇಂದಿಗೂ ಈ ದಲಿತರು ಬಸ್ಸಿನಲ್ಲಿ ಪ್ರಯಾಣ ಮಾಡುವಲ್ಲಿ ನಿಂತುಕೊಂಡೇ ಇರಬೇಕಾಗುತ್ತದೆ. ಅವರು ಸೀಟಿನಲ್ಲಿ ಕುಳಿತರೆ ಬಸ್ಸಿನಲ್ಲಿರುವ ಕೆಲವರು ಅದನ್ನು ವಿರೋಧಿಸುತ್ತಾರೆ. ಅವರ ಸ್ಮಶಾನಗಳು ಇನ್ನೂ ಪ್ರತ್ಯೇಕವಾಗಿಯೇ ಉಳಿದಿದೆ. ದೇವಸ್ಥಾನಗಳ ಪರಿಧಿಯಲ್ಲಿ ಅವರಿಗೆ ಪ್ರವೇಶವು ದೊರಕುವುದಿಲ್ಲ. ಅವರ ಆಡುಗಳು ಕೂಡಾ ದೇವಸ್ಥಾನಗಳ ಬಳಿ ಮೇಯಕೂಡದು. ಮೇಲ್ಜಾತಿಯವರ

> **ಡಾ|| ಅಂಬೇಡ್ಕರ್ ದಲಿತರಿಗಾಗಿ ತಮ್ಮ ಆಯಸ್ಸನ್ನೇ ಮುಡಿಪಾಗಿಟ್ಟವರು. ಆದರೆ ಅವರು ತನ್ನ ಹೋರಾಟ ಗಳಿಂದ ತಾನು ಇಚ್ಛಿಸಿದ ಫಲಿತಾಂಶವನ್ನು ಪಡೆಯಲಾರದೆಹೋದರು. ಈ ಕಾರಣದಿಂದಲೇ ದಲಿತರು ಬೌದ್ಧ ಧರ್ಮಿಗಳಾಗಬೇಕು ಎಂಬ ಕರೆಯನ್ನು ಅವರು ನೀಡಬೇಕಾಯಿತು. ಅನೇಕರು ಬೌದ್ಧ ಧರ್ಮ ವನ್ನು ಅವಲಂಬಿಸಿದರೂ ಅವರ ಜೀವನ ಪರಿಸ್ಥಿತಿ ಆರ್ಥಿಕ ಪರಿಸ್ಥಿತಿಗೆ ಇಚ್ಛಿಸಿದ್ದ ಅವಿಷ್ಕಾರದ ಮಟ್ಟ ತಲುಪಲು ಇನ್ನೂ ಸಾಧ್ಯ ವಾಗಲಿಲ್ಲ. ಸಮಾಜದಲ್ಲಿ ಇಂದಿಗೂ ಕೋಟ್ಯಾಂತರ ಜನರು ಶೋಷಣೆಗೆ ಗುರಿಯಾಗುತ್ತಿದ್ದಾರೆ.**

ವಿದ್ಯಾರ್ಥಿಗಳ ಜಾಸ್ತಿಯಾಗಿರುವ ಶಾಲೆಗಳಲ್ಲಿ ದಲಿತರ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವುದೇ ದುಲರ್ಭ. ಅವರಿಗೆ ಸರಕಾರದ ಶಾಲೆಗಳೇ ಗತಿ.

ಪೊಲೀಸು ಖಾತೆಯಲ್ಲಿ ಇರುವ ಅಧಿಕಾರಿಗಳು ಹಾಗೆಯೇ ಪೊಲೀಸು ಕಾನ್‌ಸ್ಟೇಬಲರು ಕೂಡಾ ಈ ದಲಿತರನ್ನು ವಕ್ರದೃಷ್ಟಿಯಿಂದಲೇ ನೋಡುತ್ತಾರೆ. ಈ ಖಾತೆಯ ಮೇಲ್ ಸ್ಥಾನಗಳಿಂದ ಇತರ ರಾಜ್ಯಗಳಿಂದ ಅಧಿಕಾರಿಗಳನ್ನು ನೇಮಿಸಲಾಯಿತು. ಅಭಿಯಾನವನ್ನು ಸರ್ಕಲ್ ಇನ್‌ಸ್ಪೆಕ್ಟರ್‌ರ ಸ್ಥಾನಗಳ ತನಕ ನಡೆಸಲಾಯಿತು. ಆದರೆ ಅವರ ಕೆಳಗಿನ ಅಧಿಕಾರಿಗಳು ಸಾಮಾನ್ಯವಾಗಿ ಆ ಪ್ರದೇಶದವರೇ ಆಗಬೇಕಾದುದರಿಂದ/ಆಗಿರುವುದರಿಂದ ದಲಿತರ ವಿರುದ್ಧ ಪೊಲೀಸರ ದೌರ್ಜನ್ಯಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ ನಿಜ. ಆದರೆ ಅವರಿಗೆ ದೊರಕಬೇಕಾದ ಸಂಪೂರ್ಣ ಮನಸ್ಸಿನ ಸುಖ, ಶಾಂತಿ ಇನ್ನೂ ದೂರವಾಗಿಯೇ ಇದೆ. ತಮಿಳುನಾಡಿನಲ್ಲಿ ಭೂ ಸುಧಾರಣೆಯ ಕ್ರಮಗಳು ಇನ್ನೂ ಸಂಪೂರ್ಣವಾಗಿ ಚಾಲ್ತಿಗೊಳಿಸಲಾಗಿರುವುದಿಲ್ಲ. ಈಗ ನಡೆದಿರುವ ಭೂಸುಧಾರಣಾ ಪ್ರಕ್ರಿಯೆಗಳಿಂದ ತೇವಾರರಂತಹ ಮಧ್ಯವರ್ತಿಗಳು ‘ಲಾಭ’ ಪಡೆದಿದ್ದಾರೆ. ದಲಿತರನ್ನು ಹೀಗೆ ಹೆಚ್ಚಾಗಿ ಶೋಷಿಸುತ್ತಿರುವವರು ಈ ತೇವಾರರ ವಿಭಾಗಕ್ಕೆ ಸೇರಿದವರು ಮತ್ತು ಗೌಂಡರುಗಳು.

ಇದೇ ಸಮಯದಲ್ಲಿ ತಮಿಳುನಾಡಿನ ದಲಿತರು ಹಿಂದಿನಂತೆ ಇಂದೂ ಗುಲಾಮರಾಗಿಯೇ ಉಳಿದಿರುವುದಿಲ್ಲ. ತಮ್ಮ ಹಕ್ಕಿಗಾಗಿ ಅವರು ಹೋರಾಡಲು ತೊಡಗಿದ್ದಾರೆ. ಇದರಿಂದಾಗಿ ಈಗ ಘರ್ಷಣೆಗಳು ಉಂಟಾಗುತ್ತಿವೆ. ಆದರೆ ಇಂತಹ ಘರ್ಷಣೆಗಳುಂಟಾದಾಗ ಪೊಲೀಸರ ಸಹಾಯ ಅವರಿಗೆ ದೊರೆಯದ ಕಾರಣ ಬಹುತೇಕವಾಗಿ ಅಂತಹ ಘರ್ಷಣೆಗಳಿಂದ ಅವರಿಗೆ ಬಹಳಷ್ಟು ಹಾನಿ, ನಷ್ಟ ಕಷ್ಟಗಳು ಸಂಭವಿಸುತ್ತವೆ.

ಕೇರಳದಲ್ಲಿ ಕೂಡಾ ಹಿಂದೆ ದಲಿತರ ಪರಿಸ್ಥಿತಿ ಇದಕ್ಕಿಂತಲೂ ಕಡೆಯಾಗಿತ್ತು. ಓರ್ವ ಹೊಲೆಯ ದಾರಿ ನಡೆಯುವಲ್ಲಿ ಆತ ಕೂ, ಕೂ ಎಂದು ಶಬ್ದ ಮಾಡಿಕೊಂಡೇ ಹೋಗಬೇಕಿತ್ತು. ನಂಬುದರಿ ಬ್ರಾಹ್ಮಣ ಆತನ ಕೂಗಿಗೆ ಸ್ಪಂದಿಸಿದರೆ ಹೊಲೆಯ ರಸ್ತೆ ಅಥವಾ ದಾರಿಯಿಂದ ೧೬ ಮೀಟರಿನಷ್ಟು ಹೊರಗೆ ನಿಂತು ನಂಬುದರಿ ಬ್ರಾಹ್ಮಣನು ದಾಟಿಹೋದ ನಂತರವೇ ಆತನಿಗೆ ಮುಂದುವರಿಸಲು ಮಾತ್ರ ಸಾಧ್ಯ. ಎಳವರಿಗೆ ಆತನು ೪ ಮೀಟರು ದೂರ ನಿಂತರೆ ಸಾಕಾಗಿತ್ತು. ನಾಯರುಗಳಿಗೆ ೮ ಮೀಟರುಗಳ ದೂರ, ಹಾಗೆಯೇ ನಂಬೀಶನ್ ನಂಬಿಯಾರುಗಳಿಗೆ ೧೦ ಮೀಟರು ದೂರದಲ್ಲೇ ಆತನು ನಿಲ್ಲಬೇಕಾಗಿತ್ತು. ಆದರೆ ಅಲ್ಲಿ ದಲಿತರು ಇಂತಹ ಅಮಾನುಷ ಪದ್ಧತಿಯನ್ನು ಈಗ ಸಂಪೂರ್ಣ ಧ್ವಂಸಗೊಳಿಸಿದ್ದಾರೆ. ಹೇಗೆ ? ಅವರು ಇತರ ಬಡಶೋಷಕ ಜನರೊಡನೆ ಸೇರಿ ವರ್ಗ ಹೋರಾಟಗಳನ್ನು ನಡೆಸಿದರು. ಇದರಿಂದ ಆ ಹೋರಾಟಗಳಿಗೆ ದೊರೆತ ಬಲವನ್ನೇ ಮೇಲ್ಜಾತಿಯ ವರ್ಗಗಳಿಂದ ನಿರ್ಬಲಗೊಳಿಸಲು ಸಾಧ್ಯವಾಗಲಿಲ್ಲ. ಈ ವರ್ಗ ಹೋರಾಟಗಳಿಗೆ ಮಾರ್ಕ್ಸ್ ತತ್ವವು ಬೆರಳನ್ನು ತೋರಿಸಿತು. ಫಲಿತಾಂಶವಾಗಿ ಕೇರಳದಲ್ಲಿ ದಲಿತರು ಬರೇ ತಮ್ಮ ಜಾತಿಯಲ್ಲಿ ನೆಲೆಗಳಲ್ಲಿ ಎಷ್ಟೇ ಹೋರಾಟಗಳನ್ನು ನಡೆಸಲು ಅದಕ್ಕೆಂದು ಮಿತಿ ಇದೆ.

ಡಾ|| ಅಂಬೇಡ್ಕರ್ ಓರ್ವ ಮಹಾಪುರುಷ. ಅವರು ದಲಿತರಿಗಾಗಿ ತಮ್ಮ ಆಯಸ್ಸನ್ನೇ ಮುಡಿಪಾಗಿ ಇಟ್ಟವರು.

ಆದರೆ ಅವರು ತನ್ನ ಹೋರಾಟಗಳಿಂದ ತಾನು ಇಚ್ಛೆಸಿದ ಫಲಿತಾಂಶವನ್ನು ಪಡೆಯಲಾರದೆಹೋದರು. ಈ ಕಾರಣ ದಿಂದಲೇ ದಲಿತರು ಬೌದ್ಧ ಧರ್ಮಿಗಳಾಗಬೇಕು ಎಂಬ ಕರೆಯನ್ನು ಅವರು ನೀಡಬೇಕಾಯಿತು. ಅನೇಕರು ಬೌದ್ಧ ಧರ್ಮವನ್ನು ಅವಲಂಬಿಸಿದರು. ಆದರೆ ಅವರ ಜೀವನ ಪರಿಸ್ಥಿತಿ ಆರ್ಥಿಕ ಪರಿಸ್ಥಿತಿಗೆ ಇಚ್ಛೆಸಿದ್ದ ಅವಿಷ್ಕಾರದ ಮಟ್ಟ ಅವರಿಗೆ ಇನ್ನೂ ತಲುಪಲು ಸಾಧ್ಯವಾಗಲಿಲ್ಲ. ಆದುದರಿಂದ ನಮ್ಮ ಇಂದಿನ ಸಮಾಜದಲ್ಲಿ ಕೋಟ್ಯಾಂತರ ಜನರು ಶೋಷಣೆಗೆ ಗುರಿಯಾಗಿ ಜೀವಿಸುತ್ತಿದ್ದಾರೆ. ಈ ಶೋಷಣೆಗೆ ಗುರಿಯಾಗಿರುವ ದಲಿತರು ಈ ಜನರೊಂದಿಗೆ ಸೇರಿ ವರ್ಗ ಹೋರಾಟಗಳನ್ನು ಸಂಘಟಿಸಿದರೆ ಮಾತ್ರ ಅವರ ಆಸೆ ಆಕಾಂಕ್ಷೆಗಳಿಗೆ ಸ್ವಲ್ಪ ಮಟ್ಟಿಗಾದರೂ ಸಾಂತ್ವನ ತಂದುಕೊಳ್ಳಲು ಸಾಧ್ಯ ಎಂಬುದನ್ನು ಕೇರಳದ ಇತಿಹಾಸ ಈಗಾಗಲೇ ಕಲಿಸಿಕೊಟ್ಟಿದೆ.

ಆದರೆ ತಮಿಳುನಾಡಿನಲ್ಲಿ ಈ ಒಂದು ಹೊಂದಾಣಿಕೆಗಳು ದೂರವಾಗಿಯೇ ಉಳಿದ ಕಾರಣ ಅಲ್ಲಿಯ ದಲಿತರಿಗೆ ಕೇರಳದಲ್ಲಿಯ ದಲಿತರು ಪಡಕೊಂಡ ಹಕ್ಕು ಬಾಧ್ಯತೆಗಳನ್ನು ಗಳಿಸಿಕೊಳ್ಳಲು ಇನ್ನೂ ಸಾಧ್ಯವಾಗಿರುವುದಿಲ್ಲ. ಮೇಲ್ಜಾತಿಯವರೂ ಹಾಗೆಯೇ ಪೊಲೀಸ್ ಇಲಾಖೆಯೂ ಅವರನ್ನು ಕಡೆಗಣ್ಣಿನಿಂದಲೇ ನೋಡುತ್ತಿದ್ದಾರೆ. ೨೦೦೨ರಲ್ಲಿ ಇದೇ ಮೇಲ್ ಮಲಾವು ಪಂಚಾಯಿತಿಗೆ ಪುನಃ ಚುನಾವಣೆ ನಡೆಯಿತು. ರಾಜು ಎಂಬ ದಲಿತ ಪಂಚಾಯತಿಯ ಅಧ್ಯಕ್ಷನೂ ಆದ. ಆದರೆ ಆತನು ಪಂಚಾಯತಿಯ ಕಚೇರಿಗೆ ಹೋಗಿ ಅಲ್ಲಿ ತನ್ನ ಜವಾಬ್ದಾರಿಯ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲಿಗೆ ಹೋದರೆ ಆತನ ಜೀವಕ್ಕೆ ಆಗಬಹುದಾದ ಭಯ ಆತನನ್ನ ಕಾಡುತ್ತಾ ಇದೆ. ಆದುದರಿಂದ ಗ್ರಾಮದ ಟಿ.ಪಿ.ಯ ಕೇಂದ್ರದ ಒಂದು ಭಾಗದಲ್ಲಿ ಆತನು ಈಗ ತನ್ನ ಕರ್ತವ್ಯಗಳನ್ನು ನಡೆಸುತ್ತಿದ್ದಾನಷ್ಟೆ.

ವರ್ಗ ಹೋರಾಟಗಳಲ್ಲಿ ನಂಬಿಕೆವುಳ್ಳ ಎಡಪಕ್ಷದವರು ಅವರನ್ನು ಎಂದಿಗೂ ದೂರೀಕರಿಸುವುದಿಲ್ಲ.

ಆದುದರಿಂದ ಈ ವಿಭಾಗದ ಜನರು ನಮ್ಮ ರಾಷ್ಟ್ರದ ಪ್ರಜೆಗಳು ಅವರಿಗೆ ಉಳಿದವರಷ್ಟೇ ಎಲ್ಲಾ ರೀತಿಯ ಹಕ್ಕುಗಳಿವೆ ಎಂದು ನಮ್ಮ ಸಂವಿಧಾನ ಹೇಳಿದೆ, ನಿಜ. ಆದರೆ ಅದನ್ನು ಪಡೆಯಲು, ಹಾಗೆಯೇ ಇತರರಂತೆ ತಮಗೂ ಬಾಳಿ ಬದುಕುವ ಪರಿಸ್ಥಿತಿಯನ್ನು ತಂದುಕೊಳ್ಳಲು ವರ್ಗ ಹೋರಾಟ ಒಂದೇ ದಾರಿ. ಇದನ್ನು ಆದಷ್ಟು ಬೇಗನೆ ಅವರು ಮನವರಿಕೆ ಮಾಡಿಕೊಳ್ಳಬೇಕಿದೆ. □

೨೦೦೨ರಲ್ಲಿ ಇದೇ ಮೇಲ್ ಮಲಾವು ಪಂಚಾಯಿತಿಗೆ ಪುನಃ ಚುನಾವಣೆ ನಡೆಯಿತು. ರಾಜು ಎಂಬ ದಲಿತ ಪಂಚಾಯತಿಯ ಅಧ್ಯಕ್ಷನೂ ಆದ. ಆದರೆ ಆತನು ಪಂಚಾಯತಿಯ ಕಚೇರಿಗೆ ಹೋಗಿ ಅಲ್ಲಿ ತನ್ನ ಜವಾಬ್ದಾರಿಯ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ. ಅಲ್ಲಿಗೆ ಹೋದರೆ ಆತನ ಜೀವಕ್ಕೆ ಆಗಬಹುದಾದ ಭಯ ಆತನನ್ನ ಕಾಡುತ್ತಾ ಇದೆ. ಆದುದರಿಂದ ಗ್ರಾಮದ ಟಿ.ಪಿ.ಯ ಕೇಂದ್ರದ ಒಂದು ಭಾಗದಲ್ಲಿ ಆತನು ಈಗ ತನ್ನ ಕರ್ತವ್ಯಗಳನ್ನು ನಡೆಸುತ್ತಿದ್ದಾನಷ್ಟೆ.

Statement about ownership and other particulars about newspaper

FORM IV

1.	Place of Publication	:	Bangalore
2.	Periodicity of its publication	:	Monthly
3.	Printer's Name	:	**S.R. Govindu**
	Nationality		Indian
	Address		No. 63, Anjananagar, Vishwaneedam Post, Bangalore-560 091
4.	Publisher's Name :		**S.R. Govindu**
	Nationality		Indian
	Address		No. 63, Anjananagar, Vishwaneedam Post, Bangalore-560 091
5.	Editor's Name	:	**Indudhara Honnapura**
	Nationality		Indian
	Address		No. 402, 1st main, 2nd Block, HBR Layout, Bangalore-560 043
6.	Name and address of individuals who own the newspaper and partners and shareholders holding more than one per cent of the total capital	:	Spoorthidhama, No. 63, Anjananagar, Vishwaneedam Post, Bangalore - 560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Date: 28-02-2005

Sd/-
S.R. Govindu
Publisher

ಕಂಫರ್ಟ್ ಜೋನಿನ ನೈತಿಕ ವ್ಯಸನ

ವಾತ್ಸಾಯನ ಕಾಮ ಸೂತ್ರದ ಸಹಜ ಮೈಥುನ
ಗರ್ಭ ಕಟ್ಟುವುದು ಜೀವಾಣು ಧಾತು ಸಮ್ಮಿಲನ
ಕಂಫರ್ಟ್ ಜೋನಿನ ನೈತಿಕ ವ್ಯಸನ
ಗರ್ಭ ಧರಿಸುವುದು ಬೇಡ ಹೆಣ್ಣು
ರಿಸ್ಕಿಲ್ಲದ ಮಜಾ ನೆನೆದು ಒಸರುವುದು
ಬಲವಂತ ಧರಿಸಿದ ಅವನ ನಿರೋಧ್

ಯಮುನೆಯ ನಡುಗಡ್ಡೆಯಲಿ ಮೀನ ಗಂಧಿಯ
ತೋಳಸಂಧಿಯಲಿ ಮುಲುಕಿದ ವೃದ್ಧ ಪರಾಶರ
ಹಿತಾನುಭವ ನೀರಿನಲಿ ಮೀನು ಹೊಳೆದಂತೆ
ಜನಿಸಿಬಂದನು ವೇದವ್ಯಾಸ ಕಾದಿದೆ ಕುರುಕ್ಷೇತ್ರ

ಇತ್ತ ಕಾಳಿಂದಿಯ ಪ್ರವಾಹದಲಿ ಬಿದ್ದ ಬಡ ನರಿಯೊಂದು
ಊಳಿಡುತ್ತಿದೆ ಪ್ರಪಂಚ ಹಾಳಾಯ್ತು ಹಾಳಾಯ್ತೆಂದು
ಕ್ಷೇಮ ದಡದಲಿ ನಿಂತ ಜನ ನೋಡಿ ಗದರಿದರು
ಎಲ್ಲಿ ಹಾಳಾಯ್ತು ಮೂರ್ಖ ನರಿ ಬಾಯ್ಮುಚ್ಚೆಂದು

○ ಪ್ರೊ॥ ಶಿವರಾಮಯ್ಯ

ಸಂಸ್ಕೃತಿ– ಒಂದು ಚಿಂತನೆ

ಸಂಸ್ಕೃತಿ ಶಬ್ದವನ್ನು ಹಲವಾರು ಬಗೆಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ. ಅದರ ಬಗ್ಗೆ ನಿಶ್ಚಿತ ರೂಪ ಕೊಡುವುದು ಕಠಿಣ. ಏಕೆಂದರೆ ಒಂದೊಂದು ಬಾರಿ ಒಂದೊಂದು ಬಗೆಯ ಅರ್ಥವನ್ನು ಅದು ಹೊರಹೊಮ್ಮಿಸುತ್ತದೆ. ಆಯಾಕಾಲದ ನಂಬುಗೆಗಳು ಆಚರಣೆಗಳು ಆಹಾರ ಪದ್ಧತಿ, ಉಡುಗೆ-ತೊಡುಗೆಗಳು, ಆ ಕಾಲದ ಭಾಷೆ ಸಂಸ್ಕೃತಿಯ ವಿಶಿಷ್ಟತೆಯನ್ನು ವ್ಯಕತಿಪಡಿಸುತ್ತದೆ. ಆದರೆ ಕಾಲಕಳೆದಂತೆ ಸಂಸ್ಕೃತಿಯ ಒಂದು ಮುಖ ಮುಂಚೂಣಿಗೆ ಬಂದು ಅದೇ ಇಡೀ ಸಂಸ್ಕೃತಿಯ ಸಂಕೇತವೆಂಬಂತೆ ಭಾಸವಾಗುತ್ತದೆ. ಒಮ್ಮೆ ನಂಬುಗೆಗಳೇ ಸಂಸ್ಕೃತಿ ಎನಿಸಿದರೆ ಮತ್ತೊಮ್ಮೆ ಆಚರಣೆಗಳು ಹಾಗೆನಿಸುತ್ತವೆ. ಮಗದೊಮ್ಮೆ ಆ ಕಾಲದ ಕಲೆ, ಸಾಹಿತ್ಯ, ಭಾಷೆಗಳು ಸಂಸ್ಕೃತಿಯೆನಿಸುತ್ತವೆ. ಆದರೆ ಇವುಗಳಲ್ಲಿ ಯಾವುದೂ ಒಂದು ಮಾತ್ರ ಸಂಸ್ಕೃತಿಯೆನಿಸುತ್ತದೆ. ಆದರೆ, ಇವುಗಳಲ್ಲಿ ಯಾವುದೂ ಒಂದು ಮಾತ್ರ ಸಂಸ್ಕೃತಿಯೆನಿಸುವುದಿಲ್ಲ.

ಈ ಮಧ್ಯೆ ಕಾಲಾನುಕ್ರಮವಾಗಿ ಹೆಸರಿಸಲ್ಪಟ್ಟ ಹಲವಾರು ಭಿನ್ನ-ಭಿನ್ನ ಸಾಂಸ್ಕೃತಿಕ ನೆಲೆಗಳನ್ನು ನಾವು ಮುಖಾಮುಖಿಯಾಗಿಸಿ ವ್ಯಾಖ್ಯಾನಿಸುತ್ತ ಬಂದಿದ್ದೇವೆ. ಅವು ಕಾಲಸೂಚಿಯಾಗಿರಬಹುದು ಅಥವಾ ದೇಶಸೂಚಿಯಾಗಿರಬಹುದು. ಅವುಗಳು ಪರಸ್ಪರ ವಿರೋಧಿಯೆಂದೋ ಪೂರಕವೆಂದೋ ನಿಶ್ಚಯಿಸಿ ಸಂಘರ್ಷಿಸಲು ಎಡೆಮಾಡಿಕೊಡಲಾಗುತ್ತದೆ. ಪುರಾತನ ಸಂಸ್ಕೃತಿ, ಆಧುನಿಕ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ – ನಗರ ಸಂಸ್ಕೃತಿ, ಬುಡಕಟ್ಟು ಸಂಸ್ಕೃತಿ – ವಸಾಹತು ಸಂಸ್ಕೃತಿ, ನಿರಕ್ಷರ ಸಂಸ್ಕೃತಿ – ಸಾಕ್ಷರ ಸಂಸ್ಕೃತಿ ಇವುಗಳು ಒಮ್ಮೆ ಪರಸ್ಪರ ಪೂರಕವೆಂದೋ ಮತ್ತೊಮ್ಮೆ ಮಾರಕವೆಂದೋ ನಿರ್ಧರಿಸಲಾಗುತ್ತದೆ. ಒಮ್ಮೆ ಮುಂಚೂಣಿಗೆ ಬಂದ ಸಂಸ್ಕೃತಿಯೆಂದು ವ್ಯಾಖ್ಯಾನಿಸಲ್ಪಟ್ಟ ಅಂಶ ಮತ್ತೊಮ್ಮೆ ಹಿಂದೆ ಸರಿದು ಅದು ಸಂಸ್ಕೃತಿಯೇ ಅಲ್ಲವೆನಿಸುವಷ್ಟು ದುರ್ಬಲ ಮಾನ್ಯತೆ ಪಡೆಯುತ್ತಿದೆ. ಇದಕ್ಕೆ ಶಿಲ್ಪಕಲೆ ಉದಾಹರಣೆಯಾಗಬಹುದು.

ಕರ್ನಾಟಕದಲ್ಲಿ ಹೊಯ್ಸಳರು, ರಾಷ್ಟ್ರಕೂಟರ ಇತಿಹಾಸವನ್ನು ಗಮನಿಸಿದರೆ ಶಿಲ್ಪಕಲೆಯೇ ಈ ಅರಸರು ಬೆಳೆಸಿದ ಸಂಸ್ಕೃತಿಯಾಗಿತ್ತು ಎನಿಸುತ್ತಿದೆ. ಮ್ಯಾಕ್ಸ್ ಮುಲ್ಲರ್‌ರಂತಹ ಇತಿಹಾಸಕಾರರು ಭಾರತೀಯ ಸಂಸ್ಕೃತಿಯ ಬೇರುಗಳು ಇಲ್ಲಿನ ವೈದಿಕ ತಳಹದಿಯಲ್ಲಿವೆ ಎಂದು ಹೇಳಿ ವೈದಿಕೇತರವಾಗಿ ವಿಚಾರಿಸುವ ಗೋಜಿಗೇ ಹೋಗಲಿಲ್ಲ. ಆದಿ ಕಾಲದಿಂದ ಸಂಸ್ಕೃತಿಗೆ ನೀಡಲಾಗಿರುವ ಈ ವ್ಯಾಖ್ಯಾನಗಳು ನಮಗೆ ಸಂಸ್ಕೃತಿಯ ಒಂದೊಂದು ಆಯಾಮಗಳನ್ನು ವಿವರಿಸುತ್ತವೆ. ವೈಟ್ ಎಂಬ ಸಾಂಸ್ಕೃತಿಕ ಚಿಂತಕ ಮನುಷ್ಯನ ಶ್ರಮ ಎಷ್ಟೆಷ್ಟು ಬಳಕೆಯಾಗುತ್ತದೋ ಅಷ್ಟಷ್ಟು ಸಂಸ್ಕೃತಿ ವಿಕಾಸವಾಗುತ್ತದೆ ಎಂದು ಹೇಳಿದ್ದಾನೆ. ಲೇಖಕ ಮ್ಯಾಕ್ಸಿಂ ಗಾರ್ಕಿ ತಮ್ಮ ಒಂದು ಕಾಲ್ಪನಿಕ ಸಂದರ್ಶನದಲ್ಲಿ ಒಬ್ಬ ಶ್ರೀಮಂತನಿಗೆ ಪ್ರಶ್ನಿಸುತ್ತಾರೆ. ಕಲೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಆ ಶ್ರೀಮಂತ, ಕಲೆಯ ಬಗ್ಗೆ ನಾನು ವಿಚಾರಿಸುವುದಿಲ್ಲ, ನಾನು ಅದನ್ನು ಕೊಂಡುಕೊಳ್ಳುತ್ತೇನೆ ಅನ್ನುತ್ತಾನೆ. ಒಂದು ವರ್ಗದ ಜನರಿಗೆ ಸಂಸ್ಕೃತಿ ಕೇವಲ ಪ್ರದರ್ಶನಕ್ಕಿಡುವ ವಸ್ತುವಾಗಿರುತ್ತದೆ.

ಇಂದು ನಡೆಯುತ್ತಿರುವ ವಿಶ್ವಗ್ರಾಮ (Global Village) ಸಂಸ್ಕೃತಿಯ ಉದ್ದೇಶ ಸ್ಥಳೀಯ ಸಂಸ್ಕೃತಿಯ ಸಂಕೇತಗಳಾದ ಕರಕುಶಲ ಕಲೆಗಳನ್ನು ಕೈಗಾರಿಕೀಕರಣ ಮಾಡುವುದು, ಸೃಷ್ಟಿಶೀಲ ಚಟುವಟಿಕೆಗಳಿಂದ ಹೊರಹೊಮ್ಮುವ ಉತ್ಪನ್ನಗಳನ್ನು ಕಲೆಯನ್ನಾಗಿ ಸ್ವೀಕರಿಸದೇ ಅವುಗಳನ್ನು ಮಾರುಕಟ್ಟೆ ಸರಕುಗಳನ್ನಾಗಿ ಪರಿವರ್ತಿಸುವುದೇ ಆಗಿದೆ. ಮಣ್ಣಿನ ಮಡಕೆಗಳು ದಿನಬಳಕೆಯ ವಸ್ತುಗಳಷ್ಟೇ ಆಗಿರದೇ ಅದೊಂದು ಕುಶಲಕಲೆಯ ಮಾದರಿ ಆಗಿದ್ದವು. ಅದಕ್ಕೆ ಬದಲಾಗಿ ಪ್ಲಾಸ್ಟಿಕ್ ಪಾತ್ರೆಗಳು ಒಂದು ಮಡಕೆಯ ಹಿಂದಿನ ಕಲಾತ್ಮಕ ಅಂಶಗಳು ಕಣ್ಮರೆಯಾದವು. ಇದರಿಂದ ಸಂಸ್ಕೃತಿಯ ಒಂದು ಭಾಗ ಕೊನೆಗೊಂಡಂತಾಯಿತು.

ಕರಕುಶಲ ವಸ್ತುಗಳು ಕೈಗಾರಿಕೆಯ ಮಾರುಕಟ್ಟೆ ಸರಕುಗಳಾದಾಗ ಮಾನವೀಯ ಸಂಬಂಧಗಳು ಕ್ಷೀಣಿಸಿ ಅದರ ಸಾಂಸ್ಕೃತಿಕ ಅಂಗ ಕಾಣೆಯಾಗತೊಡಗಿತು. ಶ್ರಮವಿಲ್ಲದೇ ಕೆಲಸ ನಿರ್ವಹಿಸುವ ಯಂತ್ರಗಳು ಬಂದಾಗ ಶ್ರಮ ಸಂಸ್ಕೃತಿ ನಾಶವಾಗಿ ವಿರಾಮ ಸಂಸ್ಕೃತಿ ತಲೆಯೆತ್ತಿ ಶ್ರಮ ಸಂಸ್ಕೃತಿಯಿಂದ ವಿಕಾಸಗೊಳ್ಳುತ್ತಿರುವ ಜನಪದ ಗೀತೆ, ಕತೆ, ಒಗಟು, ಒಡಪು, ಕಣಿ ಮುಂತಾದ ಜಾನಪದ ಸಂಸ್ಕೃತಿ ನಾಶವಾಗುತ್ತದೆ. ಮೋಟಾರ್ ಪಂಪು ಬಂದೊಡನೆ ಕಪಿಲೆ ಹಾಡುಗಳು, ಟ್ರ್ಯಾಕ್ಟರ್ ಬಂದೊಡನೆ ರೆಂಟೆ-ಕುಂಟೆ ಪದಗಳು, ರಾಶಿ ಯಂತ್ರ ಬಂದೊಡನೆ ಹಂತಿ ಪದಗಳು, ಹಿಟ್ಟಿನ ಗಿರಣಿ ಬಂದೊಡನೆ ಬೀಸುಕಲ್ಲು ಪದಗಳು, ಮಿಕ್ಸರ್ ಬಂದೊಡನೆ ಕುಟ್ಟುವ ಪದಗಳು ಹೀಗೆ ಹಲವಾರು ರೀತಿಯ ಜಾನಪದ ಸಂಸ್ಕೃತಿಯ ಪ್ರಕಾರಗಳು ನಾಶವಾದವು. ಈ ಕಲಾ ಸಂಪತ್ತನ್ನು ಉಳಿಸಿಕೊಳ್ಳಲು ಪರ್ಯಾಯ ಚಿಂತನೆ ನಡೆಸದೇ ಸಂಸ್ಕೃತಿಯನ್ನು ಉಳಿಸುವ ಮಾತನಾಡುವುದು ಹುಸಿ ಕನಸಾಗುತ್ತದೆ. ಈ ರೀತಿಯ ಜಾನಪದ ಉಪಉತ್ಪನ್ನಗಳಲ್ಲಿ ದೇಶೀಯ ಬಹುಮುಖತೆಯ ವಿವಿಧ ಮಾದರಿಗಳು ಜೀವಂತವಾಗಿರುತ್ತವೆ. ಇವು ಕೈಗಾರಿಕೀಕರಣಗೊಂಡಾಗ ಸೃಜನ ಶೀಲತೆಯೇ ಇಲ್ಲದ ಏಕಮುಖೀ ಸರಳ ಮಾದರಿಯೇ ಎಲ್ಲ ಉತ್ಪನ್ನಗಳಲ್ಲಿ ಕಂಡುಬರುತ್ತದೆ.

ಈಗ ನಮ್ಮ ಮುಂದಿರುವ ಚಿಂತನೆ ನಾವು ಯಾಂತ್ರಿಕ ಜೀವನ ತಿರಸ್ಕರಿಸಿ ಬದುಕಲು ಸಾಧ್ಯವೇ ? ಅಥವಾ ನಮ್ಮ ಜೀವನದ ಮೂಲವಾದ ಸಂಸ್ಕೃತಿಯು ನಿರ್ದಯವಾಗಿ ನಮ್ಮೆದುರೇ ನಾಶವಾಗುತ್ತಿರುವುದನ್ನು ಕಂಡು ಕೈಕಟ್ಟಿಕೊಂಡು ನೋಡುವುದೇ? ಜಗತ್ತಿನ ಜ್ಞಾನವನ್ನು ಪಡೆದುಕೊಂಡು ಸ್ಥಳೀಯ ಚಟುವಟಿಕೆಯಲ್ಲಿ ತೊಡಗುವುದು ಅಂದರೆ Think Globally and Act Locally ಎನ್ನುವುದು ಒಳ್ಳೆಯದಲ್ಲವೇ? ಎಂಬುದನ್ನು ಆಲೋಚಿಸಬೇಕಾಗಿದೆ. □

ಚಿಂತನೆ

ಕಲಾ ಸಂಪತ್ತನ್ನು ಉಳಿಸಿಕೊಳ್ಳಲು ಪರ್ಯಾಯ ಚಿಂತನೆ ನಡೆಸದೇ ಸಂಸ್ಕೃತಿಯನ್ನು ಉಳಿಸುವ ಮಾತನಾಡುವುದು ಹುಸಿ ಕನಸಾಗುತ್ತದೆ. ಈ ರೀತಿಯ ಜಾನಪದ ಉಪಉತ್ಪನ್ನಗಳಲ್ಲಿ ದೇಶೀಯ ಬಹುಮುಖತೆಯ ವಿವಿಧ ಮಾದರಿಗಳು ಜೀವಂತವಾಗಿರುತ್ತವೆ. ಇವು ಕೈಗಾರಿಕೀಕರಣಗೊಂಡಾಗ ಸೃಜನಶೀಲತೆಯೇ ಇಲ್ಲದ ಏಕಮುಖೀ ಸರಳ ಮಾದರಿಯೇ ಎಲ್ಲ ಉತ್ಪನ್ನಗಳಲ್ಲಿ ಕಂಡುಬರುತ್ತದೆ. ಈಗ ನಮ್ಮ ಮುಂದಿರುವ ಚಿಂತನೆ ನಾವು ಯಾಂತ್ರಿಕ ಜೀವನ ತಿರಸ್ಕರಿಸಿ ಬದುಕಲು ಸಾಧ್ಯವೇ ? ಅಥವಾ ನಮ್ಮ ಜೀವನದ ಮೂಲವಾದ ಸಂಸ್ಕೃತಿಯು ನಿರ್ದಯವಾಗಿ ನಮ್ಮೆದುರೇ ನಾಶವಾಗುತ್ತಿರುವುದನ್ನು ಕಂಡು ಕೈಕಟ್ಟಿಕೊಂಡು ನೋಡುವುದೇ?

○ ಡಿ.ಎಂ. ನದಾಫ

ಕವಿ, ಕಷ್ಟಜೀವಿ ಮತ್ತು ಬಂಡಾಯ

ಪ್ರತಿಕ್ರಿಯೆ

ಮಾನ್ಯರೇ,

ವೈ.ಗ. ಜಗದೀಶ ಅವರ ಬರಹ ಸಕಾಲಿಕವಾಗಿದೆ. 'ಬಂಡಾಯದ ಮಹತ್ವವನ್ನು ನಿರಾಕರಿಸುವ ಉದ್ದೇಶ ಈ ಬರಹಕ್ಕಿಲ್ಲ' ಎಂದು ಅವರು ಹೇಳಿಕೊಳ್ಳದಿದ್ದರೂ ನಡೆಯುತ್ತಿತ್ತು. ಯಾಕೆಂದರೆ ಅವರ ಸದಾಶಯವನ್ನು ಹೇಳುವಷ್ಟು ಲೇಖನ ಸ್ಪಷ್ಟವಾಗೇ ಇದೆ.

ಜಗದೀಶ ಬಂಡಾಯದ ಶಿಥಿಲತೆ ಅಥವಾ ಬದಲಾವಣೆಯ ಸ್ಥಿತಿಯನ್ನು ಹೀಗೆ ಗುರುತಿಸಿದ್ದಾರೆ :

೧. ಬಂಡಾಯ ಪುನಶ್ಚೇತನಗೊಳ್ಳದೇನೋ ಎನ್ನುವಷ್ಟು ರಾಜಕೀಯ, ಸಾಮಾಜಿಕ ಸಂಗತಿಗಳು ಬದಲಾಗುತ್ತಿವೆ.
೨. ಸಮಾಜದ ಕೆಳಸ್ತರವಾದ ವರ್ಗಸಂಘರ್ಷ ತೀವ್ರವಾಗದೇ ಸಮಾಜದ ಉಪಉತ್ಪನ್ನವಾದ ಸಾಹಿತ್ಯ-ಸಂಸ್ಕೃತಿಯಲ್ಲಿ ಸ್ವಕಪೋಲಕಲ್ಪಿತ ವರ್ಗಸಂಘರ್ಷ ಸೃಷ್ಟಿಸಲು ಮುಂದಾದದ್ದು.
೩. ಮರಾಠ, ತೆಲುಗು ಸಾಹಿತ್ಯದಲ್ಲಿಯ ಎರವಲು ಬಂದುದು.
೪. ಪರ್ಯಾಯದ ಕುರಿತು. ಇವು ಮುಖ್ಯ ಅಂಶಗಳು.

ಅವುಗಳಲ್ಲಿ ಎರಡನೆಯ ಅಂಶ ಬಹಳ ಮುಖ್ಯವಾದುದು. ಬಂಡಾಯ ಸಾಹಿತ್ಯದ ಕಲ್ಪನೆ, ಅದರ ಬಹುರೂಪಿ ಮತ್ತು ಸ್ಥಿತಿಗತಿಯ ಕುರಿತ ತಾತ್ವಿಕ ಪ್ರಜ್ಞೆ ಇಲ್ಲಿದೆ. ಅದನ್ನು ಜಗದೀಶ ಸರಿಯಾಗಿ ಗುರುತಿಸಿದ್ದಾರೆ. ಇದು ಸಾಹಿತ್ಯ ಮತ್ತು ಸಾಮಾಜಿಕ ಚಳವಳಿಗೆ ಸಂಬಂಧಿಸಿದ ಮುಲಭೂತವಾದ ಸಮಸ್ಯೆ. ಬಂಡಾಯ ಸಾಹಿತ್ಯದಂಥ ಚಳವಳಿ ಹುಟ್ಟಿಬರಬೇಕಾದರೆ ಜಗದೀಶ ಹೇಳಿದ ತರಹ ಬಡವರ್ಗ ಆಧಾರಿತವಾದ ವಾತಾವರಣ ಬೇಕು. ಯಾವ ಚಳವಳಿಗೂ ವರ್ಗ ಚಳವಳಿಯ ಒಳಸುಳಿ ಇರಲೇಬೇಕು. ಅದು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ. ಉದಾಹರಣೆಗೆ 'ನವ್ಯ' ಸಾಹಿತ್ಯದ ಸಂದರ್ಭದಲ್ಲಿ ಅಂಥ ಚಳವಳಿ ಇದ್ದಿರಲಿಲ್ಲ. ಆದರೆ ಅದು ಇದ್ದೇ ಇರಲಿಲ್ಲ ಎನ್ನುವ ಹಾಗಿಲ್ಲ. 'ನವ್ಯ'ವೇನೂ ಶೂನ್ಯದಲ್ಲಿ ಮೂಡಿಬಂದುದೇನೂ ಅಲ್ಲ. ಆ ಹಿನ್ನೆಲೆಯಲ್ಲಿ ಇದ್ದವರೆಲ್ಲ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಹಿಡಿದವರಾಗಿದ್ದು ಮೇಲು ಮಧ್ಯಮ ವರ್ಗದವರ ವರ್ಗಸ್ವಭಾವವೇ ಹಿಂದೆ ಮಿಡಿಯುತ್ತಿದ್ದ ಶಕ್ತಿಯಾಗಿದೆ. ಆದ್ದರಿಂದ ಅದು ಸ್ತಬ್ಧದಂತೆ ಇತ್ತು; 'ಸಂಭಾವಿತ'ವಾಗಿತ್ತು. ಆದರೆ ಬಂಡಾಯದ ಹಿಂದೆ ಸಮಾಜದ ಕೆಳವರ್ಗದ ಸಂಘರ್ಷದ ಭಾವ ವ್ಯಾಪಕವಾಗಿತ್ತು. ಆದಕಾರಣ ರಭಸದಿಂದ ಕೂಡಿತ್ತು. ಅಂದರೆ ಬಂಡಾಯದ ಹಿಂದೆ ವರ್ಗ ಮತ್ತು ವರ್ಣ ಸಂಘರ್ಷ ಶಕ್ತಿ ಇತ್ತು.

ಆದರೆ ಜಗದೀಶ ಹೇಳಿದ ಹಾಗೆ ಅದು 'ಸ್ವಕಪೋಲಕಲ್ಪ' ಆಗಿರಲಿಲ್ಲ. ಸಾಂಸ್ಕೃತಿಕ ಚಳವಳಿಯೊಂದು ಸಂಘರ್ಷದ ಜೊತೆಜೊತೆಗೆ ಹೆಜ್ಜೆ ಹಾಕುತ್ತಿದೆಯೆ ಹೊರತು ಒಂದಾದ ಮೇಲೆ ಒಂದಲ್ಲ. ಸಾಮಾಜಿಕ ಸಂಘರ್ಷ ಸಾಹಿತ್ಯಿಕ ಸಂಘರ್ಷಕ್ಕೆ ಅಥವಾ ಹೊಸಹುಟ್ಟಿಗೆ ಪ್ರೇರಣೆಯಾಗುತ್ತದೆ. ಹೊಸ ಸಾಹಿತ್ಯ ಸಾಮಾಜಿಕ ಚಳವಳಿಯ ಮುನ್ನಡೆಗೆ ಪ್ರೇರಣೆ ನೀಡುತ್ತದೆ. ಜಗದೀಶರೇ, ವರವರರಾವರ ಕಾವ್ಯದಲ್ಲಿ ಬಂದ ಒಂದು ಸುಂದರವಾದ ರೂಪಕವನ್ನು ಹೇಳಿದ್ದಾರೆ. ಅದು ಕಾಡಿನ ಸಾಧು ಪ್ರಾಣಿಗಳನ್ನು ಕೊಲ್ಲಲು ಬರುವ ಹುಲಿಯ ಸುಳಿವನ್ನು ಮರದ ಮೇಲಿರುವ ಹಕ್ಕಿಗಳು ಆ ಪ್ರಾಣಿಗಳಿಗೆ ಸೂಚನೆ ಕೊಡುತ್ತವೆ - ಎಂಬುದಾಗಿದೆ. ಸಮಾಜ ಮತ್ತು ಸಾಹಿತ್ಯದ ಸಂಬಂಧವನ್ನು ಇದಕ್ಕೂ ಸೊಗಸಾಗಿ ಬೇರೆ ಹೇಳಲಾಗಲಿಕ್ಕಿಲ್ಲವೇನೊ.

ಇಲ್ಲಿಯೇ ಮೂರನೇ ಪ್ರಶ್ನೆಗೆ ಉತ್ತರವಿದೆ. ಕನ್ನಡದ ಬಂಡಾಯದ ಮೇಲೆ ತೆಲುಗು, ಮರಾಠಿ ಸಾಹಿತ್ಯವಷ್ಟೇ ಅಲ್ಲದೆ ಆಫ್ರಿಕಾದಂಥ ಮೂರನೆಯ ಜಗತ್ತಿನ ಸಾಹಿತ್ಯವೂ ಪ್ರೇರಣೆಯಾಗಿರಬಹುದು. ೧೨ನೆಯ ಶತಮಾನದ ಚಳವಳಿಯ ಪರಂಪರೆಯಂತೂ ಅದಕ್ಕಿತ್ತು. ಆದರೆ ಅಷ್ಟೇ ಆಗಿರಲಿಲ್ಲ. ಸಾಮಾಜಿಕವಾಗಿ ಕೆಳಸ್ತರದಲ್ಲಿ ಮೂಡಿಬಂದ ಸಂಘರ್ಷವೇ ಮುಖ್ಯ ಸೆಲೆಯಾಗಿತ್ತು.

'ಬಂಡಾಯಕ್ಕೆ ಅನೇಕ ನೆಲೆಗಳಿದ್ದವು. ಅವುಗಳಲ್ಲಿ ಮುಖ್ಯ ನೆಲೆಗಳು ಮೂರು. ೧. ಅಂಬೇಡ್ಕರ್‌ವಾದ ೨.ಲೋಹಿಯಾವಾದ ೩. ಮಾರ್ಕ್ಸ್‌ವಾದ. ಲೋಹಿಯಾವಾದಕ್ಕೆ ಪುರೋಹಿತಶಾಹಿ ಅಥವಾ ಬ್ರಾಹ್ಮಣ ಮುಖ್ಯ ವಿರೋಧಿ. ಅಂಬೇಡ್ಕರ್‌ವಾದಕ್ಕೆ ಪುರೋಹಿತಶಾಹಿ ಮತ್ತು ಜಮೀನುದಾರಿಕೆ ಮುಖ್ಯ ವಿರೋಧಿ. ಮತ್ತು ಮಾರ್ಕ್ಸ್‌ವಾದಕ್ಕೆ ವರ್ಗ ಹೋರಾಟ ಮುಖ್ಯ ನೆಲೆ. ಆದರೆ ಈ ಮೂರೂ ಶಕ್ತಿಗಳಿಗೆ ಸಮಾನ ವಿರೋಧಿ, ಪುರೋಹಿತಶಾಹಿ ಮತ್ತು ಜಮೀನುದಾರಿಕೆ. ಈಗ ವಿರೋಧಿ ನೆಲೆ ಇಷ್ಟು ಸ್ಪಷ್ಟವಾಗಿ ಗುರುತಿಸಲಾಗುತ್ತಿಲ್ಲ. ಸಮಾಜ ಇನ್ನೂ ಸಂಕೀರ್ಣವಾಗುತ್ತಿದೆ. ಹಿಂದುತ್ವವಾದ, ನಿರುದ್ಯೋಗ ಇವೆಲ್ಲದರ ನಿವಾರಣೆಗೆ ಜಾಗತೀಕರಣವೇ ರಾಮಬಾಣ ಎಂಬ ಭ್ರಮೆ. ಇದರ ಮಧ್ಯೆ ರಾಜಕಾರಣಿಗಳ ಭ್ರಷ್ಟಾಚಾರ. ಆಡಳಿತಕ್ಕೆ ಇವನ್ನೆಲ್ಲ ರಕ್ಷಿಸಿಕೊಂಡು ದಲಿತರ-ಬಡವರ ಮತ್ತು ಯುವ ಜನಾಂಗದ ದಾರಿತಪ್ಪಿಸಲು ಆ ಮುಖಾಂತರ ಅಧಿಕಾರವನ್ನು ರಕ್ಷಿಸಿಕೊಳ್ಳಲು ಮತ್ತು ಎಲ್ಲವನ್ನೂ ಮರೆಮಾಚಲು ಸಾಧ್ಯವಾಗಿದೆ. ಅಷ್ಟಕ್ಕೂ ಬಗ್ಗದೆ ನಿಖರವಾದ ವರ್ಗ ಪ್ರಜ್ಞೆಯಿಂದ ಎದ್ದುಬಂದ ಹೋರಾಟಗಾರರನ್ನು ಎನ್‌ಕೌಂಟರ್ ಎಂಬ ಹೆಸರಿನಲ್ಲಿ ಕೊಲ್ಲುತ್ತದೆ.

> ಬಂಡಾಯವೂ ತಪ್ಪು ಮಾಡಿದೆ. ಬಂಡಾಯ ಸಿದ್ಧಾಂತದ ಕುರಿತು ಪಟ್ಟು ಹಿಡಿಯಿತೇ ಹೊರತು ಕೃತಿಯ ಕಲಾತ್ಮಕತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಇದು ಎಲ್ಲಾ ಸಾಹಿತ್ಯಿಕ ಚಳವಳಿಯಲ್ಲೂ ಆಗುವ ಸಂಗತಿ.

ಎನ್‌ಕೌಂಟರ್ ಎಂಬುದು ಎರಡು ಪುರಾಣಗಳಲ್ಲಿ ನಡೆಯುತ್ತದೆ. ಮೊದಲನೆಯದು ನಕ್ಸಲೀಯರನ್ನು ಪ್ರತ್ಯಕ್ಷ ಗುಂಡಿನಿಂದ ಕೊಲ್ಲುವುದು, ಎರಡನೆಯದು ಎಡಪಂಥೀಯ ಬುದ್ಧಿಜೀವಿಗಳನ್ನು ಕೊಲ್ಲುವುದು. ಎರಡನೆಯದು ಪ್ರತ್ಯಕ್ಷವಲ್ಲ. ಅವರನ್ನು ಪರಿವರ್ತನೆ ಮಾಡುವುದರಿಂದ ಅವರ ಮೊದಲ ವ್ಯಕ್ತಿತ್ವವನ್ನು ಕೊಲ್ಲಲಾಗುತ್ತದೆ. ಇವೆರಡೂ ಇವೆ. ಇವು ಎಲ್ಲಿ ಹೇಗೆ ಎಂದು ಹೇಳುವುದು ತುಂಬ ಕಷ್ಟ ಸಮಾಜದ ಬೆಳವಣಿಗೆಯೊಂದಿಗೆ ಕೆಳಜಾತಿ ಮತ್ತು ದಲಿತರಲ್ಲಿ ಕೆಲ ಸಂಖ್ಯೆಯ ಜನ ಮಧ್ಯಮ ವರ್ಗಕ್ಕೆ ಏರಿದರು. ಈ ವರ್ಗದ ಮನೋಭಾವ ಅಲ್ಲಿ ಚಿಗುರಿ ಬೆಳೆಯತೊಡಗಿತು. ವೈಚಾರಿಕತೆ ಭಿನ್ನ ರೀತಿಯಲ್ಲಿ ಬೆಳೆಯಿತು. ದಸಂಸ ಛಿದ್ರವಾಗುವುದರಲ್ಲಿ ಈ ವರ್ಗ ಮನೋಭಾವದ ಪರಿಣಾಮವೂ ಇಲ್ಲವೇ ? ಹಾಗೆಯೇ ಇಂತಹ ವರ್ಗ ಪ್ರಭಾವ ಬಂಡಾಯದ ರಚನೆಯ ಮೇಲೂ ಆಗಿದೆ. ಈಗ ದಸಂಸ ಮತ್ತು ರೈತಸಂಘಟನೆ ಒಟ್ಟೊಟ್ಟಿಗೆ ಬರುವ ಮಾತು ಕೇಳಿಬರುತ್ತಿದೆ. ಇದು ಸ್ವಾಗತಾರ್ಹವಾದುದು. ಈ ಮನೋಭಾವ ಮೂಡಲು ಯಾವ ವರ್ಗದ ಮನೋವೈಜ್ಞಾನಿಕ ಪ್ರೇರಣೆ ಎಂಬುದು ಮುಖ್ಯ. ಇದು ಮುಂದಿನ ಸಾಹಿತ್ಯದ ಮೇಲೂ ಪ್ರಭಾವ ಬೀರೀತು.

ಕೊನೆಯದಾಗಿ ಪರ್ಯಾಯದ ಕುರಿತು ಜಗದೀಶ ಪ್ರಶ್ನಿಸಿದ್ದಾರೆ. ಅವರು ಸರಿಯಾಗಿ ಗುರುತಿಸಿದಂತೆ ನಮ್ಮ ಯುವ ಬರಹಗಾರರು ತಾವು 'ಬಂಡಾಯ ಸಾಹಿತಿ' ಎಂದು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಇದಕ್ಕೆ ಈ ಬರಹಗಾರರ ಆಯ್ಕೆಯ ಸಮಸ್ಯೆಯಿದೆ. ಈಗಲೂ ಸಾಹಿತ್ಯದ ಮೌಲ್ಯಮಾಪನ ಮಾಡುವವರು ನವ್ಯದ ಹಿರಿಯರೇ ಅಥವಾ ಅವರ ಸಮಾಜದ ಪ್ರತಿಷ್ಠಿತ ಸಂತಾನದವರೇ ಆಗಿದ್ದಾರೆ. ಆದ್ದರಿಂದ ಯುವಬರಹಗಾರರು ಅವರನ್ನು ಒಪ್ಪಿಕೊಳ್ಳಬೇಕು, ಇಲ್ಲವೇ ಏಕಾಂಗಿಯಾಗಿ ಬಳಲಬೇಕು. ಗಂಭೀರವಾಗಿ ಗಮನಿಸಿದಂತೆ ಬಂಡಾಯದ ಯಾವುದೇ ಮುಖ್ಯ ಬರಹಗಾರರನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಗುರುತಿಸುತ್ತಿಲ್ಲ. ಅವರ ಬರಹಗಳಿಗೆ ರಾಷ್ಟ್ರ, ಅಂತರರಾಷ್ಟ್ರದ ಸಂಪರ್ಕ, ಆ ಮುಖಾಂತರ ಸಾಧ್ಯವಾಗುತ್ತಿಲ್ಲ. ಈಗ ನವ್ಯ ನವ್ಯೋತ್ತರ ಎಂದು ಕರೆಯಲಾಗುತ್ತದೆ. ಹೀಗೆ ದಲಿತ-ಬಂಡಾಯ ಎಂಬ ಹೆಸರನ್ನು ಚರಿತ್ರೆಯಿಂದ ಅಳಿಸಿ ಹಾಕಲಾಗುತ್ತಿದೆ.

ಬಂಡಾಯವೂ ತಪ್ಪು ಮಾಡಿದೆ. ಬಂಡಾಯ ಸಿದ್ಧಾಂತದ ಕುರಿತು ಪಟ್ಟು ಹಿಡಿಯಿತೇ ಹೊರತು ಕೃತಿಯ ಕಲಾತ್ಮಕತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಇದು ಎಲ್ಲಾ ಸಾಹಿತ್ಯಿಕ ಚಳವಳಿಯಲ್ಲೂ ಆಗುವ ಸಂಗತಿ. ಆದರೆ ಈಗ ಬರೆಯುವವರು ಯಾವುದೇ ಹೆಸರಿನ ಅಡಿಯಲ್ಲಿರಲಿ, ಇಲ್ಲದಿರಲಿ ಬಂಡಾಯದ ತಾತ್ವಿಕತೆಯನ್ನು ಬಿಡಲಾಗುವುದಿಲ್ಲ. ಅಂಚಿನಲ್ಲಿರುವ ಮನುಷ್ಯ ಈಗ ಕೇಂದ್ರದಲ್ಲಿ ಬಂದಿದ್ದಾನೆ. ಅಭಿವ್ಯಕ್ತಿಯ ವಿಧಾನ ಬದಲಾಗುವುದು ಸಹಜವೆ.

ಅಷ್ಟಾಗಿಯೂ ಬಂಡಾಯವೆಂದರೇನು ? ಅದು ಅಬ್ಬರ, ಉಗ್ರತೆ ಅಲ್ಲ. ಅದು ಆಯಾ ಸಂದರ್ಭದ ಗರ್ಜಿಗೆ ಸಂಬಂಧಿಸಿ ಇರುವಂಥದು. ಆದರೆ ನಿಜವಾದ ಬಂಡಾಯವೆಂದರೆ ಸಮಾಜವಾದಿ ವ್ಯವಸ್ಥೆಗಾಗಿ ತುಡಿಯುವ ಮನೋಭಾವ ಮತ್ತು ಅಭ್ಯಾಸ. ಅದರಲ್ಲಿ ಮನುಷ್ಯ ಏಕಾಂಗಿಯಲ್ಲ. ಹೆಣ್ಣು, ಗಂಡು, ನಿಸರ್ಗ, ಕಲೆ, ಕ್ರೀಡೆ, ಉದ್ಯೋಗ, ದುಡಿಮೆ, ವಿಜ್ಞಾನ ಇವೆಲ್ಲವು ಮಿಳಿತವಾಗಿರುತ್ತವೆ. ಒಟ್ಟಾರೆಯಾಗಿ ಅದು ಮಾನವೀಯತೆಯ ವಿಸ್ತರಣೆಗಾಗಿ ತುಡಿವ ತುಡಿತ. ಅದರ ಆಧಾರ ಧರ್ಮ ಅಥವಾ ಅಮೂರ್ತವಾದ ಸಿದ್ಧಾಂತ ಅಲ್ಲ. ಬದಲಾಗಿ ಅದು ವರ್ಗ ಸಂಘರ್ಷದ ಆಧಾರ ಹೊಂದಿರುವಂತಹುದು. ಅದು ಜನ ಸಾಮಾನ್ಯರನ್ನು ಶ್ರೀ ಸಾಮಾನ್ಯನ ಸ್ಥಾನಕ್ಕೆ ಏರಿಸುವಂತಹುದು. □

○ ಆರ್.ವಿ. ಭಂಡಾರಿ



ಹೊಸ ಪುಸ್ತಕ

ಮತಾಂಧತೆ ಮಾನವೀಯತೆ

ಲೇ. ವೀರಭದ್ರ ಚನ್ನಮಲ್ಲ ಸ್ವಾಮೀಜಿ

ಬೆಲೆ : ರೂ. ೨೫/-

'ಮತಾಂಧತೆ ಮಾನವೀಯತೆ' ಕೃತಿಯಲ್ಲಿ ಸ್ವಾಮೀಜಿಯವರು ಮತಾಂಧತೆಯ ವಿಷಯವನ್ನೊಳಗೊಂಡಂತೆ ಮಾನವ ಸಮಾಜದಲ್ಲಿ ಧರ್ಮದ ಉಗಮ, ಪಾತ್ರ, ಅದರ ಸಂಕುಚಿತತೆ, ಇಂದಿನ ಸನ್ನಿವೇಶದಲ್ಲಿ ಧರ್ಮದ ಪುನರ್‌ವ್ಯಾಖ್ಯಾನ, ಮೂಢನಂಬಿಕೆ, ಮತಾಂಧತೆಗಳಿಗೂ, ಧರ್ಮಕ್ಕೂ ಇರುವ ಸಂಬಂಧ ಇವುಗಳನ್ನು ಸ್ಪಷ್ಟ ಮಾತುಗಳಲ್ಲಿ ಬಿಚ್ಚಿಟ್ಟಿದ್ದಾರೆ.

ಮಾನವೀಯತೆ ಮಾತ್ರ ಸಮಾಜದ ಪ್ರಣಾಳಿಕೆಯಾಗಬೇಕು ಎಂದು ಸಾರಿದ್ದಾರೆ.

ಪ್ರಕಾಶಕರು : ಮಾನವಧರ್ಮ ಪ್ರಕಾಶನ, ಬೆಂಗಳೂರು – ೫೬೦ ೦೦೪



ಪ್ರೀತಿಸುತ್ತಾ ಹೋದಂತೆಲ್ಲಾ...

ಲೇ. ಟಿ.ಎಸ್. ರಾಜೇಂದ್ರಪ್ರಸಾದ್

ಬೆಲೆ : ರೂ. ೯೦/-

ಈ ತಲೆಮಾರಿನ ಗಮನಾರ್ಹ ಅಂತಃಸತ್ವದ ಕವಿಯ ಕವನ ಸಂಕಲನವಿದು.

ವಾಸ್ತವಿಕ ಬದುಕಿನ ಎಲ್ಲಾ ಮಗ್ಗುಲುಗಳಿಗೂ ಮುಖಾಮುಖಿ ಯಾಗುವ ಇವರ ಕವಿತೆಗಳಲ್ಲಿ ಕಂಡು ಬರುವ ಮಾನವೀಯ ತುಡಿತ, ಏಕಾಂತದ ತಪ್ತತೆ, ಮೃದು ಮನಸ್ಕನೊಬ್ಬನ ಆರ್ತತೆ ಕೇವಲ ಹೇಳಿಕೆಗಳಾಗದೇ ಕಾವ್ಯಾಶಯಗಳಾಗಿ ಹೊರ ಹೊಮ್ಮಿವೆ. ಬದುಕನ್ನು ಬಗೆಯುವ ಪರಿ ಈ ಪ್ರೀತಿಸುತ್ತಾ ಹೋದಂತೆಲ್ಲಾ...

ಪ್ರಕಾಶಕರು : ಸಿ.ವಿ.ಜಿ. ಪಬ್ಲಿಕೇಷನ್, ನಂ. ೨೦, ೨ನೇ ಮುಖ್ಯರಸ್ತೆ ಜಬ್ಬಾರ್ ಬ್ಲಾಕ್, ವೈಯಾಲಿಕಾವಲ್, ಬೆಂಗಳೂರು – ೦೩



ಹಿಂದೂ ಧರ್ಮ ಪರಿಷ್ಕಾರವಾಗಬೇಕು

ಲೇ. ವೀರಭದ್ರ ಚನ್ನಮಲ್ಲ ಸ್ವಾಮೀಜಿ

ಬೆಲೆ : ರೂ. ೨೫/-

ಲೇಖಕರು ಓರ್ವ ಧರ್ಮಗುರುವಾಗಿದ್ದರೂ ತಮ್ಮ ಕಾರ್ಯಕ್ಷೇತ್ರವನ್ನು ಅಷ್ಟಕ್ಕೇ ಸೀಮಿತಗೊಳಿಸಿ ಕೊಳ್ಳದೆ ಎಲ್ಲ ಜನಪರ ಪ್ರಗತಿಪರ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡವರು. ಈ ಕೃತಿಯಲ್ಲಿನ ನಾಲ್ಕು ಲೇಖನಗಳಲ್ಲಿ ಹಿಂದೂ ಧರ್ಮ ಎಂಬುದನ್ನು ಹೇಗೆ ಕೋಮುವಾದಿ ಫ್ಯಾಸಿಸ್ಟರು ರಾಜಕೀಯ ಅಜೆಂಡಾ ಆಗಿಸಿಕೊಂಡು ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಪ್ರಕಾಶಕರು : ಮಾನವಧರ್ಮ ಪ್ರಕಾಶನ, ಬೆಂಗಳೂರು – ೫೬೦ ೦೦೪

ಮಳೆ ನೀರ ಕುಡಿ

ಲೇ. ಕೃಷ್ಣಮೂರ್ತಿ ಬಿಳಿಗೆರೆ

ಬೆಲೆ : ರೂ. ೧೫/-

ಭೂಮಿ ಬೆಂದು ಬರಡಾಗುತ್ತಿರುವ ಈ ಹೊತ್ತಿನಲ್ಲಿ ಕವಿ ಮನಸ್ಸು ತಲ್ಲಣಗೊಂಡು ರಚಿಸಿದ ಹಾಡುಗಳು ಇಲ್ಲಿವೆ.

ಮಾತ್ರವಲ್ಲ, ಈ ಪುಸ್ತಕದಲ್ಲಿ ಮಳೆನೀರ ಸಂಗ್ರಹಕ್ಕೆ ಸಂಬಂಧಿಸಿದ ಕಿರು ಲೇಖನಗಳೂ ಇವೆ.

ಇದು ಬರೀ ಸಾಹಿತ್ಯಾಸಕ್ತಿಯ ಪ್ರಬಂಧ ಸಂಕಲನವಾಗುಳಿಯದೆ, ಮಕ್ಕಳ ಹಾಡುಗಳಾಗುಳಿಯದೆ, ಇದು ಯಾವುದೂ ಆಗಿರದೇ ಎಲ್ಲರನ್ನೂ ಮುಟ್ಟುವುದೇ ಇಲ್ಲಿಯ ವಿಶೇಷ.

ಪ್ರಕಾಶಕರು : ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು ತಾಲೂಕು, ತುಮಕೂರು ಜಿಲ್ಲೆ – ೫೭೨೧೧೪



ಡಾ।। ಎಚ್.ಆರ್. ರಘುನಾಥಭಟ್ಟ ಸ್ಮರಣೆ

ಸಂ. ಪ್ರೊ।। ಲಕ್ಷ್ಮಣ್ ತೆಲಗಾವಿ

ಬೆಲೆ : ರೂ. ೨೦/-

ಕರ್ನಾಟಕ ಇತಿಹಾಸ ಅಧ್ಯಯನಾಸಕ್ತರ ಒಲುಮೆಗೆ ಪಾತ್ರರಾಗಿದ್ದ ಪ್ರತಿಭಾನ್ವಿತ ಸಂಶೋಧಕ ಹಾಗೂ ಅಧ್ಯಾಪಕರೂ ಆಗಿದ್ದ ಡಾ।।ಎಚ್.ಆರ್. ರಘುನಾಥಭಟ್ಟರ ಕುರಿತ ಒಂದು ಸ್ಮರಣೆ ಈ ಕೃತಿ.

ಈ ಕೃತಿಯಲ್ಲಿ ಅವರ ಒಡನಾಟ ಹಾಗೂ ಪರಿಚಯ ಹೊಂದಿದ್ದ ಲೇಖಕರು ಭಟ್ಟರ ಸಾಧನೆ, ವ್ಯಕ್ತಿತ್ವವನ್ನು ಸ್ಮರಿಸಿಕೊಂಡು ಬರೆದಿರುವ ಲೇಖನಗಳಿವೆ.

ಪ್ರಕಾಶಕರು : ಚಿತ್ರಕಲ್ಲು ಪ್ರಕಾಶನ, ಚಿತ್ರದುರ್ಗ – ೫೭೭೫೦೧



ಕೆಬ್ಬೆ ನೆಲ

ಲೇ. ಲಲಿತಾ ಸಿದ್ಧಬಸವಯ್ಯ

ಬೆಲೆ : ರೂ. ೯೦/-

ಅನುಭವ ಹಾಗೂ ನೆನಪುಗಳಿಗೆ ಕಾವ್ಯ ರೂಪು ಕೊಟ್ಟು ರಚಿಸಿರುವ ಇಲ್ಲಿನ ಕವನಗಳಿಗೆ ಒಂದು ರಿದಂ ಇದೆ.

ಭಾಷೆಯ ಅತಿ ಸಾಧಾರಣ ಪದಗಳಿಗೆ ಅಸಾಧಾರಣ ಸಂವೇದನೆಗಳನ್ನು ಒಯ್ಯುವ ಗುಣ ಇಲ್ಲಿನ ಕವಿತೆಗಳ ಜಾಯಮಾನ.

ನದಿ-ದಡ, ನದಿ-ದಡ, ನದಿ-ದಡ ಎಂಬ ಆಟವೊಂದರ ಪದಗಳು, ಮಕ್ಕಳನ್ನು ಮಲಗಿಸುವ ಹ್ಹುಹ್ಹುಹ್ಹುಳ್ಳಾಯೀಈಈಈ, ಹ್ಹುಹ್ಹುಹ್ಹುಳ್ಳಾಯೀಈಈಈ ಎಂಬಂತಹ ಪದಗಳು ಮನಸ್ಸಿಗೆ ಮುದ ನೀಡುತ್ತವೆ, ಎಲ್ಲಿಂದ ಬರುವುದೋ ಅಜ್ಞಾತಕಾವ್ಯದ ಸುಗ್ಗಿ ಎಂದು ಕಾದವರಿಗುತ್ತರ ಈ ಕೆಬ್ಬೆನೆಲ.

ಪ್ರಕಾಶಕರು : ಚಿನ್ಮಯಿ ಪ್ರಕಾಶನ, ನಂ.೫೨೧೭, 'ಗುರುಸನ್ನಿಧಿ', ೨ನೇ ಅಡ್ಡರಸ್ತೆ, ಅಶೋಕನಗರ, ತುಮಕೂರು-೫೭೨೧೦೨



'SAMVADA' Kannada Monthly. APRIL. 2005 RNI-KAR KAN/2002/9246 CPMG/KA/BGW-706/2003-0

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ
ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ
ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ

'ಸಂವಾದ' ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧